ಶುಕ್ರವಾರ, ಡಿಸೆಂಬರ್ 23, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 353 | ಪುಟ 16
www.prajavani.net
/prajavani.net @prajavani /prajavani http://bit.ly/Prajavani

# ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ





| ಸೆನ್ಸೆಕ್ಸ್ | ನಿಫ್ಟಿ | ಚಿನ್ನ (Std. 10g) | ಶುದ್ಧ ಬೆಳ್ಳಿ (kg) | ₹/$ |
|---|---|---|---|---|
| 60,826 ▼ | 18,127 ▼ | ₹56,420 (ಬೆಂಗಳೂರು) ▲ | ₹70,300 (ಬೆಂಗಳೂರು) ▼ | 82.79 ▲ |

ಪಂಚಮಸಾಲಿ ಹೋರಾಟ ಸಮಿತಿಗೆ ಮುಖ್ಯಮಂತ್ರಿ ಭರವಸೆ: ಯತ್ನಾಳ

## '29ರಂದು 2ಎ ಮೀಸಲಾತಿ ಘೋಷಣೆ'

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಲಿಂಗಾಯತ ಪಂಚಮಸಾಲಿ ಸಮಾಜಕ್ಕೆ ಡಿ.29ರಂದು 2ಎ ಮೀಸಲಾತಿ ಘೋಷಿಸುವುದಾಗಿ ಮುಖ್ಯಮಂತ್ರಿ ಹೇಳಿದ್ದಾರೆ. ಇಷ್ಟು ವರ್ಷಗಳ ನಮ್ಮ ಹೋರಾಟಕ್ಕೆ ಜಯ ಸಿಕ್ಕಿದೆ. ಇನ್ನೊಂದು ವಾರ ತಾಳ್ಮೆಯಿಂದ ಕಾಯೋಣ' ಎಂದು ಲಿಂಗಾಯತ ಪಂಚಮಸಾಲಿ ಮೀಸಲಾತಿ ಹೋರಾಟ ಸಮಿತಿ ಅಧ್ಯಕ್ಷರೂ ಆದ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ಸುವರ್ಣಸೌಧ ಮುಂಭಾಗ ಗುರುವಾರ ಆಯೋಜಿಸಿದ್ದ ವಿರಾಟ್ ಪಂಚಶಕ್ತಿ ಸಮಾವೇಶವನ್ನು ಕಹಳೆ ಮೊಳಗಿಸುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

'ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ನೀಡಬಹುದು ಎಂದು ರಾಜ್ಯ ಹಿಂದುಳಿದ ವರ್ಗಗಳ ಆಯೋಗ ಮಧ್ಯಂತರ ವರದಿಯಲ್ಲಿ ಉಲ್ಲೇಖಿಸಿದೆ. ಸರ್ಕಾರ ಇದನ್ನು ಒಪ್ಪಿದೆ. ಮೊದಲು ವರದಿಯನ್ನು ಪೂರ್ಣವಾಗಿ ಅಧ್ಯಯನ ಮಾಡುತ್ತೇನೆ. ಡಿ.28ರಂದು ಸರ್ವಪಕ್ಷಗಳ ಸಭೆ ಕರೆದು ಚರ್ಚಿಸುತ್ತೇನೆ. ಡಿ.29ರಂದು ಸದನದಲ್ಲಿ ಇಟ್ಟು ಮೀಸಲಾತಿ ಘೋಷಣೆ ಮಾಡುತ್ತೇನೆ ಎಂದು ಬಸವರಾಜ ಬೊಮ್ಮಾಯಿ ಅವರು ಆತ್ಮಸಾಕ್ಷಿಯಾಗಿ, ತಾಯಿ ಸಾಕ್ಷಿ ಮಾಡಿ ನನಗೆ ಹೇಳಿದ್ದಾರೆ' ಎಂದರು.

9ನೇ ಪುಟ ನೋಡಿ



ಬೆಳಗಾವಿಯ ಸುವರ್ಣ ವಿಧಾನಸೌಧದ ಮುಂದೆ ಗುರುವಾರ ನಡೆದ ಪಂಚಮಸಾಲಿ ಸಮುದಾಯದ ವಿರಾಟ್ ಪಂಚಶಕ್ತಿ ಸಮಾವೇಶದಲ್ಲಿ ಪಾಲ್ಗೊಂಡ ಜನಸ್ತೋಮ –ಪ್ರಜಾವಾಣಿ ಚಿತ್ರ

### ವಿರಾಟ್ ರೂಪ ದರ್ಶನ

ಗುರುವಾರ ಬೆಳಿಗ್ಗೆ ಬೆಳಗಾವಿ ತಾಲ್ಲೂಕಿನ ಹಿರೇಬಾಗೇವಾಡಿಯಿಂದ ಹೊರಟ ಪಾದಯಾತ್ರೆ ಮಧ್ಯಾಹ್ನ 1.30ಕ್ಕೆ ಸಮಾವೇಶದ ಸ್ಥಳ ತಲುಪಿತು. ಸಾವಿರಾರು ಜನ ಸುಡುವ ಬಿಸಿಲಲ್ಲೂ ಉತ್ಸಾಹದಿಂದ ಹೆಜ್ಜೆ ಹಾಕಿದರು.

ರಾಜ್ಯದ ವಿವಿಧೆಡೆಯಿಂದ ಸಮಾವೇಶಕ್ಕೆ ಜನಸಾಗರವೇ ಹರಿದು ಬಂತು. ಎತ್ತ ಕಣ್ಣು ಹಾಯಿಸಿದರೂ ಜನವೋ ಜನ. ಯುವಕ, ಯುವತಿಯರು, ಮಹಿಳೆಯರು ಸೇರಿ ಬಸವಣ್ಣನ ಭಾವಚಿತ್ರವಿರುವ ಧ್ವಜ ಹಿಡಿದು, ಬಿಳಿ ಟೊಪ್ಪಿಗೆ ಧರಿಸಿ ಪಾಲ್ಗೊಂಡರು. ರಾಷ್ಟ್ರೀಯ ಹೆದ್ದಾರಿ–4ರಲ್ಲಿ ಇಡೀ ದಿನ ಸಂಚಾರ ದಟ್ಟಣೆ ಉಂಟಾಯಿತು.

### ಪಂಚಮಸಾಲಿಗೆ '2 ಎ' ಬದಲು ಹೊಸ 'ಪ್ರವರ್ಗ'?

ಬೆಳಗಾವಿ: ಲಿಂಗಾಯತ ಪಂಚಮಸಾಲಿ ಸಮುದಾಯವನ್ನು ಪ್ರವರ್ಗ 2ಎಗೆ (ಹಿಂದುಳಿದ ಜಾತಿಗಳ ಪಟ್ಟಿ) ಸೇರಿಸುವ ಬದಲು, '2 ಸಿ' ಅಥವಾ '3 ಸಿ' ಎಂಬ ಪ್ರತ್ಯೇಕ ವರ್ಗೀಕರಣ ಮಾಡುವುದು ಸೂಕ್ತ ಎಂದು ಹಿಂದುಳಿದ ವರ್ಗಗಳ ಆಯೋಗ ಸರ್ಕಾರಕ್ಕೆ ಶಿಫಾರಸು ಮಾಡಿದೆ ಎನ್ನಲಾಗಿದೆ.

ಪಂಚಮಸಾಲಿ ಮೀಸಲಾತಿ ಬೇಡಿಕೆ ತೀವ್ರ ಸ್ವರೂಪ ಪಡೆಯುತ್ತಿದ್ದಂತೆಯೇ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಆಯೋಗದ ಅಧ್ಯಕ್ಷರಾದ ಜಯಪ್ರಕಾಶ ಹೆಗ್ಡೆ ಅವರನ್ನು ಬೆಳಗಾವಿಗೆ ಕರೆಸಿಕೊಂಡು ಚರ್ಚೆ ನಡೆಸಿದರು.

ಈ ಸಂದರ್ಭದಲ್ಲಿ ಹೆಗ್ಡೆ ಅವರು, ಮಧ್ಯಂತರ ವರದಿಯನ್ನು ಬೊಮ್ಮಾಯಿ ಅವರಿಗೆ ಸಲ್ಲಿಸಿದರು. ವರದಿ ಅಥವಾ ಮಾಹಿತಿಯನ್ನು ಅವರು ಬಹಿರಂಗಪಡಿಸಿಲ್ಲ ಎಂದು ಮೂಲಗಳು ಹೇಳಿವೆ.


9ನೇ ಪುಟ ನೋಡಿ

## 'ಒಳಾಂಗಣದಲ್ಲಿ ಮಾಸ್ಕ್ ಧರಿಸಿ'

ಜ್ವರ, ಕೆಮ್ಮು ಇದ್ದವರಿಗೆ ಕೋವಿಡ್ ಪರೀಕ್ಷೆ ಕಡ್ಡಾಯ

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಬೇರೆ ದೇಶಗಳಲ್ಲಿ ಕೋವಿಡ್ ಪ್ರಕರಣ ಹೆಚ್ಚಳ ಹಾಗೂ ಹೊಸ ರೂಪಾಂತರಿ ವೈರಾಣು ಪತ್ತೆಯಾದ ಹಿನ್ನೆಲೆಯಲ್ಲಿ ಜ್ವರ, ಕೆಮ್ಮು, ಶೀತ ಇತ್ಯಾದಿ ಲಕ್ಷಣ (ಐಎಲ್ಐ ಮತ್ತು ಸಾರಿ ಸಮಸ್ಯೆ) ಇರುವವರಿಗೆ ಕಡ್ಡಾಯವಾಗಿ ಕೋವಿಡ್ ತಪಾಸಣೆ ನಡೆಸಲು ತೀರ್ಮಾನಿಸಲಾಗಿದೆ' ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.



ವಿಧಾನಸಭೆಯಲ್ಲಿ ಮಾತನಾಡಿದ ಅವರು, 'ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಕೆಲವು ತೀರ್ಮಾನಗಳನ್ನು ಕೈಗೊಳ್ಳಲಾಗಿದೆ. ಕೇಂದ್ರ ಸರ್ಕಾರ ನೀಡುವ ಮಾರ್ಗಸೂಚಿಯಂತೆ ಕ್ರಮ ತೆಗೆದುಕೊಳ್ಳಲಾಗುವುದು' ಎಂದರು.

'ಕೋವಿಡ್ ತಪಾಸಣೆ ಪ್ರಮಾಣ ಹೆಚ್ಚಿಸಲು ಮತ್ತು ಒಳಾಂಗಣದಲ್ಲಿ ನಡೆಯುವ ಕಾರ್ಯಕ್ರಮಗಳಲ್ಲಿ ಮಾಸ್ಕ್ ಧರಿಸುವಂತೆ ಸಲಹೆ ನೀಡಲಾಗುವುದು' ಎಂದರು.

'ವಿಮಾನ ನಿಲ್ದಾಣದಲ್ಲಿ ಶೇ 2ರಷ್ಟು ರ‍್ಯಾಂಡಮ್ ತಪಾಸಣೆ, ಜಿಲ್ಲಾಸ್ಪತ್ರೆ, ತಾಲ್ಲೂಕು ಕೇಂದ್ರ ಸಹಿತ ವಿವಿಧೆಡೆ ಇರುವ ಆಕ್ಸಿಜನ್ ಘಟಕಗಳನ್ನು ಪರಿಶೀಲಿಸಿ, ಕಾರ್ಯನಿರ್ವಹಿಸುವಂತೆ ಮಾಡಬೇಕು. ಕೋವಿಡ್ ರೋಗಿಗಳಿಗಾಗಿ ತಾಲ್ಲೂಕು ಹಾಗೂ ಜಿಲ್ಲೆಗಳಲ್ಲಿ ಆಸ್ಪತ್ರೆಗಳಲ್ಲಿ ಹಾಸಿಗೆ ಮೀಸಲಿಡಲು ಕೂಡಾ ನಿರ್ಧರಿಸಲಾಗಿದೆ' ಎಂದರು.

'ಖಾಸಗಿ ಆಸ್ಪತ್ರೆಗಳ ಆಡಳಿತ ಮಂಡಳಿ ಜತೆಗೂ ಮಾತುಕತೆ ನಡೆಸಿ, ನಿರ್ದಿಷ್ಟ ಪ್ರಮಾಣದ ಹಾಸಿಗೆಗಳನ್ನು ಮೀಸಲಿಡಲು ಸೂಚಿಸಲಾಗುವುದು. ಶೇ 80ರಷ್ಟು ಜನರು ಇನ್ನೂ ಬೂಸ್ಟರ್ ಡೋಸ್ ಹಾಕಿಸಿಕೊಂಡಿಲ್ಲ. ಹೀಗಾಗಿ ಗ್ರಾಮೀಣ ಭಾಗದಲ್ಲಿ ಬೂಸ್ಟರ್ ಡೋಸ್ ಹಾಕಿಸಲು ವಿಶೇಷ ಕ್ಯಾಂಪ್ ಮಾಡಲು ಮತ್ತು ಕೇಂದ್ರ ಸರ್ಕಾರದ ಜೊತೆ ನಿರಂತರ ಸಂಪರ್ಕದಲ್ಲಿದ್ದು, ಲಸಿಕೆ ದಾಸ್ತಾನು ಇರುವಂತೆ ನೋಡಿಕೊಳ್ಳಲು ತೀರ್ಮಾನಿಸಲಾಗಿದೆ' ಎಂದು ವಿವರಿಸಿದರು.

ಜೆಡಿಎಸ್‌ನ ಕೆ.ಎಂ. ಶಿವಲಿಂಗೇಗೌಡ ಮತ್ತು ಕಾಂಗ್ರೆಸ್‌ನ ಯತೀಂದ್ರ ಸಿದ್ದರಾಮಯ್ಯ, 'ಹೊರ ದೇಶಗಳಿಂದ ಬರುವ ಎಲ್ಲರಿಗೂ ಕಡ್ಡಾಯವಾಗಿ ಕೋವಿಡ್ ಪರೀಕ್ಷೆ ಮಾಡಬೇಕು. ಅವರಿಂದಾಗಿ ಇಲ್ಲಿಯವರಿಗೆ ಸಮಸ್ಯೆ ಆಗಬಾರದು. ವಿಮಾನ ನಿಲ್ದಾಣದಲ್ಲಿ ಶೇ 2ರಷ್ಟು ಜನರನ್ನು ಮಾತ್ರ ರ‍್ಯಾಂಡಮ್ ಆಗಿ ತಪಾಸಣೆ ನಡೆಸುವ ಬದಲು, ಎಲ್ಲರನ್ನೂ ತಪಾಸಣೆಗೆ ಒಳಪಡಿಸಬೇಕು' ಎಂದು ಆಗ್ರಹಿಸಿದರು.

**ಕಲಾಪಕ್ಕೆ ಮತ್ತೆ 'ಮಾಸ್ಕ್':** ವಿಧಾನ ಮಂಡಲ ಕಲಾಪದಲ್ಲಿ ಭಾಗಿಯಾಗಿರುವವರು ಮಾಸ್ಕ್ ಧರಿಸಿ ಬರುವುದು ಸೂಕ್ತ ಎಂಬ ಸಲಹೆ ಸದಸ್ಯರಿಂದ ಬಂತು.

**ಇಂದು ಸಭೆ (ನವದೆಹಲಿ ವರದಿ):** ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಾಂಡವೀಯ ಅವರು ರಾಜ್ಯಗಳ ಆರೋಗ್ಯ ಸಚಿವರೊಂದಿಗೆ ಕೋವಿಡ್ ನಿಯಂತ್ರಣ ಸಂಬಂಧ ಶುಕ್ರವಾರ ಸಭೆ ನಡೆಸಲಿದ್ದಾರೆ.

### 'ಕೋವಿಡ್: ಆಡಳಿತ ಯಂತ್ರ ಸಜ್ಜಾಗಿರಿಸಿ'

ನವದೆಹಲಿ: ಕೋವಿಡ್ ವಿರುದ್ಧ ಹೋರಾಡಲು ಎಲ್ಲಾ ಹಂತಗಳಲ್ಲೂ ಆಡಳಿತ ಯಂತ್ರ ಸಜ್ಜಾಗಿರಿಸುವ ಜೊತೆಗೆ ಕೋವಿಡ್ ಪರೀಕ್ಷೆ ಹಾಗೂ ವೈರಾಣು ಸಂರಚನಾ ವಿಶ್ಲೇಷಣೆಯನ್ನು ಹೆಚ್ಚಿಸುವಂತೆ ಪ್ರಧಾನಿ ನರೇಂದ್ರ ಮೋದಿ ಅವರು ಗುರುವಾರ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಚೀನಾ ಸೇರಿದಂತೆ ಕೆಲ ದೇಶಗಳಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚಿರುವ ಹಿನ್ನೆಲೆಯಲ್ಲಿ ಸಚಿವರು ಹಾಗೂ ಅಧಿಕಾರಿಗಳೊಂದಿಗೆ ಉನ್ನತ ಮಟ್ಟದ ಸಭೆ ನಡೆಸಿದ ಅವರು, ಆಮ್ಲಜನಕ ಸಿಲಿಂಡರ್, ವೆಂಟಿಲೇಟರ್, ಪಿಎಸ್ಎ ಘಟಕಗಳು ಹಾಗೂ ಮಾನವ ಸಂಪನ್ಮೂಲ ಸೇರಿದಂತೆ ಕೋವಿಡ್ ರೋಗಿಗಳಿಗೆ ಚಿಕಿತ್ಸೆ ನೀಡುವುದಕ್ಕಾಗಿಯೇ ಆಸ್ಪತ್ರೆಗಳಲ್ಲಿ ಕಲ್ಪಿಸಲಾಗಿರುವ ಮೂಲ ಸೌಕರ್ಯಗಳ ಕುರಿತು ಮಾಹಿತಿ ಪಡೆದುಕೊಳ್ಳುವಂತೆ ಎಲ್ಲಾ ರಾಜ್ಯಗಳಿಗೂ ಸಲಹೆ ನೀಡಿದ್ದಾರೆ.

9ನೇ ಪುಟ ನೋಡಿ



### ರಾಜ್ಯದ ನೆಲ–ಜಲ: ರಾಜಿ ರಹಿತ ನಿಲುವು

ಬೆಳಗಾವಿ: 'ಕರ್ನಾಟಕದ ನೆಲ, ಜಲ, ಭಾಷೆ ಹಾಗೂ ಕನ್ನಡಿಗರ ಹಿತಾಸಕ್ತಿಯ ವಿಷಯದಲ್ಲಿ ಯಾವುದೇ ರಾಜಿ ಮಾಡಿಕೊಳ್ಳುವ ಪ್ರಶ್ನೆಯೇ ಇಲ್ಲ' ಎಂದು ವಿಧಾನಸಭೆಯಲ್ಲಿ ಗುರುವಾರ ಸರ್ವಾನುಮತದಿಂದ ನಿರ್ಣಯ ಕೈಗೊಳ್ಳಲಾಯಿತು. 8

₹5,701 ಕೋಟಿ ಮೊತ್ತದ 13 ಯೋಜನೆಗಳಿಗೆ ಸಂಪುಟ ಒಪ್ಪಿಗೆ

## ಕಿತ್ತೂರು, ಕಲ್ಯಾಣಕ್ಕೆ ಭರ್ಜರಿ ಕೊಡುಗೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಕಿತ್ತೂರು ಕರ್ನಾಟಕ ಮತ್ತು ಕಲ್ಯಾಣ ಕರ್ನಾಟಕ ಪ್ರದೇಶದ ಬಹುದಿನಗಳ ಬೇಡಿಕೆಯಾಗಿರುವ ವಿವಿಧ ಏತ ನೀರಾವರಿ, ಕೆರೆ ತುಂಬಿಸುವ ಮಹತ್ವದ ಯೋಜನೆಗಳಿಗೆ ₹5,701 ಕೋಟಿ ಅನುದಾನ ಒದಗಿಸಲು ಗುರುವಾರ ಇಲ್ಲಿ ನಡೆದ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಈ ಭಾಗದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರ, ಬಹುಕೋಟಿ ಮೊತ್ತದ ಮಹತ್ವದ ಯೋಜನೆಗಳಿಗೆ ಒಪ್ಪಿಗೆ ನೀಡಿದೆ.

ಒಟ್ಟು 13 ಪ್ರಮುಖ ನೀರಾವರಿ ಯೋಜನೆಗಳಿಗೆ ಈ ಮೊತ್ತವನ್ನು ಬಳಸಲಾಗುವುದು ಎಂದು ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ತಿಳಿಸಿದ್ದಾರೆ.

### ಪೊಲೀಸ್ ಸಿಬ್ಬಂದಿ ವರ್ಗಾವಣೆ ನಿಯಮಕ್ಕೆ ಅಸ್ತು

ಪೊಲೀಸ್ ಸಿಬ್ಬಂದಿ ಮತ್ತು ಲಿಪಿಕ ಸಿಬ್ಬಂದಿ ವರ್ಗಾವಣೆ ಸಂಬಂಧ ವಿಶೇಷ ನಿಯಮ 2022 ಕರಡು ಅಧಿಸೂಚನೆಗೆ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಸ್ವಯಂ ಕೋರಿಕೆಯ ಮೇರೆಗೆ ಸಿ ಮತ್ತು ಡಿ ವರ್ಗಕ್ಕೆ ಸೇರಿದ ಸಿಬ್ಬಂದಿಯನ್ನು ಒಂದು ಜೇಷ್ಠತಾ ಘಟಕದಿಂದ ಇನ್ನೊಂದು ಜೇಷ್ಠತಾ ಘಟಕ ಸಮಾನ ಹುದ್ದೆಗೆ ವರ್ಗಾವಣೆ ಮಾಡಲು ಅವಕಾಶ ಮಾಡಿಕೊಡಲಾಗುವುದು. ಇಲಾಖೆಗೆ ಮಾತ್ರ ಅನ್ವಯವಾಗುವಂತೆ ಅಂತರ ಜಿಲ್ಲಾ ಅಥವಾ ಅಂತರ್ ವಲಯ ವರ್ಗಾವಣೆಗೆ ಅವಕಾಶ ನೀಡಲಾಗುವುದು.

**ಯೋಜನೆಗಳು ಯಾವುದು:**

- **ಮೆಳ್ಳಿಗೇರಿ–ಹಲಗಲಿ ಏತ ನೀರಾವರಿ:** ಬಾಗಲಕೋಟೆ ಜಿಲ್ಲೆ ಮುಧೋಳ ಮತ್ತು ಬೀಳಗಿ ತಾಲ್ಲೂಕಿನ ವ್ಯಾಪ್ತಿಯಡಿ ಬರುವ ಗಲಗಲಿ ಗ್ರಾಮದ ಹತ್ತಿರ ಕೃಷ್ಣಾ ನದಿಯಿಂದ ನೀರನ್ನೆತ್ತಿ 3,535 ಹೆಕ್ಟೇರ್ ಭೂಮಿಗೆ ಮುಂಗಾರು ಹಂಗಾಮಿನ ಅಚ್ಚುಕಟ್ಟು ಪ್ರದೇಶಗಳಿಗೆ ನೀರು ಹರಿಸಲು ಮತ್ತು 5 ಕೆರೆಗಳನ್ನು ತುಂಬಿಸುವ ಯೋಜನೆ. ₹197 ಕೋಟಿ ವೆಚ್ಚದಲ್ಲಿ 2 ಹಂತದಲ್ಲಿ ಕಾರ್ಯಗತಗೊಳಿಸಲಾಗುವುದು.
- **ಅಮ್ಮಾಜೇಶ್ವರಿ (ಕೊಟ್ಟಲಗಿ) ಏತ ನೀರಾವರಿ:** ಬೆಳಗಾವಿ ಜಿಲ್ಲೆ ಅಥಣಿ ತಾಲ್ಲೂಕಿನ ನೀರಾವರಿ ವಂಚಿತ 9950 ಹೆಕ್ಟೇರ್ ಪ್ರದೇಶಕ್ಕೆ ಸಮುದಾಯ ನೀರಾವರಿ ಸೌಲಭ್ಯ ಕಲ್ಪಿಸುವ ಮತ್ತು 17 ಕೆರೆಗಳನ್ನು ತುಂಬಿಸಲು ₹1486.41 ಕೋಟಿ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗುವುದು.
- **ಅರಭಾವಿ ಕ್ಷೇತ್ರದ 20 ಕೆರೆಗಳನ್ನು ತುಂಬಿಸುವ ಯೋಜನೆ:** ಬೆಳಗಾವಿ ಜಿಲ್ಲೆಯ ಅರಭಾವಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ 20 ಕೆರೆಗಳನ್ನು ಘಟಪ್ರಭಾ ನದಿಯಿಂದ ನೀರು ತುಂಬಿಸುವ ಯೋಜನೆಗೆ ₹323.87 ಕೋಟಿಗಳ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗುವುದು.
- **ಮಹಾಲಕ್ಷ್ಮಿ ಏತ ನೀರಾವರಿ ಯೋಜನೆ:** ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಕಲ್ಲೋಳ ಗ್ರಾಮದ ಬಳಿ ಹಾಲಿ ಇರುವ ಕಲ್ಲೋಳ–ಯಡೂರ್ ಬ್ಯಾರೇಜಿನ ಮೇಲ್ಭಾಗದಲ್ಲಿ ದೂದ್‌ಗಂಗಾ ನದಿಯಿಂದ ನೀರನ್ನೆತ್ತಿ ಸುಮಾರು 6,400 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವ ಮಹಾಲಕ್ಷ್ಮೀ ಏತ ನೀರಾವರಿ ಯೋಜನೆಯನ್ನು ₹382.30 ಕೋಟಿ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗುವುದು.

8ನೇ ಪುಟ ನೋಡಿ

ಅಣೆಕಟ್ಟು: ಸರ್ವಪಕ್ಷ ಸಭೆ – ಬೊಮ್ಮಾಯಿ

## ನವಲಿ ಸಮಾನಾಂತರ ಜಲಾಶಯಕ್ಕೆ ₹13,040 ಕೋಟಿ: ಡಿಪಿಆರ್ ಸಿದ್ಧ

ಪ್ರಜಾವಾಣಿ ವಾರ್ತೆ

ಬೆಳಗಾವಿ: ತುಂಗಭದ್ರಾ ಅಣೆಕಟ್ಟೆಯಲ್ಲಿ 30 ಟಿಎಂಸಿ ಅಡಿಯಷ್ಟು ಹೂಳು ತುಂಬಿರುವುದರಿಂದ ಅದಕ್ಕೆ ಪರ್ಯಾಯವಾಗಿ ನಿರ್ಮಿಸಲು ಉದ್ದೇಶಿಸಿರುವ ನವಲಿ ಸಮಾನಾಂತರ ಜಲಾಶಯ ನಿರ್ಮಾಣಕ್ಕೆ ₹13,040 ಕೋಟಿ ಮೊತ್ತದ ಸಮಗ್ರ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಲಾಗಿದೆ.

ವಿಧಾನಪರಿಷತ್ತಿನಲ್ಲಿ ಬಿಜೆಪಿಯ ವೈ.ಎಂ. ಸತೀಶ್ ಕೇಳಿದ ಪ್ರಶ್ನೆಗೆ ಉತ್ತರಿಸಿದ ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಈ ವಿಷಯ ತಿಳಿಸಿದರು.

8ನೇ ಪುಟ ನೋಡಿ

### ನಾರಾಯಣಪುರ ಬಲದಂಡೆ: ಕಾಮಗಾರಿ ಲೋಪ

ನಾರಾಯಣಪುರ ಬಲದಂಡೆ ಹಾಗೂ ವಿತರಣಾ ಕಾಲುವೆ ಕಾಮಗಾರಿಗಳಲ್ಲಿ ಲೋಪದೋಷವಾಗಿದೆ ಎಂಬ ದೂರು ಬಂದಿದ್ದು, ತಾಂತ್ರಿಕ ತಜ್ಞರ ಸಮಿತಿ ರಚಿಸಲಾಗಿದೆ. ವರದಿ ಬಂದ ಬಳಿಕ ತಪ್ಪು ಮಾಡಿದ್ದು ಸಾಬೀತಾದರೆ ಪರಿಶೀಲಿಸಿ ಕ್ರಮ ಜರುಗಿಸುವುದಾಗಿ ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಹೇಳಿದರು.

ಪರಿಷತ್ತಿನಲ್ಲಿ ಜೆಡಿಎಸ್‌ನ ಟಿ.ಎ. ಶರವಣ ಅವರು, ಸದನ ಸಮಿತಿ ಭೇಟಿ ನೀಡಿದಾಗ ಗೂಂಡಾ ರೂಪದಲ್ಲಿದ್ದ ಕೆಲವು ಗುತ್ತಿಗೆದಾರರು ಸದಸ್ಯರ ಮೇಲೆ ಹಲ್ಲೆ ನಡೆಸಿದ್ದಾರೆ. 25 ಎಂಜಿನಿಯರ್‌ಗಳು ಅಕ್ರಮದಲ್ಲಿ ಭಾಗಿಯಾಗಿದ್ದಾರೆ ಎಂಬ ಆರೋಪವೂ ಇದೆ. ಅವರ ವಿರುದ್ಧ ಕ್ರಮವೇನು ಎಂದು ಪ್ರಶ್ನಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಕಾರಜೋಳ, ಹಲ್ಲೆ ನಡೆಸಿದ ಬಗ್ಗೆ ತಮ್ಮ ಗಮನಕ್ಕೆ ಬಂದಿಲ್ಲ ಎಂದರು.

## ಪರಿಶಿಷ್ಟ ಪಂಗಡಕ್ಕೆ ಬೆಟ್ಟ ಕುರುಬರು: ಮಸೂದೆಗೆ ಸಂಸತ್ ಅಸ್ತು

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದಲ್ಲಿ ಪರಿಶಿಷ್ಟ ಪಂಗಡಗಳ ಪಟ್ಟಿಗೆ ಕಾಡು ಕುರುಬರ ಜತೆಗೆ ಬೆಟ್ಟ ಕುರುಬರನ್ನು ಸೇರಿಸುವ ಮಸೂದೆಯನ್ನು ಸಂಸತ್ ಗುರುವಾರ ಅಂಗೀಕರಿಸಿದೆ.

ರಾಜ್ಯಸಭೆಯು ಸಂವಿಧಾನ (ಪರಿಶಿಷ್ಟ ಪಂಗಡ) ಆದೇಶ (ನಾಲ್ಕನೇ ತಿದ್ದುಪಡಿ) ಮಸೂದೆ 2022 ಅನ್ನು ಗುರುವಾರ ಧ್ವನಿಮತದ ಮೂಲಕ ಅಂಗೀಕರಿಸಿತು. ಈ ಮಸೂದೆಗೆ ಲೋಕಸಭೆಯಲ್ಲಿ ಡಿಸೆಂಬರ್ 19ರಂದು ಅಂಗೀಕಾರ ನೀಡಲಾಗಿತ್ತು. ಬೆಟ್ಟ ಕುರುಬರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವಂತೆ ಕರ್ನಾಟಕ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿತ್ತು. ಈ ಸಂಬಂಧ ಸಮುದಾಯದ ಜನರು 30 ವರ್ಷಗಳಿಂದ ಹೋರಾಟ ಮಾಡುತ್ತಿದ್ದರು. ಮೈಸೂರು, ಕೊಡಗು ಹಾಗೂ ಚಾಮರಾಜನಗರ ಜಿಲ್ಲೆಗಳಲ್ಲಿ ಈ ಸಮುದಾಯದ ಜನರು ಇದ್ದಾರೆ.

ಮೇಲ್ಮನೆಯಲ್ಲಿ ಮಸೂದೆ ಮಂಡಿಸಿದ ಕೇಂದ್ರ ಬುಡಕಟ್ಟು ವ್ಯವಹಾರಗಳ ಸಚಿವ ಅರ್ಜುನ್ ಮುಂಡಾ, 'ದಕ್ಷಿಣದ ರಾಜ್ಯದಲ್ಲಿ ಬೆಟ್ಟ ಕುರುಬರ ಸಂಖ್ಯೆ ಕೇವಲ 5 ಸಾವಿರ ಇದೆ. ಅವರಿಗೆ ನ್ಯಾಯ ಒದಗಿಸುವ ಉದ್ದೇಶವನ್ನು ಮಸೂದೆ ಹೊಂದಿದೆ' ಎಂದರು.

### ₹ 40 ಕೋಟಿ ಆಸ್ತಿ ಕೊಳ್ಳೆಗೆ ನಕಲಿ ದಾಖಲೆ

ಬೆಂಗಳೂರು: ಪಟ್ಟಣಗೆರೆ ಗ್ರಾಮದಲ್ಲಿರುವ ಸುಮಾರು ₹40 ಕೋಟಿ ಮೌಲ್ಯದ 3 ಎಕರೆ ಆಸ್ತಿ ತಮ್ಮದಾಗಿಸಿಕೊಳ್ಳಲು ನಕಲಿ ದಾಖಲೆ ಸೃಷ್ಟಿಸಿದ್ದ ಆರೋಪದಡಿ ಬಿಬಿಎಂಪಿ ದ್ವಿತೀಯ ದರ್ಜೆ ಸಹಾಯಕ ಸೇರಿದಂತೆ ಐವರನ್ನು ಪೊಲೀಸರು ಬಂಧಿಸಿದ್ದಾರೆ. 4

### ರಿಲಯನ್ಸ್ ರಿಟೇಲ್ ತೆಕ್ಕೆಗೆ ಮೆಟ್ರೊ

ನವದೆಹಲಿ (ಪಿಟಿಐ): ಜರ್ಮನಿಯ ಮೆಟ್ರೊ ಎಜಿ ಕಂಪನಿಯ ಅಂಗಸಂಸ್ಥೆ ಆಗಿರುವ 'ಮೆಟ್ರೊ ಕ್ಯಾಷ್ ಆ್ಯಂಡ್ ಕ್ಯಾರಿ ಇಂಡಿಯಾ ಪ್ರೈವೇಟ್ ಲಿಮಿಟೆಡ್'ಅನ್ನು ₹ 2,850 ಕೋಟಿಗೆ ಖರೀದಿ ಮಾಡಲು ರಿಲಯನ್ಸ್ ಇಂಡಸ್ಟ್ರೀಸ್ ಒಪ್ಪಿಗೆ ನೀಡಿದೆ. 12

### ಚಿನಕುರಳಿ

ಪ್ರಕಾಶ್ ಶೆಟ್ಟಿ




### ಒಳ ಪುಟಗಳು



ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್,
ಚಿಕ್ಕಬಳ್ಳಾಪುರ ವಿಭಾಗ, ಚಿಕ್ಕಬಳ್ಳಾಪುರ

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐ.ಎಫ್.ಟಿ) ಸಂಖ್ಯೆ: 24–1/2022–23
ದಿ: 14.12.2022 (2ನೇ ಕರೆ)

(ಕಟ್ಟಡ ಕಾಮಗಾರಿಗಾಗಿ–ಸ್ಟ್ಯಾಂಡರ್ಡ್ ಬಿಡ್ಡಿಂಗ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–1,2 ರಂತೆ ಏಕ ಮತ್ತು ದ್ವಿ–ಲಕೋಟೆ ಪದ್ಧತಿಯಲ್ಲಿ)

ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ **ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಏಕ–ಲಕೋಟೆ ಮತ್ತು ದ್ವಿ–ಲಕೋಟೆ** ಪದ್ಧತಿಯಲ್ಲಿ ಗೌರಿಬಿದನೂರು ವಿಧಾನಸಭಾ ಕ್ಷೇತ್ರದ ಕಟ್ಟಡ ಕಾಮಗಾರಿಗಳ ಟೆಂಡರ್‌ಗಳನ್ನು ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 2000ರ ಅನ್ವಯ ಈ ಕೆಳಗೆ ಸಹಿ ಮಾಡಿದವರು ಆಹ್ವಾನಿಸಿರುತ್ತಾರೆ. ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಚಿಸುವವರು ದಿನಾಂಕ: **21.12.2022 ರಿಂದ 28.12.2022ರ ಸಂಜೆ 4.00 ಗಂಟೆಯವರೆಗೆ** ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. (1) ಆಕ್ಷೇಪಣೆ–ಸಂದೇಹ ಮತ್ತು ವಿವರಣೆಗಳಿಗೆ ಕಡೆಯ ದಿನಾಂಕ: **23.12.2022 (ಸಂಜೆ 3.00 ಗಂಟೆಗೆ ಕಛೇರಿ ವೇಳೆಯಲ್ಲಿ).** (2) ಭರ್ತಿಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕಡೆಯ ದಿನಾಂಕ: **28.12.2022 (ಸಂಜೆ 4.00 ಗಂಟೆಯವರೆಗೆ).** (3) ಆರ್ಥಿಕ ಮತ್ತು ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **30.12.2022 ಬೆಳಿಗ್ಗೆ 11.00 ಗಂಟೆಗೆ.** (4) ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ ಆರ್ಥಿಕ ಬಿಡ್‌ನ್ನು ತೆರೆಯಲಾಗುವುದು (ಕೆ.ಡಬ್ಲ್ಯೂ–3ರ ಕಾಮಗಾರಿಗಳಿಗೆ ಮಾತ್ರ ಅನ್ವಯಿಸುತ್ತದೆ). ಹೆಚ್ಚಿನ ಮಾಹಿತಿಗಾಗಿ **www.kpwd.gov.in** ವೆಬ್‌ಸೈಟ್‌ನ್ನು ಸಂಪರ್ಕಿಸಬಹುದು ಅಥವಾ ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಲೋ.ಇ. ಚಿಕ್ಕಬಳ್ಳಾಪುರ ವಿಭಾಗ, ಚಿಕ್ಕಬಳ್ಳಾಪುರ
ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ 399/ಎಂಸಿ&ಎ/2022–23

ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

**ನೈಋತ್ಯ ರೈಲ್ವೆ** G20

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಇ–ಟೆಂಡರ್ ಸೂಚನೆ ಸಂ.: CAO/CN/BNC/127/2022 ದಿನಾಂಕ: 16.12.2022

| ಕಾಮಗಾರಿಯ ವಿವರ | ಅಂದಾಜು ಮೌಲ್ಯ |
|---|---|
| ಕುಡತಿಣಿ ಯಾರ್ಡ್‌ನಲ್ಲಿ ಕಿಮೀ 188/5ರಲ್ಲಿ ಎಲ್‌ಸಿ ನಂ. 102 ಬದಲು ಪ್ರಸ್ತಾವನೆಯ ಆರ್‌ಓಬಿಗಾಗಿ ಪವರ್‌ಲೈನ್ ಕ್ರಾಸಿಂಗ್ ಅನ್ನು ಸ್ಥಳಾಂತರಿಸುವುದು & ಲೈಟಿಂಗ್ ವ್ಯವಸ್ಥೆ. (ಟೆಂಡರು ಸಂ. ECN/47/2022) | ರೂ. 26,35,252/- |

ಇ–ಟೆಂಡರ್ ಸೂಚನೆ ಸಂ.: CAO/CN/BNC/128/2022 ದಿನಾಂಕ: 16.12.2022

| ಕಾಮಗಾರಿಯ ವಿವರ | ಅಂದಾಜು ಮೌಲ್ಯ |
|---|---|
| 1) ಹುಬ್ಬಳ್ಳಿ – ಹೊಸಪೇಟೆ ನಡುವೆ (ಷೆಡ್ಯೂಲ್ ಎ) ಎಲ್‌ಸಿ ನಂ. 32 ಬದಲು, ಹಾಗೆಯೇ 2) ಕೊಪ್ಪಳ – ಗಿಣಿಗೇರಾ (ಷೆಡ್ಯೂಲ್ ಬಿ) ನಡುವೆ ಎಲ್‌ಸಿ ನಂ. 66 ಬದಲು, ಮತ್ತು 3) ಗಿಣಿಗೇರಾ – ಮುನಿರಾಬಾದ ನಡುವೆ (ಷೆಡ್ಯೂಲ್ ಸಿ) ಎಲ್‌ಸಿ ನಂ. 72 ಬದಲು ಆರ್‌ಓಬಿಯ ಲೈಟಿಂಗ್ ವ್ಯವಸ್ಥೆ. (ಟೆಂಡರು ಸಂ. ECN/59/2022) | ರೂ. 78,61,958/- |

ಇ–ಟೆಂಡರ್ ಸೂಚನೆ ಸಂ.: CAO/CN/BNC/129/2022 ದಿನಾಂಕ: 16.12.2022

| ಕಾಮಗಾರಿಯ ವಿವರ | ಅಂದಾಜು ಮೌಲ್ಯ |
|---|---|
| ತುಮಕೂರು – ರಾಯದುರ್ಗ ವಿಭಾಗದ ಪ್ರಸ್ತಾಪಿಸಲಾದ ದೊಡ್ಡಹಳ್ಳಿ ರೈಲ್ವೇ ನಿಲ್ದಾಣದಲ್ಲಿ ವಿದ್ಯುತ್ ಸರಬರಾಜು ವ್ಯವಸ್ಥೆ ಹಾಗೂ ಪ್ಲಾಟ್‌ಫಾರ್ಮ್ ಲೈಟಿಂಗ್ ವ್ಯವಸ್ಥೆ. (ಟೆಂಡರು ಸಂ. ECN/62/2022) ತಿದ್ದುಪಡಿ ಸಂ. 1, ದಿನಾಂಕ: 19.12.2022, 17.55. | ರೂ. 37,82,133/- |

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 12.01.2023, 11:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಉಪ ಮುಖ್ಯ ಎಲೆಕ್ಟ್ರಿಕಲ್ ಇಂಜಿನಿಯರ್/ನಿರ್ಮಾಣ ಬೆಂಗಳೂರು ದಂಡು
PUB/560/AAD/PRB/SWR/2022-23
S.W.Railways | SWRRLY | SWRRLY

# ಪಠ್ಯಪುಸ್ತಕವಾಗಿ ಪುನೀತ್ ರಾಜ್‌ಕುಮಾರ್ ಬಾಲ್ಯ

**ಬೆಂಗಳೂರು:** ಪುನೀತ್ ರಾಜ್‌ಕುಮಾರ್ ಅವರ ಜೀವನಚರಿತ್ರೆಯ ಒಂದು ಭಾಗವನ್ನು ಬೆಂಗಳೂರು ವಿಶ್ವವಿದ್ಯಾಯದ ಪಠ್ಯದಲ್ಲಿ ಅಳವಡಿಸಲಾಗಿದೆ.

ಪತ್ರಕರ್ತ ಡಾ.ಶರಣು ಹುಲ್ಲೂರು ಬರೆದ, ಸಾವಣ್ಣ ಪ್ರಕಾಶನದ 'ನೀನೇ ರಾಜಕುಮಾರ' ಕೃತಿಯಲ್ಲಿ ಪುನೀತ್ ಬಾಲ್ಯವನ್ನು ಒಳಗೊಂಡ 'ಲೋಹಿತ್ ಎಂಬ ಮರಿಮುದ್ದ' ಅಧ್ಯಾಯವನ್ನು ಬಿ.ಕಾಂ ಪದವಿಯ ಮೂರನೇ ಸೆಮಿಸ್ಟರ್‌ನ ಕನ್ನಡ ಭಾಷಾ ಪಠ್ಯ 'ವಾಣಿಜ್ಯ ಕನ್ನಡ 3'ಯಲ್ಲಿ ಸೇರಿಸಲಾಗಿದೆ. ಡಾ.ಮುನಿಯಪ್ಪ ಈ ಪಠ್ಯಪುಸ್ತಕದ ಪ್ರಧಾನ ಸಂಪಾದಕರು. ಡಾ.ಅಮರೇಂದ್ರ ಶೆಟ್ಟಿ, ಡಾ.ಕ.ನಿಂ. ಹೊಯ್ಸಳಾದಿತ್ಯ, ಡಾ.ಶಿವರಾಜ ಹಾಗೂ ಡಾ.ಬಿ.ಆರ್.ರಘುನಂದನ್ ಅವರು ಪಠ್ಯದ ಸಂಪಾದಕರು.

**ತೋಟಗಾರಿಕೆ ಇಲಾಖೆ**
ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರವರ ಕಛೇರಿ
(ಜಿಲ್ಲಾ ಪಂಚಾಯತ್) ಆನೇಕಲ್, ಬೆಂಗಳೂರು ನಗರ ಜಿಲ್ಲೆ.
ದೂ.: 080–29905889, ಇ–ಮೇಲ್: sadhanekal@yahoo.com
ಸಂ.: ಹಿಸತೋನಿ/ಜಿಪಂ/ಆ/ವಿನಿ1/01/2022–23

**ಪ್ರಕಟಣೆ**

ಈ ಮೂಲಕ ತಿಳಿಯಪಡಿಸುವುದೇನೆಂದರೆ, 2022–23ನೇ ಸಾಲಿನ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (RKVY)ಯಡಿ ಫಲಾನುಭವಿಗಳಿಗೆ ನೀರಿನಲ್ಲಿ ಕರಗುವ ರಸಗೊಬ್ಬರ, ಲಘು ಪೋಷಕಾಂಶಗಳ ಮಿಶ್ರಣ, ಬೆಳೆ / ಹಣ್ಣು / ಹೂವು ಹೊದಿಕೆಗಳಿಗೆ ಸಹಾಯಧನ, ಹಣ್ಣಿನ ಗಿಡಗಳ ಮೇಲಾವರಣ ನಿರ್ವಹಣೆ (Canopy Management), ಕೊಯ್ಲೋತ್ತರ ನಿರ್ವಹಣೆ ಸಂಬಂಧಿಸಿದ ಚಟುವಟಿಕೆಗಳಾದ Punnet Box / Corrugated box, Installation of Stand Alone Solar Pumps, ಮೋಹಕ ಕೀಟ ಬಲೆಗಳು / ಜಿಗುಟಾದ ಬಲೆಗಳು, ಸೌರಶಕ್ತಿ ಆಧಾರಿತ ಕೃತಿಕ ಬುದ್ಧಿಯ ಕೀಟ ನಿಯಂತ್ರಕ ಬಲೆಗಳು, ನೀರು ಸಂಗ್ರಹಣಾ ಘಟಕ, "ತೋಟಗಾರಿಕೆ ಬೆಳೆಗಳಲ್ಲಿ ಗುಣಮಟ್ಟದ ಉತ್ಪಾದನೆಗೆ ವಿಶೇಷ ಉತ್ತೇಜನ" ಕಾರ್ಯಕ್ರಮದಡಿ ಕ್ಷೇತ್ರ ಮಟ್ಟದಲ್ಲಿ ವಿಂಗಡಣೆ, ಪ್ಯಾಕಿಂಗ್ ಮತ್ತು ಸಂಗ್ರಹಣೆ ಕೊಠಡಿ, ಪಾಲಿಹೌಸ್ ಶೀಟ್ ಮತ್ತು ಗಿಡ ಬದಲಾವಣೆಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿಗಳನ್ನು ದಿನಾಂಕ **31.12.2022**ರೊಳಗೆ ಸಲ್ಲಿಸತಕ್ಕದ್ದು.

ಸಹಿ/–, ಹಿರಿಯ ಸಹಾಯಕ ತೋಟಗಾರಿಕೆ ನಿದೇಶಕರು,
(ಜಿಲ್ಲಾ ಪಂಚಾಯತ್) ಆನೇಕಲ್,
ಬೆಂಗಳೂರು ನಗರ ಜಿಲ್ಲೆ
ವಾಸಾಸಂಇ/ವಾಪ್ರ/ಎಲ್‌ಸಿ/3679/2022–23

## ಅಧಿಕ ಬಡ್ಡಿ ವಸೂಲಿ ಆರೋಪ

# ದಾಖಲೆ ವಶ ಅಧಿಕಾರ ಪೊಲೀಸರಿಗಿಲ್ಲ: ಹೈಕೋರ್ಟ್

ಪ್ರಜಾವಾಣಿ ವಾರ್ತೆ



**ಬೆಂಗಳೂರು:** 'ಸರ್ಕಾರದಿಂದ ಪರವಾನಗಿ ಪಡೆಯದೆ ಸಾಲಗಾರರಿಂದ ಅಧಿಕ ಬಡ್ಡಿ ವಸೂಲಿ ಮಾಡುವವರ ಮೇಲೆ ದಾಳಿ ನಡೆಸಿ ದಾಖಲೆ ವಶಪಡಿಸಿಕೊಳ್ಳುವ ಅಧಿಕಾರ ಪೊಲೀಸರಿಗೆ ಇಲ್ಲ' ಎಂದು ಹೈಕೋರ್ಟ್ ಹೇಳಿದೆ.

'ನಮ್ಮ ವಿರುದ್ಧ ಗೋಕಾಕ್ ಠಾಣಾ ಪೊಲೀಸರು ದಾಖಲಿಸಿರುವ ದೋಷಾರೋಪ ಪಟ್ಟಿ ಮತ್ತು ವಿಚಾರಣಾ ನ್ಯಾಯಾಲಯದ ಪ್ರಕ್ರಿಯೆ ರದ್ದುಪಡಿಸಬೇಕು' ಎಂದು ಕೋರಿ ಗೋಕಾಕ್‌ನ ಬಸವರಾಜು ಮತ್ತು ಜಾಕಿರ್ ಹುಸೇನ್ ಎಂಬುವವರು ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಹೇಮಂತ ಚಂದನಗೌಡರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ.

'ಈ ಪ್ರಕರಣದಲ್ಲಿ ಪೊಲೀಸರು ಕಾನೂನು ಪ್ರಕ್ರಿಯೆ ಪಾಲಿಸದೆ ಎಫ್‌ಐಆರ್ ಮತ್ತು ದೋಷಾರೋಪ ಪಟ್ಟಿ ದಾಖಲಿಸಿದ್ದಾರೆ' ಎಂದಿರುವ ನ್ಯಾಯಪೀಠ, ಅರ್ಜಿದಾರರ ವಿರುದ್ಧದ ವಿಚಾರಣಾ ನ್ಯಾಯಾಲಯದ ಪ್ರಕ್ರಿಯೆ ರದ್ದುಪಡಿಸಿದೆ. 'ಮಿತಿಮೀರಿದ ಬಡ್ಡಿ ವಿಧಿಸುವಿಕೆ ನಿಷೇಧ ಕಾಯ್ದೆ-2004ರ ಕಲಂ 3 ಮತ್ತು 4ರ ಅಡಿಯಲ್ಲಿ ಅಧಿಕ ಬಡ್ಡಿ ವಸೂಲಿ ಪ್ರಕರಣಕ್ಕೆ ಸಂಬಂಧಿಸಿದಂತೆ ಎಫ್‌ಐಆರ್ ದಾಖಲಿಸುವ ಮುನ್ನ ತನಿಖೆ ನಡೆಸುವುದು ಕಾನೂನುಬಾಹಿರ. ಕರ್ನಾಟಕ ಲೇವಾದೇವಿದಾರರ ಕಾಯ್ದೆಯ ಕಲಂ 15ರ ಪ್ರಕಾರ ರಿಜಿಸ್ಟ್ರಾರ್, ಸಹಾಯಕ ರಿಜಿಸ್ಟ್ರಾರ್ ಅಥವಾ ಸಕ್ಷಮ ಪ್ರಾಧಿಕಾರದ ಅಧಿಕಾರಿ ಅವರಂತಹ ನಿರ್ದಿಷ್ಟ ಅಧಿಕಾರಿ ಮಾತ್ರ ಅಧಿಕ ಬಡ್ಡಿ ವಸೂಲಿ ಮಾಡುವವರ ಮೇಲೆ ದಾಳಿ ನಡೆಸಿ ಶೋಧಿಸಿ ಜಪ್ತಿ ಮಾಡುವ ಅಧಿಕಾರ ಹೊಂದಿದ್ದಾರೆ' ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ. 'ನೊಂದ ಸಾಲಗಾರರು ಸಂಬಂಧಪಟ್ಟ ನ್ಯಾಯಾಲಯದಲ್ಲಿ ಪರಿಹಾರ ಕಂಡುಕೊಳ್ಳಬಹುದು' ಎಂದು ಆದೇಶಿಸಲಾಗಿದೆ.

**ಪ್ರಕರಣವೇನು?:** 'ಪರವಾನಗಿ ಪಡೆಯದೆ ಸಾರ್ವಜನಿಕರ ವಾಹನಗಳನ್ನು ಅಡ ಇರಿಸಿಕೊಂಡು ತಿಂಗಳಿಗೆ ಶೇ 10ರಷ್ಟು ಬಡ್ಡಿಗೆ ಸಾಲ ನೀಡುತ್ತಿದ್ದಾರೆ' ಎಂಬ ಆರೋಪದಡಿ ಬಸವರಾಜು ಮತ್ತು ಜಾಕಿರ್ ಹುಸೇನ್ ವಿರುದ್ಧ ಬೆಳಗಾವಿಯ ಗೋಕಾಕ್ ಟೌನ್ ಠಾಣಾ ಪೊಲೀಸರು ದಾಳಿ ನಡೆಸಿ ದಾಖಲೆ ವಶಪಡಿಸಿಕೊಂಡು ಪ್ರಕರಣ ದಾಖಲಿಸಿದ್ದರು.

**ನೈಋತ್ಯ ರೈಲ್ವೆ** G20

ಇ–ಟೆಂಡರ್ ಸೂಚನೆ ಸಂ.: ECN/08/2022/RT2

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

| ಕಾಮಗಾರಿಯ ವಿವರ | ಅಂದಾಜು ಮೌಲ್ಯ |
|---|---|
| ಗಂಗಾವತಿ – ಸಿಂಧನೂರು (ಡಿ/ಸಿ) ನಡುವೆ ಕಿಮೀ. ಸಂ. 73/200–300 ರಲ್ಲಿ ರೈಲ್ವೇ ಚೈನೇಜ್‌ನ ಮತ್ತು ಗಿಣಿಗೇರಾ – ರಾಯಚೂರು ಹೊಸ ಬಿಜಿ ಲೈನ್‌ನಲ್ಲಿ ಸಿಂಧನೂರು – ರಾಯಚೂರು (ಎಂ/ಸಿ) ನಡುವೆ ಕಿಮೀ. 82/100–200 ರಲ್ಲಿ ರೈಲ್ವೇ ಚೈನೇಜ್‌ನ 110 ಕೆವಿ ಪವರ್ ಲೈನ್ ಕ್ರಾಸಿಂಗ್‌ಗಳನ್ನು ಮಾರ್ಪಡಿಸುವುದು. (ಟೆಂಡರು ಉಲ್ಲೇಖ ಸಂ. ಇಅಓ/08/2022/ಖಖ2) | ರೂ. 5,00,93,733.66 |

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 10.01.2023, 11:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಉಪ ಮುಖ್ಯ ವಿದ್ಯುತ್ ಇಂಜಿನಿಯರ್ / ನಿರ್ಮಾಣ ಬೆಂಗಳೂರು ದಂಡು
PUB/561/AAD/PRB/SWR/2022-23
S.W.Railways | SWRRLY | SWRRLY












ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

## REAL ESTATE SELLING

### Farm House/ Land/ Resorts

#### Kanakapura Road

**KANAKAPURA TOWN** 1 Acre and 2 Acre with Water & Electricity Suitable for any Purpose Call Ravikumar: 9945928994.

### Residential/ Commercial

#### Koramangala

**KORAMANGALA (JAKKASANDRA)** Residential Rental Income 70K, Building BBMP(A-Kata) near Green View Hospital Price. 93Lakhs, Contact: 9731456798, 9731276419

### Sites

#### Vishweshwariah Layout

**BHARATHNAGAR ATTACH** 40x40 BBMP A Katha SE Corner. SMV BDA Site 1st Block 40x60 East: 9964971895

#### Sadashiva Nagar

**SADHASHIVNAGAR PROPERTIES** for sale 50x80, 90x60, 80x120 RMV 2nd 50x80 East. Contact Malnad. 9844092859/ 9632377775.

#### Out-Station

**VACANT LAND** Measuring about 2500 sqft located in the prominent temple town 40 minutes from Bangalore on Bangalore- Mysore Highway for immediate sale by owner. Contact by Text 7022247908. Email: sammallur@yahoo.com

### House

#### Out-Station

**A WELLBUILT** Modren two floor RCC building measuring about 3000 Sqft with Three bedroom with attached bathrooms and Airconditioners in a prominent temple town 40 minutes from Bangalore, on Bangalore- Mysore Highway available for immediate sale. Contact by Text 7022247908. Email: sammallur@yahoo.com

#### Nagarabhavi

**SALE 40X60** South Site, East Facing Duplex House BDA Railway Layout,1st Stage Mallathalli, Near Narayana School. Owner:- 9900029838

## RENTAL PROPERTIES

### Accommodation Wanted

#### Commercial

**CLINIC SPACE** Furnished or not furnished required 1000- 1500sq.ft with Car parking facility. Preferably Near Metro station Contact: 7204197253/ 9591751146

### Accommodation Available

#### Industrial And Factory

**FOR RENT** 10,000 Sqft Industrial Shed/ Warehouse in Yeshwanthpur. Contact: 9341264015/ 8310457211 (Whatsapp).

#### Commercial

**FOR RENT** 20,000 to 2,00,000sqft Main Road facing 256-feet at Sommanahalli 19kms from Banashankari temple, suitable for Automobile, Cold Storage, Warehouse. Call VERNA DEVELOPERS, Barton Centre, M.G.Road. 9916310226/ 9620253180/ www.vernadevelopers.com

## JOB OPPORTUNITIES

### Multiple Vacancy

**REQUIRED, TEAMLEADER,** Telecaller & Field_Executive For Bank Loan collection. Direct recruitment to company. 9620206756, 9620200756.

### Wanted

**WANTED FEMALE** Office Assistant Below 40 Years Qualification any Degree, Good Communication Skills: Kannada, English, Hindi. in around Rajajinagar Contact: 23384085/ 9108458798

## BUSINESS

### Business to Business

#### Business

**INVEST RS.30K-** TO-3L in Gold, Multiple Business (Group Co.,) You get 8% Secured Fixed Returns Regularly (Weekly/Monthly) Referrals Also Welcome. Contact- 7892818780

### Business Offers

#### Finance

**NRI'S INVESTMENT** And Finance Available On Low Interest Against Properties, Land& Building,Sites,Flats, Converted& Agriculture Lands Call: 7411265189

## PERSONAL

### Change of Name

**CHANGE OF NAME**
I, **PRIYA S HUKKERI,** residing at No. 201, Spurthi Comforts, Srinivasapura, Behind Dominos Pizza, Channasandra, Rajarajeshwarinagar, Bangalore- 560098, have changed my name to **PRIYA ANIL VANKUDARI,** vide affidavit dated 22.12.2022 before Notary Ravi, Bangalore.

**I, BHASKARACHARI,** residing at Bengaluru-85 have changed my name as BHASKARACHAR, vide affidavit dated 22/12/2022 before Notary P.C.Ramaiah, Bengaluru

**I, NANCY** Thomas W/o Manu Mathew R/o 106 7B main Road, HRBR Layout Banaswadi Bangalore-560043 have changed my name to Nancy Mathew for all purposes.

**I,** SHARAVATHY RAMU, residing at Bengaluru-85 have changed my name as SHARAVATHI RAMU, vide affidavit dated 22/12/2022 before Notary P.C.Ramaiah, Bengaluru

**SHAKUNTALA DEVI** W/o. 14826325H, HAV Rambachan Yadav R/a. Hilsa Faizullahapur Mau my name SHAKUNTALA DEVI to SAKUNTALA YADAV notary B.M. Chandrashekar

**14826325H, HAV** Rambachan Yadav 2ATC daughter name record's ARCHANA KUMARI to ARCHANA YADAV notary B.M. Chandrashekar

**14830761X, HAV,** Vinod Kumar 2ATC Father name Record's CHUNUWAD to CHUNUVAD notary B.M. Chandrashekar.

**CHANGE OF NAME**
I, Dinesh B. N. S/o **Nanjundegowda,** aged 53 years R/ at No.30, 3rd Cross, Behind Ranganatha Milk Dairy, Hegganahalli, Bangalore - 560 091, have Changed my Name to Dinesh B. N. S/o **Nanjamarigowda** vide Affidavit dated :20-12-2022. Sworn before notary Shivanna chari, Bangalore.

**I MANISH** A R/@ 111,5th cross, Itpl Road, Kundanahalli Colony, Marathahalli, Bengaluru-37, have changed my name to MANISH KUMAR A Vide affidavit dated 22/12/2022 before notary K.V. Mani

## PUBLIC NOTICE

**515 ABWHS**
Cambridge Road Cross, Ulsoor Bangalore – 560008
**TENDER NOTIFICATION**
Sealed Bids/ Tenders are invited for awarding contract for out sourcing the Security Service in 515 Army Base Workshop High School, HR Barrack Bangalore and the same should reach this school latest by 1400 hrs on 05 Jan 2023 and will be opened at 11 hrs on 06 Jan 2023. Tender documents and bid format can be downloaded from Website http://www.515armyschool.co.in. /downloads.
**Principal**

**PUBLIC NOTICE**
The general public is hereby called upon to take notice that my client Smt. Bindu Aiyanna, W/o Mr. M.C. Aiyanna, D/o Mr. K.W. Subbaiah, residing at #201 Hachinad Village (via Ammathi Vontiangadi), Kodagu, Karnataka 571211, has a share and interest in the property as detailed in the schedule below. Accordingly, any alienation of or charge created upon any portion of the said property is subject to the rights of my client. Any document executed by or on behalf of Mr. K.S. Sharan Somanna, S/o Mr. K.W. Subbaiah and/or by or on behalf of M/s Vriddhi Builder LLP with third parties is without the knowledge or consent of my client and anybody entering into any agreement, deed, bond, etc., will be doing so at their own risk and peril and my client reserves her right to take action as per law against such third parties.

**SCHEDULE:** All that is piece and parcel of property bearing Municipal No. 22, (old Municipal Nos. 22 & 22/1, old Site No. 608), bearing PID No. 59-107-22, situated in 10th Cross, West of Kanakapura Road, 7th Block Jayanagar, Bengaluru-560070, bounded on the :
**East by** : Site No. 607;
**West by** : Site No. 609;
**South by** : 10th Cross Road;
**North by** : Site No. 615.

**P. ANU CHENGAPPA,** Advocate
'Sainekethan'
No. 400, 5th Main, 6th Block, Banashankari-III Stage, II Phase, Bangalore-560085.
M: 99800 47780

**CAUTION NOTICE**
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement



ಕರ್ನಾಟಕ ಸರ್ಕಾರ
**ಹಿಂದೂ ಧಾರ್ಮಿಕ ದತ್ತಿ ಇಲಾಖೆ**
**ಶ್ರೀ ಗಂಗಾಧರೇಶ್ವರ ಮತ್ತು ಶ್ರೀ ಹೊನ್ನಾದೇವಿ ದೇವಾಲಯ**
ಶಿವಗಂಗೆ, ನೆಲಮಂಗಲ ತಾಲ್ಲೂಕು ಸೋಂಪುರ ಹೋ॥, ಬೆಂಗಳೂರು ಗ್ರಾಮಾಂತರ ಜಿಲ್ಲೆ

ಮಾನ್ಯ ಜಿಲ್ಲಾಧಿಕಾರಿಗಳ ಆದೇಶ ಸಂಖ್ಯೆ: ಬೆಂ. ಗ್ರಾ.ಜಿ/ಟಿ/–1/ಜಾ.ರೋ.ನಿ/2022–23/1320 ದಿನಾಂಕ: 30.11.2022

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಜಾನುವಾರುಗಳಿಗೆ ಚರ್ಮಗಂಟು ರೋಗ ಕಾಣಿಸಿಕೊಂಡಿರುವ ಹಿನ್ನೆಲೆಯಲ್ಲಿ ಜಾನುವಾರಗಳ ಜಾತ್ರೆಯನ್ನು ರದ್ದುಪಡಿಸಲು ಆದೇಶಿಸಲಾಗಿದೆ, ಇದರನ್ವಯ **"ಶ್ರೀ ಗಂಗಾಧರೇಶ್ವರ ಮತ್ತು ಶ್ರೀ ಹೊನ್ನಾದೇವಿ"** ಕ್ಷೇತ್ರದಲ್ಲಿ 2022–23ನೇ ಸಾಲಿನಲ್ಲಿ ನಡೆಯುವ **"ರಾಸುಗಳ ಜಾತ್ರೆ"** ಯನ್ನು ರದ್ದುಪಡಿಸಲಾಗಿದೆ, ರೈತ ಭಾಂದವರು ಸಹಕರಿಸಬೇಕಾಗಿ ವಿನಂತಿಸಿದೆ.

ಕಾರ್ಯನಿರ್ವಾಹಕ ಅಧಿಕಾರಿ
ಶ್ರೀ ಗಂಗಾಧರೇಶ್ವರ ಮತ್ತು ಶ್ರೀ ಹೊನ್ನಾದೇವಿ ದೇವಾಲಯ
ಶಿವಗಂಗೆ

ಸಹಾಯಕ ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ
ಬೆಂಗಳೂರು ಗ್ರಾಮಾಂತರ ಜಿಲ್ಲೆ ಹಾಗೂ ಆಡಳಿತಾಧಿಕಾರಿಗಳು
ಶ್ರೀ ಗಂಗಾಧರೇಶ್ವರ ಮತ್ತು ಶ್ರೀ ಹೊನ್ನಾದೇವಿ ದೇವಾಲಯ, ಶಿವಗಂಗೆ

**ನೈಋತ್ಯ ರೈಲ್ವೆ** G20

ಹರಾಜು ಪ್ರಕಟಣೆ ಸಂಖ್ಯೆ. ಎಸ್/XIII/04/2022–23

ನೈಋತ್ಯ ರೈಲ್ವೆಯ ಜನರಲ್ ಸ್ಟೋರ್ಸ್ ಡಿಪೋ / ಹುಬ್ಬಳ್ಳಿ ಮತ್ತು ಮೆಕ್ಯಾನಿಕಲ್ ಜನರಲ್ ಸ್ಟೋರ್ಸ್ ಡಿಪೋ / ಅಶೋಕಪುರಂ (ಮೈಸೂರು) ಡಿಪೋಗಳು ಮತ್ತು ಹುಬ್ಬಳ್ಳಿ, ಮೈಸೂರು ಹಾಗೂ ಬೆಂಗಳೂರು ವಿಭಾಗಗಳ ಅಡಿಯಲ್ಲಿನ ಡಿಪೋ ಸ್ಕ್ರ್ಯಾಪ್‌ನ ಆನ್‌ಲೈನ್ ಮಾರಾಟಕ್ಕಾಗಿ ಜನವರಿ, ಫೆಬ್ರವರಿ ಮತ್ತು ಮಾರ್ಚ್–2023ರ ತಿಂಗಳಿನಲ್ಲಿ ನಡೆಯುವ ಇ–ಹರಾಜಿನ ವೇಳಾಪಟ್ಟಿಯು ಕೆಳಕಂಡಂತಿದೆ.

| ಹರಾಜಿನ ವಿಧಾನಗಳು | ಸ್ಥಳ | ಜನವರಿ–2023 | | | ಫೆಬ್ರವರಿ–2023 | | | ಮಾರ್ಚ್–2023 | | |
|---|---|---|---|---|---|---|---|---|---|---|
| ಇ–ಹರಾಜು | ಜನರಲ್ ಸ್ಟೋರ್ಸ್ ಡಿಪೋ / ಹುಬ್ಬಳ್ಳಿ | 2ನೇ | 13ನೇ | 23ನೇ | 1ನೇ | 9ನೇ | 22ನೇ | 1ನೇ | 14ನೇ | 31ನೇ |
| | ಮೆಕ್ಯಾನಿಕಲ್ ಜನರಲ್ ಸ್ಟೋರ್ಸ್ ಡಿಪೋ / ಅಶೋಕಪುರಂ (ಮೈಸೂರು) | 9ನೇ | | 24ನೇ | 6ನೇ | | 23ನೇ | 2ನೇ | 15ನೇ | 28ನೇ |
| | ಹುಬ್ಬಳ್ಳಿ ವಿಭಾಗ | 4ನೇ | 12ನೇ | 25ನೇ | 2ನೇ | 14ನೇ | 21ನೇ | 3ನೇ | 16ನೇ | 29ನೇ |
| | ಬೆಂಗಳೂರು ವಿಭಾಗ | 11ನೇ | 19ನೇ | 30ನೇ | 7ನೇ | 16ನೇ | 27ನೇ | 9ನೇ | 20ನೇ | 31ನೇ |
| | ಮೈಸೂರು ವಿಭಾಗ | 16ನೇ | 31ನೇ | | 13ನೇ | 28ನೇ | | 13ನೇ | 21ನೇ | 27ನೇ |

ಮೇಲೆ ತಿಳಿಸಿದಂತೆ ನಡೆಸಲಾಗುವ ಇ–ಹರಾಜಿನಲ್ಲಿ ತಾವು ಸಕ್ರಿಯವಾಗಿ ಪಾಲ್ಗೊಳ್ಳಬೇಕೆಂದು ವಿನಂತಿಸಲಾಗಿದೆ. ವಿವರಗಳಿಗಾಗಿ, ಉಪ ಮುಖ್ಯ ಸಾಮಗ್ರಿ ವ್ಯವಸ್ಥಾಪಕರು / ಜನರಲ್ ಸ್ಟೋರ್ಸ್ ಡಿಪೋ / ಹುಬ್ಬಳ್ಳಿ (0836–2363466 / 9731668760), ಉಪ ಮುಖ್ಯ ಸಾಮಗ್ರಿ ವ್ಯವಸ್ಥಾಪಕರು / ಮೆಕ್ಯಾನಿಕಲ್ ಜನರಲ್ ಸ್ಟೋರ್ಸ್ ಡಿಪೋ / ಅಶೋಕಪುರಂ (0821–2480171 / 9731665756), ಹಿರಿಯ ವಿಭಾಗೀಯ ಸಾಮಗ್ರಿ ವ್ಯವಸ್ಥಾಪಕರು / ಹುಬ್ಬಳ್ಳಿ (0836–2363497 / 9731668750), ಹಿರಿಯ ವಿಭಾಗೀಯ ಸಾಮಗ್ರಿ ವ್ಯವಸ್ಥಾಪಕರು / ವಿಭಾಗ / ಬೆಂಗಳೂರು (080–22873081 / 9731666750), ಹಿರಿಯ ವಿಭಾಗೀಯ ಸಾಮಗ್ರಿ ವ್ಯವಸ್ಥಾಪಕರು / ವಿಭಾಗ / ಮೈಸೂರು (0821–2420817 / 9731667750) ಸಂಪರ್ಕಿಸಿ.

ಹೆಚ್ಚಿನ ವಿವರಗಳಿಗೆ **www.ireps.gov.in/E-Auction** ಗೆ ಲಾಗ್‌ಆನ್ ಮಾಡಿ.

ಪಿಯುಬಿ/553/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2022–23
ಪ್ರಧಾನ ಮುಖ್ಯ ಸಾಮಗ್ರಿ ವ್ಯವಸ್ಥಾಪಕರು, ಹುಬ್ಬಳ್ಳಿ
S.W.Railways | sw_rly | SWRRLY | southwesternrailway | SWRRLY

**ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ**
ಬೆಂ.ಮ.ಪ್ರ.ಪ್ರಾ.
ಮಹಾನಗರ ಆಯುಕ್ತರ ಕಛೇರಿ, ಬಿ.ಎಂ.ಆರ್.ಡಿ.ಎ., ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು–560 052
ದೂರವಾಣಿ ಸಂಖ್ಯೆ: 22263479

ಸಂಖ್ಯೆ: STRRPA/TP/CLU/121/2022-23 **ಪ್ರಕಟಣೆ** ದಿನಾಂಕ: 22.12.2022.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **"ವ್ಯವಸಾಯ"** ವಲಯದಿಂದ **"ವಸತಿ"** ಭೂಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತವೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

| ಕ್ರ. ಸಂ. | ಅರ್ಜಿದಾರರ ಹೆಸರು ಮತ್ತು ವಿಳಾಸ | ತಾಲ್ಲೂಕು | ಹೋಬಳಿ | ಗ್ರಾಮ | ಸರ್ವೆ ನಂ. | ವಿಸ್ತೀರ್ಣ ಎ–ಗು | ಅನುಮೋದಿತ ಮಹಾ ಯೋಜನೆಯಂತೆ ಭೂ ಉಪಯೋಗ | ಬದಲಾವಣೆ ಕೋರಿರುವ ಭೂ ಉಪಯೋಗ |
|---|---|---|---|---|---|---|---|---|
| (1) | (2) | (3) | (4) | (5) | (6) | (7) | (8) | (9) |
| 1) | ಛಬೀಂದ್ರಕುಮಾರ್ ಪ್ರಧಾನ್ ಇದರ ಪರವಾಗಿ ಪಾಲುದಾರರಾದ ಶ್ರೀ ಛಬೀಂದ್ರಕುಮಾರ್ ಪ್ರಧಾನ್ ಬಿನ್ ಗುಂಟೇಶ್ವರ್ ಪ್ರಧಾನ್ | ದೇವನಹಳ್ಳಿ | ಕಸಬಾ | ಶೆಟ್ಟೇರಹಳ್ಳಿ | 24/1 | 3–00 | ವ್ಯವಸಾಯ | ವಸತಿ |

**ಷರಾ:–** ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನುಗಳನ್ನು ವಸತಿ ಉಪಯೋಗಕ್ಕಾಗಿ ಬದಲಾವಣೆ ಮಾಡುವುದರಿಂದ ಸದರಿ ಜಮೀನಿನಲ್ಲಿ ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರೆಯುತ್ತದೆ. ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು ಲಭ್ಯವಾಗುತ್ತದೆ. ಆದ್ದರಿಂದ ಸದರಿ ಪ್ರದೇಶವನ್ನು **ವ್ಯವಸಾಯ** ವಲಯದಿಂದ **ವಸತಿ** ವಲಯಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ಸಾರ್ವಜನಿಕ ಹಿತಾಸಕ್ತಿ ಅಂಶವಾಗಿ ತಿಳಿಸಿರುತ್ತಾರೆ.

ಸಹಿ/–
ಸದಸ್ಯ ಕಾರ್ಯದರ್ಶಿಗಳು
ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು.
ವಾ.ಸಾ.ಸಂ.ಇ/ವಾಪ್ರ/3665/ಆಕಾರ್/22–23

**ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ**
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ನಂ:ಬೆಂಅಪ್ರಾ/ನಯೋಸ/CLU-194/2329/2022–23 ದಿನಾಂಕ:22.12.2022

**ಪ್ರಕಟಣೆ**

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಾಣಿಜ್ಯ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

| ಕ್ರ. ಸಂ. | ಅರ್ಜಿದಾರರ ಹೆಸರು | ತಾಲ್ಲೂಕು | ಹೋಬಳಿ | ಗ್ರಾಮದ ವಿವರ | ಸರ್ವೆ ನಂ. | ವಿಸ್ತೀರ್ಣ ಎ–ಗು | ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂಉಪಯೋಗ | ಬದಲಾವಣೆ ಕೋರಿರುವ ಭೂ ಉಪಯೋಗ |
|---|---|---|---|---|---|---|---|---|
| 1 | ಶ್ರೀ ನಂಜೇಗೌಡ ಮತ್ತು ಇತರರು, ಗೋಪಾಲಪುರ ಗ್ರಾಮ, ಬಾಗಲೂರು ಅಂಚೆ, ಜಾಲಾ ಹೋಬಳಿ, ಯಲಹಂಕ–560 562. | ಯಲಹಂಕ | ಜಾಲ | ಬಾಗಲೂರು | 50/6 (ಹಳೆಸರ್ವೆ ನಂ. 50/2) | 0–05 ಗುಂಟೆ | ವ್ಯವಸಾಯ | ವಾಣಿಜ್ಯ |

**ಷರಾ:–** ಅರ್ಜಿದಾರರು ಪ್ರಶ್ನಿತ ಜಮೀನುಗಳನ್ನು ವ್ಯವಸಾಯ ಉಪಯೋಗಕ್ಕಾಗಿ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದು, ವಾಣಿಜ್ಯ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ ಮತ್ತು ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ಮೂಲಭೂತ ಸೌಕರ್ಯಗಳು, ರಸ್ತೆಗಳು ಲಭ್ಯವಾಗುತ್ತದೆ. ಈ ಜಾಗದಲ್ಲಿ ಬಹುಮಹಡಿಗಳ ವಾಣಿಜ್ಯ ಕಟ್ಟಡವನ್ನು ಕಟ್ಟುವುದರಿಂದ ಸರ್ಕಾರಕ್ಕೆ ತೆರಿಗೆ ಸಂಗ್ರಹವಾಗುತ್ತದೆ ಹಾಗೂ ಜಮೀನುಗಳಲ್ಲಿ ಅಭಿವೃದ್ಧಿಪಡಿಸಿದ ಕಟ್ಟಡಗಳಿಂದ ಹಲವಾರು ಜನರಿಗೆ ಉದ್ಯಮಗಳು ದೊರಕುತ್ತವೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು "ವ್ಯವಸಾಯ ವಲಯ" ದಿಂದ "ವಾಣಿಜ್ಯ ಉಪಯೋಗಕ್ಕೆ" ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

BDA/PRO/CLU/212/2022-23 ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

### ಬಿಬಿಎಂಪಿಯಿಂದ ರಾಜಕಾಲುವೆ ಕುರಿತು ಮಾಹಿತಿ: ಲೋಕಸಭೆಯಲ್ಲಿ ಕೇಂದ್ರ ಸರ್ಕಾರ ಉತ್ತರ

# 597 ಕಡೆ ಒತ್ತುವರಿ ತೆರವು ಬಾಕಿ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಬೆಂಗಳೂರಿನಲ್ಲಿ ಬಿಬಿಎಂಪಿ 146 ಕಡೆ ರಾಜಕಾಲುವೆಗಳ ಒತ್ತುವರಿ ತೆರವು ಮಾಡಿದ್ದು, 597 ಕಡೆ ಒತ್ತುವರಿ ತೆರವಿಗೆ ಬಾಕಿ ಇದೆ ಎಂದು ಕೇಂದ್ರ ಸರ್ಕಾರ ಹೇಳಿದೆ.

ಲೋಕಸಭೆಯಲ್ಲಿ ಹಾಸನ ಸಂಸದ ಪ್ರಜ್ವಲ್ ರೇವಣ್ಣ ಅವರ ಪ್ರಶ್ನೆಗೆ ಗುರುವಾರ ಲಿಖಿತ ಉತ್ತರ ನೀಡಿರುವ ಕೇಂದ್ರ ಜಲಶಕ್ತಿ ರಾಜ್ಯ ಸಚಿವ ಪ್ರಹ್ಲಾದ್ ಸಿಂಗ್ ಪಟೇಲ್, 'ಈ ವರ್ಷ 45 ಕಡೆ ಹೊಸದಾಗಿ ರಾಜಕಾಲುವೆಗಳ ಒತ್ತುವರಿ ಆಗಿದೆ. 125 ಪ್ರಕರಣಗಳು ನ್ಯಾಯಾಲಯದಲ್ಲಿವೆ' ಎಂದು ತಿಳಿಸಿದ್ದಾರೆ.

'ಕಳೆದ ಕೆಲವು ವರ್ಷಗಳಿಂದ ಅತಿವೃಷ್ಟಿ, ಕ್ಷಿಪ್ರ ನಗರೀಕರಣ, ಒತ್ತುವರಿ ಮತ್ತಿತರ ಅಂಶಗಳು ಬೆಂಗಳೂರಿನಲ್ಲಿ ಪ್ರವಾಹಕ್ಕೆ ಕಾರಣವಾಗುತ್ತಿವೆ ಎಂದು ಬಿಬಿಎಂಪಿಯು ಕೇಂದ್ರ ಸರ್ಕಾರಕ್ಕೆ ಮಾಹಿತಿ ನೀಡಿದೆ. ನಗರ ಸಾರಿಗೆ, ರಸ್ತೆಗಳು, ಬಡಾವಣೆ ರಚನೆ, ಎಸ್ಇಜೆಡ್, ಐಟಿ ಪಾರ್ಕ್‌ಗಳಂತಹ ಮೂಲಸೌಕರ್ಯಗಳನ್ನು ಒದಗಿಸುವ ಬೇಡಿಕೆ ಗಣನೀಯವಾಗಿ ಹೆಚ್ಚಿದ್ದು, ಅಂತರ್ಜಲ ಕುಸಿತ ಹಾಗೂ ಪ್ರವಾಹಕ್ಕೆ ಕಾರಣವಾಗಿದೆ. ಬೆಂಗಳೂರಿನಲ್ಲಿ 859 ಕಿ.ಮೀ. ಉದ್ದದ ಪ್ರಾಥಮಿಕ ಹಾಗೂ ಎರಡನೇ ಹಂತದ ರಾಜಕಾಲುವೆ ಜಾಲ ಇದೆ' ಎಂದು ಅವರು ಹೇಳಿದ್ದಾರೆ.

'ಬೆಂಗಳೂರಿನ ಪರಿಸರ ನಿರ್ವಹಣೆ ಹಾಗೂ ನೀತಿ ಸಂಶೋಧನಾ ಸಂಸ್ಥೆಯು ಬೆಂಗಳೂರು ಮಹಾನಗರ ಪ್ರದೇಶದ ಕೆರೆಗಳ ಕುರಿತು 2018ರ ಮಾರ್ಚ್‌ನಲ್ಲಿ ವರದಿ ಸಿದ್ಧಪಡಿಸಿದೆ. ಬೆಂಗಳೂರು ಮಹಾನಗರ ಪ್ರದೇಶದ 1,521 ಜಲಕಾಯಗಳನ್ನು ಮೂರು ಭಾಗಗಳಾಗಿ ವಿಭಜಿಸಿದೆ. ಮೂರು ಎಕರೆಗಿಂತ ಜಾಸ್ತಿ ಇರುವುದು ಕೆರೆ, 1ರಿಂದ 3 ಎಕರೆ ಇರುವುದು ಕಟ್ಟೆ/ಗೊಕಟ್ಟೆ, ಒಂದು ಎಕರೆಗಿಂತ ಕಡಿಮೆ ಇರುವುದು ಕುಂಟೆ ಎಂದು ವರ್ಗೀಕರಿಸಿದೆ' ಎಂದು ಸಚಿವರು ತಿಳಿಸಿದ್ದಾರೆ.

'ಈ ವರದಿಯ ಪ್ರಕಾರ, ಕೆಲವು ವರ್ಷಗಳಿಂದ 497 ಕೆರೆಗಳಲ್ಲಿ 102, 200 ಕಟ್ಟೆಗಳಲ್ಲಿ 115, 824 ಕುಂಟೆಗಳಲ್ಲಿ 620 ಮೂಲಸ್ವರೂಪ ಕಳೆದುಕೊಂಡಿವೆ. ಜಲಾನಯನ ಪ್ರದೇಶಗಳ ಅವನತಿ, ಕಸ ವಿಲೇವಾರಿ, ನಿರ್ವಹಣೆ ಕೊರತೆ, ಹೂಳು ತುಂಬಿರುವುದು ಇದಕ್ಕೆ ಕಾರಣ' ಎಂದು ಅವರು ಹೇಳಿದ್ದಾರೆ.

'ರಾಜಕಾಲುವೆ ಹಾಗೂ ಜಲಮೂಲಗಳ ಒತ್ತುವರಿ ತೆರವಿನ ವಿಷಯದಲ್ಲಿ ಯಾವುದೇ ತಾರತಮ್ಯ ಮಾಡಿಲ್ಲ ಎಂದು ಬಿಬಿಎಂಪಿ ತಿಳಿಸಿದೆ. ಭೂದಾಖಲೆಗಳ ಸಹಾಯಕ ನಿರ್ದೇಶಕರು ಸರ್ವೆ ನಡೆಸಿ ತಹಶೀಲ್ದಾರ್ ಆದೇಶ ಹೊರಡಿಸಿದ ಬಳಿಕ ತೆರವು ಕಾರ್ಯಾಚರಣೆ ನಡೆಸಲಾಗುತ್ತದೆ ಎಂಬುದಾಗಿ ಪಾಲಿಕೆ ತಿಳಿಸಿದೆ' ಎಂದು ಅವರು ಮಾಹಿತಿ ನೀಡಿದ್ದಾರೆ.

**ರಾಜಕಾಲುವೆ ಒತ್ತುವರಿ**

| ವರ್ಷ | ಒತ್ತುವರಿ | ತೆರವು | ಬಾಕಿ |
|---|---|---|---|
| 2015-16 | 2,515 | 428 | 2,087 |
| 2016-17 | 2,087 | -- | 2,087 |
| 2017-18 | 2,087 | -- | 2,087 |
| 2018-19 | 2,198 | 804 | 1,394 |
| 2019-20 | 1,394 | 698 | 696 |
| 2020-21 | 696 | -- | 696 |
| 2021-22 | 696 | -- | 696 |
| 2022-23 | 741 | 146 | 597 |

## ಮತ್ತೆ ತೆರವು ಕಾರ್ಯಾಚರಣೆ

**ಬೆಂಗಳೂರು:** ಮಹದೇವಪುರ ವಲಯ ವ್ಯಾಪ್ತಿಯಲ್ಲಿ ರಾಜಕಾಲುವೆ ಒತ್ತುವರಿ ತೆರವು ಕಾರ್ಯಾಚರಣೆಯನ್ನು ಬಿಬಿಎಂಪಿ ಗುರುವಾರ ಮತ್ತೆ ಆರಂಭಿಸಿದೆ. ಮುನ್ನೇನಕೊಳಲು, ಶಾಂತಿನಿಕೇತನ ಲೇಔಟ್ ಹಾಗೂ ಎಬಿಕೆ ಹಳ್ಳಿಯಲ್ಲಿ ಆರು ಸ್ಥಳಗಳಲ್ಲಿ ಒತ್ತುವರಿ ತೆರವು ಮಾಡಲಾಗಿದೆ.

ಮುನ್ನೇನಕೊಳಲು ಹಾಗೂ ಶಾಂತಿನಿಕೇತನ ಲೇಔಟ್‌ನಲ್ಲಿ ರಾಜಕಾಲುವೆಯ ಮೇಲೆ ನಿರ್ಮಿಸಿದ್ದ ಎರಡು ಕಟ್ಟಡ ಹಾಗೂ ಎರಡು ಶೆಡ್‌ಗಳನ್ನು ನೆಲಸಮಗೊಳಿಸಲಾಗಿದೆ. ಅಮಾನಿ ಬೆಳ್ಳಂದೂರು ಖಾನೆ(ಎಬಿಕೆ) ಹಳ್ಳಿ ವ್ಯಾಪ್ತಿಯಲ್ಲಿ ಒಂದು ಶೆಡ್ ಹಾಗೂ ಸುಮಾರು 60 ಮೀಟರ್ ಉದ್ದದ ಕಾಂಪೌಂಡ್ ತೆರವುಗೊಳಿಸಲಾಗಿದೆ.

ತಹಶೀಲ್ದಾರ್ ಅವರು ಒತ್ತುವರಿದಾರರಿಗೆ ನೋಟಿಸ್ ಜಾರಿ ಮಾಡಿ ಆದೇಶ ಹೊರಡಿಸಿದ ನಂತರ ಬಾಕಿ ಒತ್ತುವರಿಗಳ ತೆರವು ಕಾರ್ಯಾಚರಣೆಯನ್ನು ನಡೆಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ. ಮಹದೇವಪುರ ವಲಯ ವ್ಯಾಪ್ತಿಯಲ್ಲಿ 2015-16ರಿಂದ ಇದುವರೆಗೆ ಒಟ್ಟಾರೆ 1,174 ರಾಜಕಾಲುವೆ ಒತ್ತುವರಿಗಳನ್ನು ಗುರುತಿಸಲಾಗಿದೆ. ಈ ಪೈಕಿ 1,032 ಒತ್ತುವರಿಗಳನ್ನು ತೆರವುಗೊಳಿಸಲಾಗಿದ್ದು, 142 ಒತ್ತುವರಿಗಳನ್ನು ತೆರವುಗೊಳಿಸಬೇಕಾಗಿದೆ. ಈ ಪೈಕಿ 11 ಪ್ರಕರಣಗಳು ನ್ಯಾಯಾಲಯಕ್ಕೆ ಸಂಬಂಧಿಸಿದ್ದಾಗಿವೆ. ಇನ್ನು 131 ಒತ್ತುವರಿಗಳ ತೆರವು ಕಾರ್ಯಾಚರಣೆಗೆ ಸಂಬಂಧಿಸಿದಂತೆ ಸರ್ವೆ ಕಾರ್ಯವನ್ನು ನಡೆಸುತ್ತಿದ್ದು, ರಾಜಕಾಲುವೆ ಒತ್ತುವರಿ ತೆರವು ಕಾರ್ಯಾಚರಣೆ ನಡೆಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ ಎಂದು ಬಿಬಿಎಂಪಿ ಪ್ರಕಟಣೆ ತಿಳಿಸಿದೆ.



ಬಿಬಿಎಂಪಿ ಮಹದೇವಪುರ ವಲಯ ವ್ಯಾಪ್ತಿಯಲ್ಲಿ ಗುರುವಾರ ರಾಜಕಾಲುವೆ ಒತ್ತುವರಿ ತೆರವು ಕಾರ್ಯಾಚರಣೆ ನಡೆಸಿತು

## 36 ಕಡೆ ಕಳ್ಳತನ: ಮೂರು ವರ್ಷದ ಬಳಿಕ ಸಿಕ್ಕಿಬಿದ್ದ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮೂರು ವರ್ಷಗಳಿಂದ 36 ಕಡೆ ಮಹಿಳೆಯರ ಸರಗಳವು ಮಾಡಿದ್ದ ಆರೋಪಿ ಅಬುಜಾರ್ ಅಲಿ ಎಂಬುವರನ್ನು ಬನಶಂಕರಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಆರೋಪಿ ಅಬುಜಾರ್, ಇರಾನಿ ತಂಡದ ಸದಸ್ಯ. ಹುಬ್ಬಳ್ಳಿ–ಧಾರವಾಡದಲ್ಲಿ ತಲೆಮರೆಸಿಕೊಂಡಿದ್ದ ಈತನನ್ನು ಇತ್ತೀಚೆಗೆ ಬಂಧಿಸಿ ನಗರಕ್ಕೆ ಕರೆತರಲಾಗಿದೆ' ಎಂದು ಪೊಲೀಸರು ಹೇಳಿದರು.

'ಆಗಾಗ ಬೆಂಗಳೂರಿಗೆ ಬರುತ್ತಿದ್ದ ಆರೋಪಿ, ಪಲ್ಸರ್ ಬೈಕ್‌ನಲ್ಲಿ ಸುತ್ತಾಡುತ್ತಿದ್ದ. ವಾಯುವಿಹಾರ ಮಾಡುವ ಹಾಗೂ ಒಂಟಿಯಾಗಿ ಓಡಾಡುವ ಮಹಿಳೆಯರನ್ನು ಹಿಂಬಾಲಿಸಿ ಚಿನ್ನದ ಸರ ಕಿತ್ತೊಯ್ಯುತ್ತಿದ್ದ. ನಗರದ ಹಲವು ಠಾಣೆಗಳ ವ್ಯಾಪ್ತಿಯಲ್ಲಿ ಮೂರು ವರ್ಷದಿಂದ ಕೃತ್ಯ ಎಸಗಿದ್ದ' ಎಂದು ತಿಳಿಸಿದರು.

'ಸರಗಳವು ಪ್ರಕರಣದ ತನಿಖೆ ಕೈಗೆತ್ತಿಕೊಂಡು, ಕೆಲ ಪುರಾವೆಗಳನ್ನು ಸಂಗ್ರಹಿಸಲಾಗಿತ್ತು. ಅದನ್ನು ಆಧರಿಸಿ ಆರೋಪಿಯನ್ನು ಬಂಧಿಸಲಾಗಿದೆ. ಕೃತ್ಯಕ್ಕೆ ಸಹಕರಿಸುತ್ತಿದ್ದ ಸಹಚರರು ತಲೆಮರೆಸಿಕೊಂಡಿದ್ದಾರೆ' ಎಂದು ಹೇಳಿದರು.

## ಮನೆಯ ಎದುರು ಜಗಳ ಮಾಡಬೇಡಿ ಎಂದಿದ್ದಕ್ಕೆ ಕೊಲೆ

**ಬೆಂಗಳೂರು:** 'ಮನೆ ಎದುರು ಜಗಳ ಮಾಡಬೇಡಿ' ಎಂದಿದ್ದಕ್ಕೆ ಸಲ್ಮಾನ್ ಖಾನ್ (20) ಎಂಬುವವರನ್ನು ಚಾಕುವಿನಿಂದ ಇರಿದು ಕೊಲೆ ಮಾಡಲಾಗಿದ್ದು, ಈ ಸಂಬಂಧ ಸಂಪಿಗೆಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಸ್ಥಳೀಯ ನಿವಾಸಿ ಸಲ್ಮಾನ್ ಖಾನ್ ಅವರನ್ನು ಡಿ. 20ರಂದು ರಾತ್ರಿ ಕೊಲೆ ಮಾಡಲಾಗಿದೆ. ಈ ಸಂಬಂಧ ತಂದೆ ನಾಸೀರ್ ಖಾನ್ ದೂರು ನೀಡಿದ್ದಾರೆ. ಆರೋಪಿಗಳು ಎನ್ನಲಾದ ಜಾವೀದ್, ತೌಹೀದ್, ತೌಸೀಫ್ ಸೇರಿ ನಾಲ್ವರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಸದ್ಯ ಆರೋಪಿಗಳು ತಲೆಮರೆಸಿಕೊಂಡಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಕೆಲದಿನಗಳ ಹಿಂದೆಯಷ್ಟೇ ಆರೋಪಿಗಳು ಸಲ್ಮಾನ್ ಖಾನ್ ವಾಸವಿದ್ದ ಮನೆ ಬಳಿ ಹೋಗಿದ್ದರು. ರಸ್ತೆಯಲ್ಲಿ ವ್ಯಕ್ತಿಯೊಬ್ಬರ ಜೊತೆ ಜಗಳ ತೆಗೆದಿದ್ದರು. ಅದನ್ನು ನೋಡಿದ್ದ ಸಲ್ಮಾನ್, 'ಮನೆ ಮುಂದೆ ಜಗಳ ಮಾಡಬೇಡಿ. ಇಲ್ಲಿಂದ ಹೋಗಿ' ಎಂದಿದ್ದ. ಅಷ್ಟಕ್ಕೆ ಕೋಪಗೊಂಡಿದ್ದ ಆರೋಪಿಗಳು, ಸಲ್ಮಾನ್ ಮೇಲೆ ಹಲ್ಲೆ ಮಾಡಲು ಮುಂದಾಗಿದ್ದರು. ಮಧ್ಯಪ್ರವೇಶಿಸಿದ್ದ ತಂದೆ ನಾಸೀರ್, ಆರೋಪಿಗಳಿಗೆ ಬುದ್ಧಿವಾದ ಹೇಳಿ ಸ್ಥಳದಿಂದ ಕಳುಹಿಸಿದ್ದರು. ಇದೇ ವೇಳೆ ಆರೋಪಿಗಳು, ಸಲ್ಮಾನ್‌ಗೆ ಕೊಲೆ ಬೆದರಿಕೆಯೊಡ್ಡಿದ್ದರು' ಎಂದು ಮೂಲಗಳು ತಿಳಿಸಿವೆ.

ಡಿ. 20ರಂದು ರಾತ್ರಿ ಸಲ್ಮಾನ್ ಬೈಕ್‌ನಲ್ಲಿ ಹೊರಟಿದ್ದರು. ಅದನ್ನು ಅಡ್ಡಗಟ್ಟಿದ್ದ ಆರೋಪಿಗಳು, ಜಗಳ ತೆಗೆದು ಚಾಕುವಿನಿಂದ ಹೊಟ್ಟೆಗೆ ಇರಿದಿದ್ದರು. ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗಮಧ್ಯೆ ಸಲ್ಮಾನ್ ಮೃತಪಟ್ಟಿದ್ದರು.

### ಡ್ರಗ್ಸ್: ಎಂಬಿಎ ಪದವೀಧರ ಬಂಧನ

**ಬೆಂಗಳೂರು:** ಸಾಲ ತೀರಿಸಲು ಬಾಣಸವಾಡಿ ಠಾಣೆ ವ್ಯಾಪ್ತಿಯಲ್ಲಿ ಡ್ರಗ್ಸ್ ಮಾರುತ್ತಿದ್ದ ಆರೋಪದಡಿ ಅಮರನಾಥ್ ಎಂಬುವವರನ್ನು ಪೊಲೀಸರು ಬಂಧಿಸಿದ್ದಾರೆ.

'ಆಂಧ್ರಪ್ರದೇಶದ ಅಮರನಾಥ್, ಎಂಬಿಎ ಪದವೀಧರ. ತಮ್ಮೂರಿನಿಂದ ಡ್ರಗ್ಸ್ ತಂದಿದ್ದ ಆರೋಪಿ, ನಗರದ ಗ್ರಾಹಕರೊಬ್ಬರಿಗೆ ಮಾರಲು ಹೊರಟಿದ್ದ. ಇದೇ ವೇಳೆ ಕಾರ್ಯಾಚರಣೆ ನಡೆಸಿ ಈತನನ್ನು ಬಂಧಿಸಲಾಗಿದೆ. ₹ 12 ಲಕ್ಷ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

## ರಾಹುಲ್‌ಗೆ ಅವಹೇಳನ: ಬಂಧನಕ್ಕೆ ಒತ್ತಾಯಿಸಿ ಪ್ರತಿಭಟನೆ

**ಬೆಂಗಳೂರು:** 'ರಾಹುಲ್ ಗಾಂಧಿ ಅವರನ್ನು ಅವಹೇಳನ ಮಾಡಿರುವ ಬಿಜೆಪಿ ಮುಖಂಡ ಅನಿಲ್ ಶೆಟ್ಟಿ ಹಾಗೂ ಇತರರನ್ನು ಬಂಧಿಸಬೇಕು' ಎಂದು ಒತ್ತಾಯಿಸಿ ಸುದ್ದಗುಂಟೆಪಾಳ್ಯ ಠಾಣೆ ಎದುರು ಕಾಂಗ್ರೆಸ್ ಕಾರ್ಯಕರ್ತರು ಗುರುವಾರ ಪ್ರತಿಭಟನೆ ನಡೆಸಿದರು.


'ರಾಹುಲ್ ಗಾಂಧಿ ಅವರಿಗೆ ಏನು ಯೋಗ್ಯತೆ ಇದೆ' ಎಂಬುದಾಗಿ ಹೇಳಿ ಮಾತನಾಡಿರುವ ಅನಿಲ್ ಶೆಟ್ಟಿ, ಕಾಂಗ್ರೆಸ್ ಕಾರ್ಯಕರ್ತರ ಮೇಲೂ ಹಲ್ಲೆಗೆ ಯತ್ನಿಸಿದ್ದಾರೆ' ಎಂದು ಪ್ರತಿಭಟನಕಾರರು ದೂರಿದರು.

### ಟ್ವೀಟ್ ಮಾಡಿದ್ದ ಎಂಜಿನಿಯರಿಂಗ್ ವಿದ್ಯಾರ್ಥಿ ಬಂಧನ

# ಟ್ರಾಫಿಕ್‌ಗೆ ಬೇಸತ್ತು ಬಾಂಬ್ ಬೆದರಿಕೆ

ಪ್ರಜಾವಾಣಿ ವಾರ್ತೆ

**ದೇವನಹಳ್ಳಿ:** ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಾಂಬ್ ಹಾಕುವುದಾಗಿ 12 ದಿನಗಳ ಹಿಂದೆ ಟ್ವೀಟ್ ಮಾಡಿದ್ದ ಎಂಜಿನಿಯರಿಂಗ್ ವಿದ್ಯಾರ್ಥಿಯನ್ನು ವಿಮಾನ ನಿಲ್ದಾಣ ಪೊಲೀಸರು ಗುರುವಾರ ಬಂಧಿಸಿದ್ದಾರೆ. ಬೆಂಗಳೂರಿನ ಎಂಜಿನಿಯರಿಂಗ್ ಕಾಲೇಜೊಂದರಲ್ಲಿ ವ್ಯಾಸಂಗ ಮಾಡುತ್ತಿರುವ ಪಂಜಾಬ್ ಮೂಲದ ಗಣೇಶ್ ವೈಭವ್ (20) ಬಂಧಿತ ವಿದ್ಯಾರ್ಥಿ.



ಗಣೇಶ್ ವೈಭವ್

ಬೆಂಗಳೂರಿನ ಪರಪ್ಪನ ಅಗ್ರಹಾರ ಬಳಿಯ ಕೂಡ್ಲು ಗೇಟ್ ಬಳಿ ಪೋಷಕರೊಂದಿಗೆ ವಾಸವಿರುವ ಈತ, ಡಿ.10 ರಂದು ವಿಮಾನ ನಿಲ್ದಾಣಕ್ಕೆ ಪ್ರಯಾಣಿಸುವಾಗ ಟ್ವೀಟ್ ಮಾಡಿದ್ದ.

ವಿಮಾನ ನಿಲ್ದಾಣಕ್ಕೆ ತಲುಪಲು ಸಾಕಷ್ಟು ಟ್ರಾಫಿಕ್ ಕಿರಿಕಿರಿ ಅನುಭವಿಸಿದ್ದ ಆರೋಪಿ ಬೇಸತ್ತು, 'ವಿಮಾನ ನಿಲ್ದಾಣಕ್ಕೆ ಬಾಂಬ್ ಹಾಕುತ್ತೇನೆ, ಬೆಂಗಳೂರಿನ ಹತ್ತಿರ ಇನ್ನೊಂದು ನಿಲ್ದಾಣ ಸ್ಥಾಪಿಸಿ' ಎಂದು ಟ್ವೀಟ್ ಮಾಡಿದ್ದ. ಆತನ ವಿರುದ್ಧ ವಿಮಾನ ನಿಲ್ದಾಣದ ವ್ಯವಸ್ಥಾಪಕ ಡಿ.12ರಂದು ವಿಮಾನ ನಿಲ್ದಾಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು.

ನಗರದ ಅತಿಯಾದ ಟ್ರಾಫಿಕ್‌ನಿಂದ ಬೇಸತ್ತು ಈ ರೀತಿ ಟ್ವೀಟ್ ಮಾಡಿರುವುದಾಗಿ ಆರೋಪಿ ವಿಚಾರಣೆ ವೇಳೆ ತಪ್ಪೊಪ್ಪಿಕೊಂಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

## ಚಾಕುವಿನಿಂದ ಇರಿದು ಚಿನ್ನಾಭರಣ ದರೋಡೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬೇಗೂರು ಠಾಣೆ ವ್ಯಾಪ್ತಿಯ ಮನೆಯೊಂದಕ್ಕೆ ನುಗ್ಗಿದ್ದ ದುಷ್ಕರ್ಮಿಯೊಬ್ಬ ಮಹಿಳೆಯೊಬ್ಬರಿಗೆ ಚಾಕುವಿನಿಂದ ಇರಿದು ಚಿನ್ನಾಭರಣ ದೋಚಿ ಪರಾರಿಯಾಗಿದ್ದಾನೆ.

'ಸಿಂಗಸಂದ್ರದ ನಿವಾಸಿಯಾಗಿರುವ 37 ವರ್ಷದ ಮಹಿಳೆ ದೂರು ನೀಡಿದ್ದಾರೆ. ಅಪರಿಚಿತ ದುಷ್ಕರ್ಮಿ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಡಿ. 19ರಂದು ದೂರುದಾರ ಮಹಿಳೆ ಒಬ್ಬರೇ ಮನೆಯಲ್ಲಿದ್ದರು. ಡೆಲಿವರಿ ಬಾಯ್ ಸೋಗಿನಲ್ಲಿ ಮನೆಗೆ ನುಗ್ಗಿದ್ದ ಆರೋಪಿ, ಮಹಿಳೆ ಮೇಲೆ ಹಲ್ಲೆ ಮಾಡಿದ್ದ. ಎಡಗೈಗೆ ಚಾಕುವಿನಿಂದ ಇರಿದಿದ್ದ. ತಲೆ ಹಿಡಿದು ಗೋಡೆಗೆ ಗುದ್ದಿಸಿ ಗಾಯವನ್ನುಂಟು ಮಾಡಿದ್ದ. ನಂತರ, ಮನೆಯಲ್ಲಿದ್ದ ನಗದು ಹಾಗೂ ಚಿನ್ನಾಭರಣ ನೀಡುವಂತೆ ಒತ್ತಾಯಿಸಿದ್ದ. ಮನೆಯಲ್ಲಿ ಏನು ಇಲ್ಲವೆಂದು ಮಹಿಳೆ ಹೇಳಿದ್ದರು.'

'ಮಹಿಳೆಯನ್ನು ಹಿಡಿದುಕೊಂಡೇ ಕೊಠಡಿಯೊಳಗೆ ಹೋಗಿದ್ದ ಆರೋಪಿ, ಅಲ್ಲಿಯ ಕಬೋರ್ಡ್‌ನಲ್ಲಿದ್ದ ₹2 ಲಕ್ಷ ಮೌಲ್ಯದ ಚಿನ್ನಾಭರಣ ದೋಚಿಕೊಂಡು ಪರಾರಿಯಾಗಿದ್ದಾನೆ. ಗಾಯಗೊಂಡಿದ್ದ ಮಹಿಳೆ, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಠಾಣೆಗೆ ದೂರು ನೀಡಿದ್ದಾರೆ' ಎಂದು ಪೊಲೀಸರು ತಿಳಿಸಿದರು.






**ಗೌರವ..** ರಾಮಯ್ಯ ತಾಂತ್ರಿಕ ವಿಶ್ವವಿದ್ಯಾಲಯ ನಗರದಲ್ಲಿ ಗುರುವಾರ 'ಸರ್ಕ್ಯೂಟ್ಸ್, ಕಂಟ್ರೋಲ್, ಕಮ್ಯುನಿಕೇಷನ್ ಆ್ಯಂಡ್ ಕಂಪ್ಯೂಟಿಂಗ್' ವಿಷಯ ಕುರಿತು ಹಮ್ಮಿಕೊಂಡ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಗೋಕುಲ ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷ ಎಂ.ಆರ್. ಸೀತಾರಾಮ್ ಅವರು ಭಾರತೀಯ ವಿಜ್ಞಾನ ಸಂಸ್ಥೆಯ ನ್ಯಾನೋ ವಿಜ್ಞಾನ ಕೇಂದ್ರದ ಡೀನ್ ಪ್ರೊ. ನವಕಾಂತ್ ಭಟ್ ಅವರನ್ನು ಗೌರವಿಸಿದರು. ಗೋಕುಲ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಎಂ.ಆರ್. ಜಯರಾಮ್ ಇದ್ದಾರೆ.

## ಪಾದಚಾರಿಯಿಂದ ಮೊಬೈಲ್ ದೋಚಿದ್ದ ಇಬ್ಬರ ಬಂಧನ

**ಬೆಂಗಳೂರು:** ಮೊಬೈಲ್‌ನಲ್ಲಿ ಮಾತನಾಡುತ್ತ ರಸ್ತೆಯಲ್ಲಿ ನಡೆದುಕೊಂಡು ಹೊರಟಿದ್ದ ಶಿವಕುಮಾರ್ ಎಂಬುವರನ್ನು ಸುಲಿಗೆ ಮಾಡಿದ್ದ ಇಬ್ಬರು ಆರೋಪಿಗಳನ್ನು ಅನ್ನಪೂರ್ಣೇಶ್ವರಿ ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ವಿಜಯನಗರ ಟೆಲಿಕಾಂ ಬಡಾವಣೆಯ ಸೈಯದ್ ಪರ್ವೀಜ್ (24) ಹಾಗೂ ಶಾಮಣ್ಣ ಗಾರ್ಡನ್‌ನ ಶಾಹೀದ್ ಪಾಷಾ (22) ಬಂಧಿತರು. ಇವರಿಂದ ₹3 ಲಕ್ಷ ಮೌಲ್ಯದ 10 ಮೊಬೈಲ್‌ಗಳು ಹಾಗೂ ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

## ಗುಂಡಿನ ದಾಳಿ: 2 ಪಿಸ್ತೂಲ್ ಜಪ್ತಿ

**ಬೆಂಗಳೂರು:** ರೌಡಿ ಶಿವಶಂಕರ್ ರೆಡ್ಡಿ ಹಾಗೂ ಕಾರು ಚಾಲಕ ಅಶೋಕ ರೆಡ್ಡಿ ಮೇಲೆ ಗುಂಡಿನ ದಾಳಿ ನಡೆಸಿದ್ದ ಪ್ರಕರಣದಲ್ಲಿ ಐವರನ್ನು ಬಂಧಿಸಿರುವ ಕೆ.ಆರ್. ಪುರ ಪೊಲೀಸರು, ಕೃತ್ಯಕ್ಕೆ ಬಳಸಿದ್ದ ಎರಡು ಪಿಸ್ತೂಲ್‌ಗಳನ್ನು ಗುರುವಾರ ಜಪ್ತಿ ಮಾಡಿದ್ದಾರೆ.

'ಮದನಪಲ್ಲಿ ಠಾಣೆ ರೌಡಿ ಪಟ್ಟಿಯಲ್ಲಿ ಹೆಸರಿದ್ದ ಶಿವಶಂಕರ್ ರೆಡ್ಡಿ, ಕೆ.ಆರ್.ಪುರ ಬಳಿಯ ಸೀಗೇಹಳ್ಳಿ ಹ್ಯಾಪಿ ಗಾರ್ಡನ್‌ನಲ್ಲಿ ವಸತಿ ಸಮುಚ್ಚಯವೊಂದನ್ನು ನಿರ್ಮಿಸುತ್ತಿದ್ದ. ಡಿ. 8 ರಂದು ಮಧ್ಯಾಹ್ನ ಕಟ್ಟಡ ನಿರ್ಮಾಣ ಸ್ಥಳಕ್ಕೆ ಕಾರು ಚಾಲಕ ಅಶೋಕ ಜೊತೆ ಬಂದಿದ್ದ. ಇದೇ ವೇಳೆ ಆರೋಪಿಗಳು ಗುಂಡಿನ ದಾಳಿ ನಡೆಸಿದ್ದರು' ಎಂದು ಪೊಲೀಸರು ಹೇಳಿದರು.

ಶಿವಶಂಕರ್ ರೆಡ್ಡಿ ಹಾಗೂ ಎದುರಾಳಿ ರೌಡಿ ಪೋಲಾರಿ ಶಂಕರ್ ನಡುವೆ ಹಳೇ ವೈಷಮ್ಯವಿತ್ತು. ಇಬ್ಬರೂ ಪರಸ್ಪರ ಕೊಲೆ ಮಾಡಲು ಸಂಚು ರೂಪಿಸುತ್ತಲೇ ಇದ್ದರು. ತನ್ನನ್ನು ಕೊಲೆ ಮಾಡುತ್ತಾನೆಂದು ತಿಳಿದ ಪೋಲಾರಿ, ಸಹಚರರ ಜೊತೆ ಸೇರಿ ಶಿವಶಂಕರ್ ನನ್ನೇ ಕೊಲೆ ಮಾಡಿಸಲು ಯೋಚಿಸಿದ್ದ.

## ವಾಹನ ಕಳವು ಮಾಡಿ ಮಾರಾಟ: ಆರೋಪಿ ಬಂಧನ

**ಬೆಂಗಳೂರು:** ಕಾರು ಹಾಗೂ ದ್ವಿಚಕ್ರ ವಾಹನಗಳನ್ನು ಕದ್ದು ನೋಂದಣಿ ಫಲಕ ಬದಲಿಸಿ ಮಾರುತ್ತಿದ್ದ ಆರೋಪಿ ಎಂ. ಸದ್ದಾಂ ಹುಸೇನ್ ಅಲಿಯಾಸ್ ತಬ್ರೇಜ್‌ನನ್ನು (30) ವಿದ್ಯಾರಣ್ಯಪುರ ಪೊಲೀಸರು ಬಂಧಿಸಿದ್ದಾರೆ.

'ಚಿತ್ರದುರ್ಗದ ಸದ್ದಾಂ ಹುಸೇನ್, ಬೆಂಗಳೂರು ಸೇರಿ ಹಲವು ನಗರಗಳಲ್ಲಿ ವಾಹನಗಳನ್ನು ಕಳ್ಳತನ ಮಾಡಿದ್ದ. ಈತನಿಂದ ₹5.15 ಲಕ್ಷ ಮೌಲ್ಯದ ಮೂರು ಕಾರು ಹಾಗೂ ಎರಡು ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಮನೆ ಮುಂದೆ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ನಿಲ್ಲಿಸುತ್ತಿದ್ದ ವಾಹನಗಳನ್ನು ಆರೋಪಿ ಗುರುತಿಸುತ್ತಿದ್ದ. ನಂತರ, ಕಾರು ಹಾಗೂ ದ್ವಿಚಕ್ರ ವಾಹನಗಳನ್ನು ಕದ್ದೊಯ್ಯುತ್ತಿದ್ದ. ಕೆಲದಿನ ನಿರ್ಜನ ಪ್ರದೇಶದಲ್ಲಿ ವಾಹನ ನಿಲ್ಲಿಸುತ್ತಿದ್ದ. ನೋಂದಣಿ ಫಲಕ ಬದಲಿಸುತ್ತಿದ್ದ ಆರೋಪಿ, ತನ್ನದೇ ವಾಹನವೆಂದು ಹೇಳಿ ಗ್ರಾಹಕರಿಗೆ ಮಾರುತ್ತಿದ್ದ' ಎಂದು ತಿಳಿಸಿದರು.

## ಮದ್ಯ ಕುಡಿಯಲು ಹಣ ಕೊಡದಿದ್ದಕ್ಕೆ ಮಗನ ಕೊಲೆಗೆ ಯತ್ನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮದ್ಯ ಕುಡಿಯಲು ಹಣ ಕೊಡಲಿಲ್ಲವೆಂಬ ಕಾರಣಕ್ಕೆ ಚಂದ್ರಶೇಖರ್ ರೆಡ್ಡಿ (24) ಎಂಬುವವರನ್ನು ಮಚ್ಚಿನಿಂದ ಹೊಡೆದು ಕೊಲೆಗೆ ಯತ್ನಿಸಲಾಗಿದ್ದು, ಕೃತ್ಯ ಎಸಗಿದ ಆರೋಪದಡಿ ತಂದೆ ವೆಂಕಟರಾಮ್ ರೆಡ್ಡಿ ವಿರುದ್ಧ ಪ್ರಕರಣ ದಾಖಲಾಗಿದೆ.

'ಬಂಗಾರಪೇಟೆ ತಾಲ್ಲೂಕಿನ ವೆಂಕಟರಾಮ್, ಪತ್ನಿ, ಮಗಳು ಹಾಗೂ ಮಗ ಚಂದ್ರಶೇಖರ್ ಜೊತೆ ರಂಗನಾಥ್ ಬಡಾವಣೆಯಲ್ಲಿ ವಾಸವಿದ್ದರು. ಚಂದ್ರಶೇಖರ್, ಕಾರು ಚಾಲಕನಾಗಿ ಕೆಲಸ ಮಾಡುತ್ತಿದ್ದರು. ಮದ್ಯವ್ಯಸನಿ ಆಗಿದ್ದ ವೆಂಕಟರಾಮ್, ನಿತ್ಯವೂ ಕುಡಿದು ಮನೆಯಲ್ಲಿ ಗಲಾಟೆ ಮಾಡುತ್ತಿದ್ದ. ಮದ್ಯ ಖರೀದಿಗೆ ಹಣ ನೀಡುವಂತೆಯೂ ಪತ್ನಿ–ಮಗನ ಜೊತೆ ಜಗಳ ತೆಗೆಯುತ್ತಿದ್ದ' ಎಂದು ಪೊಲೀಸರು ಹೇಳಿದರು.

'ಡಿ. 17ರಂದು ಬೆಳಿಗ್ಗೆ ಮನೆಯಲ್ಲಿ ಗಲಾಟೆ ಮಾಡಿದ್ದ ವೆಂಕಟರಾಮ್, ಮದ್ಯ ಖರೀದಿಗೆ ಹಣ ನೀಡುವಂತೆ ಒತ್ತಾಯಿಸಿದ್ದ. ಪತ್ನಿ–ಮಗ ಹಣ ನೀಡಿರಲಿಲ್ಲ. ರಂಪಾಟ ಮಾಡಿದ್ದ ವೆಂಕಟರಾಮ್, ಮನೆಯೊಳಗೆ ಸೇರಿ ಒಳಗಿನಿಂದ ಲಾಕ್ ಮಾಡಿಕೊಂಡಿದ್ದ. ಪತಿ ಹಾಗೂ ಮಕ್ಕಳು ಎಂದಿನಂತೆ ಕೆಲಸಕ್ಕೆ ಹೋಗಿ ಸಂಜೆ ವಾಪಸು ಬಂದಿದ್ದರು. ಅವಾಗಲೂ ಆರೋಪಿ ಲಾಕ್ ತೆಗೆದಿರಲಿಲ್ಲ. ಏನಾಯಿತೆಂದು ನೋಡಲು ಚಂದ್ರಶೇಖರ್, ಚಾವಣಿ ಮೂಲಕ ಮನೆಯೊಳಗೆ ಹೋಗಿದ್ದ.'

'ಚಂದ್ರಶೇಖರ್‌ನನ್ನು ನೋಡಿ ಪುನಃ ಜಗಳ ತೆಗೆದಿದ್ದ ತಂದೆ ವೆಂಕಟರಾಮ್, ಮಚ್ಚಿನಿಂದ ತಲೆ ಹಾಗೂ ಕೈ–ಕಾಲಿಗೆ ಹೊಡೆದಿದ್ದ. ರಕ್ಷಣೆಗೆ ಹೋದ ಸ್ಥಳೀಯರು, ಚಂದ್ರಶೇಖರ್ ಅವರನ್ನು ಸಮೀಪದ ಆಸ್ಪತ್ರೆಗೆ ಕರೆದೊಯ್ದು ದಾಖಲಿಸಿದ್ದಾರೆ. ಆರೋಗ್ಯ ಸ್ಥಿತಿ ಚಿಂತಾಜನಕವಾಗಿದೆ' ಎಂದರು.

### ಗ್ರಾಹಕರ ಸೋಗಿನಲ್ಲಿ ಡೀಲರ್ ಮೇಲೆ ಹಲ್ಲೆ: 6 ಮಂದಿ ಬಂಧನ

# ಡೀಲರ್ ಕರೆಸಿ ಬಿಎಂಡಬ್ಲ್ಯು ಬೈಕ್ ಸುಲಿಗೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಗ್ರಾಹಕರ ಸೋಗಿನಲ್ಲಿ ಡೀಲರ್ ಮೇಲೆ ಹಲ್ಲೆ ಮಾಡಿ ₹16 ಲಕ್ಷ ಮೌಲ್ಯದ ಬಿಎಂಡಬ್ಲ್ಯು ಬೈಕ್ ಸುಲಿಗೆ ಮಾಡಿದ್ದ 6 ಆರೋಪಿಗಳನ್ನು ವಿಜಯನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಬೈಕ್ ಡೀಲರ್ ಮೊಹಮ್ಮದ್ ಆಸಿಫ್ ಎಂಬುವವರು ಸುಲಿಗೆ ಬಗ್ಗೆ ದೂರು ನೀಡಿದ್ದರು. ಎ.ಎಲ್. ವಿಶ್ವಾಸ್ (23), ಎನ್. ಜಗನ್ನಾಥ್ (21), ಎಸ್.ಎಸ್. ಗಜೇಂದ್ರ (34), ಲಿಖಿತ್ ಕುಮಾರ್ (29), ಎಸ್. ಶಶಾಂಕ್ (23) ಹಾಗೂ ಕೆ. ಪವನ್ (21) ಬಂಧಿತರು' ಎಂದು ಪೊಲೀಸರು ಹೇಳಿದರು.

'ದೂರುದಾರ ಆಸೀಫ್, ವಿಜಯನಗರದಲ್ಲಿ ಮಳಿಗೆ ಇಟ್ಟುಕೊಂಡಿದ್ದಾರೆ.

**ಮುಖ್ಯಾಂಶಗಳು**

- ವಿಜಯನಗರ ಠಾಣೆ ಪೊಲೀಸರ ಕಾರ್ಯಾಚರಣೆ
- ಮೊಹಮ್ಮದ್ ಆಸಿಫ್ ಎಂಬುವವರು ಸುಲಿಗೆ ಬಗ್ಗೆ ದೂರು ನೀಡಿದ್ದರು

ಇವರನ್ನು ಸಂಪರ್ಕಿಸಿದ್ದ ಆರೋಪಿ ವಿಶ್ವಾಸ್, ಬಿಎಂಡಬ್ಲ್ಯು ಬೈಕ್ ಬೇಕೆಂದು ಹೇಳಿದ್ದ. ಟೆಸ್ಟ್‌ಡ್ರೈವ್ ನೋಡಲು ವಿಜಯನಗರ ಕ್ಲಬ್ ಬಳಿ ಬೈಕ್ ತರುವಂತೆ ತಿಳಿಸಿದ್ದ. ಆತನ ಮಾತು ನಂಬಿದ್ದ ದೂರುದಾರ, ಡಿ. 10ರಂದು ಬೈಕ್ ತೆಗೆದುಕೊಂಡು ಹೋಗಿದ್ದರು.'

'ಇತರೆ ಆರೋಪಿಗಳ ಜೊತೆ ಕಾರಿನಲ್ಲಿ ಸ್ಥಳಕ್ಕೆ ಬಂದಿದ್ದ ವಿಶ್ವಾಸ್, ಮೊಹಮ್ಮದ್ ಆಸೀಫ್ ಮೇಲೆ ಹಲ್ಲೆ ಮಾಡಿದ್ದ. ಐ-ಫೋನ್, ₹35 ಸಾವಿರ ನಗದು ಕಿತ್ತುಕೊಂಡಿದ್ದ. ನಂತರ, ದೂರುದಾರರನ್ನು ತನ್ನ ಕಾರಿನಲ್ಲಿ ಹತ್ತಿಸಿಕೊಂಡು ಅಪಹರಿಸಲು ಮುಂದಾಗಿದ್ದ. ಸ್ಥಳದಲ್ಲಿ ಜನರು ಸೇರುತ್ತಿದ್ದಂತೆ ಅವರನ್ನು ಬಿಟ್ಟು, ಬಿಎಂಡಬ್ಲ್ಯು ಬೈಕ್ ಸಮೇತ ಪರಾರಿಯಾಗಿದ್ದ. ತೀವ್ರ ಗಾಯಗೊಂಡಿದ್ದ ಆಸೀಫ್, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಠಾಣೆಗೆ ದೂರು ನೀಡಿದ್ದರು' ಎಂದು ತಿಳಿಸಿದರು.



ವಿಜಯನಗರ ಪೊಲೀಸರು ಆರೋಪಿಗಳಿಂದ ಜಪ್ತಿ ಮಾಡಿರುವ ಬಿಎಂಡಬ್ಲ್ಯು ಬೈಕ್

'ಆರೋಪಿಗಳು ಪರಾರಿಯಾಗುವ ವೇಳೆ ಕಾರನ್ನು ಸ್ಥಳದಲ್ಲಿ ಬಿಟ್ಟು ಹೋಗಿದ್ದರು. ಅದನ್ನು ಆಧರಿಸಿ ತನಿಖೆ ಕೈಗೊಂಡು ಆರೋಪಿಗಳನ್ನು ಬಂಧಿಸಲಾಗಿದೆ. ದೊಡ್ಡಬಳ್ಳಾಪುರದಲ್ಲಿ ಬಚ್ಚಿಟ್ಟಿದ್ದ ಬೈಕ್ ಸಹ ಜಪ್ತಿ ಮಾಡಲಾಗಿದೆ' ಎಂದು ಹೇಳಿದರು.

**ವಂಚನೆ ಪ್ರಕರಣದಲ್ಲಿ ಆರೋಪಿ:** 'ಬೈಕ್ ಡೀಲರ್ ಎಂಬುದಾಗಿ ಹೇಳಿಕೊಂಡು ಓಡಾಡುತ್ತಿದ್ದ ವಿಶ್ವಾಸ್, ಗ್ರಾಹಕರಿಂದ ಹಣ ಪಡೆದು ವಂಚಿಸುತ್ತಿದ್ದನೆಂಬ ಮಾಹಿತಿ ಇದೆ. ಈ ಬಗ್ಗೆ ತನಿಖೆ ಮುಂದುವರಿಸಲಾಗಿದೆ' ಎಂದು ತಿಳಿಸಿದರು.

### ಎಕ್ಸ್‌ಪ್ರೆಸ್ ವೇ: ನಿಯಮ ಉಲ್ಲಂಘನೆಗೆ ನೋಟಿಸ್

# ಕ್ಯಾಮೆರಾ ಕಣ್ಗಾವಲು!

ಪ್ರಜಾವಾಣಿ ವಾರ್ತೆ

**ರಾಮನಗರ:** ದಶಪಥಗಳ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಸದ್ಯದಲ್ಲಿಯೇ ಇಂಟಲಿಜೆನ್ಸ್ ಟ್ರಾನ್ಸ್‌ಪೋರ್ಟ್ ವ್ಯವಸ್ಥೆ ಜಾರಿಗೆ ಬರಲಿದ್ದು, ಇಡೀ ಸಂಚಾರ ವ್ಯವಸ್ಥೆ ಮೇಲೆ ಅತ್ಯಾಧುನಿಕ ಕ್ಯಾಮೆರಾಗಳು ಕಣ್ಣಿಡಲಿವೆ.

ಒಟ್ಟು 118 ಕಿ.ಮೀ. ಉದ್ದದ ಹೆದ್ದಾರಿಯಲ್ಲಿ ಪ್ರತಿ 500 ಮೀಟರ್‌ಗೆ ಒಂದರಂತೆ ಕ್ಯಾಮೆರಾ ಅಳವಡಿಕೆಗೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿದೆ. ಈ ವ್ಯವಸ್ಥೆ ಹೊಂದಲಿರುವ ರಾಜ್ಯದ ಮೊದಲ ಹೆದ್ದಾರಿ ಎಂಬ ಕೀರ್ತಿ ಇದರದ್ದಾಗಲಿದೆ. ಈ ಕ್ಯಾಮೆರಾಗಳನ್ನು ಬಳಸಿ ಹೆದ್ದಾರಿಯಲ್ಲಿನ ಅಷ್ಟೂ ಚಟುವಟಿಕೆಗಳನ್ನು ಕುಳಿತಲ್ಲಿಯೇ ವೀಕ್ಷಿಸಲು ಸಾಧ್ಯವಾಗಲಿದೆ. ಅಪಘಾತಗಳ ಮಾಹಿತಿಯು ಕ್ಷಣಮಾತ್ರದಲ್ಲಿಯೇ ಸಿಗಲಿದ್ದು, ತುರ್ತು ಕಾರ್ಯಾಚರಣೆಯೂ ಸಾಧ್ಯವಾಗಲಿದೆ.

ಕೃತಕ ಬುದ್ಧಿಮತ್ತೆ ಸಾಮರ್ಥ್ಯ ಹೊಂದಿರುವ ಈ ಕ್ಯಾಮೆರಾಗಳು ಹೆದ್ದಾರಿಯಲ್ಲಿನ ಪ್ರತಿ ಚಟುವಟಿಕೆಯನ್ನು ಸೆರೆ ಹಿಡಿಯಲಿವೆ. ಎಲ್ಲಿಯೇ ಅಪಘಾತ ನಡೆದರೂ ಅವುಗಳ ಚಿತ್ರ, ವಿಡಿಯೊಗಳನ್ನು ಕ್ಷಣಮಾತ್ರದಲ್ಲಿ ಕಂಟ್ರೋಲ್ ರೂಂ, ಹೈವೆ ಪೆಟ್ರೋಲಿಂಗ್, ಸ್ಥಳೀಯ ಪೊಲೀಸ್ ಠಾಣೆಗೆ ರವಾನಿಸಲಿವೆ.



ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇ

> **ಎಕ್ಸ್‌ಪ್ರೆಸ್ ವೇನಲ್ಲಿ ಪ್ರತಿ 500 ಮೀಟರ್‌ಗೆ ಒಂದರಂತೆ ಎ.ಐ. ಕ್ಯಾಮೆರಾ ಅಳವಡಿಕೆಗೆ ಪ್ರಸ್ತಾವ ಸಲ್ಲಿಸಿದ್ದೇವೆ. ಇದರಿಂದಾಗಿ ಸಂಚಾರ ವ್ಯವಸ್ಥೆ ಮೇಲೆ ನಿಗಾ ಸಾಧ್ಯವಾಗಲಿದೆ**
>
> **ಶ್ರೀಧರ್,** ಯೋಜನಾ ನಿರ್ದೇಶಕ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ

### ಬ್ಯಾನರ್ ನಿಷೇಧ

ಹೆದ್ದಾರಿ ಉದ್ದಕ್ಕೂ ಸದ್ಯ ನಾನಾ ಪಕ್ಷಗಳ ಫ್ಲೆಕ್ಸ್, ಬ್ಯಾನರ್‌ಗಳು ರಾರಾಜಿಸುತ್ತಿದ್ದು, ಅವುಗಳ ತೆರವಿಗೆ ಪ್ರಾಧಿಕಾರ ಮುಂದಾಗಿದೆ.

ತಮಿಳುನಾಡಿನಲ್ಲಿ ಈಚೆಗೆ ಬ್ಯಾನರ್ ಬಿದ್ದು, ಪ್ರಯಾಣಿಕರೊಬ್ಬರು ಮೃತಪಟ್ಟಿದ್ದರು. ಈ ಹಿನ್ನೆಲೆಯಲ್ಲಿ ಈ ಕ್ರಮ ವಹಿಸಿದ್ದು, ಈಗಾಗಲೇ ಕಟ್ಟಿರುವ ಫಲಕಗಳನ್ನು ತೆರವುಗೊಳಿಸುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ.

**ಸವಾರರಿಗೆ ನೋಟಿಸ್:** ಆಟೋಮೆಟಿಕ್ ಸೆನ್ಸಾರ್ ತಂತ್ರಜ್ಞಾನದ ಮೂಲಕ ವಾಹನಗಳ ನಂಬರ್ ಪ್ಲೇಟ್, ಅವುಗಳ ವೇಗ ಎಲ್ಲವನ್ನೂ ಈ ಕ್ಯಾಮೆರಾಗಳು ದಾಖಲಿಸಲಿವೆ. ಅತಿವೇಗದ ಚಾಲನೆ, ಪದೇ ಪದೇ ಲೇನ್ ಬದಲಾವಣೆ ಮೊದಲಾದ ಸಂಚಾರ ನಿಯಮಗಳನ್ನು ಉಲ್ಲಂಘಿಸುವ ವಾಹನ ಸವಾರರಿಗೆ ನೋಟಿಸ್ ಕೂಡ ಜಾರಿ ಆಗಲಿದೆ. ಅಪಘಾತದ ಸಂದರ್ಭ ಚಾಲಕನ ನಿರ್ಲಕ್ಷ್ಯ ಕಂಡುಬಂದಲ್ಲಿ ಅಂತಹ ವಾಹನಗಳ ವಿಮೆ ವಜಾಗೊಳ್ಳುವ ಸಾಧ್ಯತೆಯೂ ಇದೆ. ಇದರಿಂದ ಪೊಲೀಸರ ಮೇಲಿನ ಹೊರೆಯೂ ತಪ್ಪಲಿದೆ.

**ಅಪಘಾತಕ್ಕೆ ಕಡಿವಾಣ:** ಕಳೆದ ಮೂರು ತಿಂಗಳಲ್ಲಿ ಎಕ್ಸ್‌ಪ್ರೆಸ್ ವೇನಲ್ಲಿ 65 ಅಪಘಾತ ನಡೆದಿದ್ದು, ಇದರಿಂದಾಗಿ 22 ಮಂದಿ ಪ್ರಾಣ ಕಳೆದುಕೊಂಡಿದ್ದಾರೆ. ಅಪಘಾತಗಳ ನಿಯಂತ್ರಣ ಹಾಗೂ ಸಂಚಾರ ವ್ಯವಸ್ಥೆ ಸುಧಾರಣೆಗೂ ಈ ಕ್ಯಾಮೆರಾಗಳು ಸಹಕಾರಿ ಆಗಲಿವೆ ಎನ್ನುತ್ತಾರೆ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು.

ಇದರೊಟ್ಟಿಗೆ ಹೆದ್ದಾರಿಯುದ್ದಕ್ಕೂ ಹೈವೆ ಪೆಟ್ರೋಲಿಂಗ್ ಸಹ ಆರಂಭಿಸಲು ಪ್ರಾಧಿಕಾರವೂ ಉದ್ದೇಶಿಸಿದೆ. ಟೋಲ್ ಕಟ್ಟಲು ಈಗಿರುವ ಫಾಸ್ಟ್‌ಟ್ಯಾಗ್ ಜೊತೆಗೆ ಮೊಬೈಲ್ ಆ್ಯಪ್ ಮೂಲಕವೂ ಹಣ ಪಾವತಿಗೆ ಅನುಕೂಲ ಇರಲಿದೆ.

# ₹40 ಕೋಟಿ ಮೌಲ್ಯದ ಆಸ್ತಿ ಕೊಳ್ಳೆಗೆ ನಕಲಿ ದಾಖಲೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಪಟ್ಟಣಗೆರೆ ಗ್ರಾಮದಲ್ಲಿರುವ ಸುಮಾರು ₹40 ಕೋಟಿ ಮೌಲ್ಯದ 3 ಎಕರೆ ಆಸ್ತಿ ತಮ್ಮದಾಗಿಸಿಕೊಳ್ಳಲು ನಕಲಿ ದಾಖಲೆ ಸೃಷ್ಟಿಸಿದ್ದ ಆರೋಪದಡಿ ಬಿಬಿಎಂಪಿ ದ್ವಿತೀಯ ದರ್ಜೆ ಸಹಾಯಕ (ಎಸ್‌ಡಿಎ) ಸೇರಿದಂತೆ ಐವರನ್ನು ಹಲಸೂರು ಗೇಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಸರ್ವೆ ನಂಬರ್ 68ರಲ್ಲಿರುವ (ಹಳೇ ನಂ. 10) 3 ಎಕರೆ ಆಸ್ತಿ ಪರಭಾರೆ ಬಗ್ಗೆ ರೈತ ಎಸ್. ರಾಮಕೃಷ್ಣಯ್ಯ ದೂರು ನೀಡಿದ್ದರು. ಸಂಬಂಧಪಟ್ಟ ದಾಖಲೆಗಳನ್ನು ಪರಿಶೀಲಿಸಿ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿತ್ತು. ತನಿಖೆ ಕೈಗೊಂಡು ಐವರನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ರಾಜರಾಜೇಶ್ವರಿನಗರ ಬಿಬಿಎಂಪಿ ಕಚೇರಿಯ ಎಸ್‌ಡಿಎ ನವೀನ್, ಕೃತ್ಯಕ್ಕೆ ಸಹಕರಿಸಿದ್ದ ಜನಾರ್ದನ್, ನಾರಾಯಣಸ್ವಾಮಿ ಹಾಗೂ ಆಸ್ತಿಯನ್ನು ರಿಯಲ್ ಎಸ್ಟೇಟ್ ವ್ಯವಹಾರಕ್ಕೆ ಬಳಸಿಕೊಳ್ಳುತ್ತಿದ್ದ ಟ್ರಂಕೋ ಇನ್‌ಫ್ರಾ ಪ್ರೈವೇಟ್ ಲಿಮಿಟೆಡ್‌ನ ಎಂ.ಎಸ್. ಪ್ರಸಾದ್, ಎಂ.ಎಸ್. ದಿವ್ಯ ಬಂಧಿತರು. ಐವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿತ್ತು. ನಾಲ್ವರನ್ನು ಹೆಚ್ಚಿನ ವಿಚಾರಣೆಗಾಗಿ ಕಸ್ಟಡಿಗೆ ಪಡೆಯಲಾಗಿದೆ’ ಎಂದು ಪೊಲೀಸರು ತಿಳಿಸಿದರು.



ಎಂ.ಎಸ್. ಪ್ರಸಾದ್ ಹಾಗೂ ಸಹೋದರ ಎಂ.ಎಸ್. ದಿವ್ಯ

‘ನಕಲಿ ದಾಖಲೆ ಸೃಷ್ಟಿಸಿದ್ದ ಆಸ್ತಿಯನ್ನು ಕಡಿಮೆ ಬೆಲೆಗೆ ಖರೀದಿಸಿದ್ದ ಟ್ರಂಕೋ ಇನ್‌ಫ್ರಾ ಪ್ರೈವೇಟ್ ಲಿಮಿಟೆಡ್‌ನ ಎಂ.ಎಸ್. ಪ್ರಸಾದ್ ಹಾಗೂ ಸಹೋದರ ಎಂ.ಎಸ್. ದಿವ್ಯ, ನಿವೇಶನ ಅಭಿವೃದ್ಧಿಪಡಿಸಲು ಮುಂದಾಗಿದ್ದರು’ ಎಂದರು.

### 3 ಎಕರೆ ಆಸ್ತಿ ಲಪಟಾಯಿಸಲು ನಕಲಿ ಮರಣಪತ್ರ ಸೃಷ್ಟಿ

‘ದೂರುದಾರ ರಾಮಕೃಷ್ಣಯ್ಯ ಅವರಿಗೆ ಪಿತ್ರಾರ್ಜಿತವಾಗಿ ಬಂದಿದ್ದ 3 ಎಕರೆ ಆಸ್ತಿಯನ್ನು ವ್ಯವಸಾಯೇತರ ವಾಸದ ಉದ್ದೇಶಕ್ಕಾಗಿ ಬದಲಾಯಿಸಿ ಜಿಲ್ಲಾಧಿಕಾರಿಯವರು 1992ರಲ್ಲಿ ಆದೇಶ ನೀಡಿದ್ದರು. ಮೇ 5ರಂದು ಆಸ್ತಿಗೆ ಅಕ್ರಮವಾಗಿ ಪ್ರವೇಶಿಸಿದ್ದ ಆರೋಪಿಗಳು, ತಮ್ಮ ಜಾಗವೆಂದು ಗಲಾಟೆ ಮಾಡಿದ್ದರು. ಇದನ್ನು ಪ್ರಶ್ನಿಸಿದ್ದ ರಾಮಕೃಷ್ಣಯ್ಯ, ನ್ಯಾಯಾಲಯದಲ್ಲಿ ದಾವೆ ಹೂಡಿದ್ದರು’ ಎಂದು ಪೊಲೀಸರು ಹೇಳಿದರು. ‘ವಿಚಾರಣೆ ನಡೆಯುವಾಗಲೇ ದೂರುದಾರರ ದಾಖಲೆಗಳನ್ನು ಸಂಗ್ರಹಿಸಿ ಪರಿಶೀಲಿಸಿದ್ದರು. ನಕಲಿ ಮರಣ ಪ್ರಮಾಣಪತ್ರ, ನಕಲಿ ಭೂ ಪತಿವರ್ತನಾ ಆದೇಶ ಪ್ರತಿಗಳು ಪತ್ತೆಯಾಗಿದ್ದವು. ಈ ಸಂಗತಿಯನ್ನು ನ್ಯಾಯಾಲಯದ ಗಮನಕ್ಕೂ ತಂದಿದ್ದ ದೂರುದಾರ, ತಹಶೀಲ್ದಾರ್ ಅವರಿಗೂ ಮಾಹಿತಿ ನೀಡಿದ್ದರು. ಅವರ ಸಲಹೆಯಂತೆ ಠಾಣೆಗೂ ದೂರು ನೀಡಿದ್ದರು’ ಎಂದು ತಿಳಿಸಿದರು.

## ಸುದ್ದಿ 2 ನಿಮಿಷ

### ಮೊಟ್ಟೆ ಎಸೆತ: ವಿಚಾರಣೆಗೆ ತಡೆ

**ಬೆಂಗಳೂರು:** ಕೊಡಗು ಜಿಲ್ಲೆಯ ಮಳೆಹಾನಿ ಪ್ರದೇಶಗಳ ಪರಿಶೀಲನೆಗಾಗಿ ಪ್ರವಾಸ ಕೈಗೊಂಡಿದ್ದ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರ ಕಾರಿನ ಮೇಲೆ ಮೊಟ್ಟೆ ಎಸೆದ ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರು ಆರೋಪಿಗಳ ವಿರುದ್ಧದ ವಿಚಾರಣಾ ನ್ಯಾಯಾಲಯದ ಪ್ರಕ್ರಿಯೆಗೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ಈ ಸಂಬಂಧ ಆರೋಪಿಗಳಾದ ಎನ್.ಡಿ. ಸಂಪತ್‌ಕುಮಾರ್ ಮತ್ತು ಬಿ.ಎಂ.ಸಂತೋಷ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್.ರಾಚಯ್ಯ ಅವರಿದ್ದ ರಜಾಕಾಲದ ಏಕಸದಸ್ಯ ನ್ಯಾಯಪೀಠ ಈ ಆದೇಶ ನೀಡಿದೆ.

**ಪ್ರಕರಣವೇನು?:** ಕೊಡಗಿನ ಪ್ರವಾಹ ಪೀಡಿತ ಪ್ರದೇಶಗಳಿಗೆ ಆಗಸ್ಟ್ 18ರಂದು ಸಿದ್ದರಾಮಯ್ಯ ಭೇಟಿ ನೀಡಿದ್ದರು. ಸಾವರ್ಕರ್ ವಿರುದ್ಧ ಅವರು ನೀಡಿದ್ದ ಹೇಳಿಕೆ ಖಂಡಿಸಿ ಬಿಜೆಪಿ ಯುವ ಮೋರ್ಚಾ ಕುಶಾಲನಗರದಲ್ಲಿ ಪ್ರತಿಭಟನೆ ನಡೆಸಿತ್ತು. ಸಿದ್ದರಾಮಯ್ಯ ಅದೇ ಮಾರ್ಗದಲ್ಲಿ ಕಾರಿನಲ್ಲಿ ತೆರಳುತ್ತಿದ್ದಾಗ, ಕೆಲವರು ಅವರಿದ್ದ ಕಾರಿನ ಮೇಲೆ ಕೋಳಿ ಮೊಟ್ಟೆ ಎಸೆದಿದ್ದರು.



### ಸಾಹಿತ್ಯ ಸಮ್ಮೇಳನದ ವೇಳೆ ಬೀದರ್ ಉತ್ಸವ: ಆಕ್ಷೇಪ

**ಬೆಂಗಳೂರು:** ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಕಾರಣ ಬೀದರ್ ಜಿಲ್ಲಾ ಉತ್ಸವವನ್ನು ಮುಂದೂಡುವಂತೆ ಆಗ್ರಹಿಸಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ, ಬೀದರ್ ಜಿಲ್ಲಾಧಿಕಾರಿ ಗೋವಿಂದರೆಡ್ಡಿ ನಡೆಗೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಹಾವೇರಿಯಲ್ಲಿ 2023ರ ಜ.6ರಿಂದ ಜ.8ರವರೆಗೆ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಹಮ್ಮಿಕೊಳ್ಳಲಾಗಿದೆ. ಜ.7ರಿಂದ ಜ.9ರವರೆಗೆ ಬೀದರ್ ಜಿಲ್ಲಾ ಉತ್ಸವ ಆಯೋಜಿಸಲಾಗಿದೆ.

‘ಬೀದರ್ ಜಿಲ್ಲೆಯಿಂದಲೂ ಕನ್ನಡಾಭಿಮಾನಿಗಳು ಸಾಹಿತ್ಯ ಸಮ್ಮೇಳನಕ್ಕೆ ಬರಲಿದ್ದಾರೆ. ಆದ್ದರಿಂದ ಗೋವಿಂದರೆಡ್ಡಿ ಅವರ ಜತೆಗೆ ದೂರವಾಣಿ ಮೂಲಕ ಮಾತನಾಡಿ, ಜಿಲ್ಲಾ ಉತ್ಸವ ಮುಂದೂಡುವಂತೆ ಕೇಳಿಕೊಳ್ಳಲಾಯಿತು. ಮನವಿಯನ್ನು ಧಿಕ್ಕರಿಸಿದ ಅವರು, ‘ಹಾವೇರಿಯಲ್ಲಿ ಜರುಗಲಿರುವ ಸಾಹಿತ್ಯ ಸಮ್ಮೇಳನಕ್ಕೆ ಬೀದರ್ ಜಿಲ್ಲೆಯಿಂದ 100 ಜನರೂ ಹೋಗುವುದಿಲ್ಲ. ಹಾಗಾಗಿ, ಸಾಹಿತ್ಯ ಸಮ್ಮೇಳನಕ್ಕೆ ಯಾವುದೇ ಅಡ್ಡಿಯಾಗುವುದಿಲ್ಲ’ ಎಂಬ ಅಸಡ್ಡೆ ನುಡಿಗಳ ಮೂಲಕ ಕನ್ನಡದ ಸಮ್ಮೇಳನವನ್ನು ಅವಮಾನ ಮಾಡಿದ್ದಾರೆ. ಅಧಿಕಾರಿಯ ಕನ್ನಡ ವಿರೋಧಿ ಧೋರಣೆ ಖೇದಕರ’ ಎಂದು ಹೇಳಿದ್ದಾರೆ.

## ಜೆಡಿಎಸ್ ನಡೆ ಇನ್ನೂ ನಿಗೂಢ

ಸಂಪ್ರದಾಯದ ಪ್ರಕಾರ ಉಪಸಭಾಪತಿ ಸ್ಥಾನವನ್ನು ಎರಡನೇ ಅತಿ ದೊಡ್ಡ ಪಕ್ಷಕ್ಕೆ ಕೊಡಬೇಕಿತ್ತು: ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್

### ಉಪಸಭಾಪತಿ ಚುನಾವಣೆ ಪ್ರಾಣೇಶ್, ಅರಳಿ ನಾಮಪತ್ರ

**ಬೆಳಗಾವಿ:** ವಿಧಾನಪರಿಷತ್ ಉಪಸಭಾಪತಿ ಸ್ಥಾನಕ್ಕೆ ಬಿಜೆಪಿ ಸದಸ್ಯ ಎಂ.ಕೆ. ಪ್ರಾಣೇಶ್ ಮತ್ತು ಕಾಂಗ್ರೆಸ್ ಸದಸ್ಯ ಅರವಿಂದ ಅರಳಿ ಗುರುವಾರ ನಾಮಪತ್ರ ಸಲ್ಲಿಸಿದರು. ಶುಕ್ರವಾರ ಉಪ ಸಭಾಪತಿ ಚುನಾವಣೆ ನಡೆಯಲಿದೆ.

ಪರಿಷತ್ ಕಾರ್ಯದರ್ಶಿ ಕೆ.ಆರ್. ಮಹಾಲಕ್ಷ್ಮಿ ಅವರಿಗೆ ನಾಮಪತ್ರ ಸಲ್ಲಿಸಿದರು. ಪ್ರಾಣೇಶ್ ಅವರಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಶುಭಾಶಯ ಕೋರಿದರು. ಸದನದಲ್ಲಿ ಬಿಜೆಪಿ 39, ಕಾಂಗ್ರೆಸ್ 26, ಜೆಡಿಎಸ್ 8 ಹಾಗೂ ಒಬ್ಬರು ಪಕ್ಷೇತರ ಸದಸ್ಯರಿದ್ದಾರೆ.

‘ಉಪಸಭಾಪತಿ ಸ್ಥಾನಕ್ಕೆ ಮಹಿಳೆಯನ್ನು ಕಣಕ್ಕಿಳಿಸಿದರೆ ಯಾವುದೇ ಅಭ್ಯರ್ಥಿ ಹಾಕದಂತೆ ನಮ್ಮ ಹೈಕಮಾಂಡ್ ಸೂಚಿಸಿತ್ತು. ಆದರೆ, ಬಿಜೆಪಿ ಮಹಿಳೆ ಹಾಗೂ ಕೆಳವರ್ಗದವರನ್ನು ಪರಿಗಣಿಸಲಿಲ್ಲ. ಹೀಗಾಗಿ, ನಾವು ಅರಳಿ ಅವರನ್ನು ಅಭ್ಯರ್ಥಿಯಾಗಿ ಕಣಕ್ಕಿಳಿಸಿದ್ದೇವೆ’ ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಹೇಳಿದರು.

ಚುನಾವಣೆಯಲ್ಲಿ ಜೆಡಿಎಸ್ ನಡೆ ಇನ್ನೂ ನಿಗೂಢವಾಗಿಯೇ ಇದೆ.

### ಪರಿಶಿಷ್ಟರ ಮೀಸಲಾತಿ ಹೆಚ್ಚಳ: ಕೋಟ ಭರವಸೆ • ಕಾಂಗ್ರೆಸ್–ಬಿಜೆಪಿ ವಾಕ್ಸಮರ

# ‘ಸದನ ಒಪ್ಪಿದರೆ ಕೇಂದ್ರಕ್ಕೆ ಶಿಫಾರಸು’

ಪ್ರಜಾವಾಣಿ ವಾರ್ತೆ

**ಬೆಳಗಾವಿ:** ಪರಿಶಿಷ್ಟ ಜಾತಿ ಮತ್ತು ಪಂಗಡದ ಮೀಸಲಾತಿ ಹೆಚ್ಚಿಸುವ ಮಸೂದೆಗೆ ಉಭಯ ಸದನಗಳು ಅನುಮೋದನೆ ಕೊಟ್ಟರೆ, ಕೇಂದ್ರ ಸರ್ಕಾರಕ್ಕೆ ಕಳುಹಿಸಿ ಅಲ್ಲಿಯೂ ಒಪ್ಪಿಗೆ ಪಡೆಯುತ್ತೇವೆ ಎಂದು ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಸಚಿವ ಕೋಟ ಶ್ರೀನಿವಾಸ ಪೂಜಾರಿ ಹೇಳಿದರು.

ವಿಧಾನಪರಿಷತ್ತಿನಲ್ಲಿ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಅವರು ಈ ವಿಷಯ ಕುರಿತು ನಿಲುವಳಿ ಸೂಚನೆ ಮಂಡಿಸಿದರು.

ಪರಿಶಿಷ್ಟ ಜಾತಿ/ಪಂಗಡದವರ ಮೀಸಲಾತಿಯನ್ನು ಹೆಚ್ಚಿಸಬೇಕಾದರೆ ಕೇಂದ್ರ ಸರ್ಕಾರ ಸಂವಿಧಾನಕ್ಕೆ ತಿದ್ದುಪಡಿ ತರಬೇಕಿದೆ. ಅದು ಆಗುವುದಕ್ಕೆ ಮುನ್ನ ರಾಜ್ಯ ಸರ್ಕಾರ ತಂದಿರುವ ಸುಗ್ರೀವಾಜ್ಞೆ, ಈ ಮಸೂದೆಗೆ ಕಾನೂನು ತೊಡಕುಗಳಿವೆ. ಮೀಸಲಾತಿ ಪ್ರಮಾಣ ಹೆಚ್ಚಿಸಿದ್ದೇವೆ ಎಂದು ಜನರನ್ನು ತಪ್ಪುದಾರಿಗೆ ಎಳೆಯಲು ಮುಂದಾಗಿದ್ದೀರಿ. ಚುನಾವಣೆ ಹೊತ್ತಿನಲ್ಲಿ ದಲಿತ ರಾಜಕಾರಣಕ್ಕೆ ಕೈ ಹಾಕಿ, ಮತ ಸೆಳೆಯುವ ಹುನ್ನಾರ. ಪರಿಶಿಷ್ಟರ ಮತಗಳನ್ನು ಒಡೆಯುವ ಕೆಲಸಕ್ಕೆ ಕೈ ಹಾಕಿದ್ದೀರಿ ಎಂದು ಹರಿಪ್ರಸಾದ್ ದೂರಿದರು.



ವಿಧಾನ ಮಂಡಲದಲ್ಲಿ

ಇದಕ್ಕೆ ಪ್ರತಿಕ್ರಿಯಿಸಿದ ಸಚಿವ ಕೋಟ, ‘ಮೀಸಲಾತಿ ಹೆಚ್ಚಿಸುವ ನಿರ್ಣಯ ಕೈಗೊಳ್ಳುವ ಮುನ್ನ ಸರ್ವ ಪಕ್ಷ ಸಭೆ ಕರೆದು ಚರ್ಚೆ ಮಾಡಿದ್ದೆವು. ಆಗ ನೀವೆಲ್ಲರೂ ಒಪ್ಪಿಕೊಂಡಿದ್ದೀರಿ. ರಾಜಕಾರಣ ಏನೇ ಇರಬಹುದು. ಅಪರೂಪ ಹಾಗೂ ದಿಟ್ಟವಾದ ನಿಲುವನ್ನು ಸರ್ಕಾರ ಕೈಗೊಂಡಿದೆ. ಮಸೂದೆ ಸದನಕ್ಕೆ ಬಂದಾಗ ಚರ್ಚೆ ಮಾಡಿ, ಎರಡೂ ಸದನಗಳಲ್ಲಿ ಒಪ್ಪಿಗೆ ಕೊಡಿ. ಕೇಂದ್ರದಿಂದ ಒಪ್ಪಿಗೆ ಪಡೆಯುವ ಕೆಲಸ ನಮಗೆ ಬಿಡಿ’ ಎಂದು ಅವರು ಹೇಳಿದರು.

> **30–40 ವರ್ಷಗಳಿಂದ ಒಂದು ಸಮುದಾಯವನ್ನು ತಮ್ಮ ಮತಕ್ಕಾಗಿ ಬಳಸಿಕೊಂಡು ಬಂದಿದ್ದವರಿಗೆ ನಿರಾಶ್ರಿತರಾಗುವ ಭಯ ಕಾಡುತ್ತಿದೆ**
>
> **ಜೆ.ಸಿ. ಮಾಧುಸ್ವಾಮಿ**, ಕಾನೂನು ಸಚಿವ

> **ಮೀಸಲಾತಿ ಹೆಚ್ಚಿಸಬೇಕಾದರೆ ಅನೇಕ ಕಾನೂನಿನ ತೊಡಕುಗಳನ್ನು ಪರಿಹರಿಸಬೇಕಿದೆ. ಕೇಂದ್ರದ ಅನುಮತಿ ಪಡೆಯದೇ ಮಸೂದೆ ತಂದಿದ್ದೀರಿ**
>
> **ಬಿ.ಕೆ. ಹರಿಪ್ರಸಾದ್**, ವಿರೋಧ ಪಕ್ಷದ ನಾಯಕ

ಈ ಹಂತದಲ್ಲಿ ಕಾಂಗ್ರೆಸ್– ಬಿಜೆಪಿ ಸದಸ್ಯರು ಪರಸ್ಪರ ವಾಕ್ಸಮರಕ್ಕೆ ಇಳಿದಿದ್ದು ನಡೆಯಿತು.

ಮಧ್ಯಪ್ರವೇಶಿಸಿದ ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ, ‘ಇದರಲ್ಲಿ ನಮಗೆ ರಾಜಕೀಯ ಉದ್ದೇಶವಿಲ್ಲ. ಏಕೆಂದರೆ ನ್ಯಾ. ನಾಗಮೋಹನ ದಾಸ್ ಸಮಿತಿಯನ್ನು ನಾವು ರಚಿಸಿದ್ದಲ್ಲ. ಬಹಳ ವರ್ಷಗಳ ಬೇಡಿಕೆಯನ್ನು ಎಲ್ಲ ಪಕ್ಷದವರನ್ನು ವಿಶ್ವಾಸಕ್ಕೆ ತೆಗೆದುಕೊಂಡೇ ಈಡೇರಿಸುವ ಕೆಲಸ ಮಾಡಿದ್ದೇವೆ. ಸರ್ಕಾರಿ ಆದೇಶ ಹೊರಬಿದ್ದಿದೆ. ಈಗ ಎರಡೂ ಸದನಗಳಲ್ಲಿ ಒಪ್ಪಿಗೆ ಕೊಡಿ. ಕಾನೂನು ಹೋರಾಟವೂ ಕೇಂದ್ರ ಸರ್ಕಾರಕ್ಕೆ ಮನವಿ ಮಾಡುವ ಮೂಲಕವೋ ಇದನ್ನು ಜಾರಿ ಮಾಡುತ್ತೇವೆ’ ಎಂದು ಅವರು ಹೇಳಿದರು.

## ಸಂಕ್ಷಿಪ್ತ ಸುದ್ದಿ

### ಕನ್ಹಯ್ಯ ಲಾಲ್ ಹತ್ಯೆ ಆರೋಪಪಟ್ಟಿ ಸಲ್ಲಿಕೆ

**ನವದೆಹಲಿ:** ರಾಜಸ್ಥಾನದ ಉದಯಪುರದ ಟೇಲರ್ ಕನ್ಹಯ್ಯ ಲಾಲ್ ಅವರ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿ ಪಾಕಿಸ್ತಾನದ ಇಬ್ಬರು ಪೌರರು ಸೇರಿದಂತೆ 11 ಮಂದಿಯ ವಿರುದ್ಧ ರಾಷ್ಟ್ರೀಯ ತನಿಖಾ ದಳವು (ಎನ್‌ಐಎ) ಗುರುವಾರ ಆರೋಪಪಟ್ಟಿ ಸಲ್ಲಿಸಿದೆ.

ಕನ್ಹಯ್ಯ ಲಾಲ್ (48) ಅವರನ್ನು ಜೂನ್ 28ರಂದು ಅವರ ಅಂಗಡಿಯಲ್ಲಿ ಶಿರಚ್ಛೇದ ಮಾಡಿ ಹತ್ಯೆ ಮಾಡಲಾಗಿತ್ತು. ಇಸ್ಲಾಂಗೆ ಅವಮಾನ ಮಾಡಿದ್ದಕ್ಕೆ ಹತ್ಯೆ ಮಾಡಿರುವುದಾಗಿ ಆರೋಪಿಗಳು ಹೇಳಿದ್ದರು.

### ಸ್ವರಚಿತ ಕವನ ವಾಚನ

**ಬೆಂಗಳೂರು:** ಪ್ರೊ.ಜಿ.ಎಸ್. ಶಿವರುದ್ರಪ್ಪ ಮತ್ತು ಪ್ರೊ.ಯು.ಆರ್. ಅನಂತಮೂರ್ತಿ ಸಾಂಸ್ಕೃತಿಕ ಜಗತಿ ಜಂಟಿ ಕ್ರಿಯಾ ಸಮಿತಿಯು ಜಿ.ಎಸ್. ಶಿವರುದ್ರಪ್ಪ ಹಾಗೂ ಯು.ಆರ್. ಅನಂತಮೂರ್ತಿಯವರ ಜನ್ಮ ದಿನಾಚರಣೆಯ ಅಂಗವಾಗಿ ಜಿ.ಎಸ್.ಎಸ್ ಹಾಗೂ ಅನಂತಮೂರ್ತಿಯವರನ್ನು ಕುರಿತು ಸ್ವರಚಿತ ಕವನ ವಾಚನ ಕಾರ್ಯಕ್ರಮ ಹಮ್ಮಿಕೊಂಡಿದೆ.

ಕಾರ್ಯಕ್ರಮವು ಕಲಾಗ್ರಾಮ, ಮಲ್ಲತ್ತಹಳ್ಳಿಯಲ್ಲಿ ಡಿ.25 ರಂದು ನಡೆಯಲಿದ್ದು, ಆಸಕ್ತರು ಹೆಸರು ನೋಂದಾಯಿಸಿಕೊಳ್ಳಬಹುದು. ಭಾಗವಹಿಸಿದವರಿಗೆ ಪ್ರಮಾಣಪತ್ರಗಳನ್ನು ನೀಡಲಾಗುವುದು.

**ಸಂಪರ್ಕಕ್ಕೆ:** 8310741113

### ನಾಳೆಯಿಂದ ಸಾಯಿ ದಶಕೋಟಿ ಮಹಾಯಾಗ

**ಬೆಂಗಳೂರು:** ಶ್ರದ್ಧಾ ಸಬೂರಿ ಭಕ್ತ ಮಂಡಳಿಯು ಇದೇ 24ರಿಂದ ಜನವರಿ 3ರವರೆಗೆ ಸಾಯಿ ದಶಕೋಟಿ ಮಹಾಯಾಗವನ್ನು ಬಾಗಲೂರಿನ ಎಸ್.ಎಸ್. ಕನ್ವೆನ್ಷನ್ ಸೆಂಟರ್‌ನಲ್ಲಿ ಹಮ್ಮಿಕೊಂಡಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮಂಡಳಿಯ ರಾಘವೇಂದ್ರ ಸ್ವಾಮೀಜಿ, ‘ಮಹಾಯಾಗದಲ್ಲಿ ಆನಂದ ಗುರೂಜಿ, ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ, ಚಂದ್ರಶೇಖರ ಸ್ವಾಮೀಜಿ, ಚಕ್ರವರ್ತಿ ಸೂಲಿಬೆಲೆ, ವಿಧಾನ ಪರಿಷತ್ ಸದಸ್ಯ ಟಿ.ಎ. ಶರವಣ, ನಟ ಸಾಯಿ ಪ್ರಕಾಶ ಪಾಲ್ಗೊಳ್ಳಲಿದ್ದಾರೆ. 10 ದಿನಗಳ ಮಹಾಯಾಗ ಮಾಡಲಾಗುತ್ತಿದೆ’ ಎಂದರು.

### ಸ್ಮಾರ್ಟ್ ಸಿಟಿ: ಕಳಪೆಯಾಗಿದ್ದರೆ ತನಿಖೆ– ಬೊಮ್ಮಾಯಿ

**ಬೆಳಗಾವಿ:** ಸ್ಮಾರ್ಟ್ ಸಿಟಿ ಯೋಜನೆಯಡಿ ಬಿಬಿಎಂಪಿ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಕಾಮಗಾರಿ ಕಳಪೆಯಾಗಿದ್ದರೆ ಆ ಬಗ್ಗೆ ತನಿಖೆ ನಡೆಸಲು ಸಿದ್ಧ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ವಿಧಾನಪರಿಷತ್ತಿನಲ್ಲಿ ಕಾಂಗ್ರೆಸ್‌ನ ಪಿ.ಆರ್. ರಮೇಶ್ ಅವರು ಸ್ಮಾರ್ಟ್ ಯೋಜನೆ ಕುರಿತು ವಿವರ ಕೇಳಿದ್ದರು.

ಅದಕ್ಕೆ ಸರ್ಕಾರ ನೀಡಿದ ಉತ್ತರಕ್ಕೆ ಆಕ್ಷೇಪಿಸಿದ ರಮೇಶ್, ‘ಸರಿಯಾಗಿ ಕಾಮಗಾರಿಯನ್ನೇ ನಡೆಸಿಲ್ಲ. ಒಟ್ಟು ₹1000 ಕೋಟಿ ಮೊತ್ತದಲ್ಲಿ ₹800 ಕೋಟಿ ಪಾವತಿಸಲಾಗಿದೆ. 44 ಯೋಜನೆಗಳ ಪೈಕಿ ₹450 ಕೋಟಿ ರಸ್ತೆಗಳಿಗೆ ವೆಚ್ಚ ಮಾಡಲಾಗಿದೆ. ಐತಿಹಾಸಿಕ ನಗರದ ಪುನಶ್ಚೇತನ ಮಾಡುವಾಗ, ಆ ಕಾಲದ ಮರುಸೃಷ್ಟಿ ಮಾಡಬೇಕಿತ್ತು. ರಸ್ತೆ ಜತೆಗೆ ಪಾದಚಾರಿ ಮಾರ್ಗವನ್ನು ಮಾಡಿದ್ದು ಬಿಟ್ಟರೆ ಬೇರೇನೂ ಮಾಡಿಲ್ಲ. ಕೆ.ಆರ್. ಮಾರ್ಕೆಟ್ ಸ್ಮಾರ್ಟ್ ಮಾರ್ಕೆಟ್ ಹೇಗಾಗಿದೆ ಎಂದು ನೀವೇ ಬಂದು ನೋಡಿ‘ ಎಂದು ಬೆಂಗಳೂರು ಅಭಿವೃದ್ಧಿ ಸಚಿವರೂ ಆಗಿರುವ ಬೊಮ್ಮಾಯಿಯವರಿಗೆ ಆಹ್ವಾನ ನೀಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಬೊಮ್ಮಾಯಿ, ‘ಸ್ಮಾರ್ಟ್ ಸಿಟಿ ಸಲಹಾ ಸಮಿತಿಯಲ್ಲಿ ಸಂಸದರು, ಶಾಸಕರು ಇರುತ್ತಾರೆ. ಈಗ ಬೆಂಗಳೂರು ಕೇಂದ್ರವನ್ನಷ್ಟೇ ಯೋಜನೆಯಡಿ ತೆಗೆದುಕೊಳ್ಳಲಾಗಿದೆ. ಸಂಸದ ಪಿ.ಸಿ. ಮೋಹನ್ ಅಧ್ಯಕ್ಷರಾಗಿದ್ದರೆ, ಶಿವಾಜಿನಗರ, ಶಾಂತಿನಗರ, ಚಾಮರಾಜಪೇಟೆ, ಗಾಂಧಿನಗರ ಶಾಸಕರು ಸದಸ್ಯರಾಗಿದ್ದಾರೆ. ಅವರ ಸಲಹೆ ಆಧರಿಸಿ ಯೋಜನೆ ರೂಪಿಸಲಾಗಿದ್ದು, ಕೇಂದ್ರ ಸರ್ಕಾರದ ಅನುಮೋದನೆಯನ್ನೂ ಪಡೆಯಲಾಗಿದೆ. ವೈಟ್ ಟಾಪಿಂಗ್‌ಗೆ ಅನುದಾನ ಬಳಸಲಾಗಿದೆ. ಶಿವಾಜಿನಗರದಲ್ಲಿ ಪಾರಂಪರಿಕ ಕಟ್ಟಡ ಇದ್ದು, ಅಲ್ಲಿ ಆಗಿರುವ ಅಭಿವೃದ್ಧಿಯನ್ನೊಮ್ಮೆ ನೋಡಿ. ನಿಮ್ಮ ಪಕ್ಷದ ಶಾಸಕರೂ ಇದ್ದಾರೆ’ ಎಂದರು.

ಮಾರ್ಕೆಟ್‌ಗೆ ಬನ್ನಿ ಎಂದು ರಮೇಶ್ ಆಹ್ವಾನಿಸಿದಾಗ, ‘ನಿಮ್ಮನ್ನೇ ಕರೆದುಕೊಂಡು ಭೇಟಿ ನೀಡುತ್ತೇನೆ. ಲೋಪದೋಷಗಳು ಕಂಡುಬಂದರೆ ತನಿಖೆಗೆ ಆದೇಶಿಸುತ್ತೇನೆ’ ಎಂದು ಹೇಳಿದರು.

### ಒಕ್ಕಲಿಗರ ಮೀಸಲಾತಿ ಹೆಚ್ಚಳ ಇಂದು ಸಿ.ಎಂ ಭೇಟಿ

**ಬೆಳಗಾವಿ:** ‘ಒಕ್ಕಲಿಗ ಸಮುದಾಯದ ಸಚಿವರು, ಬಿಜೆಪಿ ಶಾಸಕರು ಡಿ.23ರಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಭೇಟಿ ಮಾಡಿ ಒಕ್ಕಲಿಗ ಸಮುದಾಯದ ಮೀಸಲಾತಿಯನ್ನು ಶೇ 12ಕ್ಕೆ ಹೆಚ್ಚಿಸಲು ಕೋರಲಿದ್ದೇವೆ’ ಎಂದು ಕಂದಾಯ ಸಚಿವ ಆರ್.ಅಶೋಕ್ ಹೇಳಿದರು.

ಒಕ್ಕಲಿಗ ಸಚಿವರು, ಶಾಸಕರ ಸಭೆಯ ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿದರು.

ಆರ್ಥಿಕವಾಗಿ ದುರ್ಬಲ ವರ್ಗಗಳಿಗೆ (ಇಡಬ್ಲ್ಯುಎಸ್) ಇರುವ ಶೇ 10ರ ಮೀಸಲಾತಿ ವ್ಯಾಪ್ತಿಗೆ ನಗರ ಪ್ರದೇಶದ ಒಕ್ಕಲಿಗರನ್ನು ತರಬೇಕು. ಪ್ರವರ್ಗ ’3ಎ’ನಲ್ಲಿ ಈಗಿರುವ ಶೇ 4ರಷ್ಟು ಮೀಸಲಾತಿ ಗ್ರಾಮೀಣ ಪ್ರದೇಶದ ಬಡ ಒಕ್ಕಲಿಗರಿಗಷ್ಟೇ ಸಿಗುತ್ತಿದೆ. ನಗರ ಪ್ರದೇಶಗಳಲ್ಲಿ ವಾಸಿಸುತ್ತಿರುವ ಸಮುದಾಯದ ಬಡವರು, ಕೊಳಚೆ ಪ್ರದೇಶದ ನಿವಾಸಿಗಳು ಮೀಸಲಾತಿಯಿಂದ ವಂಚಿತರಾಗಿದ್ದಾರೆ.

ಇಷ್ಟು ವರ್ಷಗಳು ಜನಾಂಗಕ್ಕೆ ಆಗಿರುವ ಅನ್ಯಾಯ ಸರಿಪಡಿಸಬೇಕು. ಒಕ್ಕಲಿಗರಿಗೆ ನ್ಯಾಯಯುತ ಮೀಸಲಾತಿ ಸಿಗಬೇಕು. ಪರಿಶಿಷ್ಟರ ಮೀಸಲಾತಿ ಹೆಚ್ಚಳ ಮಾಡಿದಂತೆ, ಒಕ್ಕಲಿಗರಿಗೂ ಹೆಚ್ಚಿಸಬೇಕು. ಹಾಗೆ ಮಾಡಿದರೆ ಮಾತ್ರ ವಿದ್ಯಾಭ್ಯಾಸ, ಉದ್ಯೋಗದಲ್ಲಿ ಸಹಾಯವಾಗುತ್ತದೆ. ಜನಾಂಗದ ಜನಸಂಖ್ಯೆ ಆಧಾರದಲ್ಲಿ ನ್ಯಾಯ ಸಿಗಬೇಕು. ಇತರರಿಗೆ ಕೊಡಬೇಡಿ ಎನ್ನುವುದಿಲ್ಲ. ಬೇರೆಯವರಂತೆ ಬೀದಿಗಿಳಿದು ಹೋರಾಟ ನಡೆಸಿಲ್ಲ. ಮುಖ್ಯಮಂತ್ರಿ ಮೇಲೆ ಸಂಪೂರ್ಣ ಭರವಸೆ ಇದೆ. ಬೇಡಿಕೆ ಈಡೇರಿಸಿದರೆ ಸಮುದಾಯವೂ ಸರ್ಕಾರದ ಬೆನ್ನಿಗೆ ನಿಲ್ಲುತ್ತದೆ ಎಂದರು.

ಒಕ್ಕಲಿಗ ಉಪ ಪಂಗಡಗಳಾದ ಕುಂಚಿಟಿಗ, ಬಂಟರು ಕೇಂದ್ರದ ಒಬಿಸಿ ಪಟ್ಟಿಯಲ್ಲಿ ಸೇರಿಲ್ಲ. ರಾಜ್ಯ ಸರ್ಕಾರ ಕೇಂದ್ರಕ್ಕೆ ಶಿಫಾರಸು ಮಾಡಬೇಕು ಎಂದೂ ಕೋರಲಾಗುವುದು ಎಂದು ವಿವರ ನೀಡಿದರು.

ಜ.4ರಂದು ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಸೇರಿದಂತೆ ಸಮುದಾಯದ ಮೂವರು ಸ್ವಾಮೀಜಿಗಳನ್ನು ಭೇಟಿ ಮಾಡಲಾಗುವುದು. ಮೀಸಲಾತಿಯ ಮುಂದಿನ ನಡೆ ಕುರಿತು ಚರ್ಚಿಸಿ, ಮಾರ್ಗದರ್ಶನ ಪಡೆಯಲಾಗುವುದು ಎಂದು ಮಾಹಿತಿ ನೀಡಿದರು.

ಸಭೆಯಲ್ಲಿ ಸಚಿವರಾದ ಡಾ.ಸಿ.ಎನ್. ಅಶ್ವತ್ಥನಾರಾಯಣ, ಡಾ.ಕೆ.ಸುಧಾಕರ್, ಆರಗ ಜ್ಞಾನೇಂದ್ರ, ಗೋಪಾಲಯ್ಯ, ಎಸ್.ಟಿ.ಸೋಮಶೇಖರ್ ಮತ್ತಿತರರು ಇದ್ದರು.

### 5, 8ನೇ ತರಗತಿಗೆ ಪಬ್ಲಿಕ್ ಪರೀಕ್ಷೆ: ಆಕ್ಷೇಪ

**ಬೆಂಗಳೂರು:** ‘5 ಮತ್ತು 8ನೇ ತರಗತಿಯ ವಿದ್ಯಾರ್ಥಿಗಳು ಪಬ್ಲಿಕ್ ಪರೀಕ್ಷೆ ಎದುರಿಸಲು ಮಾನಸಿಕವಾಗಿ ಸದೃಢರಾಗಿರುವುದಿಲ್ಲ. ಆದ್ದರಿಂದ ಅವರಿಗೆ ಪಬ್ಲಿಕ್ ಪರೀಕ್ಷೆ ನಡೆಸುವ ತೀರ್ಮಾನವನ್ನು ಸರ್ಕಾರ ಕೂಡಲೇ ಕೈಬಿಡಬೇಕು’ ಎಂದು ಕರ್ನಾಟಕ ಪ್ರದೇಶ ಸಾಮಾನ್ಯ ನಾಗರಿಕ ಧ್ವನಿ ವೇದಿಕೆ ಆಗ್ರಹಿಸಿದೆ.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವೇದಿಕೆಯ ರಾಜ್ಯಾಧ್ಯಕ್ಷ ಎಸ್. ಲಕ್ಷ್ಮಿನಾರಾಯಣ, ‘ಶೈಕ್ಷಣಿಕ ವರ್ಷದ ಕೊನೆಯಲ್ಲಿ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಅವರು ವಿವೇಚನೆ ಇಲ್ಲದೇ 5 ಮತ್ತು 8 ನೇ ತರಗತಿಯ ವಿದ್ಯಾರ್ಥಿಗಳಿಗೆ ಪಬ್ಲಿಕ್ ಪರೀಕ್ಷೆ ನಡೆಸುವ ತೀರ್ಮಾನ ಕೈಗೊಂಡಿದ್ದಾರೆ. ಇದು ವಿದ್ಯಾರ್ಥಿಗಳು ಮತ್ತು ಪಾಲಕರಲ್ಲಿ ಆತಂಕವನ್ನುಂಟು ಮಾಡಿದೆ. ಪಬ್ಲಿಕ್ ಪರೀಕ್ಷೆ ನಡೆಸುವ ಬಗ್ಗೆ ಸರ್ಕಾರ ಹೊರಡಿಸಿರುವ ಅಧಿಸೂಚನೆ ಅವೈಜ್ಞಾನಿಕವಾಗಿದ್ದು, ಇದು ರಾಷ್ಟ್ರೀಯ ಶಿಕ್ಷಣ ನೀತಿಗೆ ವಿರುದ್ಧವಾಗಿದೆ. ಇದು ರಾಜ್ಯ ಪಠ್ಯಕ್ರಮವನ್ನು ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಮಾತ್ರ ಅನ್ವಯವಾಗುತ್ತದೆ. ಇದರಿಂದ ದೇಶದ ಶಿಕ್ಷಣ ವ್ಯವಸ್ಥೆಯಲ್ಲಿ ಭಾರಿ ಅಸಮಾನತೆ ಸೃಷ್ಟಿಯಾಗಲಿದೆ. ಸರ್ಕಾರ ಕೂಡಲೇ ಅಧಿಸೂಚನೆಯನ್ನು ಹಿಂಪಡೆಯಬೇಕು. ಇಲ್ಲವಾದಲ್ಲಿ ಬಿ.ಸಿ. ನಾಗೇಶ್ ಅವರ ನಿವಾಸದ ಮುಂದೆ ಪ್ರತಿಭಟನೆ ನಡೆಸಲಾಗುವುದು’ ಎಂದು ಎಚ್ಚರಿಸಿದರು.

ಪೋಷಕಿ ಆಶಾ, ‘ಪಬ್ಲಿಕ್ ಪರೀಕ್ಷೆಗಳನ್ನು ಎದುರಿಸಲು ಮಕ್ಕಳು ಮಾನಸಿಕವಾಗಿ ಸದೃಢರಾಗಿರುವುದಿಲ್ಲ. ಪರೀಕ್ಷೆಗಳನ್ನು ದೂರದ ಕೇಂದ್ರಗಳಲ್ಲಿ ನಿಗದಿಪಡಿಸಿದರೆ ವಿದ್ಯಾರ್ಥಿಗಳಿಗೆ ಸಂಚಾರದ ತೊಂದರೆಯಾಗುತ್ತದೆ. ಆದ್ದರಿಂದ ಪಬ್ಲಿಕ್ ಪರೀಕ್ಷೆಯ ತೀರ್ಮಾನವನ್ನು ಸರ್ಕಾರ ಕೂಡಲೇ ಹಿಂಪಡೆಯಬೇಕು’ ಎಂದರು.




ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಸವಿಗಾನ ಸಂಸ್ಥೆ ನಗರದಲ್ಲಿ ಗುರುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಗಾಯಕ ದೇವೇಂದ್ರಕುಮಾರ್ ಪತ್ತಾರ್ ಹಾಗೂ ಪತ್ನಿ ಕಸ್ತೂರಿ ಅವರನ್ನು ಸನ್ಮಾನಿಸಲಾಯಿತು. (ಎಡದಿಂದ) ಕವಿ ಬಸವರಾಜ್ ಸಬರದ, ಕಲಾವಿದರಾದ ಗಣೇಶ್ ಪ್ರಸಾದ್, ಸವಿತಾ ಕೆ.ಪಿ, ಮಾಗಡಿ ಗಿರೀಶ್, ಜಿಪಿಒ ಚಂದ್ರು ಹಾಗೂ ಬೇಲೂರು ರಘುನಂದನ್ ಇದ್ದಾರೆ.
– ಪ್ರಜಾವಾಣಿ ಚಿತ್ರ

## ನಗರದಲ್ಲಿ ಇಂದು

**ಸದ್ಗುರು ಅನಂತಸ್ವಾಮಿ ಮಹಾರಾಜರ 121ನೇ ದಿವ್ಯಾರಾಧನ ಮಹೋತ್ಸವ:** ಆಯೋಜನೆ ಹಾಗೂ ಸ್ಥಳ: ಅನಂತಸ್ವಾಮಿ ಆಶ್ರಮ, ಸುಭೇದಾರ್ ಛತ್ರಂ ರಸ್ತೆ ಕ್ರಾಸ್, ಕಪಾಲಿ ಚಿತ್ರಮಂದಿರದ ಹಿಂಭಾಗ, ಗಾಂಧಿನಗರ, ಬೆಳಿಗ್ಗೆ 5ರಿಂದ

**ನಾಟಕ ರಸಗ್ರಹಣ ಕಾರ್ಯಾಗಾರ:** ನಾಟಕ ಪ್ರದರ್ಶನ: ‘ಅಬ್ಬುಸ್ ಸಲಾಂ ಒಂದು ವಿಚಾರಣೆ’, ಆಯೋಜನೆ: ಬೆಂಗಳೂರು ಲಲಿತಕಲಾ ಪರಿಷತ್, ಇಂಡಿಯನ್ ಅಕಾಡೆಮಿ ಸೈನ್ಸಸ್, ನ್ಯಾಷನಲ್ ಕಾಲೇಜು, ಸ್ಥಳ: ಎಚ್.ಎನ್. ಕಲಾಕ್ಷೇತ್ರ, ಜಯನಗರ, ಮಧ್ಯಾಹ್ನ: 2.30

**ಪಿ.ಕೆ.ಎಸ್. ಶಾಲಾ ವಾರ್ಷಿಕೋತ್ಸವ:** ಅತಿಥಿಗಳು: ಎ.ಎಸ್. ಕಿರಣಕುಮಾರ್, ಎಮ್. ಸುಬ್ರಮಣ್ಯಂ, ಆರ್.ಪ್ರಕಾಶ್, ಸ್ಥಳ: ಪಿ.ಕೆ.ಎಸ್. ಸ್ಕೂಲ್, ಅರ್ಕಾವತಿ ಬಡಾವಣೆ, ಜಕ್ಕೂರು, ಸಂಜೆ 4.30



ಎ.ಎಸ್. ಕಿರಣಕುಮಾರ್

**‘ಸರ್ಕಾರಿ ಲೆಕ್ಕದಲ್ಲಿ ಸತ್ತಾಕಿ’ ನಾಟಕ ಪ್ರದರ್ಶನ:** ಅತಿಥಿಗಳು: ಆರ್. ಚಂದ್ರಶೇಖರ್, ವಿದ್ಯಾರಣ್ಯ, ದೇವರಾಜ್, ಅಭಿನಂದನೆ: ಬಿ.ವಿ. ರಾಜಾರಾಂ, ಆಯೋಜನೆ ಹಾಗೂ ಸ್ಥಳ: ವಿಜಯನಗರ ಬಿಂಬ, ಹಂಪಿನಗರ, ಸಂಜೆ 5.30

**ರಸ ಸಂಜೆ:** ಭರತನಾಟ್ಯ ಪ್ರದರ್ಶನ: ಶಶಾಂಕ್ ಕಿರಣ್ ನಾಯರ್, ಗಾಯತ್ರಿ ಕೇಶವನ್, ಅತಿಥಿಗಳು: ಅನನ್ಯಾ, ರಾಘವೇಂದ್ರ, ಆಯೋಜನೆ: ವೆಂಕಟೇಶ ನಾಟ್ಯ ಮಂದಿರ, ಸ್ಥಳ: ಎ.ಡಿ.ಎ. ರಂಗಮಂದಿರ, ಜೆ.ಸಿ. ರಸ್ತೆ, ಸಂಜೆ 6.30



ಹಂಸಲೇಖ

**‘ನಕುಲ’ ನಾಟಕ ಪ್ರದರ್ಶನ ಮತ್ತು ‘ಕಾಯಕಜೀವಿ ಪುರಸ್ಕಾರ’ ಪ್ರದಾನ:** ಉದ್ಘಾಟನೆ: ಹಂಸಲೇಖ, ಅಧ್ಯಕ್ಷತೆ: ಎಂ.ಎನ್. ವೆಂಕಟೇಶ್, ಅತಿಥಿಗಳು: ತುಮ್ಮಲ ರಾಮಕೃಷ್ಣ, ನಿರಂಜನ ವಾನಳ್ಳಿ, ನಾಗೇಶ ಬೆಟ್ಟಕೋಟೆ, ಷಡಕ್ಷರಿ, ಆಯೋಜನೆ: ರಂಗ ವಿಜಯಾ, ಸ್ಥಳ: ರವಿಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5

**ಭಕ್ತಿಗೀತೆಗಳ ಗಾಯನ:** ಅಧ್ಯಕ್ಷತೆ: ಸವಿತಾ, ಗಾಯನ: ಎನ್. ಮುರಳಿ, ಎಂ. ನವ್ಯಶ್ರೀ, ಕೀಬೋರ್ಡ್: ದುಶ್ಯಂತ್, ತಬಲಾ: ಸಂದೀಪ್, ರಿದಮ್ ಪ್ಯಾಡ್: ಪ್ರಸಾದ್, ಆಯೋಜನೆ: ಮುರಳಿ ಸೆಂಟರ್ ಆಫ್ ಮ್ಯೂಸಿಕ್ ಆ್ಯಂಡ್ ಫೈನ್ ಆರ್ಟ್ಸ್, ಸ್ಥಳ: ಅಯ್ಯಪ್ಪಸ್ವಾಮಿ ದೇವಸ್ಥಾನ, ಬಸವನಗುಡಿ, ಸಂಜೆ 6

**ಎಸ್.ಪಿ. ಬಾಲಸುಬ್ರಮಣ್ಯಂ ಅವರ ಸಂಸ್ಮರಣೆ ‘ಮಾವು–ಬೇವು’:** ಅತಿಥಿಗಳು: ದೊಡ್ಡರಂಗೇಗೌಡ, ಉಪಸ್ಥಿತಿ: ಎಮ್.ಸಿ. ಪೂಣಚ್ಚ, ಭಾವಗೀತೆಗಳ ಗಾಯನ: ಆರ್.ಎಸ್. ಗಣೇಶ್ ನಾರಾಯಣ್, ಕೀಬೋರ್ಡ್: ಕೆ.ಆರ್. ಪ್ರವೀಣ್, ತಬಲ: ಜಿ.ಆರ್. ಸುರೇಶ್, ಆಯೋಜನೆ ಹಾಗೂ ಸ್ಥಳ: ವಿದ್ಯಾರಣ್ಯಪುರ ಹಿರಿಯ ನಾಗರಿಕರ ವೇದಿಕೆ, ವಿದ್ಯಾರಣ್ಯಪುರ, ಸಂಜೆ 6

### ಬೆಂಗಳೂರು ಗಾಲ್ಫ್ ಕ್ಲಬ್‌ನ ಮೂವರ ವಿರುದ್ಧ ಎಫ್‌ಐಆರ್ • ಮರಳಿ ಕೆಲಸ ಪಡೆಯಲು ಅಲೆದಾಟ

# ಠಾಣೆಗೆ ಹೋಗಿದ್ದಕ್ಕೆ ಕೆಲಸದಿಂದ ವಜಾ: ಕೆಲಸಗಾರ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೆಲಸದಿಂದ ವಜಾ ಮಾಡಿದರೆಂಬ ಕಾರಣಕ್ಕೆ ಮನನೊಂದು ಮೈ ಮೇಲೆ ಪೆಟ್ರೋಲ್ ಸುರಿದುಕೊಂಡು ಆತ್ಮಹತ್ಯೆಗೆ ಯತ್ನಿಸಿ ಗಾಯಗೊಂಡಿದ್ದ ನಂಜುಂಡಸ್ವಾಮಿ (26) ಎಂಬುವರು ಚಿಕಿತ್ಸೆಗೆ ಸ್ಪಂದಿಸದೇ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ.

ಅಂದ್ರಹಳ್ಳಿ ಶ್ರೀಚಕ್ರ ನಗರದ ನಿವಾಸಿ ನಂಜುಂಡಸ್ವಾಮಿ, ಬೆಂಗಳೂರು ಗಾಲ್ಫ್ ಕ್ಲಬ್‌ನಲ್ಲಿ ಉದ್ಯಾನ ನಿರ್ವಹಣೆ ಕೆಲಸ ಮಾಡುತ್ತಿದ್ದರು. ಪ್ರಕರಣವೊಂದರ ವಿಚಾರಣೆಗಾಗಿ ಪೊಲೀಸ್ ಠಾಣೆಗೆ ಹೋಗಿ ಬಂದರೆಂಬ ಕಾರಣಕ್ಕೆ ಇವರನ್ನು ಕೆಲಸದಿಂದ ವಜಾ ಮಾಡಲಾಗಿತ್ತು. ಇದರಿಂದ ನೊಂದು ನಂಜುಂಡಸ್ವಾಮಿ ಡಿ. 14ರಂದು ಆತ್ಮಹತ್ಯೆಗೆ ಯತ್ನಿಸಿದ್ದರು. ಚಿಕಿತ್ಸೆಗಾಗಿ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು.

> **ಮುಖ್ಯಾಂಶಗಳು**
> - ಕ್ಲಬ್‌ನ ಜೊತೆಗೆ ಅರೆಕಾಲಿಕವಾಗಿ ರ‍್ಯಾಪಿಡೊದಲ್ಲೂ ಕೆಲಸ
> - ರ‍್ಯಾಪಿಡೊ ವಿರುದ್ಧ ದೂರು: ವಿಚಾರಣೆಗೆ ತೆರಳಿದ್ದ ಕಾರ್ಮಿಕ

‘ನಂಜುಂಡಸ್ವಾಮಿ ಆತ್ಮಹತ್ಯೆ ಬಗ್ಗೆ ಸಹೋದರ ಮಹೇಶ್ ದೂರು ನೀಡಿದ್ದಾರೆ. ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಆರೋಪದಡಿ ಬೆಂಗಳೂರು ಗಾಲ್ಫ್ ಕ್ಲಬ್‌ನ ಬೋಪಯ್ಯ, ಸುರೇಶ್ ಚಂದ್ರ ಹಾಗೂ ಉಲ್ಲಾಸ್ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ’ ಎಂದು ಮೂಲಗಳು ತಿಳಿಸಿವೆ.

**ಬಡತನದ ಕುಟುಂಬ, ಅರೆಕಾಲಿಕ ಕೆಲಸ:** ‘ನಂಜುಂಡಸ್ವಾಮಿ ಅವರದ್ದು ಬಡತನದ ಕುಟುಂಬ. ಗಾಲ್ಫ್ ಕ್ಲಬ್ ಕೆಲಸದಿಂದ ಬರುತ್ತಿದ್ದ ಸಂಬಳ ಜೀವನ ನಿರ್ವಹಣೆಗೆ ಸಾಕಾಗುತ್ತಿರಲಿಲ್ಲ. ಅರೆಕಾಲಿಕವಾಗಿ ರ‍್ಯಾಪಿಡೊ ಕಂಪನಿ ಡೆಲಿವರಿ ಬಾಯ್ ಕೆಲಸ ಮಾಡುತ್ತಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

## ಅಪರಾಧ ಸುದ್ದಿ

‘ಜುಲೈನಲ್ಲಿ ವಸ್ತುವೊಂದರ ಪೂರೈಕೆ ವಿಚಾರವಾಗಿ ರ‍್ಯಾಪಿಡೊ ಕಂಪನಿ ವಿರುದ್ಧ ಗ್ರಾಹಕರೊಬ್ಬರು ಹಲಸೂರು ಗೇಟ್ ಠಾಣೆಗೆ ದೂರು ನೀಡಿದ್ದರು. ತನಿಖೆ ನಡೆಸಿದ್ದ ಪೊಲೀಸರು, ಎಲ್ಲ ಡೆಲಿವರಿ ಬಾಯ್‌ಗಳನ್ನು ವಿಚಾರಣೆಗೆ ಕರೆದಿದ್ದರು. ಅದರಂತೆ ನಂಜುಂಡಸ್ವಾಮಿ ಸಹ ವಿಚಾರಣೆಗೆ ಹೋಗಿದ್ದರು. ಅವರು ಅಮಾಯಕರಾಗಿದ್ದರಿಂದ ಪೊಲೀಸರು ವಾಪಸು ಕಳುಹಿಸಿದ್ದರು.’

‘ನಂಜುಂಡಸ್ವಾಮಿ ಪೊಲೀಸ್ ಠಾಣೆಗೆ ಹೋಗಿ ಬಂದಿದ್ದಾರೆಂಬ ಸುದ್ದಿ ತಿಳಿಯುತ್ತಿದ್ದಂತೆ ಬೆಂಗಳೂರು ಗಾಲ್ಫ್ ಕ್ಲಬ್‌ನ ಆಡಳಿತ ಮಂಡಳಿ, ಅವರನ್ನು ಕೆಲಸದಿಂದ ವಜಾ ಮಾಡಿತ್ತು. ಆಡಳಿತ ಮಂಡಳಿ ಎದುರು ಗೋಳಾಡಿದ್ದ ನಂಜುಂಡಸ್ವಾಮಿ, ‘ನಾನು ಬಡವ. ದಿಢೀರ್ ಕೆಲಸದಿಂದ ವಜಾ ಮಾಡಿದರೆ ಜೀವನ ನಡೆಸುವುದು ಕಷ್ಟವಾಗುತ್ತದೆ. ನಾನು ಯಾವುದೇ ತಪ್ಪು ಮಾಡಿಲ್ಲ. ಪೊಲೀಸರು ಕರೆದಿದ್ದಕ್ಕೆ ಠಾಣೆಗೆ ಹೋಗಿ ಬಂದಿದ್ದೇನೆ. ಬೇಕಾದರೆ ನೀವೇ ಠಾಣೆಗೆ ಹೋಗಿ ನನ್ನ ಬಗ್ಗೆ ಕೇಳಿ’ ಎಂದಿದ್ದರು. ಅಷ್ಟಾದರೂ ಆಡಳಿತ ಮಂಡಳಿಯವರು ಕೆಲಸ ನೀಡಿರಲಿಲ್ಲ. ಮರಳಿ ಕೆಲಸ ಪಡೆಯಲು ನಂಜುಂಡಸ್ವಾಮಿ ಹಲವು ಬಾರಿ ಅಲೆದಾಡಿದ್ದರು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಡಿ. 14ರಂದು ಮಧ್ಯಾಹ್ನ ಪುನಃ ಗಾಲ್ಫ್ ಕ್ಲಬ್‌ಗೆ ಹೋಗಿದ್ದ ನಂಜುಂಡಸ್ವಾಮಿ, ಕೆಲಸ ನೀಡುವಂತೆ ಗೋಳಾಡಿದ್ದರು. ಅದಕ್ಕೆ ಸ್ಪಂದಿಸದ ಆಡಳಿತ ಮಂಡಳಿ, ‘ಕೆಲಸ ಕೊಡುವುದಿಲ್ಲ. ಏನು ಬೇಕಾದರೂ ಮಾಡಿಕೊ. ನೀನು ಸತ್ತರೂ ಸಾಯಿ’ ಎಂದಿತ್ತು. ಬೇಸತ್ತ ನಂಜುಂಡಸ್ವಾಮಿ, ಸ್ಥಳದಲ್ಲೇ ಪೆಟ್ರೋಲ್ ಸುರಿದುಕೊಂಡು ಬೆಂಕಿ ಹಚ್ಚಿಕೊಂಡಿದ್ದರು. ರಕ್ಷಣೆಗೆ ಹೋಗಿದ್ದ ಕೆಲಸಗಾರರು, ಬೆಂಕಿ ಆರಿಸಿ ನಂಜುಂಡಸ್ವಾಮಿ ಅವರನ್ನು ಆಸ್ಪತ್ರೆಗೆ ದಾಖಲಿಸಿದ್ದರು. ಡಿ. 19ರಂದು ಅವರು ಮೃತಪಟ್ಟಿದ್ದಾರೆ’ ಎಂದೂ ಹೇಳಿವೆ.

ನಂಜುಂಡಸ್ವಾಮಿ ಆತ್ಮಹತ್ಯೆ ಸಂಬಂಧ ಪ್ರತಿಕ್ರಿಯೆ ಪಡೆಯಲು ಬೆಂಗಳೂರು ಗಾಲ್ಫ್ ಕ್ಲಬ್ ಆಡಳಿತ ಮಂಡಳಿಯವರು ಲಭ್ಯರಾಗಲಿಲ್ಲ.

## ಚೀನಾ ಗಡಿ ವಿವಾದ: ಕಲಾಪ ಬಹಿಷ್ಕಾರ



ನವದೆಹಲಿ (ಪಿಟಿಐ): ಭಾರತ ಮತ್ತು ಚೀನಾ ಸೇನಾ ಸಂಘರ್ಷದ ಕುರಿತು ಚರ್ಚೆಗೆ ಅವಕಾಶ ನಿರಾಕರಿಸಿದ್ದರಿಂದ ವಿರೋಧ ಪಕ್ಷಗಳು ಬಿಗಿ ಪಟ್ಟು ಹಿಡಿದಿದ್ದರಿಂದ ರಾಜ್ಯಸಭೆಯಲ್ಲಿ ಗುರುವಾರ ಕೋಲಾಹಲ ಸೃಷ್ಟಿಯಾಯಿತು. ಸಭಾಪತಿ ಜಗದೀಪ್ ಧನಕರ್ ಅವರು ತಮ್ಮ ಪೀಠಕ್ಕೆ ಶಿರಸ್ತಿ ನಿಲ್ಲದಂತೆ ಕರೆದ ಸದಸ್ಯರು ಕಲಾಪ ಬಹಿಷ್ಕರಿಸಿದರು.

'ರಾಜೀವ್ ಗಾಂಧಿ ಫೌಂಡೇಷನ್ ಚೀನಾ ರಾಯಭಾರ ಕಚೇರಿಯಿಂದ ₹1 ಕೋಟಿಗೂ ಅಧಿಕ ಮೊತ್ತ ಪಡೆದಿದೆ. ಈಗಿನ ಪರಿಸ್ಥಿತಿಗೆ ಕಾಂಗ್ರೆಸ್ ಪಕ್ಷವೇ ಕಾರಣ' ಎಂದು ಸದನದ ನಾಯಕ ಪೀಯೂಷ್ ಗೋಯಲ್ ಅವರು ಕಾಂಗ್ರೆಸ್ ವಿರುದ್ಧ ಹರಿಹಾಯ್ದರು. ವಿರೋಧ ಪಕ್ಷಗಳ ಸದಸ್ಯರೆಲ್ಲಾ ಒಗ್ಗಟ್ಟಿನಿಂದ ಅವರ ಹೇಳಿಕೆಯನ್ನು ಖಂಡಿಸಿದರು. ಸದನದ ಬಾವಿಗಿಳಿದು ಪ್ರತಿಭಟನೆ ನಡೆಸಿದರು.

ಸಭಾಪತಿ ಧನಕರ್ ಅವರು ತಮ್ಮ ಆಸನಗಳಿಗೆ ಮರಳುವಂತೆ ವಿರೋಧ ಪಕ್ಷಗಳ ಸದಸ್ಯರಲ್ಲಿ ಮನವಿ ಮಾಡಿದರು. ಸದನದ ನಾಯಕ ಹಾಗೂ ವಿರೋಧ ಪಕ್ಷದ ನಾಯಕರು ಮಧ್ಯಾಹ್ನ 1 ಗಂಟೆಗೆ ತಮ್ಮನ್ನು ಕಚೇರಿಯಲ್ಲಿ ಭೇಟಿಯಾಗುವಂತೆ ಸೂಚಿಸಿದರು. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಮಲ್ಲಿಕಾರ್ಜುನ ಖರ್ಗೆ ಅವರು ಏನೇ ಚರ್ಚೆ ನಡೆಸುವುದಿದ್ದರೂ ಸದನದಲ್ಲೇ ನಡೆಸಬೇಕು ಎಂದು ಹೇಳಿದರು.

**ಕಲಾಪ ಮುಂದೂಡಿಕೆ:** ಚೀನಾ ಜೊತೆಗಿನ ಗಡಿ ವಿವಾದದ ಕುರಿತು ಚರ್ಚೆ ನಡೆಸಬೇಕೆಂದು ವಿರೋಧ ಪಕ್ಷಗಳು ಪಟ್ಟುಹಿಡಿದ ಕಾರಣ ಲೋಕಸಭೆಯ ಕಲಾಪವನ್ನು ಕೂಡ ದಿನದ ಮಟ್ಟಿಗೆ ಮುಂದೂಡಲಾಯಿತು. ಸಂಸದರು ಮಾಸ್ಕ್ ಧರಿಸುವಂತೆ ಸ್ಪೀಕರ್ ಓಂ ಪ್ರಕಾಶ್ ಬಿರ್ಲಾ ಮತ್ತು ಸಭಾಪತಿ ಜಗದೀಪ್ ಧನಕರ್ ಅವರು ಸಲಹೆ ನೀಡಿದರು. ಸಂಸದರು ಮಾಸ್ಕ್ ಧರಿಸುವಂತೆ ಸ್ಪೀಕರ್ ಓಂ ಪ್ರಕಾಶ್ ಬಿರ್ಲಾ ಮತ್ತು ಸಭಾಪತಿ ಜಗದೀಪ್ ಧನಕರ್ ಅವರು ಸಲಹೆ ನೀಡಿದರು.

### ಕುವೆಂಪು ವಿವಿ: ಸರ್ಕಾರದ ಅನುಮತಿ ಪಡೆಯದೇ ಪದೋನ್ನತಿ, ಹೆಚ್ಚುವರಿ ವೇತನ ಕಡಿತಕ್ಕೂ ಕ್ರಮ

# 150ಕ್ಕೂ ಹೆಚ್ಚು ಸಿಬ್ಬಂದಿ ಬಡ್ತಿ ರದ್ದು

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಬೋಧಕೇತರ ಸಿಬ್ಬಂದಿಗೆ 2012ರ ನಂತರ ನೀಡಲಾಗಿದ್ದ ಬಡ್ತಿಯನ್ನು ರದ್ದು ಮಾಡಿ ಕುವೆಂಪು ವಿಶ್ವವಿದ್ಯಾಲಯ ಆದೇಶ ಹೊರಡಿಸಿದೆ.

ಸರ್ಕಾರದ ಸೂಚನೆಯಂತೆ ಬಡ್ತಿ ರದ್ದತಿ ಆದೇಶ ಹೊರಡಿಸಿರುವ ಕುಲಸಚಿವೆ ಜಿ.ಅನುರಾಧಾ ಅವರು, ಬಡ್ತಿಯ ನಂತರ ಪಾವತಿಸಲಾದ ಎಲ್ಲ ಹೆಚ್ಚುವರಿ ಹಣವನ್ನು ಸಿಬ್ಬಂದಿಯ ಮಾಸಿಕ ವೇತನದಲ್ಲಿ ಕಡಿತಗೊಳಿಸುವಂತೆ ಸೂಚಿಸಿದ್ದಾರೆ.

ವಿಶ್ವವಿದ್ಯಾಲಯದ ವಿವಿಧ ವೃಂದಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ದ್ವಿತೀಯ ದರ್ಜೆ ಸಹಾಯಕರು, ಪ್ರಥಮ ದರ್ಜೆ ಸಹಾಯಕರು, ಹಿರಿಯ ಸಹಾಯಕರು, ಕಿರಿಯ ಎಂಜಿನಿಯರ್, ಅಧೀಕ್ಷಕರು ಸೇರಿ 150ಕ್ಕೂ ಹೆಚ್ಚು ಸಿಬ್ಬಂದಿಗೆ ಬಡ್ತಿ ನೀಡಲಾಗಿತ್ತು. ಸಿಬ್ಬಂದಿಗೆ ಬಡ್ತಿ ನೀಡಲು ಸಿದ್ಧಪಡಿಸಿದ ಪಟ್ಟಿಗೆ ವಿಶ್ವವಿದ್ಯಾಲಯದ ಪ್ರಾಧಿಕಾರಗಳಾದ ಸಿಂಡಿಕೇಟ್, ವಿದ್ಯಾವಿಷಯಕ ಪರಿಷತ್, ಹಣಕಾಸು ಸಮಿತಿಗಳ ಅನುಮೋದನೆ ಪಡೆದು ರಾಜ್ಯಪಾಲರ ಅಂಕಿತಕ್ಕಾಗಿ ಉನ್ನತ ಶಿಕ್ಷಣ ಇಲಾಖೆಗೆ ಕಳುಹಿಸಲಾಗಿತ್ತು.

ಸರ್ಕಾರ ಅನುಮೋದನೆ ನೀಡುವ ಮೊದಲೇ ಆಕ್ಷೇಪ ವ್ಯಕ್ತವಾದರೆ ಬಡ್ತಿ ಹಿಂದಕ್ಕೆ ಪಡೆಯುವ ಷರತ್ತಿಗೆ ಒಳಪಡಿಸಿ ಎಲ್ಲರಿಗೂ ಬಡ್ತಿ ನೀಡಲಾಗಿತ್ತು. ಅತ್ತ ಅನುಮೋದನೆಗೆ ಕಳುಹಿಸಿದ್ದ ಕಡತಗಳು ಪರಿಶೀಲನೆಯ ಹಂತದಲ್ಲೇ ಉಳಿದಿವೆ.

ರಾಜ್ಯ ಸರ್ಕಾರ ಈಚೆಗೆ ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳಿಗೂ ಸುತ್ತೋಲೆಯೊಂದನ್ನು ಹೊರಡಿಸಿದೆ. ನೌಕರರಿಗೆ ನೀಡುವ ಯಾವುದೇ ಬಡ್ತಿ ಮತ್ತಿತರ ಸೇವಾ ಸೌಲಭ್ಯಗಳನ್ನು ಸರ್ಕಾರದ ಅನುಮೋದನೆ ಪಡೆದ ನಂತರವೇ ನೀಡಬೇಕು. ಬಡ್ತಿ ನೀಡುವಾಗ ಮೀಸಲಾತಿ ನಿಯಮ ಪಾಲನೆಯಾಗಬೇಕು. ನಿಯಮಾನುಸಾರ ಹುದ್ದೆಗಳನ್ನು ಸೃಜನ ಮಾಡದೆ, ಪರಿನಿಯಮಾವಳಿಗಳನ್ನು ರಚಿಸಿಕೊಳ್ಳದೆ ನೇಮಕಾತಿ, ಬಡ್ತಿ, ಹುದ್ದೆಗಳ ಉನ್ನತೀಕರಣ ಮಾಡಬಾರದು. ಹಾಗೆ ಮಾಡಿ ಆರ್ಥಿಕ ನಷ್ಟವಾದರೆ ನಿರ್ಧಾರ ತೆಗೆದುಕೊಂಡ ಕುಲಪತಿ, ಕುಲಸಚಿವರು, ಹಣಕಾಸು ಅಧಿಕಾರಿ, ನೌಕರರನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು. ಕಾನೂನು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಸುತ್ತೋಲೆಯಲ್ಲಿ ವಿವರಿಸಲಾಗಿದೆ.

ಕುವೆಂಪು ವಿಶ್ವವಿದ್ಯಾಲಯದ ಬಡ್ತಿ ಕುರಿತಂತೆ ಸರ್ಕಾರ ಮತ್ತೊಂದು ಪ್ರತ್ಯೇಕ ಸುತ್ತೋಲೆ ಹೊರಡಿಸಿದ್ದು, ವಿಶ್ವವಿದ್ಯಾಲಯದ ಸಂಪೂರ್ಣ ಆಡಳಿತ ವಿಭಾಗ, ಅಧಿಕಾರ, ಸಿಬ್ಬಂದಿ ಹುದ್ದೆಗಳ ವಿವರ ಕೇಳಿದೆ. ಪೂರ್ವಾನುಮತಿ ಇಲ್ಲದೇ ಹುದ್ದೆಗಳನ್ನು ಸೃಜಿಸಿದ್ದರೆ, ಉನ್ನತೀಕರಿಸಿದ್ದರೆ ತಕ್ಷಣ ರದ್ದುಗೊಳಿಸುವಂತೆ ಸೂಚಿಸಿದೆ. ಸರ್ಕಾರದ ಪೂರ್ವಾನುಮತಿ ಪಡೆಯದೇ ಬಡ್ತಿ ನೀಡಿದ್ದ ಕಾರಣ ವಿಶ್ವವಿದ್ಯಾಲಯ ಹಿಂದೆ ಹೊರಡಿಸಿದ್ದ ಬಡ್ತಿ ಆದೇಶಗಳನ್ನೇ ರದ್ದು ಮಾಡಿದೆ. ಸರ್ಕಾರದ ಅನುಮೋದನೆ ದೊರೆತ ನಂತರ ಬಡ್ತಿ, ವೇತನ ನಗದೀಕರಣ ಆದೇಶಗಳನ್ನು ಪುನರ್ ಪರಿಶೀಲನೆ ಮಾಡುವ ಭರವಸೆ ನೀಡಿದೆ.

**ಹೊಂದಿಕೆಯಾಗದ ತಾಳೆ; ವೇತನಕ್ಕೆ ತಡೆ**

ವಿಶ್ವವಿದ್ಯಾಲಯಕ್ಕೆ ಮಂಜೂರಾದ ಹುದ್ದೆಗಳು, ಬಡ್ತಿ ನೀಡಲು ಸೃಜಿಸಿದ ಹುದ್ದೆಗಳ ಸಂಖ್ಯೆಗೂ ತಾಳೆಯಾಗದ ಖಜಾನೆಯಲ್ಲಿ ವೇತನಗಳ ಬಿಲ್ ತಡೆಹಿಡಿಯಲಾಗಿದೆ.

ಅಧಿಕಾರಿಗಳು, ಸಿಬ್ಬಂದಿಯ ಹುದ್ದೆ, ವೇತನ ಶ್ರೇಣಿ ಸಹಿತ ಎಲ್ಲ ವಿವರಗಳನ್ನು ಎಚ್‌ಆರ್‌ಎಂಎಸ್‌ಗೆ ದಾಖಲಿಸಲಾಗಿದೆ. ಸರ್ಕಾರದ ಅನುಮತಿ ಪಡೆಯದೆ ಬಡ್ತಿ ನೀಡಿರುವ ಕಾರಣ ವ್ಯತ್ಯಾಸ ಸರಿಪಡಿಸಲು ಸಾಧ್ಯವಾಗಿಲ್ಲ. ಹಾಗೆ ಸಲ್ಲಿಸಲು ಬಡ್ತಿ ರದ್ದತಿ ನಿರ್ಧಾರ ಅನಿವಾರ್ಯವಾಗಿತ್ತು ಎನ್ನುತ್ತವೆ ವಿಶ್ವವಿದ್ಯಾಲಯದ ಮೂಲಗಳು.

**ಸರ್ಕಾರದ ಅನುಮೋದನೆ ದೊರೆಯದ ಬಡ್ತಿ ಆದೇಶ ರದ್ದು ಮಾಡಲಾಗಿದೆ. ಅನುಮೋದನೆ ನಂತರ ಪುನರ್ ಆದೇಶ ಹೊರಡಿಸಲು ಕ್ರಮ ಕೈಗೊಳ್ಳಲಾಗುವುದು**

ಜಿ.ಅನುರಾಧಾ, ಕುಲಸಚಿವೆ, ಕುವೆಂಪು ವಿಶ್ವವಿದ್ಯಾಲಯ

ಪ್ರಜಾವಾಣಿ ವಿಶೇಷ

## ಸುದ್ದಿ 2 ನಿಮಿಷ

### ಎಸ್‌.ಕೆ.ಬಸವರಾಜನ್‌ಗೆ ಜಾಮೀನು

ಬೆಂಗಳೂರು: ಪೋಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ) ಮತ್ತು ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ಮೇಲಿನ ದೌರ್ಜನ್ಯ ತಡೆ ಕಾಯ್ದೆ ಅನ್ವಯ ಜೈಲಿನಲ್ಲಿರುವ ಚಿತ್ರದುರ್ಗ ಮುರುಘಾ ಮಠದ ಪೀಠಾಧಿಪತಿ ಶಿವಮೂರ್ತಿ ಮುರುಘಾ ಶರಣರ ವಿರುದ್ಧ ಕ್ರಿಮಿನಲ್ ಸಂಚು ರೂಪಿಸಿದ ಆರೋಪದಡಿ ನ್ಯಾಯಾಂಗ ಬಂಧನದಲ್ಲಿದ್ದ ಮುರುಘಾ ಮಠದ ಮಾಜಿ ಆಡಳಿತಾಧಿಕಾರಿ ಹಾಗೂ ಮಾಜಿ ಶಾಸಕ ಎಸ್.ಕೆ.ಬಸವರಾಜನ್ ಅವರಿಗೆ ಹೈಕೋರ್ಟ್ ಷರತ್ತುಬದ್ಧ ಜಾಮೀನು ನೀಡಿದೆ.

ಈ ಕುರಿತಂತೆ ಎಸ್.ಕೆ. ಬಸವರಾಜನ್ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ಹೈಕೋರ್ಟ್ ರಜಾ ಕಾಲದ ಏಕಸದಸ್ಯ ನ್ಯಾಯಪೀಠದಲ್ಲಿದ್ದ ನ್ಯಾಯಮೂರ್ತಿ ಎಸ್. ರಾಚಯ್ಯ ಗುರುವಾರ ಪುರಸ್ಕರಿಸಿ ಆದೇಶಿಸಿದರು.

ಅರ್ಜಿದಾರರ ಪರ ವಾದ ಮಂಡಿಸಿದ್ದ ಹಿರಿಯ ವಕೀಲ ಹಷ್ಮತ್ ಪಾಷ, 'ಅರ್ಜಿದಾರರ ವಿರುದ್ಧ ಐಪಿಸಿ ಕಲಂ 120-ಬಿ, 384, 420 ಮತ್ತು 366-ಎ ಅಡಿಯಲ್ಲಿ ಹೊರಿಸಲಾಗಿರುವ ಪ್ರಕರಣ ರಾಜಕೀಯ ದುರುದ್ದೇಶದಿಂದ ಕೂಡಿದೆ. ಬಸವರಾಜನ್ ಮನೆಯಲ್ಲಿ ಮಲಗಿದ್ದಾಗ ಪೊಲೀಸರು ರಾತ್ರೋರಾತ್ರಿ ಬಂದು ವಶಕ್ಕೆ ಪಡೆದುಕೊಂಡು ಹೋಗಿ ನಂತರ ಎಫ್ಐಆರ್ ದಾಖಲಿಸಿದ್ದಾರೆ. ಆರೋಪಿ ಮುರುಘಾ ಶರಣರು ಗಂಭೀರವಾದ ಪೋಕ್ಸೊ ಪ್ರಕರಣದಲ್ಲಿ ಸಿಲುಕಿರುವ ಕಾರಣ ಬಸವರಾಜನ್ ವಿರುದ್ಧ ಉದ್ದೇಶಪೂರ್ವಕವಾಗಿ ಸುಳ್ಳುಗಳಿಂದ ಕೂಡಿದ ಪ್ರಕರಣ ದಾಖಲಿಸಿದ್ದಾರೆ. ಅಪರಾಧವೇ ನಡೆದಿಲ್ಲದಿದ್ದಾಗ ಅರ್ಜಿದಾರರನ್ನು ನ್ಯಾಯಾಂಗ ಬಂಧನದಲ್ಲಿ ಇರಿಸಿರುವುದು ಕಾನೂನು ಬಾಹಿರ. ಆದ್ದರಿಂದ, ಜಾಮೀನು ಅರ್ಜಿ ಮಾನ್ಯ ಮಾಡಬೇಕು' ಎಂದು ಕೋರಿದ್ದರು.

ಈ ವಾದವನ್ನು ಮಾನ್ಯ ಮಾಡಿದ ನ್ಯಾಯಪೀಠ ಷರತ್ತು ಬದ್ಧ ಜಾಮೀನು ಮಂಜೂರು ಮಾಡಿ ಆದೇಶಿಸಿದೆ.



### ಎಸ್ಸೆಸ್ಸೆಲ್ಸಿ: ಶುಲ್ಕ ಪಾವತಿಗೆ 29 ಕಡೆ ದಿನ

ಬೆಂಗಳೂರು: ರಾಜ್ಯದಲ್ಲಿ ಮಾರ್ಚ್, ಏಪ್ರಿಲ್‌ನಲ್ಲಿ ನಡೆಯುವ ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ಶುಲ್ಕ ಪಾವತಿಸಲು ಡಿ.29ರವರೆಗೆ ಅವಕಾಶ ಕಲ್ಪಿಸಲಾಗಿದೆ.

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ಜಾಲತಾಣದ ಲಾಗಿನ್ ಮೂಲಕ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕದ ಚಲನ್ ಮುದ್ರಿಸಿಕೊಳ್ಳಲು ಡಿ.21ರಿಂದ 27ರವರೆಗೆ ಸಮಯ ನಿಗದಿ ಮಾಡಲಾಗಿದೆ. ಚಲನ್ ಮುದ್ರಿಸಿಕೊಂಡ ನಂತರ ಬ್ಯಾಂಕ್‌ಗೆ ಪರೀಕ್ಷಾ ಶುಲ್ಕ ಜಮೆ ಮಾಡಬೇಕು. ಎಲ್ಲ ದಾಖಲೆಗಳನ್ನು ಮಂಡಳಿಗೆ ಜ. 6ರ ಒಳಗೆ ಸಲ್ಲಿಸಬೇಕು ಎಂದು ಮಂಡಳಿಯ ಪರೀಕ್ಷೆಗಳ ವಿಭಾಗದ ನಿರ್ದೇಶಕ ಎಚ್.ಎನ್.ಗೋಪಾಲಕೃಷ್ಣನ್ ಮಾಹಿತಿ ನೀಡಿದ್ದಾರೆ. ಪರೀಕ್ಷೆಗಳು ಮಾರ್ಚ್ 31ರಿಂದ ಏಪ್ರಿಲ್ 15ರವರೆಗೆ ನಡೆಯಲಿವೆ.

## ಶಿಕ್ಷಕನಿಂದ ಹಲ್ಲೆ: ಗಾಯಾಳು ಶಿಕ್ಷಕಿ ಗೀತಾ ಸಾವು

ಪ್ರಜಾವಾಣಿ ವಾರ್ತೆ



ಹುಬ್ಬಳ್ಳಿ: ಅತಿಥಿ ಶಿಕ್ಷಕ ಮುತ್ತಪ್ಪ ಹಡಗಲಿ ಎಂಬುವನಿಂದ ತೀವ್ರ ಹಲ್ಲೆಗೊಳಗಾಗಿ ನಗರದ ಕಿಮ್ಸ್ ಆಸ್ಪತ್ರೆಗೆ ದಾಖಲಾಗಿದ್ದ, ಗದಗ ಜಿಲ್ಲೆ ನರಗುಂದ ತಾಲ್ಲೂಕಿನ ಹದ್ಲಿ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯ ಅತಿಥಿ ಶಿಕ್ಷಕಿ ಗೀತಾ ಬಾರಕೇರ (34) ಗುರುವಾರ ಮೃತಪಟ್ಟಿದ್ದಾರೆ.

'ತಲೆಗೆ ಬಲವಾದ ಪೆಟ್ಟು ಬಿದ್ದಿದ್ದರಿಂದ ಗೀತಾ ಅವರನ್ನು ಮೂರು ದಿನಗಳ ಹಿಂದೆ ಕಿಮ್ಸ್‌ಗೆ ದಾಖಲಿಸಲಾಗಿತ್ತು. ತೀವ್ರ ನಿಗಾ ಘಟಕದಲ್ಲಿ ವೆಂಟಿಲೇಟರ್ ಅಳವಡಿಸಿ ಚಿಕಿತ್ಸೆ ನೀಡಲಾಗುತ್ತಿತ್ತು' ಎಂದು ಕಿಮ್ಸ್ ವೈದ್ಯಕೀಯ ಅಧೀಕ್ಷಕ ಡಾ. ಅರುಣಕುಮಾರ್ ಸಿ. ತಿಳಿಸಿದರು.

'ಗುರುವಾರ ಬೆಳಿಗ್ಗೆ 11ರ ಸುಮಾರಿಗೆ ಗೀತಾ ಮೃತಪಟ್ಟಿದ್ದಾರೆ. ಮರಣೋತ್ತರ ಪರೀಕ್ಷೆ ನಡೆಸಿ ಕುಟುಂಬದವರಿಗೆ ಶವ ಹಸ್ತಾಂತರಿಸಲಾಗಿದೆ' ಎಂದರು.

ಗುರುವಾರ ರಾತ್ರಿ ಹದ್ಲಿ ಗ್ರಾಮದಲ್ಲಿ ಅಂತ್ಯಕ್ರಿಯೆ ನಡೆಯಿತು.

ಗೀತಾ ಮತ್ತು ಅದೇ ಶಾಲೆಯಲ್ಲಿ 4ನೇ ತರಗತಿ ಓದುತ್ತಿದ್ದ ಅವರ ಪುತ್ರ ಭರತ ಬಾರಕೇರ ಹಾಗೂ ಸಹ ಶಿಕ್ಷಕ ಸಂಗನಗೌಡ ಪಾಟೀಲ ಅವರ ಮೇಲೆ, ಆರೋಪಿ ಮುತ್ತಪ್ಪ ಹಡಗಲಿ ಡಿ.19ರಂದು ಸಲಿಕೆಯ ಕಾವಿನಿಂದ ಮನಬಂದಂತೆ ಹಲ್ಲೆ ನಡೆಸಿದ್ದ. ಗಂಭೀರವಾಗಿ ಗಾಯಗೊಂಡಿದ್ದ ಭರತ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗ ಮಧ್ಯೆ ಮೃತಪಟ್ಟಿದ್ದ. ಗೀತಾ ಅವರನ್ನು ಕಿಮ್ಸ್‌ಗೆ ದಾಖಲಿಸಲಾಗಿತ್ತು.

## ಮೂಡ್ನಾಕೂಡು, ದಂಡಾವತಿಗೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿ


ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಸಾಹಿತ್ಯ ಅಕಾಡೆಮಿಯ ಈ ವರ್ಷದ ಪುಸ್ತಕ ಪ್ರಶಸ್ತಿಗೆ ಕನ್ನಡದ ಸಾಹಿತಿ ಡಾ.ಮೂಡ್ನಾಕೂಡು ಚಿನ್ನಸ್ವಾಮಿ ಅವರ 'ಬಹುತ್ವದ ಭಾರತ ಮತ್ತು ಬೌದ್ಧ ತಾತ್ತ್ವಿಕತೆ' ಕೃತಿಯು ಆಯ್ಕೆಯಾಗಿದೆ. ಅನುವಾದ ಪ್ರಶಸ್ತಿಗೆ ಪತ್ರಕರ್ತ ಪದ್ಮರಾಜ ದಂಡಾವತಿ ಅವರು ಅನುವಾದಿಸಿದ 'ಸೀತಾ: ರಾಮಾಯಣದ ಸಚಿತ್ರ ಮರುಕಥನ' ಕೃತಿ ಆಯ್ಕೆಯಾಗಿದೆ.

ಮುಖ್ಯ ಪ್ರಶಸ್ತಿಯು ₹1 ಲಕ್ಷ ನಗದು ಹಾಗೂ ಪ್ರಶಸ್ತಿ ಪತ್ರ ಒಳಗೊಂಡಿದ್ದರೆ ಅನುವಾದ ಪ್ರಶಸ್ತಿ ₹50 ಸಾವಿರ ಹಾಗೂ ಪ್ರಶಸ್ತಿ ಪತ್ರ ಒಳಗೊಂಡಿದೆ.



ಚಿನ್ನಸ್ವಾಮಿ



ದಂಡಾವತಿ

'ಬಹುತ್ವದ ಭಾರತ ಮತ್ತು ಬೌದ್ಧ ತಾತ್ತ್ವಿಕತೆ' ಕೃತಿಯು ವಿವಿಧ ಪ್ರಬಂಧಗಳ ಸಂಕಲನವಾಗಿದ್ದು ಇದನ್ನು ಗದಗದ ಲಡಾಯಿ ಪ್ರಕಾಶನ ಪ್ರಕಟಿಸಿದೆ. ಪದ್ಮರಾಜ ದಂಡಾವತಿ ಅವರು ದೇವದತ್ತ ಪಟ್ಟನಾಯಕ ಅವರ 'ಸೀತಾ' ಕೃತಿಯನ್ನು ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದಿಸಿದ್ದು ಧಾರವಾಡದ ಮನೋಹರ ಗ್ರಂಥಮಾಲೆಯು ಪ್ರಕಟಿಸಿದೆ.

ಸಾಹಿತ್ಯ ಅಕಾಡೆಮಿಯ ಕನ್ನಡ ವಿಭಾಗದ ಸಂಚಾಲಕ ಡಾ.ಸರಜೂ ಕಾಟ್ಕರ್ ಉಸ್ತುವಾರಿಯಲ್ಲಿ ಈ ಪ್ರಶಸ್ತಿ ಆಯ್ಕೆ ನಡೆಯಿತು. ಅನುವಾದ ಆಯ್ಕೆ ಸಮಿತಿಯ ಜ್ಯೂರಿಗಳಾಗಿ ಜಗದೀಶ್ ಕೊಪ್ಪ, ಕಮಲಾಕರ ಭಟ್ಟ ಹಾಗೂ ಮೋಹನ್ ಕುಂಟಾರ್ ಕೆಲಸ ನಿರ್ವಹಿಸಿದ್ದರೆ ಮುಖ್ಯ ಪ್ರಶಸ್ತಿ ಆಯ್ಕೆ ಸಮಿತಿಗೆ ಡಾ.ಸಿ. ನಾಗಣ್ಣ, ಪದ್ಮರಾಜ ದಂಡಾವತಿ ಹಾಗೂ ಚಂದ್ರಶೇಖರ ವಸ್ತ್ರದ ಜ್ಯೂರಿಗಳಾಗಿದ್ದರು.

ನವದೆಹಲಿಯಲ್ಲಿ 2023ರ ಮಾರ್ಚ್ ತಿಂಗಳಲ್ಲಿ ನಡೆಯುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

### 'ಕೊವೊವ್ಯಾಕ್ಸ್': ಅನುಮತಿಗೆ ಅರ್ಜಿ

ನವದೆಹಲಿ (ಪಿಟಿಐ): ಕೋವಿಶೀಲ್ಡ್ / ಕೋವ್ಯಾಕ್ಸಿನ್ ಪಡೆದ, 18 ವರ್ಷಕ್ಕಿಂತ ಮೇಲ್ಪಟ್ಟವರಿಗೆ ಮುನ್ನೆಚ್ಚರಿಕೆ ಡೋಸ್ ಆಗಿ 'ಕೊವೊವ್ಯಾಕ್ಸ್' ನೀಡಲು ಎಸ್‌ಎಸ್‌ಐ, ಡಿಸಿಜಿಐ ಅನುಮತಿ ಕೋರಿ ಗುರುವಾರ ಅರ್ಜಿ ಸಲ್ಲಿಸಿದೆ.



## ಜಯಂತಿಗಳಲ್ಲೂ ತಾರತಮ್ಯ: ನಂಜುಂಡಿ ಆಕ್ರೋಶ

ಬೆಳಗಾವಿ: 'ವಿಶ್ವಕರ್ಮರಂತಹ ಸಣ್ಣ ಸಮುದಾಯಗಳಿಗೆ ಸೇರಿದ ಮಹನೀಯರ ಜಯಂತಿ ಆಚರಣೆ ಸಂದರ್ಭಗಳಲ್ಲಿ ತಾರತಮ್ಯ ಮಾಡಲಾಗುತ್ತಿದೆ' ಬಿಜೆಪಿ ಸದಸ್ಯ ಕೆ.ಪಿ. ನಂಜುಂಡಿ ವಿಧಾನ ಪರಿಷತ್‌ನಲ್ಲಿ ಗುರುವಾರ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ನಿಯಮ-72ರ ಅಡಿಯಲ್ಲಿ ಈ ವಿಷಯ ಪ್ರಸ್ತಾಪಿಸಿದ ಅವರು, 'ಬಲಿಷ್ಠ ಸಮುದಾಯಗಳಿಗೆ ಸೇರಿದ ಕೆಂಪೇಗೌಡ, ಬಸವೇಶ್ವರ, ವಾಲ್ಮೀಕಿ ಜಯಂತಿಗಳನ್ನು ಅದ್ದೂರಿಯಾಗಿ ಸಂಭ್ರಮದಿಂದ ಆಚರಿಸಲಾಗುತ್ತಿದೆ. ಆದರೆ, ಸಣ್ಣ, ಸಣ್ಣ ಸಮುದಾಯಗಳ ಜಯಂತಿ ಆಚರಣೆಗೆ ಸರ್ಕಾರ ತಾತ್ಸಾರ ತೋರುತ್ತಿದೆ. ಸಚಿವರು ಸಹ ಜಯಂತಿಗಳಲ್ಲಿ ಭಾಗವಹಿಸುವುದಿಲ್ಲ' ಎಂದು ಹೇಳಿದರು.

'ನಿರ್ಲಕ್ಷಿತ ಸಮಾಜದವರ ಜಯಂತಿಗಳಲ್ಲಿ ಕೆಲವು ಕಿರಿಯ ಅಧಿಕಾರಿಗಳು ಮಾತ್ರ ಭಾಗವಹಿಸುತ್ತಾರೆ. ಅವರಿಗೆ ಸರಿಯಾಗಿ ಮಾಹಿತಿಯೂ ಇರುವುದಿಲ್ಲ. ನಾವು ಹಣ ಸಂಗ್ರಹಿಸಿ ಕಾರ್ಯಕ್ರಮಗಳನ್ನು ಮಾಡುತ್ತೇವೆ. ಆದರೆ, ನಮಗೆ ಕೊಡಬೇಕಾದ ಗೌರವವನ್ನಾದರೂ ಕೊಡಿ' ಎಂದು ಅಳಲು ತೋಡಿಕೊಂಡರು.

ಸಭಾಪತಿ ಬಸವರಾಜ ಹೊರಟ್ಟಿ ಪ್ರತಿಕ್ರಿಯಿಸಿ, 'ನಂಜುಂಡಿ ಅವರ ನೋವು ಅರ್ಥ ಮಾಡಿಕೊಳ್ಳಿ. ಜಯಂತಿಗಳು ಸಮರ್ಪಕವಾಗಿ ನಡೆಯಬೇಕು ಮತ್ತು ಸಚಿವರು ಭಾಗವಹಿಸಬೇಕು ಎಂದು ಸುತ್ತೋಲೆ ಹೊರಡಿಸಿ' ಎಂದು ಸಭಾನಾಯಕ ಕೋಟ ಶ್ರೀನಿವಾಸ ಪೂಜಾರಿ ಅವರಿಗೆ ಸೂಚಿಸಿದರು.

**ಕರ್ನಾಟಕ್ಕೆ ಜಗ್ಗಿ ವಾಸುದೇವ್ ಕೊಡುಗೆ ಏನು?**

'197 ಕಾಯಕ ಸಮಾಜಗಳ ಬಗ್ಗೆ ಸರ್ಕಾರ ಗಮನಹರಿಸುವುದಿಲ್ಲ. ಆದರೆ, ಜಗ್ಗಿ ವಾಸುದೇವ್ ಅವರಿಗೆ ₹100 ಕೋಟಿ ಕೊಡುತ್ತೀರಿ. ಅವರು ಕರ್ನಾಟಕಕ್ಕೆ ಏನು ಕೊಡುಗೆ ಕೊಟ್ಟಿದ್ದಾರೆ' ಎಂದು ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಚರ್ಚೆಯ ಸಂದರ್ಭದಲ್ಲಿ ದೂರಿದರು. 'ಬಾಬಾ ರಾಮದೇವ್ ಸಹ ಒಬ್ಬ ವ್ಯಾಪಾರಿಯಾಗಿದ್ದಾರೆ. ಮಹಿಳೆಯರ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿದ್ದಾರೆ. ಹೀಗಾಗಿ, ಅವರ ಬಗ್ಗೆ ಏಕವಚನದಲ್ಲಿ ಮಾತನಾಡುತ್ತೇನೆ' ಎಂದರು.

## ಸಿಎಟಿ: ಪುರುಷ ಅಭ್ಯರ್ಥಿಗಳ ಪಾರುಪತ್ಯ


ಬೆಂಗಳೂರು: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ (ಐಐಎಂ) 2022ನೇ ಸಾಲಿನ ಸಾಮಾನ್ಯ ದಾಖಲಾತಿ ಪರೀಕ್ಷೆಯ (ಸಿಎಟಿ) ಫಲಿತಾಂಶ ಪ್ರಕಟಿಸಿದ್ದು, ಪುರುಷ ಅಭ್ಯರ್ಥಿಗಳೇ ಮೇಲುಗೈ ಸಾಧಿಸಿದ್ದಾರೆ.

ದೆಹಲಿ, ಮಹಾರಾಷ್ಟ್ರ, ತೆಲಂಗಾಣದ ತಲಾ ಇಬ್ಬರು, ಗುಜರಾತ್, ಹರಿಯಾಣ, ಕೇರಳ, ಮಧ್ಯಪ್ರದೇಶ, ಉತ್ತರ ಪ್ರದೇಶದ ತಲಾ ಒಬ್ಬರು ಸೇರಿದಂತೆ 11 ಅಭ್ಯರ್ಥಿಗಳು 100 ಪರ್ಸಂಟೈಲ್ ಗಳಿಸಿದ್ದಾರೆ. 100 ಪರ್ಸಂಟೈಲ್ ಗಳಿಸಿದ ಎಲ್ಲರೂ ಪುರುಷ ಅಭ್ಯರ್ಥಿಗಳು ಎನ್ನುವುದು ಈ ಬಾರಿಯ ಫಲಿತಾಂಶದ ವಿಶೇಷ.

ಕರ್ನಾಟಕದ ಇಬ್ಬರು ಸೇರಿದಂತೆ 22 ಅಭ್ಯರ್ಥಿಗಳು 99.99 ಪರ್ಸಂಟೈಲ್ ಗಳಿಸಿದ್ದಾರೆ. ಅವರಲ್ಲಿ 21 ಅಭ್ಯರ್ಥಿಗಳು ಪುರುಷರು, ಒಬ್ಬರು ಮಹಿಳೆ. 99.98 ಪರ್ಸಂಟೈಲ್ ಅನ್ನು 22 ಅಭ್ಯರ್ಥಿಗಳು ಗಳಿಸಿದ್ದು, ಅವರಲ್ಲಿ 19 ಪುರುಷರು ಇದ್ದಾರೆ.

2.22 ಲಕ್ಷ ಅಭ್ಯರ್ಥಿಗಳು ಪರೀಕ್ಷೆ ಬರೆದಿದ್ದರು. ಅವರಲ್ಲಿ ಶೇ 35 ಮಹಿಳೆಯರು, ಶೇ 65ರಷ್ಟು ಪುರುಷರು ಇದ್ದರು. ಐಐಎಂ ಹೊರತುಪಡಿಸಿ ದೇಶದ 90ಕ್ಕೂ ಹೆಚ್ಚು ಸಂಸ್ಥೆಗಳು ಸಿಎಟಿ ಫಲಿತಾಂಶದ ಆಧಾರದ ಮೇಲೆ ವಿದ್ಯಾರ್ಥಿಗಳಿಗೆ ಪ್ರವೇಶ ನೀಡುತ್ತಿವೆ. ಹೆಚ್ಚಿನ ಮಾಹಿತಿಗೆ ವಿದ್ಯಾರ್ಥಿಗಳು www.iimcat.ac.in ವೀಕ್ಷಿಸಬಹುದು.

## ಸಹಕಾರ ಧುರೀಣ ಎನ್‌.ಎಸ್‌. ಹೆಗಡೆ ಕುಂದರ್ಗಿ ನಿಧನ



ಯಲ್ಲಾಪುರ (ಉತ್ತರ ಕನ್ನಡ ಜಿಲ್ಲೆ): ಸಹಕಾರ ಕ್ಷೇತ್ರದ ಧುರೀಣ ಎನ್.ಎಸ್. ಹೆಗಡೆ ಕುಂದರ್ಗಿ (90) ಅಲ್ಪಕಾಲದ ಅನಾರೋಗ್ಯದಿಂದಾಗಿ ಬುಧವಾರ ರಾತ್ರಿ ನಿಧನರಾದರು. ಅವರಿಗೆ ಹುಬ್ಬಳ್ಳಿಯ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಿ, ಮನೆಗೆ ಕರೆತರಲಾಗಿತ್ತು.

ಅವರಿಗೆ ಪುತ್ರ, ಇಬ್ಬರು ಪುತ್ರಿಯರಿದ್ದಾರೆ. ತಾಲ್ಲೂಕಿನ ಕುಂದರ್ಗಿಯವರಾದ ಅವರು ಸಾಮಾಜಿಕ, ಸಹಕಾರ, ರಾಜಕೀಯ ಕ್ಷೇತ್ರಗಳಲ್ಲಿ ಗುರುತಿಸಿಕೊಂಡಿದ್ದರು. ಕುಂದರ್ಗಿ ಗ್ರಾಮದ ಅಭಿವೃದ್ಧಿಯಲ್ಲೂ ಮಹತ್ವದ ಪಾತ್ರ ವಹಿಸಿದ್ದರು.

ಅವರು ವಿವಿಧ ಸಂಘ-ಸಂಸ್ಥೆಗಳಿಂದ ಪ್ರಶಸ್ತಿ, ಗೌರವಗಳಿಗೆ ಭಾಜನರಾಗಿದ್ದರು. ಅವರ 5-6 ದಶಕಗಳ ಸಮಾಜಸೇವೆಯನ್ನು ಗುರುತಿಸಿ 2020ರಲ್ಲಿ ರಾಜ್ಯ ಸರ್ಕಾರವು 'ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ' ನೀಡಿ ಗೌರವಿಸಿತ್ತು.



ವೇದ
ಶಿವರಾಜ್‌ಕುಮಾರ್

# ಈ ಪಯಣ 'ಆನಂದವೇದ'!

'1 ರಿಂದ 125ನೇ ಸಿನಿಮಾದವರೆಗೆ ಬೆಳೆಸಿದ್ದೀರಿ... ಬೆಳೆಸುತ್ತಿದ್ದೀರಿ. ಈ 125, 225 ಆಗಲಿ; 325 ಆಗಲಿ...ಯಾಕೆ ಸಾವಿರವೇ ಆಗಲಿ..ಆ ಶಕ್ತಿಯನ್ನು ದೇವರು ನನಗೆ ಕೊಡಲಿ...'

ಇತ್ತೀಚೆಗೆ ತಮ್ಮ 125ನೇ ಸಿನಿಮಾ 'ವೇದ'ದ ಸುದ್ದಿಗೋಷ್ಠಿಯಲ್ಲಿ ಹೀಗೆನ್ನುವಾಗ 60ರ ವಯಸ್ಸಿನ ಸೆಂಚುರಿ ಸ್ಟಾರ್ ಶಿವರಾಜ್‌ಕುಮಾರ್ ಅವರ ಧ್ವನಿಯಲ್ಲಿ 'ಆನಂದ್'ನ ಹುರುಪೇ ಇತ್ತು. 1986.. ಶಿವರಾಜ್‌ಕುಮಾರ್ ಅವರು ನಾಯಕನಾಗಿ ತೆರೆ ಮೇಲೆ ಹೆಜ್ಜೆ ಇಟ್ಟ ವರ್ಷ. 'ಆನಂದ್' ಯಶಸ್ಸಿನ ಬೆನ್ನಲ್ಲೇ 'ರಥಸಪ್ತಮಿ', 'ಮನಮೆಚ್ಚಿದ ಹುಡುಗಿ' ಚಿತ್ರಗಳೂ ಹಿಟ್ ಆಗಿ 'ಹ್ಯಾಟ್ರಿಕ್ ಹೀರೊ' ಆದ ಚಂದನವನದ 'ಶಿವಣ್ಣ', ಮೊದಲ ಸಿನಿಮಾ ಬಿಡುಗಡೆ ವೇಳೆ ಇದ್ದ ಭಯವನ್ನೇ ಈಗಲೂ ಹೊಂದಿದ್ದಾರಂತೆ!

'ಮುಂದಿನ ಫೆಬ್ರುವರಿ ಬಂದರೆ ನನ್ನ ಸಿನಿಪಯಣದ 37ನೇ ವರ್ಷ. ಇಷ್ಟು ವರ್ಷದ ಅನುಭವವಿದ್ದರೂ ಹೊಸ ಸಿನಿಮಾ ಬಿಡುಗಡೆಯ ಸಂದರ್ಭದಲ್ಲಿ ಭಯ ಇದ್ದೇ ಇದೆ. ಏಕೆಂದರೆ ಪ್ರತೀ ಸಿನಿಮಾವೂ ಒಂದು ಪರೀಕ್ಷೆಯಂತೆ. ಅದರಲ್ಲೂ 'ವೇದ' ನಮ್ಮ ಹೋಂ ಪ್ರೊಡಕ್ಷನ್‌ನ ಮೊದಲ ಸಿನಿಮಾ' ಎನ್ನುತ್ತಾರೆ ಶಿವರಾಜ್‌ಕುಮಾರ್.

> ತಮ್ಮ 36 ವರ್ಷದ ಸಿನಿಪಯಣದಲ್ಲಿ ಸೆಂಚುರಿ ಹೊಡೆದು ಮುನ್ನುಗ್ಗುತ್ತಿರುವ ನಟ ಶಿವರಾಜ್‌ಕುಮಾರ್ 125ನೇ ಸಿನಿಮಾ ಸಂಭ್ರಮದಲ್ಲಿದ್ದಾರೆ. 'ವೇದ' ಸಿನಿಮಾ ಬಿಡುಗಡೆ ಸಂದರ್ಭದಲ್ಲಿ ಹಳೆಯ ನೆನಪುಗಳತ್ತ ಹೊರಳುತ್ತಾ ಹೊಸ ಕನಸನ್ನು ಸೆಂಚುರಿ ಸ್ಟಾರ್ ಬಿಚ್ಚಿಟ್ಟಿದ್ದು ಹೀಗೆ...

**ಈ ಪಯಣ 'ಆನಂದವೇದ':** 'ನನ್ನ ಈ ಸಿನಿಪಯಣದಲ್ಲಿ ಅಪ್ಪಾಜಿ, ಅಮ್ಮ, ವರದಣ್ಣ, ಚಿ.ಉದಯ್‌ಶಂಕರ್, ಸಿಂಗೀತಂ ಶ್ರೀನಿವಾಸರಾವ್ ಮುಂತಾದವರು ನಮ್ಮನ್ನು ಬೆಳೆಸಿ ದಾರಿತೋರಿಸಿದರೆ ಸಾಕಷ್ಟು ನಿರ್ದೇಶಕರು, ಛಾಯಾಗ್ರಾಹಕರು, ನೃತ್ಯ ನಿರ್ದೇಶಕರು ಈ ದಾರಿಯಲ್ಲಿ ಕೈಹಿಡಿದಿದ್ದಾರೆ. ನನ್ನ ಮೊದಲನೇ ಸಿನಿಮಾ 'ಆನಂದ್' ಅನ್ನು ಅಮ್ಮ ಪಾರ್ವತಮ್ಮ ರಾಜ್‌ಕುಮಾರ್ ಅವರು ನಿರ್ಮಾಣ ಮಾಡಿದ್ದರು. 125ನೇ ಸಿನಿಮಾ 'ವೇದ'ವನ್ನು ಪತ್ನಿ ಗೀತಾ ನಿರ್ಮಾಣ ಮಾಡಿದ್ದಾರೆ. ನನ್ನ ತಾಯಿ ಹಾಗೂ ಪತ್ನಿ ನನ್ನೆರಡು ಕಣ್ಣಿದ್ದಂತೆ. ಆನಂದ್ ಸಿನಿಮಾದಿಂದ ವೇದ ಸಿನಿಮಾದವರೆಗೂ ನನ್ನ ಸಿನಿಪಯಣ 'ಆನಂದವೇದ'ವಾಗಿದೆ ಎಂದು ಭಾವಿಸುತ್ತೇನೆ' ಎನ್ನುತ್ತಾ ಕ್ಷಣಕಾಲ ಹಳೆನೆನಪುಗಳತ್ತ ಹೆಜ್ಜೆಹಾಕುತ್ತಾರೆ.

**ಗೀತಾಳಲ್ಲಿ ಅಮ್ಮನ ಗುಣ:** 'ವೇದ ಸಿನಿಮಾವನ್ನು ಬೇರೊಬ್ಬರು ನಿರ್ಮಾಣ ಮಾಡಬೇಕಿತ್ತು. ಆದರೆ ಕೋವಿಡ್ ಕಾರಣದಿಂದ ಅವರಿಗೂ ಮಾಡಲು ಸಾಧ್ಯವಾಗಲಿಲ್ಲ. ಹೀಗಿರುವ ಸಂದರ್ಭದಲ್ಲಿ ಈ ಚಿತ್ರವನ್ನು ನಮ್ಮದೇ ಬ್ಯಾನರ್‌ನಡಿ ಮಾಡಲು ನಿರ್ಧರಿಸಿದೆವು. ಗೀತಾಳಿಗೆ ಅಮ್ಮನ ಗುಣಗಳೇ ಇವೆ. ಅದು ಊಟದ ವಿಷಯದಲ್ಲೇ ಆಗಿರಲಿ ಅಥವಾ ಸಂಭಾವನೆ ವಿಚಾರದಲ್ಲೇ ಆಗಿರಲಿ, ಎಂದಿಗೂ ಯಾರಿಗೂ ಕಮ್ಮಿ ಮಾಡಿಲ್ಲ. ಇದನ್ನು ಹೇಳಲು ಹೆಮ್ಮೆ ಪಡುತ್ತೇನೆ. ಪ್ರತಿಯೊಬ್ಬರೂ ನನಗಿಂತಲೂ ಹೆಚ್ಚಾಗಿ ಗೀತಾಳನ್ನು ಇಷ್ಟಪಡುತ್ತಿದ್ದಾರೆ. ಗೀತಾ ಪಿಕ್ಚರ್ಸ್‌ನಡಿ ಕೇವಲ ನನ್ನ ಸಿನಿಮಾಗಳಷ್ಟೇ ಅಲ್ಲ, ಒಳ್ಳೆಯ ಕಥಾಹಂದರದ, ಕಂಟೆಂಟ್ ಇರುವ ಸಿನಿಮಾಗಳನ್ನು ಖಂಡಿತವಾಗಿಯೂ ಮಾಡುತ್ತೇವೆ. ಹೋಂ ಬ್ಯಾನರ್‌ನಡಿ ಒಂದು ವೆಬ್‌ಸರಣಿ ಕೂಡಾ ನಿರ್ಮಾಣ ಮಾಡುತ್ತಿದ್ದೇವೆ' ಎನ್ನುತ್ತಾರೆ ಶಿವರಾಜ್‌ಕುಮಾರ್.

**ಯಾರೀ ವೇದ?:** 'ವೇದ ಎನ್ನುವುದು ಹೆಸರಷ್ಟೇ. ಆತನ ಬಾಳು ಒಂದು ಗ್ರಂಥದ ರೀತಿಯೇ. ಪ್ರತಿಯೊಬ್ಬರ ಜೀವನದಲ್ಲಿ ಪ್ರೀತಿ, ಬಾಳು, ಸಂತೋಷ, ನಂಬಿಕೆ ಇರುತ್ತದೆ. ಇವುಗಳು 'ವೇದ' ಎಂಬ ಆ ಪಾತ್ರದ ಜೀವನದಲ್ಲಿ ಎಷ್ಟು ಆಟವಾಡುತ್ತವೆ ಎನ್ನುವುದೇ ಕಥಾಹಂದರ. ವೇದ ಎನ್ನುವ ಬೆಂಕಿಯ ಹಿಂದೆ ಒಂದು ಹೂವಿನ ಮನಸ್ಸಿದೆ' ಎನ್ನುತ್ತಾರೆ ಸೆಂಚುರಿ ಸ್ಟಾರ್.

### 'ವೇದ' ಇಂದು ತೆರೆಗೆ

ಗೀತಾ ಶಿವರಾಜ್‌ಕುಮಾರ್ ಹಾಗೂ ಜೀ ಸ್ಟುಡಿಯೋಸ್ ನಿರ್ಮಿಸಿರುವ, ಎ.ಹರ್ಷ ನಿರ್ದೇಶನದ, ನಟ ಶಿವರಾಜಕುಮಾರ್ ಅವರ 125ನೇ ಸಿನಿಮಾ 'ವೇದ' ಇಂದು(ಡಿ.23) ರಾಜ್ಯದ 304 ಚಿತ್ರಮಂದಿರಗಳ 1,216ಕ್ಕೂ ಅಧಿಕ ಪರದೆಗಳಲ್ಲಿ ಚಿತ್ರಪ್ರದರ್ಶನವಾಗಲಿದೆ. ಸಿನಿಮಾ ಕನ್ನಡ, ತೆಲುಗು ಹಾಗೂ ತಮಿಳು ಭಾಷೆಗಳಲ್ಲಿ 500ಕ್ಕೂ ಅಧಿಕ ಚಿತ್ರಮಂದಿರಗಳಲ್ಲಿ ರಿಲೀಸ್ ಆಗಲಿದೆ. ಶಿವರಾಜ್‌ಕುಮಾರ್ ಅವರು ತಮ್ಮ ಪಾತ್ರಕ್ಕೆ ತಮಿಳಲ್ಲೂ ಡಬ್ ಮಾಡಿದ್ದಾರೆ.

### 'ನೂರನೇ ಸಿನಿಮಾ ಮಾಡಬೇಕಿತ್ತು'

'ಶಿವರಾಜ್‌ಕುಮಾರ್ ಅವರ ನೂರನೇ ಚಿತ್ರವನ್ನು ನಮ್ಮ ಗೀತಾ ಪಿಕ್ಚರ್ಸ್ ಲಾಂಛನದಡಿ ನಿರ್ಮಾಣ ಮಾಡಲು ನಿರ್ಧರಿಸಿದ್ದೆವು. ಆದರೆ ಆ ಸಿನಿಮಾವನ್ನು ಪ್ರೇಮ್ ಹಾಗೂ ರಕ್ಷಿತಾ ಅವರು ನಿರ್ಮಾಣ ಮಾಡುತ್ತೇವೆ ಎಂದು ಕೇಳಿಕೊಂಡ ಕಾರಣ ಬಿಟ್ಟುಕೊಟ್ಟೆವು. ಇದಾದ ಬಳಿಕ 125ನೇ ಸಿನಿಮಾಗಾಗಿ ಕಾದೆವು' ಎಂದು ವಿವರಿಸುತ್ತಾರೆ ಗೀತಾ ಶಿವರಾಜ್‌ಕುಮಾರ್.



# 'Loveಲಿ..' ಸೆಟ್‌ಗೇ ₹1 ಕೋಟಿ!

**ನಟ** ವಸಿಷ್ಠ ಸಿಂಹ ನಟಿಸುತ್ತಿರುವ 'ಲವ್ ಲಿ' ಸಿನಿಮಾ ಸೆಟ್ಟೇರಿದ ದಿನದಿಂದಲೂ ಸದ್ದು ಮಾಡುತ್ತಿದೆ. ಹೊಸ ಸುದ್ದಿ ಏನೆಂದರೆ ಇದೀಗ ಚಿತ್ರತಂಡ ಮೂರನೇ ಹಂತದ ಚಿತ್ರೀಕರಣಕ್ಕಾಗಿ ₹1 ಕೋಟಿ ವೆಚ್ಚದ ಸೆಟ್ ನಿರ್ಮಾಣ ಮಾಡಿದೆ.

ವಸಿಷ್ಠ ಸಿಂಹ ಹಾಗೂ ಸ್ಟೆಫಿ ಪಟೇಲ್ ಜೋಡಿಯಾಗಿ ನಟಿಸುತ್ತಿರುವ 'Loveಲಿ..' ಸಿನಿಮಾದ ಮೂರನೇ ಹಂತದ ಚಿತ್ರೀಕರಣ ಕರಾವಳಿ ತೀರದಲ್ಲಿ ನಡೆಯುತ್ತಿದೆ. ಬೆಂಗಳೂರಿನಲ್ಲಿ ಮೊದಲ ಹಾಗೂ ಎರಡನೇ ಶೆಡ್ಯೂಲ್ ಮುಗಿಸಿರುವ ಚಿತ್ರತಂಡ ಮಲ್ಪೆಯ ಪಡುಕೆರೆಯಲ್ಲಿ ಮೂರನೇ ಹಂತದ ಚಿತ್ರೀಕರಣದಲ್ಲಿ ತೊಡಗಿದೆ. ಇದಕ್ಕಾಗಿ ಕಡಲ ತೀರದಲ್ಲಿ ₹1 ಕೋಟಿ ವೆಚ್ಚದಲ್ಲಿ ಮನೆಯೊಂದನ್ನು ನಿರ್ಮಾಣ ಮಾಡಲಾಗಿದೆ. ಕಮರ್ಷಿಯಲ್ ರೊಮ್ಯಾಂಟಿಕ್ ಪ್ರೇಮಕಥೆಯನ್ನು ಹೊಂದಿರುವ ಈ ಚಿತ್ರದಲ್ಲಿ ರೌಡಿಸಂ ಕಥಾಹಂದರವೂ ಅಡಕವಾಗಿದೆ. ಚೇತನ್ ಕೇಶವ್ ಆ್ಯಕ್ಷನ್ ಕಟ್ ಹೇಳಿರುವ ಈ ಚಿತ್ರದ ಶೇ 80ರಷ್ಟು ಚಿತ್ರೀಕರಣ ಪೂರ್ಣಗೊಂಡಿದ್ದು, ಕೊನೆಯ ಶೆಡ್ಯೂಲ್ ಲಂಡನ್‌ನಲ್ಲಿ ನಡೆಯಲಿದೆ. ಇದಕ್ಕಾಗಿ ಚಿತ್ರತಂಡ ಜನವರಿ ಮೊದಲ ವಾರದಲ್ಲಿ ಅತ್ತ ತೆರಳಲಿದೆ.

### ಸಿನಿಮಾತು

ಪ್ರಜಾವಾಣಿ ನೋಡಿಯೊ

ವಿಡಿಯೊ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

'ಡಾಲಿ'ಯ ವರ್ಷದ 6ನೇ ಫಿಲ್ಮ್!





ಐಎಂಡಿಬಿ ಟಾಪ್ 10 ಚಿತ್ರಗಳಲ್ಲಿ ಕನ್ನಡದ 3 ಸಿನಿಮಾ

ಶುಕ್ರವಾರ • ಡಿಸೆಂಬರ್ 23, 2022 ಪ್ರಜಾವಾಣಿ

ಸಬ್ ರಿಜಿಸ್ಟ್ರಾರ್ ಹುದ್ದೆಗೆ ಗೃಹ ಇಲಾಖೆಯವರ ಪ್ರಯತ್ನ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ

# ‘ನಿಯೋಜನೆಗೆ ಕಡಿವಾಣ: ನಿಯಮಕ್ಕೆ ತಿದ್ದುಪಡಿ’

ಪ್ರಜಾವಾಣಿ ವಾರ್ತೆ

**ಬೆಳಗಾವಿ:** ಒಂದು ಇಲಾಖೆಯಿಂದ ಮತ್ತೊಂದು ಇಲಾಖೆಗೆ ನಿಯೋಜನೆ ಮಾಡಲು ಇರುವ ಸಣ್ಣ ಕಿಂಡಿಯಲ್ಲಿ ನುಗ್ಗಲು ಎಲ್ಲರೂ ಯತ್ನ ಮಾಡುತ್ತಿದ್ದಾರೆ. ಇದಕ್ಕೆ ಕಡಿವಾಣ ಹಾಕಲು ನಿಯಮಗಳಿಗೆ ತಿದ್ದುಪಡಿ ತರಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ವಿಧಾನಪರಿಷತ್ತಿನಲ್ಲಿ ಕಾಂಗ್ರೆಸ್‌ನ ಮಂಜುನಾಥ ಭಂಡಾರಿ ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಆಡಳಿತಾತ್ಮಕ ಕಾರಣಕ್ಕೆ ಹಿಂದೆ ಅವಕಾಶ ಕಲ್ಪಿಸಲಾಗಿದೆ. ವಿಸ್ತರಿತ ಅವಧಿ ಸೇರಿದಂತೆ ನಿಯೋಜನೆಯ ಅವಧಿಯು ಎಂಟು ವರ್ಷಗಳು ಮೀರತಕ್ಕದ್ದಲ್ಲವೆಂದು ಸೂಚಿಸಲಾಗಿದೆ. ಇರುವ ಸಣ್ಣ ಕಿಂಡಿಯನ್ನೇ ಬಳಸಿಕೊಂಡು ದೊಡ್ಡ ಪ್ರಮಾಣದಲ್ಲಿ ನಿಯೋಜನೆ ನಡೆಯುತ್ತಿದೆ ಎಂದರು.

‘ಹೀಗೆ ನಿಯೋಜನೆ ಮಾಡಿಸಿಕೊಂಡವರು ಮಾತೃ ಇಲಾಖೆಯನ್ನು ಬಿಟ್ಟು ನಿಯೋಜನೆಯಾದ ಇಲಾಖೆಯಲ್ಲೇ ತಮ್ಮ ಹುದ್ದೆಯನ್ನು ವಿಲೀನಗೊಳಿಸಿಕೊಂಡಿದ್ದಾರೆ. ಇದರಿಂದಾಗಿ, ಮಾತೃ ಇಲಾಖೆಯಲ್ಲಿ ಅನೇಕ ವರ್ಷ ಕೆಲಸ ಮಾಡಿದವರಿಗೆ ಬಡ್ತಿ ಸಿಗುತ್ತಿಲ್ಲ. ನಿಯಮಗಳು ಸಡಿಲವಾಗಿರುವುದೇ ಇದಕ್ಕೆ ಕಾರಣ. ಈ ಹಿನ್ನೆಲೆಯೊಳಗೆ ನಿಯೋಜನೆಯನ್ನು ಯಾವಾಗ ಮಾಡಬೇಕು, ಎಷ್ಟು ಗರಿಷ್ಠ ಅವಧಿ ಇರಬೇಕು, ಯಾವ ಉದ್ದೇಶಕ್ಕೆ ಮಾಡಬೇಕು ಎಂಬ ಬಗ್ಗೆ ಸಮಗ್ರ ಶಿಫಾರಸು ಮಾಡುವಂತೆ ಆಡಳಿತ ಸುಧಾರಣಾ ಆಯೋಗಕ್ಕೆ ಸೂಚಿಸಿದ್ದೇನೆ. ಆಯೋಗದ ಸಲಹೆ ಆಧರಿಸಿ, ಬಿಗಿ ಮಾಡುತ್ತೇನೆ’ ಎಂದು ಅವರು ಹೇಳಿದರು.

ಪೊಲೀಸ್ ಇಲಾಖೆಗೆ ಆಯ್ಕೆಯಾದವರು ಸಬ್ ರಿಜಿಸ್ಟ್ರಾರ್ ಹುದ್ದೆಗೆ ನಿಯೋಜನೆ ಮಾಡಲು ಪ್ರಯತ್ನ ಹಾಕಿರುವುದು ಇದೆ. ಪಶುವೈದ್ಯರು ತಾಲ್ಲೂಕು ಪಂಚಾಯಿತಿ ಆಡಳಿತ ನಿರ್ವಹಣೆ ಮಾಡಲು ಹೇಗೆ ಸಾಧ್ಯವಿದೆ. ಈ ಕಾರಣದಿಂದಾಗಿಯೇ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿಯಾಗಿದ್ದ ಪಶು ಸಂಗೋಪನಾ ಇಲಾಖೆ ಅಧಿಕಾರಿಗಳನ್ನು ವಾಪಸ್ ಕಳುಹಿಸಲಾಗಿದೆ.

‘ಎಂಜಿನಿಯರ್‌ಗಳು ಬೇರೆ ಇಲಾಖೆಗಳಲ್ಲಿದ್ದಾರೆ. ಅವರನ್ನೆಲ್ಲ ಖಾಲಿ ಮಾಡಿಸುತ್ತೇನೆ. ಆದರೆ, ಹೀಗೆ ಮಾಡಲು ಹೋದರೆ ಒತ್ತಡ ತರುತ್ತಾರೆ. ಎಲ್ಲರೂ ಸಹಕಾರ ನೀಡಿದರೆ ಕಠಿಣ ಕ್ರಮ ಕೈಗೊಳ್ಳುವೆ’ ಎಂದು ಅವರು ಹೇಳಿದರು.

**ಅಂಕಿ-ಅಂಶಗಳು**

**7,69,981** ಮಂಜೂರಾದ ಹುದ್ದೆ

**5,11,272** ಭರ್ತಿಯಾಗಿರುವುದು

**2,58,709** ಖಾಲಿ ಇರುವುದು

**ಅತಿ ಹೆಚ್ಚು ಹುದ್ದೆ ಖಾಲಿ ಇರುವ ಇಲಾಖೆ**

| ಇಲಾಖೆ | ಮಂಜೂರಾತಿ | ಭರ್ತಿ | ಖಾಲಿ |
|---|---|---|---|
| ಪ್ರಾಥಮಿಕ ಶಿಕ್ಷಣ | 2,81,862 | 2,15,803 | 66,059 |
| ಆರೋಗ್ಯ | 74,857 | 40,213 | 34,644 |
| ಒಳಾಡಳಿತ | 1,26,913 | 1,03,356 | 23,557 |
| ಉನ್ನತ ಶಿಕ್ಷಣ | 24,785 | 12,111 | 12,674 |
| ಕಂದಾಯ | 32,309 | 21,688 | 10,621 |
| ಪಂಚಾಯತ್ ರಾಜ್ | 28,223 | 17,814 | 10,409 |
| ಪಶುಸಂಗೋಪನೆ | 18,553, | 8,581 | 9,972 |
| ಹಿಂದುಳಿದ ವರ್ಗಗಳ ಕಲ್ಯಾಣ | 18,553 | 7,224 | 8,063 |

## 1 ಲಕ್ಷ ಹುದ್ದೆ ಭರ್ತಿ: ಸಿ.ಎಂ ಬೊಮ್ಮಾಯಿ

2023ರ ಬಜೆಟ್‌ನಿಂದ ಮತ್ತೊಂದು ಬಜೆಟ್‌ನ ಒಂದು ವರ್ಷದ ಅವಧಿಯಲ್ಲಿ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ 2.58 ಲಕ್ಷ ಹುದ್ದೆಗಳ ಪೈಕಿ 1 ಲಕ್ಷ ಹುದ್ದೆಗಳನ್ನು ಭರ್ತಿ ಮಾಡಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ವಿಧಾನಪರಿಷತ್‌ನಲ್ಲಿ ಜೆಡಿಎಸ್‌ನ ಸಿ.ಎನ್. ಮಂಜೇಗೌಡ ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಅವಶ್ಯ ಇರುವ ಹುದ್ದೆಗಳನ್ನು ಆದ್ಯತೆ ಮೇರೆಗೆ ಭರ್ತಿ ಮಾಡುತ್ತೇವೆ ಎಂದು ಹೇಳಿದರು.

ಸಿ ಮತ್ತು ಡಿ ವೃಂದದಲ್ಲಿ ಖಾಲಿ ಇರುವ ಹುದ್ದೆಗಳನ್ನು ಹೊರಗುತ್ತಿಗೆ ಮೇಲೆ ನೇಮಕ ಮಾಡಿಕೊಳ್ಳಲಾಗಿದೆ. ಹೀಗಾಗಿ, ಕೆಲಸಕ್ಕೆ ತೊಂದರೆಯಾಗಿಲ್ಲ ಎಂದರು.

## 209 ಆಯುಷ್ ವೈದ್ಯಾಧಿಕಾರಿ ಹುದ್ದೆ ಭರ್ತಿ

ಆಯುಷ್ ಇಲಾಖೆಯಲ್ಲಿ ಖಾಲಿ ಇರುವ 209 ವೈದ್ಯಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡಲು ಹಣಕಾಸು ಇಲಾಖೆಯ ಒಪ್ಪಿಗೆ ಪತ್ರ ಬರೆಯಲಾಗಿದ್ದು, ಒಪ್ಪಿಗೆ ಸಿಕ್ಕಿದ ತಕ್ಷಣ ಭರ್ತಿ ಮಾಡಲಾಗುವುದು ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ವಿಧಾನಸಭೆಯಲ್ಲಿ ತಿಳಿಸಿದರು.

ಗುರುವಾರ ಪ್ರಶ್ನೋತ್ತರ ಅವಧಿಯಲ್ಲಿ ಜೆಡಿಎಸ್‌ನ ಎ.ಟಿ.ರಾಮಸ್ವಾಮಿ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿರುವ ವೈದ್ಯಾಧಿಕಾರಿಗಳನ್ನು ಕಾಯಂಗೊಳಿಸಲು ಅವಕಾಶವಿಲ್ಲ ಎಂದರು.

ಆದರೆ, ನೇಮಕಾತಿ ಸಂದರ್ಭದಲ್ಲಿ ಇವರಿಗೆ ಆದ್ಯತೆ ನೀಡಲಾಗುವುದು. ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿರುವವರಿಗೆ ವರ್ಷಕ್ಕೆ 1 ಅಂಕವನ್ನು ನೀಡಲಾಗುವುದರಿಂದ, ವಯೋಮಿತಿಯನ್ನೂ ಸಡಿಲಿಸಲಾಗುವುದು. ಒಟ್ಟು 903 ಹುದ್ದೆಗಳಲ್ಲಿ 694 ಹುದ್ದೆಗಳು ಭರ್ತಿ ಆಗಿವೆ ಎಂದೂ ಹೇಳಿದರು.

## 12 ಸಾವಿರ ಪೌರಕಾರ್ಮಿಕರ ನೇಮಕಾತಿ

ಸದ್ಯದಲ್ಲೇ 12 ಸಾವಿರ ಪೌರಕಾರ್ಮಿಕರನ್ನು ನೇಮಕಾತಿ ಮಾಡಿಕೊಳ್ಳಲಾಗುವುದು ಎಂದು ಬೊಮ್ಮಾಯಿ ಹೇಳಿದರು.

ಈಗಾಗಲೇ 11,200 ಹುದ್ದೆಗಳ ನೇಮಕಾತಿ ಪ್ರಕ್ರಿಯೆ ನಡೆಯುತ್ತಿದೆ. ಅದು ಮುಗಿದ ಕೂಡಲೇ ಹೊಸ ನೇಮಕಾತಿ ಪ್ರಕ್ರಿಯೆಗೆ ಚಾಲನೆ ನೀಡಲಾಗುವುದು. ಕರ್ನಾಟಕದ ಇತಿಹಾಸದಲ್ಲೇ ಇಷ್ಟು ಬೃಹತ್ ಪ್ರಮಾಣದಲ್ಲಿ ಸಫಾಯಿ ಕರ್ಮಚಾರಿಗಳ ನೇಮಕಾತಿ ನಡೆಸಿದ ನಿದರ್ಶನವಿಲ್ಲ ಎಂದು ಅವರು ವಿವರಿಸಿದರು.

## ಸುದ್ದಿ 2 ನಿಮಿಷ

### ‘ವಿದ್ಯಾರ್ಥಿ ವೇತನ ಮುಂದುವರಿಕೆ’

**ಬೆಳಗಾವಿ:** ರಾಜ್ಯದಲ್ಲಿ ಒಂದನೇ ತರಗತಿಯಿಂದ ಎಂಟನೇ ತರಗತಿಯವರೆಗೆ ಓದುತ್ತಿರುವ ಪರಿಶಿಷ್ಟ ಜಾತಿ, ಪಂಗಡ, ಹಿಂದುಳಿದವರ್ಗಗಳ ವಿದ್ಯಾರ್ಥಿಗಳಿಗೆ ನೀಡುತ್ತಿರುವ ವಿದ್ಯಾರ್ಥಿ ವೇತನವನ್ನು ಮುಂದುವರಿಸಲಾಗುವುದು ಎಂದು ಸಮಾಜ ಕಲ್ಯಾಣ ಹಾಗೂ ಹಿಂದುಳಿದವರ್ಗಗಳ ಸಚಿವ ಕೋಟ ಶ್ರೀನಿವಾಸ ಪೂಜಾರಿ ಹೇಳಿದರು.

ಶೂನ್ಯವೇಳೆಯಲ್ಲಿ ಜೆಡಿಎಸ್‌ನ ಮರಿತಿಬ್ಬೇಗೌಡ ಈ ವಿಷಯ ಕುರಿತು ಪ್ರಸ್ತಾಪಿಸಿದರು.

ಕೇಂದ್ರ ಸರ್ಕಾರವು 1–8ನೇ ತರಗತಿಯವರೆಗಿನ ಮಕ್ಕಳಿಗೆ ನೀಡುತ್ತಿದ್ದ ವಿದ್ಯಾರ್ಥಿ ವೇತನವನ್ನು ನಿಲ್ಲಿಸಿದೆ. ಆದರೆ, ನಮ್ಮ ರಾಜ್ಯದಲ್ಲಿ ರಾಜ್ಯ ಸರ್ಕಾರವೇ ಪರಿಶಿಷ್ಟ ಜಾತಿ ಮತ್ತು ಪಂಗಡದ ವಿದ್ಯಾರ್ಥಿಗಳಿಗೆ ವೇತನವನ್ನು ನೀಡುತ್ತಿದ್ದು, ಅದನ್ನು ಮುಂದುವರಿಸಲಾಗುತ್ತದೆ ಎಂದರು.

ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ನೀಡುತ್ತಿದ್ದ ವಿದ್ಯಾರ್ಥಿ ವೇತನಕ್ಕೆ ಹಣಕಾಸಿನ ಕಾರಣಕ್ಕೆ ತಡೆಯಾಗಿತ್ತು, ಗೊಂದಲ ಬಗೆಹರಿಸಿ, ಅದನ್ನು ಮುಂದುವರಿಸುತ್ತೇವೆ ಎಂದು ವಿವರಿಸಿದರು.

**ಗುಂಡಿಗೆ ವೆಚ್ಚ- ‘ಪ್ರಜಾವಾಣಿ’ ವರದಿ ಪ್ರಸ್ತಾಪ:** ಬೆಂಗಳೂರಿನ ರಸ್ತೆಗಳಿಗೆ ₹25 ಸಾವಿರ ಕೋಟಿ ವೆಚ್ಚ ಮಾಡಲಾಗಿದ್ದರೂ ಗುಂಡಿ ಮುಕ್ತವಾಗಿಸಲು ಸಾಧ್ಯವಾಗಿಲ್ಲ ಎಂದು ಕಾಂಗ್ರೆಸ್‌ನ ಯು.ಬಿ. ವೆಂಕಟೇಶ್ ಹೇಳಿದರು.



‘₹25 ಸಾವಿರ ಕೋಟಿ ರಸ್ತೆ-ಗುಂಡಿ ಪಾಲು’ ಎಂಬ ಶೀರ್ಷಿಕೆಯಡಿ ‘ಪ್ರಜಾವಾಣಿ’ಯಲ್ಲಿ ಪ್ರಕಟವಾಗಿದ್ದ ವಿಶೇಷ ವರದಿ ಪ್ರಸ್ತಾಪಿಸಿದ ಅವರು, ಏಳು ವರ್ಷದಲ್ಲಿ ಇಷ್ಟೆಲ್ಲ ವೆಚ್ಚ ಮಾಡಿದ್ದರೂ ಗುಂಡಿ ಸಮಸ್ಯೆ ಪರಿಹಾರವಾಗಿಲ್ಲ’ ಎಂದು ದೂರಿದರು. ಶುಕ್ರವಾರ ಉತ್ತರ ಕೊಡಿಸುವುದಾಗಿ ಸಭಾಪತಿ ಹೇಳಿದರು.

## ಸ್ಥಳೀಯ ಸಂಸ್ಥೆ ಸ್ವತ್ತು: ಇ–ಆಸ್ತಿ ತಂತ್ರಾಂಶಕ್ಕೆ ಅನುಮೋದನೆ

**ಬೆಳಗಾವಿ:** 2017ಕ್ಕೂ ಮುನ್ನ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಿಂದ ಹೊರಗಿದ್ದ ನಗರ ಸ್ಥಳೀಯ ಸಂಸ್ಥೆಗಳಲ್ಲಿನ ಆಸ್ತಿಗಳ ಖಾತೆಗಳನ್ನು ಇ-ಆಸ್ತಿ ತಂತ್ರಾಂಶದಲ್ಲಿ ದಾಖಲಿಸಿ, ‘ಇ-ಖಾತೆ’ ನೀಡಲು ಸರ್ಕಾರಿ ನಿರ್ಧರಿಸಿದೆ.

ಗುರುವಾರ ಇಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಇದಕ್ಕೆ ಅನುಮೋದನೆ ನೀಡಲಾಗಿದೆ.

ಅಲ್ಲದೇ, ಗ್ರಾಮ ಪಂಚಾಯಿತಿಗಳನ್ನು ನಗರ ಸ್ಥಳೀಯ ಸಂಸ್ಥೆಗಳಾಗಿ ಮೇಲ್ದರ್ಜೆಗೇರಿಸಿದ ನಂತರ ಅವುಗಳ ಇ-ಸ್ವತ್ತು ತಂತ್ರಾಂಶದಡಿಯಲ್ಲಿ ನಿರ್ವಹಿಸಿದ ಖಾತೆಗಳನ್ನು ಇ-ಆಸ್ತಿ ತಂತ್ರಾಂಶದಲ್ಲಿ ದಾಖಲಿಸಲು ಅವಕಾಶ ನೀಡಲು ಸಂಪುಟದಲ್ಲಿ ನಿರ್ಣಯಿಸಲಾಯಿತು.

ಇದರಿಂದ ರಾಜ್ಯದ ಒಟ್ಟು 302 ನಗರ ಸ್ಥಳೀಯ ಸಂಸ್ಥೆಗಳ ಪೈಕಿ 175 ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಇ-ಖಾತೆ ನೀಡಿಕೆಗೆ ಇದ್ದ ಅಡೆ-ತಡೆಗಳು ಬಗೆಹರಿಯಲಿವೆ. ಉಳಿದ ನಗರ ಸ್ಥಳೀಯ ಸಂಸ್ಥೆಗಳು ಯೋಜನಾ ಪ್ರಾಧಿಕಾರಿಗಳ ವ್ಯಾಪ್ತಿಯಲ್ಲಿನ ಇ-ಖಾತೆ ಸಮಸ್ಯೆಗಳು ಬಗೆಹರಿಯಲು ಸುಪ್ರೀಂಕೋರ್ಟ್ ನೀಡಿರುವ ತಡೆಯಾಜ್ಞೆ ತೆರವುಗೊಳ್ಳುವವರೆಗೆ ಕಾಯಬೇಕಾಗುತ್ತದೆ ಎಂದು ಪೌರಾಡಳಿತ, ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವ ಎಂಟಿಬಿ ನಾಗರಾಜ್ ತಿಳಿಸಿದ್ದಾರೆ.

## ಒಕ್ಕಲಿಗರಿಗೆ ಮೀಸಲಾತಿ– ಕಾಂಗ್ರೆಸ್ ಪಟ್ಟು

**ಬೆಳಗಾವಿ:** ‘ಒಕ್ಕಲಿಗರ ಮೀಸಲಾತಿ ಪ್ರಮಾಣವನ್ನು ಹೆಚ್ಚಿಸಲು ಸರ್ಕಾರಕ್ಕೆ ಜ. 23 ಅಂತಿಮ ಗಡುವು ನೀಡಲಾಗಿದೆ. ಈ ಅವಧಿಯ ಒಳಗೆ ಮೀಸಲಾತಿ ಹೆಚ್ಚಳದ ಬೇಡಿಕೆ ಈಡೇರಿಸದಿದ್ದರೆ ಸಮುದಾಯ ಬೀದಿಗಿಳಿದು ಹೋರಾಟ ಮಾಡಲಿದೆ’ ಎಂದು ಒಕ್ಕಲಿಗ ಸಮುದಾಯ ಪ್ರತಿನಿಧಿಸುವ, ವಿಧಾನಪರಿಷತ್‌ನ ಕಾಂಗ್ರೆಸ್ ಸದಸ್ಯರು ಹೇಳಿದರು.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಸಿ.ಎಂ. ಲಿಂಗಪ್ಪ, ಎಸ್. ರವಿ, ಗೋವಿಂದ್ ರಾಜು, ಅನಿಲ್ ಕುಮಾರ್, ದಿನೇಶ್ ಗೂಳಿಗೌಡ, ‘ಒಕ್ಕಲಿಗ ಜನಾಂಗಕ್ಕೆ ಮೀಸಲಾತಿ ಕಲ್ಪಿಸಲು ಕೇಂದ್ರಕ್ಕೆ ಯಾವುದೇ ಶಿಫಾರಸು ಮಾಡುವ ಅವಶ್ಯಕತೆ ಇಲ್ಲ. ಸಮುದಾಯ ಈಗಾಗಲೇ ಕೇಂದ್ರದ ಒಬಿಸಿ ಪಟ್ಟಿಯಲ್ಲಿ ಇರುವುದರಿಂದ ರಾಜ್ಯ ಸರ್ಕಾರವೇ ನಿರ್ಣಯ ತೆಗೆದುಕೊಂಡು ಮೀಸಲಾತಿ ಹೆಚ್ಚಿಸಬಹುದು’ ಎಂದರು.

# ರಾಜ್ಯದ ನೆಲ–ಜಲ: ರಾಜಿ ರಹಿತ ನಿಲುವು

ಸರ್ವಾನುಮತದ ನಿರ್ಣಯ • ಗಡಿ ತಂಟೆಗೆ ಬಂದರೆ ಹಿಮ್ಮೆಟ್ಟಿಸುತ್ತೇವೆ: ಮುಖ್ಯಮಂತ್ರಿ ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

**ಬೆಳಗಾವಿ:** ‘ಕರ್ನಾಟಕದ ನೆಲ, ಜಲ, ಭಾಷೆ ಹಾಗೂ ಕನ್ನಡಿಗರ ಹಿತಾಸಕ್ತಿಯ ವಿಷಯದಲ್ಲಿ ಯಾವುದೇ ರಾಜಿ ಮಾಡಿಕೊಳ್ಳುವ ಪ್ರಶ್ನೆಯೇ ಇಲ್ಲ’ ಎಂದು ವಿಧಾನಸಭೆಯಲ್ಲಿ ಗುರುವಾರ ಸರ್ವಾನುಮತದಿಂದ ನಿರ್ಣಯ ಕೈಗೊಳ್ಳಲಾಯಿತು.

ಬೆಳಗಾವಿ ಗಡಿ ವಿಚಾರಕ್ಕೆ ಸಂಬಂಧಿಸಿದಂತೆ ಮಹಾರಾಷ್ಟ್ರ ತರಲೆ ತೆಗೆದಿರುವ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸದನದಲ್ಲಿ ಮಂಡಿಸಿದ ಈ ನಿರ್ಣಯಕ್ಕೆ ಸದಸ್ಯರು ಸದನದಲ್ಲಿ ಮೇಜು ತಟ್ಟಿ ಒಕ್ಕೊರಲಿನ ಸಹಮತಿ ಸೂಚಿಸಿದರು.

‘ನೆಲ, ಜಲ, ಭಾಷೆ ವಿಷಯದಲ್ಲಿ ಕರ್ನಾಟಕದ ಜನರ ಮತ್ತು ಸದಸ್ಯರೆಲ್ಲರ ಭಾವನೆಯು ಒಂದೇ ಆಗಿದ್ದು, ಇದಕ್ಕೆ ಧಕ್ಕೆ ಆದಾಗ ಎಲ್ಲರೂ ಒಗ್ಗಟ್ಟಿನಿಂದ ರಾಜ್ಯದ ಹಿತಾಸಕ್ತಿ ಹಾಗೂ ರಕ್ಷಣೆಗೆ ಸಂವಿಧಾನಾತ್ಮಕ ಹಾಗೂ ಕಾನೂನಾತ್ಮಕ ಕ್ರಮ ಕೈಗೊಳ್ಳಲು ಬದ್ಧರಿದ್ದೇವೆ. ಮಹಾರಾಷ್ಟ್ರದ ಜನತೆಯು ಅನಾವಶ್ಯಕವಾಗಿ ಸೃಷ್ಟಿಸಿರುವ ಗಡಿ ವಿವಾದವನ್ನು ಖಂಡಿಸಿ, ರಾಜ್ಯದ ಹಿತರಕ್ಷಣೆಗೆ ಈ ಸದನವು ಕಟ್ಟಿಬದ್ಧವಾಗಿದೆ’ ಎಂದೂ ನಿರ್ಣಯದಲ್ಲಿದೆ.

> **ನಮ್ಮನ್ನು ಕೆಣಕಬೇಡಿ**
>
> ಗಡಿ ವಿಚಾರದಲ್ಲಿ ಮಹಾಜನ ಆಯೋಗ ವರದಿ ಅಂತಿಮ ಎನ್ನುವುದು ನಮ್ಮ ನಿಲುವು. ಅದರ ಆ ಕಡೆಯೂ ಇಲ್ಲ, ಈ ಕಡೆಯೂ ಇಲ್ಲ. ಆದರೆ, ಮಹಾರಾಷ್ಟ್ರದವರು ಕೆಣಕಿ, ಗೊಂದಲ ಉಂಟು ಮಾಡಲು ಯತ್ನಿಸುತ್ತಿದ್ದಾರೆ. ಈಗಾಗಲೇ ನಮ್ಮ ನಿಲುವು ಸ್ಪಷ್ಟ ಎಂದು ತಿಳಿಸಿದ್ದರೂ, ಮತ್ತೊಮ್ಮೆ ನಿರ್ಣಯ ತೆಗೆದುಕೊಳ್ಳೋಣ
>
> **ಬಿ.ಎಸ್. ಯಡಿಯೂರಪ್ಪ,** ಬಿಜೆಪಿ ಸದಸ್ಯ

> **ರಾವುತ್‌ಗೆ ಒಕ್ಕೂಟ ವ್ಯವಸ್ಥೆ ಏನೆಂದು ಗೊತ್ತಿಲ್ಲ**
>
> ಚೀನಾ ನಮ್ಮ ವೈರಿ ದೇಶ. ನಾವೆಲ್ಲ ಭಾರತೀಯರು, ಒಕ್ಕೂಟ ವ್ಯವಸ್ಥೆಯಲ್ಲಿ ಬದುಕುವವರು. ಸಂಜಯ್ ರಾವುತ್‌ಗೆ ಒಕ್ಕೂಟ ವ್ಯವಸ್ಥೆ ಏನು ಎನ್ನುವುದೇ ಗೊತ್ತಿಲ್ಲ ಅವರು ಬಾಯಿಗೆ ಬಂದಂತೆ, ಗೂಂಡಾಗಳ ರೀತಿಯಲ್ಲಿ ಅನಾಗರಿಕ ಭಾಷೆಯಿಂದ ಮಾತನಾಡಿದ್ದಾರೆ. ಅವರಿಗೆ ನಾಗರಿಕ ಭಾಷೆಯಿಂದ ಉತ್ತರ ನೀಡಬೇಕು
>
> **ಸಿದ್ದರಾಮಯ್ಯ,** ವಿಧಾನಸಭೆ ವಿರೋಧ ಪಕ್ಷದ ನಾಯಕ

ನಿರ್ಣಯ ಮಂಡಿಸುವುದಕ್ಕೂ ಮೊದಲು ಮಾತನಾಡಿದ ಬೊಮ್ಮಾಯಿ, ‘ರಾಜ್ಯದ ಗಡಿ ತಂಟೆಗೆ ಬಂದರೆ ಹಿಮ್ಮೆಟ್ಟಿಸಲು ನಾವು ಸಿದ್ಧರಾಗಿದ್ದೇವೆ. ಅಷ್ಟೇ ಅಲ್ಲ, ಕಾನೂನಾತ್ಮಕ ಕ್ರಮ ತೆಗೆದುಕೊಳ್ಳುವುದು ಖಚಿತ’ ಎಂದು ಎಚ್ಚರಿಕೆ ನೀಡಿದರು.

‘ಮಹಾರಾಷ್ಟ್ರದ ಗಡಿ ಕ್ಯಾತೆ ಬಹಳ ವಿಪರೀತವಾಗಿದೆ. ಆ ರಾಜ್ಯದ ನಾಯಕರು ಈ ವಿಷಯದಲ್ಲಿ ರಾಜಕೀಯ ಮಾಡುತ್ತಿದ್ದಾರೆ. ಆದರೆ, ಎರಡೂ ರಾಜ್ಯಗಳ (ಕರ್ನಾಟಕ–ಮಹಾರಾಷ್ಟ್ರ) ಗಡಿಯಲ್ಲಿ ವಿವಾದವೇ ಇಲ್ಲ. ವ್ಯವಹಾರ, ಶಿಕ್ಷಣ ಎಲ್ಲ ವಿಷಯಗಳಲ್ಲಿ ಸಾಮರಸ್ಯವಿದೆ. ಆದರೆ, ಪ್ರತಿ ವಿಧಾನ ಮಂಡಲ ಅಧಿವೇಶನದ ಸಂದರ್ಭದಲ್ಲಿ ಮಹಾರಾಷ್ಟ್ರ ಏಕೀಕರಣ ಸಮಿತಿಯವರು (ಎಂಇಎಸ್) ಮಹಾ ಮೇಳಾವ್ ಆಯೋಜಿಸಿ ಜನರ ಮಧ್ಯೆ ಬೆಂಕಿ ಹಚ್ಚುವ ಕೆಲಸ ಮಾಡುತ್ತಿದ್ದಾರೆ. ನಮ್ಮ ರಾಜ್ಯೋತ್ಸವ ಸಂದರ್ಭದಲ್ಲಿ ಕಪ್ಪು ದಿನವೆಂದು ಆಚರಿಸುತ್ತಾರೆ’ ಎಂದು ದೂರಿದರು.

‘ಮಹಾರಾಷ್ಟ್ರ ವಿಧಾನಸಭೆಯಲ್ಲಿ ಎನ್‌ಸಿಪಿಯ ಜಯಂತ್ ಪಾಟೀಲ ‘ಬೊಮ್ಮಾಯಿಗೆ ಮಸ್ತಿ (ಸೊಕ್ಕು) ಬಂದಿದೆ’ ಎಂದಿದ್ದಾರೆ. ಆತ ಬಳಸಿರುವ ಭಾಷೆ ಒಪ್ಪುವಂಥದ್ದಲ್ಲ. ಆ ಮಾತುಗಳು ಆ ಮನುಷ್ಯನ ಸಂಸ್ಕೃತಿ, ಅಪ್ರಬುದ್ಧತೆ ತೋರಿಸುತ್ತದೆ. ಮಹಾರಾಷ್ಟ್ರದಿಂದ ಕರ್ನಾಟಕಕ್ಕೆ ನೀರು ಕೊಡುವುದಿಲ್ಲ ಎಂದಿದ್ದಾರೆ. ಆದರೆ, ನಿಸರ್ಗ (ನೀರು, ಗಾಳಿ) ಯಾರ ಕೈಯಲ್ಲಿಯೂ ಇಲ್ಲ. ಕರ್ನಾಟಕ–ಆಂಧ್ರ, ತೆಲಂಗಣಾ–ಮಹಾರಾಷ್ಟ್ರದಲ್ಲಿ ಕೃಷ್ಣಾ ನದಿ ಹರಿಯುತ್ತಿದೆ. ಅದು ರಾಷ್ಟ್ರೀಯ ಆಸ್ತಿ. ಕೃಷ್ಣಾ ನದಿಗೆ ನೀರು ಹೆಚ್ಚು ಶೇಖರಣೆಯಾಗುವುದು ಕರ್ನಾಕದಿಂದ’ ಎಂದರು.

‘ಚೀನಾ ದೇಶ ನುಗ್ಗಿ ಬಂದಂತೆ ನಾವು ನುಗ್ಗುತ್ತೇವೆ’ ಎಂದು ಶಿವಸೇನೆಯ ಸಂಸದ (ಉದ್ಧವ್ ಠಾಕ್ರೆ ಬಣ) ಸಂಜಯ್ ರಾವುತ್ ಹೇಳಿಕೆಗೆ ತಿರುಗೇಟು ನೀಡಿದ ಮುಖ್ಯಮಂತ್ರಿ, ‘ಅವರೊಬ್ಬ ದೇಶದ್ರೋಹಿ’ ಎಂದರು.

‘ಒಕ್ಕೂಟ ವ್ಯವಸ್ಥೆಯಲ್ಲಿ ಏಕತೆ, ಅಖಂಡತೆಯ ಬಗ್ಗೆ ಅರಿವಿಲ್ಲದೆ ಈ ರೀತಿ ಹಗುರವಾಗಿ ಮಾತನಾಡಿದ ರಾವತ್‌ಗೆ ಕವಡೆ ಕಾಸಿನ ಕಿಮ್ಮತ್ತಿಲ್ಲ. ಆತನ ಭಾಷೆಯಲ್ಲಿ ಮಾತನಾಡುವುದು ನಮ್ಮ ಸಂಸ್ಕೃತಿ ಅಲ್ಲ. ಹಾಗೆಂದು, ನಾವು ಸುಮ್ಮನಿರುವುದಿಲ್ಲ. ಎಲ್ಲದಕ್ಕೂ ನಾವು ಸಿದ್ಧರಿದ್ದೇವೆ. ಯಾವುದೇ ಕಾರಣಕ್ಕೂ ಅಳುಕುವ ಪ್ರಶ್ನೆಯೇ ಇಲ್ಲ. ಕಾಲ ಬದಲಾಗಿದೆ. ದಿಟ್ಟ ಕ್ರಮ ತೆಗೆದುಕೊಳ್ಳಲು ಹಿಂದೆಮುಂದೆ ನೋಡುವುದಿಲ್ಲ’ ಎಂದರು.

## ಅಂಗನವಾಡಿ ಕಾರ್ಯಕರ್ತೆಯರಿಗೆ ಮಿನಿಟ್ಯಾಬ್: ಹಾಲಪ್ಪ ಆಚಾರ್

**ಬೆಳಗಾವಿ:** ಅಂಗನವಾಡಿ ಕಾರ್ಯಕರ್ತೆಯರಿಗೆ ಇನ್ನು ಮುಂದೆ ಮಿನಿ ಟ್ಯಾಬ್‌ಗಳನ್ನು ನೀಡಲಾಗುವುದು ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವ ಹಾಲಪ್ಪ ಆಚಾರ್ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಗುರುವಾರ ಈ ವಿಷಯ ತಿಳಿಸಿದ ಅವರು, ‘ಈ ಹಿಂದೆ ನೀಡಿದ್ದ ಮೊಬೈಲ್‌ಗಳು ಹಾಳಾಗಿರುವುದರಿಂದ ಮಿನಿಟ್ಯಾಬ್‌ಗಳನ್ನು ಬೇರೆ ಬೇರೆ ಉದ್ದೇಶಗಳಿಗೆ ಬಳಸಲು ನಿರ್ಧರಿಸಲಾಗಿದೆ’ ಎಂದರು.

‘ಈಗಿರುವ ಮಿನಿ ಅಂಗನವಾಡಿಗಳನ್ನು ಮೇಲ್ದರ್ಜೆಗೇರಿಸಲು ಕ್ರಮ ಕೈಗೊಳ್ಳಲಾಗುವುದು’ ಎಂದರು.

# ನೆಹರೂ ಕುರಿತ ಹೇಳಿಕೆ: ಕ್ಷಮೆಯಾಚನೆ

ಹೇಳಿಕೆ ಹಿಂಪಡೆದ ಬಿಜೆಪಿ ಸದಸ್ಯ ಎನ್‌. ರವಿಕುಮಾರ್ • ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್ ಧರಣಿ

ಪ್ರಜಾವಾಣಿ ವಾರ್ತೆ

**ಬೆಳಗಾವಿ:** ಜವಾಹರಲಾಲ್ ನೆಹರೂ ಕುರಿತು ಬಿಜೆಪಿ ಸದಸ್ಯ ಎನ್. ರವಿಕುಮಾರ್ ನೀಡಿದ ಹೇಳಿಕೆಗೆ ಆಕ್ರೋಶ ವ್ಯಕ್ತಪಡಿಸಿ ಕಾಂಗ್ರೆಸ್ ಸದಸ್ಯರು ಗುರುವಾರ ವಿಧಾನಪರಿಷತ್‌ನಲ್ಲಿ ಸಭಾಪತಿ ಪೀಠದ ಮುಂದೆ ಧರಣಿ ನಡೆಸಿದರು.

ಒತ್ತಡಕ್ಕೆ ಮಣಿದ ರವಿಕುಮಾರ್ ಕ್ಷಮೆ ಕೇಳಿದ್ದಲ್ಲದೇ, ತಾವು ನೀಡಿದ್ದ ಹೇಳಿಕೆಯನ್ನು ವಾಪಸ್ ಪಡೆದರು.

ಬೆಳಿಗ್ಗೆ ನಡೆದ ಕಲಾಪದಲ್ಲಿ, ಕುಲಪತಿ ಹುದ್ದೆಗೆ ₹6 ಕೋಟಿಯಿಂದ ₹15 ಕೋಟಿವರೆಗೆ ಕೊಡಬೇಕಾಗಿದೆ ಎಂದು ಬಿಜೆಪಿಯ ಸಂಸದರೊಬ್ಬರು ಹೇಳಿದ್ದಾರೆ. ಈ ಬಗ್ಗೆ ಚರ್ಚೆಗೆ ಅವಕಾಶ ನೀಡಬೇಕು’ ಎಂದು ವಿರೋಧ ಪಕ್ಷದ ನಾಯಕ ಬಿ.ಕೆ.ಹರಿಪ್ರಸಾದ್ ಆಗ್ರಹಿಸಿದರು. ಈ ವಿಷಯದಲ್ಲಿ ಚರ್ಚೆಗೆ ಬಿಜೆಪಿ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದ್ದರು.

ಆಗ ಮಧ್ಯಪ್ರವೇಶಿಸಿದ್ದ ಬಿಜೆಪಿಯ ಎನ್. ರವಿಕುಮಾರ್, ಶಾಸಕ ರಮೇಶ್‌ಕುಮಾರ್ ಹೇಳಿಕೆ ಆಧರಿಸಿ ಕಾಂಗ್ರೆಸ್ ಬಗ್ಗೆಯೂ ಚರ್ಚೆ ನಡೆಯಲಿ ಎಂದು ಹೇಳಿದ್ದರು. ಇದರಿಂದ ಕೆರಳಿದ್ದ ಕಾಂಗ್ರೆಸ್ ಸದಸ್ಯರು ಸಭಾಪತಿ ಪೀಠದ ಎದುರು ಧರಣಿ ನಡೆಸಿದ್ದರು. ಧಿಕ್ಕಾರ, ಘೋಷಣೆಗಳು ಮೊಳಗಿದ್ದವು.



ವಿಧಾನ ಪರಿಷತ್‌ನಲ್ಲಿ ಗುರುವಾರ ಕಾಂಗ್ರೆಸ್ ಸದಸ್ಯರು ಸಭಾಪತಿ ಪೀಠದ ಮುಂದೆ ಧರಣಿ ನಡೆಸಿದರು. ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌.ಜಿ.

ಕಲಾಪವನ್ನು ಮಧ್ಯಾಹ್ನಕ್ಕೆ ಮುಂದೂಡಲಾಗಿತ್ತು.

ಮಧ್ಯಾಹ್ನ ಕಲಾಪ ಆರಂಭವಾಗುತ್ತಿದ್ದಂತೆ ಸಭಾಪತಿ ಪೀಠದ ಮುಂದೆ ಧರಣಿ ಮುಂದುವರಿಸಿದ ಕಾಂಗ್ರೆಸ್ ಸದಸ್ಯರು, ರವಿಕುಮಾರ್ ಅವರು ಹೇಳಿಕೆ ವಾಪಸ್ ಪಡೆದು ಕ್ಷಮೆಯಾಚಿಸಬೇಕು ಎಂದು ಪಟ್ಟು ಹಿಡಿದರು.

ಸಭಾಪತಿ ಬಸವರಾಜ ಹೊರಟ್ಟಿ ಅವರು, ’ಈಗಾಗಲೇ ರವಿಕುಮಾರ್ ಅವರ ಹೇಳಿಕೆಯನ್ನು ಕಡತದಿಂದ ತೆಗೆದುಹಾಕಲಾಗಿದೆ‘ ಎಂದು ಮನವೊಲಿಸಿದರೂ ಸದಸ್ಯರು ಒಪ್ಪಲಿಲ್ಲ. ಹೀಗಾಗಿ, ಕಲಾಪ ಮುಂದೂಡಿ ಮಾತುಕತೆಗೆ ಸಭಾನಾಯಕರು ಮತ್ತು ವಿರೋಧ ಪಕ್ಷದ ನಾಯಕರನ್ನು ಸಭಾಪತಿ ಆಹ್ವಾನಿಸಿದರು. ಸುಮಾರು 45 ನಿಮಿಷಗಳ ಚರ್ಚೆ ನಡೆದರೂ ಮಾತುಕತೆ ಫಲಪ್ರದವಾಗಲಿಲ್ಲ. ಕಾಂಗ್ರೆಸ್ ಸದಸ್ಯರು ಮತ್ತೆ ಧರಣಿ ನಡೆಸಿದರು.

ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಅವರು, ’ರಮೇಶ್ ಕುಮಾರ್ ಅವರು ಈ ರೀತಿ ಹೇಳಿಕೆ ನೀಡಿದ್ದರೆ ನಾನು ರಾಜೀನಾಮೆ ನೀಡುತ್ತೇನೆ. ಕ್ಷಮಾಪಣೆ ಕೇಳುವವರೆಗೂ ಸದನದ ಕಲಾಪ ನಡೆಸಲು ಅವಕಾಶ ನೀಡುವುದಿಲ್ಲ. ಮಾಧ್ಯಮಗಳಲ್ಲಿ ಈಗಾಗಲೇ ರವಿಕುಮಾರ್ ಹೇಳಿಕೆ ಪ್ರಸಾರವಾಗಿರುವುದರಿಂದ ಕಡತದಿಂದ ಈ ವಿಷಯ ತೆಗೆದು ಹಾಕಿದರೆ ಸಾಕಾಗುವುದಿಲ್ಲ‘ ಎಂದು ಹೇಳಿದರು.

ಆಡಳಿತ ಪಕ್ಷದ ಸದಸ್ಯರ ಸಲಹೆ ಮತ್ತು ವಿರೋಧ ಪಕ್ಷದ ಸದಸ್ಯರ ಒತ್ತಾಯಕ್ಕೆ ಮಣಿದ ರವಿಕುಮಾರ್ ಅವರು, ’ಸಭಾಪತಿ ಪೀಠಕ್ಕೆ ಕ್ಷಮೆಯಾಚಿಸುತ್ತೇನೆ. ನೆಹರೂ ಕುರಿತ ಶಬ್ದಗಳನ್ನು ವಾಪಸ್ ಪಡೆಯುತ್ತೇನೆ. ಆದರೆ, ವಿರೋಧ ಪಕ್ಷದ ನಾಯಕರು ನಾಗಪುರಕ್ಕೆ ಹಾವಿನ ಪುರ ಎಂದು ಕರೆಯುತ್ತಾರೆ ಹಾವು ಎಂದರೆ ವಿಷದ ಸಂಕೇತ. ಇಂತಹ ಶಬ್ದ ಪ್ರಯೋಗಗಳನ್ನು ಅವರು ನಿಲ್ಲಿಸಬೇಕು’ ಎಂದು ಆಗ್ರಹಿಸಿದರು.

> ನಾನು ಕನ್ನಡದ ಭಕ್ತ. ಹೀಗಾಗಿ, ನಾಗಪುರವನ್ನು ಹಾವಿನ ಪುರ ಎಂದು ಕರೆದಿದ್ದೇನೆ. ಅದರಲ್ಲಿ ತಪ್ಪೇನಿದೆ. ಹಳೆಯ ವಿಷಯಗಳನ್ನು ಸದನದಲ್ಲಿ ಕೆಣಕಬೇಡಿ.
>
> **ಬಿ.ಕೆ. ಹರಿಪ್ರಸಾದ್,** ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ

> ಭಾರತವನ್ನು ಬಲಿಷ್ಠವಾಗಿ ಕಟ್ಟಲು ಭೀಮ ಹೆಜ್ಜೆ ಇರಿಸಿದವರು ನೆಹರೂ. ಅವರ ಬಗ್ಗೆ ವಾಜಪೇಯಿ ಅವರು ಮಾಡಿದ ಭಾಷಣವನ್ನು ಎಲ್ಲರೂ ಓದಬೇಕು
>
> **ಎಚ್. ವಿಶ್ವನಾಥ್,** ಬಿಜೆಪಿ ಸದಸ್ಯ

> ನೆಹರೂ ವಿಷಯ ಅನಗತ್ಯವಾಗಿತ್ತು. ಎದೆಯೊಳಗೆ ವಿಷ ತುಂಬಿಕೊಂಡು ಬಾಯಿಯಲ್ಲಿ ಉಗುಳುವುದು ಬೇಡ. ಸದನದ ಪಾವಿತ್ರ್ಯತೆ ಬಗ್ಗೆ ಅರಿತುಕೊಳ್ಳಬೇಕು.
>
> **ಆಯನೂರು ಮಂಜುನಾಥ್** ಬಿಜೆಪಿ ಸದಸ್ಯ

> ನಮ್ಮ ಪಾಲಿನ ದೇವಾಲಯವಾಗಿರುವ ಆರ್‌ಎಸ್‌ಎಸ್ ಅನ್ನು ವಿರೋಧ ಪಕ್ಷದವರು ಸುಲಭ ಶೌಚಾಲಯ ಎಂದಿದ್ದಾರೆ. ಆರ್‌ಎಸ್‌ಎಸ್ ದೇಶಭಕ್ತಿ ಮೂಡಿಸುವ ಕಾರ್ಯದಲ್ಲಿ ತೊಡಗಿದೆ
>
> **ಭಾರತಿ ಶೆಟ್ಟಿ,** ಬಿಜೆಪಿ ಸದಸ್ಯೆ

## ‘ಲ್ಯಾಪ್‌ಟಾಪ್ ಖರೀದಿಗೆ ₹1.45 ಕೋಟಿ’

**ಬೆಳಗಾವಿ:** ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳಲ್ಲಿರುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಿಸಲು ಸಮಾಜ ಕಲ್ಯಾಣ ಇಲಾಖೆಗೆ ₹245 ಕೋಟಿ ಬೇಡಿಕೆ ಇಟ್ಟಿದ್ದು, ₹80 ಕೋಟಿ ಪ್ರಸ್ತಾವನೆಗೆ ಉನ್ನತ ಶಿಕ್ಷಣ ಪರಿಷತ್ತಿಗೆ ಕಳುಹಿಸಿದ್ದೇವೆ. ಆದರೆ, ಈ ಸಾಲಿಗೆ ₹1.45 ಕೋಟಿ ಮಾತ್ರ ಬಿಡುಗಡೆಯಾಗಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ. ಎನ್.ಅಶ್ವತ್ಥನಾರಾಯಣ ಹೇಳಿದರು.

ವಿಧಾನಸಭೆಯಲ್ಲಿ ಕಾಂಗ್ರೆಸ್‌ನ ಅಬ್ಬಯ್ಯ ಪ್ರಸಾದ್ ಅವರ ಪ್ರಶ್ನೆಗೆ ಉತ್ತರಿಸಿ, ‘ಲ್ಯಾಪ್‌ಟಾಪ್ ವಿತರಣೆ ಯೋಜನೆಯು ನಮ್ಮ ಇಲಾಖೆಯ ಯೋಜನೆಯಲ್ಲ’ ಎಂದರು.

ಬೇಡಿಕೆಯನ್ನು ಅನುಸರಿಸಿ ಸಮಾಜ ಕಲ್ಯಾಣ ಇಲಾಖೆಗೆ ಪ್ರಸ್ತಾವನೆ ಸಲ್ಲಿಸುತ್ತೇವೆ. ಅವರು ಬಿಡುಗಡೆ ಮಾಡುವ ಅನುದಾನದಲ್ಲಿ ಲ್ಯಾಪ್‌ಟಾಪ್ ಖರೀದಿಸಿ ನೀಡಲಾಗುವುದು ಎಂದರು.

## ನವಲಿ ಜಲಾಶಯಕ್ಕೆ ₹13,040 ಕೋಟಿ: ಡಿಪಿಆರ್ ಸಿದ್ಧ

ಒಂದನೇ ಪುಟದಿಂದ...

ಕೃಷ್ಣಾ ಜಲವಿವಾದ ನ್ಯಾಯಮಂಡಳಿ–2ರ ತೀರ್ಪಿನಲ್ಲಿ ಈ ಕಣಿವೆಯ ನೀರಿನಲ್ಲಿ 36 ಟಿಎಂಸಿ ಅಡಿಯಷ್ಟು ಹೆಚ್ಚಿನ ನೀರು ರಾಜ್ಯಕ್ಕೆ ಹಂಚಿಕೆಯಾಗಿದೆ. ಅದು ಗೆಜೆಟ್ ಅಧಿಸೂಚನೆ ಆಗದೇ ಇರುವುದರಿಂದ ಸದ್ಯಕ್ಕೆ ಲಭ್ಯವಿಲ್ಲ. ಅಂತರ ರಾಜ್ಯ ಯೋಜನೆಯಾಗಿರುವ ತುಂಗಭದ್ರಾ ಯೋಜನೆಯಡಿ ಒಟ್ಟು 230 ಟಿಎಂಸಿ ಅಡಿ ಹಂಚಿಕೆಯಾಗಿದೆ. ರಾಜ್ಯಕ್ಕೆ 138.99 ಟಿಎಂಸಿ ಅಡಿ ಹಾಗೂ ಅವಿಭಜಿತ ಆಂಧ್ರಕ್ಕೆ 73.01 ಟಿಎಂಸಿ ಅಡಿ ಹಂಚಿಕೆಯಾಗಿದೆ. ಜಲಾಶಯದ ನೀರಿನ ಸಂಗ್ರಹ ಸಾಮರ್ಥ್ಯ 174 ಟಿಎಂಸಿ ಅಡಿ ಇದ್ದು, 30 ಟಿಎಂಸಿ ಅಡಿಯಷ್ಟು ಹೂಳು ತುಂಬಿದೆ. ಇದಕ್ಕಾಗಿ ಸಮಾನಾಂತರ ಜಲಾಶಯ ನಿರ್ಮಿಸಲು ಈ ವರ್ಷದ ಬಜೆಟ್‌ನಲ್ಲಿ ₹1000 ಕೋಟಿ ನೀಡಲಾಗಿದೆ. ಮೊದಲು ಎರಡು ರಾಜ್ಯದ ಮಧ್ಯೆ ಒಪ್ಪಂದ ಆಗಿದ್ದರೆ ಸಾಕಿತ್ತು. ಈಗ ತೆಲಂಗಾಣವೂ ಪಾಲುದಾರ ರಾಜ್ಯವಾಗಿದ್ದು, ಮೂರು ರಾಜ್ಯಗಳು ಒಪ್ಪಂದಕ್ಕೆ ಬರಬೇಕಾಗಿದೆ ಎಂದರು.

ಮಧ್ಯಪ್ರವೇಶಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ತುಂಗಭದ್ರಾ ಜಲಾಶಯದ ಹೂಳು ಈಗ ಬಂಡೆಗಲ್ಲಿನಂತೆ ಪರಿವರ್ತನೆಯಾಗಿದ್ದು, ಅದನ್ನು ತೆಗೆಯಲು ಸಾಧ್ಯವಿಲ್ಲ. ಇದಕ್ಕಾಗಿ ಪರ್ಯಾಯ ವ್ಯವಸ್ಥೆ ಮಾಡಬೇಕಾಗಿದೆ’ ಎಂದರು.

## ಸ್ವಾತಂತ್ರ್ಯ ಹೋರಾಟಗಾರ ಮಾಸಾಶನ ಹೆಚ್ಚಳ: ಸಚಿವ ಅಶೋಕ ಭರವಸೆ

ಸ್ವಾತಂತ್ರ್ಯ ಹೋರಾಟಗಾರರಿಗೆ ಈಗ ನೀಡುತ್ತಿರುವ ₹10 ಸಾವಿರ ಮಾಸಾಶನವನ್ನು ₹15 ಸಾವಿರಕ್ಕೆ ಹೆಚ್ಚಿಸುವ ಪ್ರಸ್ತಾವ ಹಣಕಾಸು ಇಲಾಖೆ ಮುಂದಿದ್ದು, ಮುಖ್ಯಮಂತ್ರಿ ಜತೆ ಚರ್ಚಿಸಿ ತೀರ್ಮಾನ ಪ್ರಕಟಿಸುವುದಾಗಿ ಕಂದಾಯ ಸಚಿವ ಆರ್. ಅಶೋಕ ಹೇಳಿದರು.

ಪರಿಷತ್ತಿನಲ್ಲಿ ಕಾಂಗ್ರೆಸ್‌ನ ಯು.ಬಿ. ವೆಂಕಟೇಶ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ರಾಜ್ಯದಲ್ಲಿ 3804 ಜನ ಸ್ವಾತಂತ್ರ್ಯ ಹೋರಾಟಗಾರರಿದ್ದಾರೆ. ಅವರ ಬಗ್ಗೆ ನಮಗೂ ಕಳಕಳಿ ಇದೆ ಎಂದರು.

## ಭೂ ಪರಿವರ್ತನೆ ಸರಳೀಕರಣ: ಮಸೂದೆ ಅಂಗೀಕಾರ

ಪ್ರಜಾವಾಣಿ ವಾರ್ತೆ

**ಬೆಳಗಾವಿ:** ಕೃಷಿಭೂಮಿಯಲ್ಲಿ ಸ್ವಂತಕ್ಕೆ ಮನೆ, ಕೃಷಿ ಪರಿಕರಗಳನ್ನು ಸಂಗ್ರಹಿಸಿಡಲು ಕಟ್ಟಡ, ತೋಟದ ಮನೆ ನಿರ್ಮಿಸಿಕೊಳ್ಳಲು ಭೂ ಪರಿವರ್ತನೆಗೆ ರೈತರು ಅರ್ಜಿ ಸಲ್ಲಿಸಿದ ಏಳು ದಿನಗಳ ಒಳಗೇ ಮಂಜೂರಾತಿ ಆದೇಶ ನೀಡುವಂತೆ ಜಿಲ್ಲಾಧಿಕಾರಿಗೆ ಗಡುವು ವಿಧಿಸುವ ಉದ್ದೇಶದಿಂದ ಮಂಡಿಸಿದ ‘ಕರ್ನಾಟಕ ಭೂ ಕಂದಾಯ ಕಾಯ್ದೆ ತಿದ್ದುಪಡಿ‘ ಮಸೂದೆಗೆ ವಿಧಾನ ಸಭೆಯಲ್ಲಿ ಗುರುವಾರ ಒಪ್ಪಿಗೆ ನೀಡಲಾಯಿತು.

ಮಸೂದೆ ಕುರಿತು ವಿವರಿಸಿದ ಕಂದಾಯ ಸಚಿವ ಆರ್. ಅಶೋಕ, ‘ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶಗಳಿಗೆ ಪರಿವರ್ತಿಸುವ ಪ್ರಕ್ರಿಯೆಯನ್ನು ‘ರೈತ ಸ್ನೇಹಿ’ಗೊಳಿಸಲು ತಿದ್ದುಪಡಿ ಮಾಡಲಾಗುತ್ತಿದೆ’ ಎಂದರು.

ಚಿರತೆ ಧಾಮ ಮಾಡೋಣ: ವಿಧಾನಸಭೆಯಲ್ಲಿ ಸ್ವಾರಸ್ಯಕರ ಚರ್ಚೆ

# ಚಿರತೆ ಓಡಿಸಲು ಏನು ಮಾಡಬೇಕು?

ಪ್ರಜಾವಾಣಿ ವಾರ್ತೆ

**ಬೆಳಗಾವಿ:** ರಾಜ್ಯದಲ್ಲಿ ಚಿರತೆಗಳ ಹಾವಳಿ ತಡೆಗೆ ಏನು ಮಾಡಬೇಕು?

ಕೆಲವು ಶಾಸಕರ ಪ್ರಕಾರ ಕಬ್ಬಿನ ಗದ್ದೆಗಳಲ್ಲಿ ಬೆಳೆದು ನಿಂತ ಬೆಳೆಯನ್ನು ಕಟಾವು ಮಾಡಬೇಕು. ಇದರಿಂದ ಚಿರತೆಗಳು ಓಡಿ ಹೋಗುತ್ತವೆ. ಒಬ್ಬ ಶಾಸಕರ ಪ್ರಕಾರ ಚಿರತೆ ಧಾಮವನ್ನು ಮಾಡಿ ಎಲ್ಲ ಚಿರತೆಗಳನ್ನು ಅಲ್ಲಿ ಬಿಟ್ಟುಬಿಡುವುದೇ ಒಳ್ಳೆಯದು!

ಇಂತಹ ಸ್ವಾರಸ್ಯಕರ ಸಲಹೆಗಳು ಕೇಳಿ ಬಂದಿದ್ದು ವಿಧಾನಸಭೆಯ ಶೂನ್ಯ ವೇಳೆಯಲ್ಲಿ. ಜೆಡಿಎಸ್ ಶಾಸಕ ಅಶ್ವಿನ್ ಕುಮಾರ್ ಅವರು ಟೀ.ನರಸೀಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಚಿರತೆ ಹಾವಳಿಯನ್ನು ಗಮನ ಸೆಳೆದಾಗ ಸ್ವಾರಸ್ಯಕರ ಚರ್ಚೆಗೆ ನಾಂದಿ ಹಾಡಿತು.

‘ಇತ್ತೀಚೆಗೆ ದೇವಸ್ಥಾನಕ್ಕೆ ಹೋದ ಹುಡುಗನೊಬ್ಬನ್ನು ಚಿರತೆ ಹೊತ್ತು ಕಾಡಿಗೆ ಒಯ್ದಿತು. ಅದಕ್ಕೂ ಹಿಂದೆ ಯುವತಿಯೊಬ್ಬಳ ಮೇಲೆ ದಾಳಿ ನಡೆಸಿತ್ತು. ಒಟ್ಟಿನಲ್ಲಿ ಭಯಭೀತಿ ವಾತಾವರಣ ಸೃಷ್ಟಿಯಾಗಿದೆ ಎಂದು ಅಶ್ವಿನ್‌ಕುಮಾರ್ ಹೇಳಿದರು.

ನಮ್ಮಲ್ಲಿ ಕಾಡಿನ ಪ್ರಮಾಣ ಕಡಿಮೆ ಇದೆ. 30 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಭತ್ತ ಮತ್ತು 2,500 ಹೆಕ್ಟೇರ್‌ನಲ್ಲಿ ಕಬ್ಬು ಇದೆ. ಕಬ್ಬು ಕಟಾವಿಗೆ ಬಂದಿದೆ. ಕಬ್ಬಿನ ಗದ್ದೆಗೆ ಹೋಗಲು ಹೆದರುತ್ತಿದ್ದಾರೆ. ಈ ಭಾಗದಲ್ಲಿ 10 ರಿಂದ 15 ಚಿರತೆಗಳು, ಅವುಗಳ ಮರಿಗಳು ಇವೆ. ಏನು ಮಾಡಬೇಕು ಎಂದು ತೋಚುತ್ತಿಲ್ಲ ಎಂದರು.

ಮಾಗಡಿ ಕ್ಷೇತ್ರದ ಜೆಡಿಎಸ್‌ನ ಶಾಸಕ ಮಂಜುನಾಥ್ ಮಾತನಾಡಿ, ನಮ್ಮ ಕ್ಷೇತ್ರದಲ್ಲೂ ಚಿರತೆ ಹಾವಳಿ ಜಾಸ್ತಿ ಇದೆ. ಚಿರತೆ ಹಿಡಿಯಲು 5 ರಿಂದ 6 ಬೋನುಗಳಿವೆ. ಬೋನುಗಳ ಸಂಖ್ಯೆಯನ್ನು 15 ರಿಂದ 20ಕ್ಕೆ ಹೆಚ್ಚಿಸಬೇಕು. ಚಿರತೆ ಸಂತತಿಯೂ ಹೆಚ್ಚಾಗಿದೆ. ಅರಣ್ಯ ಅಧಿಕಾರಿಗಳು ಇಲ್ಲಿ ಹಿಡಿದು ಎಲ್ಲಿಗೆ ಬಿಡುತ್ತಾರೆ ಎಂಬುದು ಗೊತ್ತಿಲ್ಲ ಎಂದರು.

ಆಗ ಮಧ್ಯ ಪ್ರವೇಶಿಸಿದ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ‘ಈ ಕ್ಷೇತ್ರದಲ್ಲಿ ಹಿಡಿದದ್ದು ಪಕ್ಕದ ಕ್ಷೇತ್ರಕ್ಕೆ ಒಯ್ದು ಬಿಡುತ್ತಾರೆ’ ಎಂದು ಹಾಸ್ಯ ಚಟಾಕಿ ಹಾರಿಸಿದರು. ‘ಈ ಸಮಸ್ಯೆಗೆ ನಿಮ್ಮ ಬಳಿ ಏನಾದರೂ ಪರಿಹಾರ ಕ್ರಮ ಇದ್ದರೆ ಹೇಳಿ’ ಎಂದು ಕಾಗೇರಿ ಹೇಳಿದಾಗ, ಕಾಂಗ್ರೆಸ್‌ನ ತುಕಾರಾಂ ಅವರು, ‘1985ರಲ್ಲಿ ನಮ್ಮ ಊರಲ್ಲಿ ಕರಡಿ ಹಾವಳಿ ಮಿತಿ ಮೀರಿದಾಗ 3 ಸಾವಿರ ಎಕರೆ ಪ್ರದೇಶದಲ್ಲಿ ಕರಡಿಧಾಮ ಮಾಡಿದರು. ಆ ಮೇಲೆ ಕರಡಿ ಹಾವಳಿ ಕಡಿಮೆ ಆಯಿತು. ಅದೇ ರೀತಿಯಲ್ಲಿ ಚಿರತೆ ಧಾಮ ಮಾಡುವುದು ಸೂಕ್ತ’ ಎಂದು ಸಲಹೆ ಹೇಳಿದರು.

> **‘ಆನೆ, ಹುಲಿ, ಚಿರತೆಗಳಿಗೆ ಮನವಿ ಕೊಡೋಣ’**
>
> ಕಾಂಗ್ರೆಸ್‌ನ ರಮೇಶ್‌ಕುಮಾರ್ ಮಾತನಾಡಿ, ‘ಈ ಅರಣ್ಯ ಅಧಿಕಾರಿಗಳಿಗೆ ಹರ್ಬಿವೋರಸ್, ಕಾರ್ನಿವೋರಸ್, ಓಮ್ನಿವೋರಸ್ ಬಗ್ಗೆ ಗೊತ್ತೆ? ಅರಣ್ಯಗಳ ಬಗ್ಗೆ ಗೊತ್ತೆ’ ಎಂದು ಪ್ರಶ್ನಿಸಿದರು. ಆ ಬಳಿಕ ತಮ್ಮ ಮಾತಿನ ಧಾಟಿಯಲ್ಲಿ ಹಾಸ್ಯ ಬೆರೆಸಿದ ಅವರು, ‘ಆನೆ, ಹುಲಿ, ಚಿರತೆ, ಕೋಣ, ನರಿ, ಮಂಗಗಳ ಬಳಿಗೆ ನಾವು ಸರ್ವಪಕ್ಷಗಳ ನಿಯೋಗದಲ್ಲಿ ಹೋಗಿ ನೀವು ಮಾಡಲು ಆಗದ ಕೆಲಸ ನಾವು ಮಾಡುತ್ತಿದ್ದೇವೆ ಎಂದು ಅವುಗಳಿಗೆ ಮನವಿ ಕೊಡೋಣ’ ಎಂದರು.

# ಕಿತ್ತೂರು, ಕಲ್ಯಾಣಕ್ಕೆ ಭರ್ಜರಿ ಕೊಡುಗೆ

ಒಂದನೇ ಪುಟದಿಂದ...

- **ಚನ್ನವೃಷಭೇಂದ್ರ ಏತ ನೀರಾವರಿ ಯೋಜನೆ:** ಬೆಳಗಾವಿ ಜಿಲ್ಲೆ ಸವದತ್ತಿ ಕಿತ್ತೂರು ವಿಧಾನಸಭಾ ಕ್ಷೇತ್ರಕ್ಕೆ ಒಳಪಡುವ ಬೈಲಹೊಂಗಲ ಮತ್ತು ಸವದತ್ತಿ ತಾಲ್ಲೂಕಿನ 31 ಗ್ರಾಮಗಳಿಗೆ ಸುಮಾರು 11,600 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯದ ₹520 ಕೋಟಿ ಯೋಜನೆಗೆ ಒಪ್ಪಿಗೆ.
- **ಸತ್ತೀಗೇರಿ ಏತ ನೀರಾವರಿ ಯೋಜನೆ:** ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ 6,678 ಹೆಕ್ಟೇರ್ ಕ್ಷೇತ್ರಕ್ಕೆ ಘಟಪ್ರಭಾ ನದಿ ಪಾತ್ರದಿಂದ 0.98 ಟಿಎಂಸಿ ನೀರನ್ನು ಎತ್ತಿ ನೀರಾವರಿ ಸೌಲಭ್ಯಕ್ಕೆ ಒಳಪಡಿಸುವ ಈ ಯೋಜನೆಗೆ ₹546 ಕೋಟಿಗೆ ಒಪ್ಪಿಗೆ.
- **ಔರಾದ್ ತಾಲ್ಲೂಕಿನ 36 ಕೆರೆಗಳ ತುಂಬಿಸುವ ಯೋಜನೆ:** ಬೀದರ್ ಜಿಲ್ಲೆಯ ಔರಾದ ತಾಲ್ಲೂಕಿನ ಬಳತ(ಬಿ) ಹತ್ತಿರ ಹಾಳಹಳ್ಳಿ ಬ್ಯಾರೇಜ್ ಮೇಲ್ಭಾಗದಲ್ಲಿ ಮಾಂಜ್ರಾ ನದಿಯಿಂದ 0.95 ಟಿಎಂಸಿ ಅಡಿ ನೀರನ್ನೆತ್ತಿ 36 ಕೆರೆಗಳನ್ನು ತುಂಬಿಸುವ ₹560.70 ಕೋಟಿ ಮೊತ್ತದ ಯೋಜನಾ ವರದಿಗೆ ಒಪ್ಪಿಗೆ.
- **ಮೆಹಕರ್ ಏತ ನೀರಾವರಿ ಯೋಜನೆ:** ಬೀದರ್ ಜಿಲ್ಲೆ ಭಾಲ್ಕಿ ತಾಲ್ಲೂಕಿನ ಜೀರಗ್ಯಾಳ ಬ್ಯಾರೇಜ್ ಮೇಲ್ಭಾಗದಲ್ಲಿ ಮಾಂಜ್ರಾ ನದಿಯಿಂದ 0.95 ಟಿಎಂಸಿ ನೀರನ್ನೆತ್ತಿ 12 ಗ್ರಾಮಗಳ ಸುಮಾರು 10 ಸಾವಿರ ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಕಲ್ಪಿಸುವ ₹762 ಕೋಟಿ ಯೋಜನೆಗೆ ಒಪ್ಪಿಗೆ.
- **ಕಲಬುರಗಿ ನಗರಕ್ಕೆ ಕುಡಿಯುವ ನೀರು ಸರಬರಾಜು ಯೋಜನೆ:** ಕಲಬುರಗಿ ನಗರಕ್ಕೆ ಕುಡಿಯುವ ನೀರು ಸರಬರಾಜು ಮಾಡಲು ಭೀಮಾ ಮತ್ತು ಕಾಗಿಣಾ ನದಿಗಳ ಸಂಗಮದ ಬಳಿ ಹುನಗುಂಟಾ ಗ್ರಾಮದ ಹತ್ತಿರ ಕಾಗಿಣಾ ನದಿಯ ಬಲದಂಡೆಯಲ್ಲಿ ಜಾಕ್ವೆಲ್ ಕಂ ಪಂಪ್‌ಹೌಸ್ ನಿರ್ಮಿಸಿ 1.624 ಟಿಎಂಸಿ ಅಡಿ ನೀರನ್ನೆತ್ತಿ ಬೆಣ್ಣೆತೋರಾ ಜಲಾಶಯಕ್ಕೆ ತುಂಬಿಸುವ ₹365 ಕೋಟಿ ಯೋಜನೆಗೆ ಒಪ್ಪಿಗೆ.
- ಧಾರವಾಡ ಜಿಲ್ಲೆಯ ಅಣ್ಣಿಗೇರಿ, ನವಲಗುಂದ, ಕುಂದಗೋಳ, ಹುಬ್ಬಳ್ಳಿ, ಧಾರವಾಡ, ಅಳ್ನಾವರ ಮತ್ತು ಕಲಘಟಗಿ ತಾಲ್ಲೂಕು ಪಂಚಾಯ್ತಿ ವ್ಯಾಪ್ತಿಯ ಕೆರೆಗಳ ಪುನರುಜ್ಜೀವನಕ್ಕಾಗಿ ಅಮೃತ ಸರೋವರ ನಿರ್ಮಾಣ ಯೋಜನೆಗೆ ₹30 ಕೋಟಿಗೆ ಅನುಮತಿ.
- ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲ್ಲೂಕಿನ ಕಿರುವತ್ತಿ ಮತ್ತು ಮದುನೂರು ಗ್ರಾಮ ಪಂಚಾಯಿತಿ ಹಾಗೂ ಮುಂಡಗೋಡ ತಾಲ್ಲೂಕಿನ ಗುಂಜಾವತಿ ಮತ್ತು ಮೈನಳ್ಳಿ ಪಂಚಾಯಿತಿಗಳ ವ್ಯಾಪ್ತಿಯಡಿ ಬೇಡ್ತಿ ನದಿ ಪಾತ್ರದಿಂದ ನೀರನ್ನು ಲಿಫ್ಟ್ ಮಾಡಿ ಒಟ್ಟು 100 ಕೆರೆಗಳನ್ನು ತುಂಬಿಸಲು ₹274.50 ಕೋಟಿ ಅನುದಾನಕ್ಕೆ ಒಪ್ಪಿಗೆ.
- ಆಳಂದ ತಾಲ್ಲೂಕಿನ ವ್ಯಾಪ್ತಿಯ 8 ಕೆರೆಗಳಿಗೆ ಭೋರಿನದಿಯಿಂದ ನೀರು ತುಂಬಿಸುವ ಪೈಪ್‌ಲೈನ್ ಯೋಜನೆಯ ₹49.50 ಕೋಟಿ ಮೊತ್ತದ ಸಮಗ್ರ ಯೋಜನಾ ವರದಿಗೆ ಒಪ್ಪಿಗೆ.
- ಕಲಬುರಗಿ ಜಿಲ್ಲೆ ಚಿಂಚೋಳಿ ತಾಲ್ಲೂಕು ಐನಾಪುರ ಮತ್ತು ಇತರೆ 17 ಗ್ರಾಮಗಳ ಸುಮಾರು 3710 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವ ₹204 ಕೋಟಿ ಮೊತ್ತದ ಏತ ನೀರಾವರಿ ಯೋಜನೆಯ ಡಿಪಿಆರ್‌ಗೆ ಒಪ್ಪಿಗೆ.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಅಂತರರಾಷ್ಟ್ರೀಯ ಸಾಂಸ್ಕೃತಿಕ ಜಾಂಬೂರಿ 2022ರಲ್ಲಿ ಸವಾಲಿನ ಕಣಿವೆ

# ಅನಾವರಣಗೊಂಡ ಸಾಹಸ ಜಗತ್ತು

• ಪ್ರವೀಣ ಕುಮಾರ್ ಪಿ ವಿ

**ಮೂಡುಬಿದಿರೆ:** ಅತ್ತಿಂದಿತ್ತ ತೂಗಾಡುತ್ತಿದ್ದ ಕೋತಿ-ಸೇತುವೆ (ಮಂಕಿ ಬ್ರಿಜ್) ಮೇಲೆ ವಿದ್ಯಾರ್ಥಿಗಳು ಎಚ್ಚರಿಕೆಯಿಂದ ಹೆಜ್ಜೆ ಹಾಕಿದರು, ಹಗ್ಗಗಳನ್ನು ಪೋಣಿಸಿ ನಿರ್ಮಿಸಿದ್ದ ರಷ್ಯನ್ ಗೋಡೆಯನ್ನು ಛಲ ಬಿಡದೆ ಹತ್ತಿದರು. ಓಲಾಡುವ ಏಣಿಯಲ್ಲೂ ಸಮತೋಲನ ಕಾಯ್ದುಕೊಂಡು ಮೇಲಕ್ಕೇರಿದರು. ಟೈರ್‌ಗಳಿಂದ ನಿರ್ಮಿಸಿದ್ದ ಗೋಡೆಯನ್ನು ಚಕಚಕನೇ ಹತ್ತಿ ಆಗಸದತ್ತ ಮುಷ್ಟಿ ಬೀಸಿದರು...

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಅಂತರರಾಷ್ಟ್ರೀಯ ಸಾಂಸ್ಕೃತಿಕ ಜಾಂಬೂರಿ 2022 ಅಂಗವಾಗಿ ಮೂಡುಬಿದಿರೆಯ ಆಳ್ವಾಸ್ ವಿದ್ಯಾಸಂಸ್ಥೆಯ ಪ್ರಾಂಗಣದಲ್ಲಿ ರೂಪಿಸಿರುವ 'ಸವಾಲಿನ ಕಣಿವೆ' ಪ್ರದೇಶದಲ್ಲಿ ವಿದ್ಯಾರ್ಥಿಗಳಿಗಾಗಿ ಏರ್ಪಡಿಸಿದ್ದ ಸಾಹಸ ಕಸರತ್ತುಗಳು ಒಂದಕ್ಕಿಂತ ಒಂದು ರೋಚಕ. ಬಲೆಯಲ್ಲಿ ನಡಿಗೆ, ಬಲೆಯೊಳಗೆ ನುಸುಳುವಿಕೆ, ಸ್ಕೈ-ಸೈಕ್ಲಿಂಗ್, ಟೈರ್‌ಗಳಿಂದ ನಿರ್ಮಿಸಿದ ಗುಹೆಯೊಳಗೆ ನುಸುಳುವಿಕೆ, ತೂಗುಹಾಕಿದ ಟೈರ್‌ಗಳಲ್ಲಿ ನೇತಾಡುತ್ತಾ ಸಾಗುವುದು, ನಾಲ್ಕು ಕಂಬಗಳ ಅಟ್ಟಳಿಗೆಯಲ್ಲಿ ಆಗಸದೆತ್ತರಕ್ಕೆ ಏರುವುದು... ದೇಹವನ್ನು ದಂಡಿಸುವ, ರೋಮಾಂಚನಕಾರಿ ಅನುಭವ ನೀಡುವ ಈ ಕಸರತ್ತುಗಳು ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳಿಗೆ ಜೀವನದಲ್ಲಿ ಎಂದೂ ಮರೆಲಾರದ ಅನುಭವದ ಬುತ್ತಿಯನ್ನು ಕಟ್ಟಿಕೊಟ್ಟವು.

ನೇಸರ ನೆತ್ತಿಯ ಮೇಲೇರಿದ ಹೊತ್ತಿನಲ್ಲಿ ಸುತ್ತಲೂ ಸುಡುಬಿಸಿಲಿತ್ತು. ಮೈ ತುಂಬಾ ಬೆವರಧಾರೆ ಇಳಿಯುತ್ತಿದರೂ ವಿದ್ಯಾರ್ಥಿಗಳ ಹುಮ್ಮಸ್ಸು ಕಡಿಮೆ ಆಗಿರಲಿಲ್ಲ. ತಮ್ಮ ಸರದಿ ಯಾವಾಗ ಬರುತ್ತದೆಯೋ ಎಂದು ಅವರು ಕಾದು ಕುಳಿತಿದ್ದರು. ಕೆಲ ವಿದ್ಯಾರ್ಥಿಗಳಿಗೆ ಕಸರತ್ತುಗಳನ್ನು ಪೂರೈಸಲು ಸಾಧ್ಯವಾಗಲಿಲ್ಲ. ಸಹ-ಶಿಬಿರಾರ್ಥಿಗಳು ಅವರನ್ನು ಹುರಿದುಂಬಿಸಿದರು. ಕೆಲವರು ಕಠಿಣ ಕಸರತ್ತುಗಳನ್ನು ಎರಡು-ಮೂರು ಪ್ರಯತ್ನಗಳ ಬಳಿಕ ಪೂರ್ಣಗೊಳಿಸಿದರು.

'ಇಲ್ಲಿ ಆಯೋಜಿಸಿರುವ ಸಾಹಸಗಳು ವಿದ್ಯಾರ್ಥಿಗಳನ್ನು ಶಾರೀರಿಕವಾಗಿ ಹಾಗೂ ಮಾನಸಿಕವಾಗಿ ದೃಢಗೊಳಿಸುತ್ತವೆ. ಇವು ಅವರ ಬೆಳವಣಿಗೆಗೆ ಪೂರಕ. ಒಟ್ಟು 138 ಬಗೆಯ ಸಾಹಸಮಯ ಕಸರತ್ತುಗಳಲ್ಲಿ ಭಾಗವಹಿಸಲು ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಲಾಗುತ್ತದೆ. ಯಾವುದಾದರೂ 20 ಕಸರತ್ತುಗಳನ್ನು ಯಶಸ್ವಿಯಾಗಿ ಪೂರೈಸುವ ವಿದ್ಯಾರ್ಥಿಗಳಿಗೆ 'ಚಾಲೆಂಜ್ ವ್ಯಾಲಿ' ಬ್ಯಾಡ್ಜ್ ನೀಡಲಾಗುತ್ತದೆ' ಎಂದು ಈ ಸಾಹಸ ಕಸರತ್ತುಗಳ ನಿರ್ವಹಣೆಯ ನಿರ್ದೇಶಕ ಜಿಮ್ಮಿ ಸಿಕ್ವೇರಾ 'ಪ್ರಜಾವಾಣಿ'ಗೆ ತಿಳಿಸಿದರು.

'ಈ ಸಾಹಸ ಕಸರತ್ತುಗಳ ಉಸ್ತುವಾರಿಗಾಗಿಯೇ 15 ಮೇಲ್ವಿಚಾರಕರು ಇದ್ದಾರೆ. ವಿದ್ಯಾರ್ಥಿಗಳಿಂದ ಕಸರತ್ತುಗಳನ್ನು ಮಾಡಿಸುವುದಕ್ಕಾಗಿಯೇ ರೋವರ್ಸ್ ಮತ್ತು ರೇಂಜರ್ಸ್‌ನ 200 ಪರಿಣಿತ ವಿದ್ಯಾರ್ಥಿಗಳನ್ನು ನಿಯೋಜಿಸಿದ್ದೇವೆ' ಎಂದು ಸ್ಕೌಟ್ಸ್ ಮತ್ತು ಗೈಡ್ಸ್‌ನ ಕೊಡಗು ಜಿಲ್ಲಾ ಮುಖ್ಯ ಆಯುಕ್ತರೂ ಆಗಿರುವ ಅವರು ಮಾಹಿತಿ ನೀಡಿದರು.



ಮಂಕಿ ಬ್ರಿಡ್ಜ್‌ನಲ್ಲಿ ವಿದ್ಯಾರ್ಥಿನಿಯ ಸಾಹಸ

### 10 ಸಾವಿರ ಮಂದಿಯಿಂದ ಸಾಹಸ

ಜಾಂಬೂರಿಯಲ್ಲಿ ವಿದ್ಯಾರ್ಥಿಗಳಿಗಾಗಿ ಕಸರತ್ತುಗಳು ಆರಂಭವಾದ ಮೊದಲ ದಿನವೇ 10 ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳು ಸಾಹಸಮಯ ಕಸರತ್ತುಗಳಲ್ಲಿ ಭಾಗವಹಿಸಿದರು. ಇದೇ 26ರ ವರೆಗೆ ನಿತ್ಯ ಬೆಳಿಗ್ಗೆ 9ರಿಂದ ಸಂಜೆ 4ರವರೆಗೆ ಈ ಕಸರತ್ತುಗಳು ಸತತವಾಗಿ ನಡೆಯುತ್ತಿರುತ್ತವೆ.



**ಬೆಳಿಗ್ಗೆ ಸುರತ್ಕಲ್ ಕಡಲಕಿನಾರೆಯಲ್ಲಿ ವಿಹಾರಕ್ಕೆ ಅವಕಾಶವಿತ್ತು. ಸಂಜೆ ಇಲ್ಲಿ ಸಾಹಸ ಕಸರತ್ತುಗಳಲ್ಲಿ ಭಾಗವಹಿಸುವ ಯೋಗ.**
**ಯಶೋಧರ ಎಚ್.,** ಶಿಕ್ಷಕ, ಸಾಗರ



**ಸಾಹಸ ಕ್ರೀಡೆಗಳಿಂದ ಬಹಳಷ್ಟನ್ನು ಕಲಿತೆವು. ಛಲ, ಹುಮ್ಮಸ್ಸು ಇಮ್ಮಡಿಯಾಯಿತು. ಈ ಅವಕಾಶ ಮತ್ತೆ ಸಿಗದು**
**ಸಿಯಾನ್,** ಗೈಡ್ಸ್ ವಿದ್ಯಾರ್ಥಿನಿ



**ಜಾಂಬೂರಿಯ ಸಾಂಸ್ಕೃತಿಕ ಕಾರ್ಯಕ್ರಮಗಳು, ಆಹಾರ ವೈವಿಧ್ಯ, ಉಪಚಾರ ಎಲ್ಲವೂ ಚೆನ್ನಾಗಿದೆ. ನಾವಂತೂ ತುಂಬಾ ಸಂಭ್ರಮಿಸುತ್ತಿದ್ದೇವೆ**
**ಶ್ರಾವ್ಯ,** ಗೈಡ್ಸ್ ವಿದ್ಯಾರ್ಥಿನಿ



**1997ರಿಂದ ಸ್ಕೌಟ್ಸ್‌ನ ಅನೇಕ ಜಾಂಬೂರಿಗಳಲ್ಲಿ ಭಾಗವಹಿಸಿದ್ದೇನೆ. ಈ ಜಾಂಬೂರಿ ನಿಸರ್ಗದ ಮಡಿಲಿನಲ್ಲಿ ತುಂಬಾ ಅಚ್ಚುಕಟ್ಟಾಗಿ ಆಯೋಜನೆಗೊಂಡಿದೆ**
**ಅಪೇಕ್ಷ್,** ಸ್ಕೌಟ್ಸ್ ವಿದ್ಯಾರ್ಥಿ



ಬಲೆಗಳೊಳಗೆ ನುಸುಳುವ ಕಸರತ್ತಿನಲ್ಲಿ ತೊಡಗಿರುವ ವಿದ್ಯಾರ್ಥಿಗಳು
– ಪ್ರಜಾವಾಣಿ ಚಿತ್ರಗಳು / ಫಕ್ರುದ್ದೀನ್ ಎಚ್.

# 'ಕೋವಿಡ್: ಆಡಳಿತ ಯಂತ್ರ ಸಜ್ಜಾಗಿರಿಸಿ'

ಒಂದನೇ ಪುಟದಿಂದ

ಕೋವಿಡ್ ಸೋಂಕಿತರಿಂದ ಸಂಗ್ರಹಿಸಲಾಗುವ ಮಾದರಿಗಳನ್ನು ಪ್ರತಿದಿನವೂ ಕೇಂದ್ರ ಸರ್ಕಾರದ ವೈರಾಣು ಸಂರಚನೆ ವಿಶ್ಲೇಷಣೆ ಸಂಸ್ಥೆ ಐಎನ್‌ಎಸ್‌ಎಸಿಒಜಿಯ ಪ್ರಯೋಗಾಲಯಗಳಿಗೆ ಕಳುಹಿಸಬೇಕು. ಯಾವುದಾದರೂ ಹೊಸ ಮಾದರಿ ಇದ್ದರೆ ಅದನ್ನು ಆರಂಭಿಕ ಹಂತದಲ್ಲೇ ಪತ್ತೆಮಾಡಲು ಇದರಿಂದ ಅನುಕೂಲವಾಗುತ್ತದೆ ಎಂದು ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ತಿಳಿಸಿದ್ದಾರೆ.

ಮಾಸ್ಕ್ ಕಡ್ಡಾಯಗೊಳಿಸುವ ಕುರಿತು ಸಭೆಯಲ್ಲಿ ಯಾವುದೇ ತೀರ್ಮಾನ ಕೈಗೊಂಡಿಲ್ಲ. ಜನದಟ್ಟಣೆ ಪ್ರದೇಶಗಳಲ್ಲಿ ಮುಖಗವಸು ಧರಿಸುವಂತೆ ನಾಗರಿಕರಿಗೆ ಸಲಹೆ ನೀಡಿರುವ ಮೋದಿ, ಮುಂಬರುವ ಹಬ್ಬಗಳು ಮತ್ತು ಹೊಸ ವರ್ಷಾಚರಣೆ ವೇಳೆ ಪ್ರತಿಯೊಬ್ಬರೂ ಕೋವಿಡ್ ಶಿಷ್ಟಾಚಾರ ಪಾಲಿಸುವಂತೆ ಮನವಿ ಮಾಡಿದ್ದಾರೆ. ದುರ್ಬಲ ವ್ಯಕ್ತಿಗಳು ಹಾಗೂ ವಯಸ್ಸಾದವರು ಮುನ್ನೆಚ್ಚರಿಕೆ ಡೋಸ್ ಪಡೆಯುವಂತೆಯೂ ಹೇಳಿದ್ದಾರೆ.

'ಆಲಕ್ಷ್ಯ ಭಾವನೆ ಬಿಟ್ಟು ಕಣ್ಗಾವಲು ಹೆಚ್ಚಿಸಬೇಕು. ಕಾರ್ಯಾಚರಣೆಗೆ ಅನುವಾಗುವಂತೆ ಸಾರಿಗೆ ಸೌಕರ್ಯ ಸಜ್ಜಾಗಿಟ್ಟುಕೊಳ್ಳಬೇಕು' ಎಂದೂ ಅಧಿಕಾರಿಗಳಿಗೆ ತಾಕೀತು ಮಾಡಿದ್ದಾರೆ.

ಪ್ರತಿ 15 ದಿನಗಳಿಗೊಮ್ಮೆ ಆಸ್ಪತ್ರೆಗಳಲ್ಲಿನ ಆಮ್ಲಜನಕದ ಸ್ಥಿತಿಗತಿ ಕುರಿತ ಮಾಹಿತಿ ಪಡೆಯುತ್ತಿದ್ದೇನೆ' ಎಂದು ಆರೋಗ್ಯ ಸಚಿವ ಮನ್ಸುಖ್ ಮಾಂಡವೀಯ ಅವರು ಸಭೆಯಲ್ಲಿ ತಿಳಿಸಿದ್ದಾರೆ.

**ಆಯ್ದ ಅಂತರರಾಷ್ಟ್ರೀಯ ಪ್ರಯಾಣಿಕರ ಮಾದರಿ ಸಂಗ್ರಹ:** 'ಎಲ್ಲಾ ವಿಮಾನ ನಿಲ್ದಾಣಗಳಲ್ಲಿ ಶೇ 2ರಷ್ಟು ಆಯ್ದ ಅಂತರರಾಷ್ಟ್ರೀಯ ಪ್ರಯಾಣಿಕರ ಮಾದರಿ ಸಂಗ್ರಹ ಗುರುವಾರದಿಂದಲೇ ಆರಂಭವಾಗಿದೆ. ಅಗತ್ಯಬಿದ್ದರೆ ಇದನ್ನು ಕಡ್ಡಾಯಗೊಳಿಸಲಾಗುತ್ತದೆ' ಎಂದು ಸಚಿವ ಮನ್ಸುಖ್ ಮಾಂಡವೀಯ ಗುರುವಾರ ಸಂಸತ್ತಿನ ಉಭಯ ಸದನಗಳಿಗೂ ತಿಳಿಸಿದ್ದಾರೆ.

'ಚೀನಾದಲ್ಲಿನ ಪರಿಸ್ಥಿತಿಯನ್ನು ಭಾರತಕ್ಕೆ ಹೋಲಿಸುವ ಅಗತ್ಯವಿಲ್ಲ ಎಂದು ತಜ್ಞರು ಹೇಳಿದ್ದಾರೆ. ಸೋಂಕಿಗೆ ಸುಲಭವಾಗಿ ತುತ್ತಾಗಬಲ್ಲವರು ಲಸಿಕೆಯ ಮೂರನೇ ಡೋಸ್ ಪಡೆಯುವುದು ಒಳಿತು ಎಂದು ಅವರು ಸಲಹೆ ನೀಡಿದ್ದಾರೆ' ಎಂದಿದ್ದಾರೆ.

ಚೀನಾದಿಂದ ಬರುವ ವಿಮಾನದ ಮೇಲೆ ನಿರ್ಬಂಧ ವಿಧಿಸುವ ಆಲೋಚನೆ ಇದೆಯೇ ಎಂದು ಸದಸ್ಯರೊಬ್ಬರು ಕೇಳಿದ ಪ್ರಶ್ನೆಗೆ, 'ಚೀನಾದಿಂದ ನೇರವಾಗಿ ಭಾರತಕ್ಕೆ ಯಾವುದೇ ವಿಮಾನ ಇಲ್ಲ. ವೈರಾಣು ಭಾರತಕ್ಕೆ ಕಾಲಿಡದಂತೆ ತಡೆಯಬೇಕಿರುವುದು ನಮ್ಮ ಕರ್ತವ್ಯ. ಹಾಗಂತ ಪ್ರಯಾಣಕ್ಕೂ ಅಡ್ಡಿಯಾಗಬಾರದು' ಎಂದಿದ್ದಾರೆ.

## ರಘುನಾಥಗೆ 'ಪು.ತಿ.ನ.ಕಾವ್ಯ ನಾಟಕ ಪುರಸ್ಕಾರ'



**ಬೆಂಗಳೂರು:** ಡಾ.ಪು.ತಿ.ನ. ಟ್ರಸ್ಟ್ ನೀಡುವ 2021ನೇ ಸಾಲಿನ 'ಡಾ.ಪು.ತಿ.ನ.ಕಾವ್ಯ ನಾಟಕ ಪುರಸ್ಕಾರ'ಕ್ಕೆ ಸಾಹಿತಿ ಸ. ರಘುನಾಥ ಅವರ 'ಗನ್ನೇರಿ' ಕೃತಿ ಆಯ್ಕೆಯಾಗಿದೆ.

ಪುರಸ್ಕಾರವು ₹ 25 ಸಾವಿರ ನಗದು ಒಳಗೊಂಡಿದೆ. ಇದೇ 25ರಂದು ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಕವಿ ಎಚ್.ಎಸ್. ವೆಂಕಟೇಶಮೂರ್ತಿ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಟ್ರಸ್ಟ್‌ನ ಕಾರ್ಯದರ್ಶಿ ಎಚ್.ವಿ. ರವೀಶ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಾವೇರಿಯಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ

# 2 ವಾರ ಬಾಕಿ: ಬಿಡುಗಡೆ ಆಗದ 'ಆಮಂತ್ರಣ'!

• ಸಿದ್ದು ಆರ್.ಜಿ.ಹಳ್ಳಿ

**ಹಾವೇರಿ:** ಏಲಕ್ಕಿ ಕಂಪಿನ ನಾಡಿನಲ್ಲಿ ಜನವರಿ 6ರಂದು ಆರಂಭಗೊಳ್ಳಲಿರುವ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಎರಡೇ ವಾರ ಉಳಿದಿದೆ, ಸಮ್ಮೇಳನದ ಆಮಂತ್ರಣ ಪತ್ರಿಕೆಯೇ ಬಿಡುಗಡೆಯಾಗದಿರುವುದು ಚರ್ಚೆಗೆ ಗ್ರಾಸವಾಗಿದೆ ಹಾಗೂ ಪ್ರಚಾರ ಕಾರ್ಯಕ್ಕೆ ಹಿನ್ನಡೆಯಾಗಿದೆ.


ಸಾಹಿತ್ಯ ಪರಿಷತ್ತು ಒಂದು ತಿಂಗಳು ಮುಂಚಿತವಾಗಿ ಆಮಂತ್ರಣ ಪತ್ರಿಕೆಯನ್ನು ಸಿದ್ಧಪಡಿಸುತ್ತದೆ. ಆಮಂತ್ರಿತರು, ಸಾಹಿತಿಗಳು, ಗಣ್ಯರು ಹಾಗೂ ಜನಪ್ರತಿನಿಧಿಗಳಿಗೆ ತಲುಪಿಸುವ ಕಾರ್ಯ ಮಾಡುತ್ತದೆ.

ಹಾವೇರಿಯಲ್ಲಿ ನಡೆಯುವ ಸಾಹಿತ್ಯ ಸಮ್ಮೇಳನಕ್ಕೆ ಕೇವಲ 14 ದಿನಗಳು ಉಳಿದಿದ್ದರೂ, ಆಮಂತ್ರಣ ಪತ್ರಿಕೆ ಸಿದ್ಧಪಡಿಸಿ, ಮುದ್ರಿಸುವ ಕಾರ್ಯ ಶುರುವಾಗಿಲ್ಲ. 3 ದಿನ ನಡೆಯುವ ಸಮ್ಮೇಳನದ ಕಾರ್ಯಕ್ರಮಗಳ ಬಗ್ಗೆ ಯಾರೊಬ್ಬರಿಗೂ ಸ್ಪಷ್ಟ ಚಿತ್ರಣ ಸಿಗುತ್ತಿಲ್ಲ ಎಂಬ ಟೀಕೆಗಳು ವ್ಯಕ್ತವಾಗಿವೆ.

**ಪ್ರಶ್ನೆಗಳಿಗೆ ಸಿಗದ ಉತ್ತರ:** ಆಮಂತ್ರಣ ಪತ್ರಿಕೆಯನ್ನು ಮುದ್ರಿಸುವುದು, ಬಿಡುಗಡೆ ಯಾವಾಗ? ಅಂಚೆ ಮೂಲಕ ತಲುಪಿಸಲು ತಡವಾಗದೆ? ಕಾರ್ಯಕ್ರಮದಲ್ಲಿ ಯಾರ್‍ಯಾರಿಗೆ ಅವಕಾಶ ಸಿಕ್ಕಿವೆ...? ಹೀಗೆ ಸಾಲು ಸಾಲು ಪ್ರಶ್ನೆಗಳನ್ನು ಸಾಹಿತ್ಯಾಸಕ್ತರು ಕೇಳುತ್ತಿದ್ದಾರೆ. ಇದಕ್ಕೆ ಜಿಲ್ಲಾ ಮಟ್ಟದ ಕಸಾಪ ಪದಾಧಿಕಾರಿಗಳ ಬಳಿ ಉತ್ತರವೇ ಇಲ್ಲ.

**ಆಹ್ವಾನ ಪತ್ರಿಕೆಯೇ ಸಿಕ್ಕಿಲ್ಲ:** '20 ದಿನ ಮುಂಚಿತವಾಗಿಯೇ ಕೇಂದ್ರ ಕಸಾಪ ಕಚೇರಿಯಿಂದ ಎಲ್ಲ ಜಿಲ್ಲೆಗಳ ಘಟಕಗಳಿಗೆ ಪತ್ರಿಕೆ ತಲುಪಿದ್ದರೆ ಸ್ಥಳೀಯ ಗಣ್ಯರಿಗೆ, ಸಾಹಿತಿಗಳಿಗೆ ಆಹ್ವಾನಿಸಲು ಸಾಧ್ಯವಾಗುತ್ತಿತ್ತು.' ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಕಲಬುರಗಿ ಜಿಲ್ಲಾ ಘಟಕದ ನಿಕಟಪೂರ್ವ ಅಧ್ಯಕ್ಷ ವೀರಭದ್ರ ಸಿಂಪಿ ಬೇಸರ ವ್ಯಕ್ತಪಡಿಸಿದರು.

**ಸೋರಿಕೆ:** ಡಿಸೆಂಬರ್ 8ರಂದು ಸಾಮಾಜಿಕ ಜಾಲತಾಣದಲ್ಲಿ, ಸಾಹಿತ್ಯ ಸಮ್ಮೇಳನದ ಆಮಂತ್ರಣ ಪತ್ರಿಕೆ ಹರಿದಾಡಿ ಗೊಂದಲ ಉಂಟಾಗಿತ್ತು. ಆಗ ಕಸಾಪ ಅಧ್ಯಕ್ಷ ಮಹೇಶ ಜೋಶಿಯವರು 'ಇದು ಅಧಿಕೃತ ಆಮಂತ್ರಣ ಪತ್ರಿಕೆಯಲ್ಲ. ಡಿಟಿಪಿ ಹಂತದಲ್ಲಿದ್ದ ಪ್ರತಿಯನ್ನು ಯಾರೋ ಕಿಡಿಗೇಡಿಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟಿದ್ದಾರೆ' ಎಂದು ಸ್ಪಷ್ಟನೆ ನೀಡಿದ್ದರು.



86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಲಾಂಛನ

**25 ಸಾವಿರ ಆಮಂತ್ರಣ ಪತ್ರಿಕೆಗಳನ್ನು ಸಿದ್ಧಪಡಿಸಿದ್ದೇವೆ. ಬಿಡುಗಡೆಗೆ ಸಿಎಂ ಅವರ ದಿನಾಂಕ ಕೇಳಿದ್ದೇವೆ. ಶೀಘ್ರವೇ ದಿನಾಂಕ ಸಿಗುವ ನಿರೀಕ್ಷೆಯಿದೆ**
**ಮಹೇಶ ಜೋಶಿ,** ಕಸಾಪ ಅಧ್ಯಕ್ಷ

### ಹೆಸರಿಗಾಗಿ ಒತ್ತಡ?

ಸಮ್ಮೇಳನದಲ್ಲಿ ಪ್ರದರ್ಶನ ನೀಡಲು ಕಲಾತಂಡಗಳಿಂದ ಹಾಗೂ ಆಮಂತ್ರಣ ಪತ್ರಿಕೆಯಲ್ಲಿ ಹೆಸರು ಹಾಕಿಸಿಕೊಳ್ಳಲು ಕೆಲವು ಕನ್ನಡಪರ ಸಂಘಟನೆಗಳಿಂದ ಭಾರಿ ಒತ್ತಡ ಬರುತ್ತಿರುವ ಕಾರಣ, ಕೇಂದ್ರ ಕಸಾಪ ಪದಾಧಿಕಾರಿಗಳು ಹೆಸರನ್ನು ಸೇರಿಸುವ ಮತ್ತು ಕೈಬಿಡುವ ಕಸರತ್ತಿನಲ್ಲಿ ತೊಡಗಿರುವುದರಿಂದ ಆಮಂತ್ರಣ ಪತ್ರಿಕೆ ಬಿಡುಗಡೆ ವಿಳಂಬವಾಗಿದೆ ಎಂದು ಕಸಾಪ ಪದಾಧಿಕಾರಿಯೊಬ್ಬರು ತಿಳಿಸಿದರು.

## ಏರ್ ಸುವಿಧಾ ಪುನಃ ಜಾರಿ ಪರಿಶೀಲನೆ: ಮನ್ಸುಖ್ ಮಾಂಡವೀಯ

**ನವದೆಹಲಿ(ಪಿಟಿಐ):** ವಿದೇಶಗಳಿಂದ ಬರುವ ವಿಮಾನ ಪ್ರಯಾಣಿಕರು ಕೋವಿಡ್ ಲಸಿಕೆ ಪಡೆದಿರುವ ಪ್ರಮಾಣಪತ್ರ ಅಥವಾ ಆರ್‌ಟಿ-ಪಿಸಿಆರ್ ನೆಗೆಟಿವ್ ವರದಿಯ ಪ್ರತಿಯನ್ನು 'ಏರ್ ಸುವಿಧಾ ಪೋರ್ಟಲ್'ನಲ್ಲಿ ಸಲ್ಲಿಸಬೇಕಿದ್ದ ನಿಬಂಧನೆಯನ್ನು ಪುನಃ ಜಾರಿಗೊಳಿಸಲು ಕೇಂದ್ರ ಸರ್ಕಾರ ಪರಿಶೀಲಿಸುತ್ತಿದೆ ಎಂದು ಆರೋಗ್ಯ ಸಚಿವ ಮನ್ಸುಖ್ ಮಾಂಡವೀಯ ಗುರುವಾರ ತಿಳಿಸಿದರು.

ದೇಶದಲ್ಲಿ ಕೋವಿಡ್ ತಗ್ಗಿದ್ದರಿಂದ 'ಏರ್ ಸುವಿಧಾ ಪೋರ್ಟಲ್' ನಿಬಂಧನೆ ಸಡಿಲಗೊಳಿಸಲಾಗಿತ್ತು. ಚೀನಾದಲ್ಲಿ ಕೋವಿಡ್‌ನ ಓಮೈಕ್ರಾನ್ ಬಿಎಫ್.7 ತಳಿಯ ಸೋಂಕು ವ್ಯಾಪಕವಾಗಿ ಹರಡಿದ ಕಾರಣಕ್ಕೆ ಮುನ್ನೆಚ್ಚರಿಕೆಯಾಗಿ, ಚೀನಾ ಮತ್ತು ಇತರ ರಾಷ್ಟ್ರಗಳಿಂದ ಬರುವವರಿಗೆ 'ಏರ್ ಸುವಿಧಾ' ಮರು ಪರಿಚಯಿಸುವುದು ಪರಿಶೀಲನೆಯಲ್ಲಿದೆ ಎಂದರು.

## ಕೋವಿಡ್ ಪರೀಕ್ಷೆಯಿಲ್ಲದೆ ತಾಜ್‌ಗೆ ಪ್ರವೇಶವಿಲ್ಲ

**ಲಖನೌ:** ವಿಶ್ವಪ್ರಸಿದ್ಧ ಪ್ರವಾಸಿ ತಾಣ ತಾಜ್ ಮಹಲ್‌ಗೆ ಭೇಟಿ ನೀಡಬಯಸುವ ಪ್ರವಾಸಿಗರು ಕಡ್ಡಾಯವಾಗಿ ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳಬೇಕು ಎಂದು ಉತ್ತರ ಪ್ರದೇಶ ಸರ್ಕಾರ ಗುರುವಾರ ಸೂಚಿಸಿದೆ. ಅಲ್ಲದೆ, ರಾಜ್ಯದಲ್ಲಿ ಮುನ್ನೆಚ್ಚರಿಕಾ ಡೋಸ್ ಪ್ರಮಾಣವನ್ನು ಹೆಚ್ಚಿಸುವಂತೆಯೂ ಅಲ್ಲಿನ ಸರ್ಕಾರವು ಆರೋಗ್ಯಾಧಿಕಾರಿಗಳಿಗೆ ಹೇಳಿದೆ.

# '29ರಂದು 2ಎ ಮೀಸಲಾತಿ ಘೋಷಣೆ'

ಒಂದನೇ ಪುಟದಿಂದ

'ಕೇಂದ್ರ ಸರ್ಕಾರವು ಆರ್ಥಿಕವಾಗಿ ಹಿಂದುಳಿದ ಎಲ್ಲ ಮೇಲ್ವರ್ಗದ ಪಂಗಡಗಳಿಗೆ ಶೇ10ರಷ್ಟು ಮೀಸಲಾತಿಯನ್ನು ಘೋಷಿಸಿದೆ. ನರೇಂದ್ರ ಮೋದಿ ಅವರು ಘೋಷಿಸಿದ ಇದೇ ಮಾದರಿಯಲ್ಲಿ ರಾಜ್ಯದಲ್ಲಿಯೂ ಪಂಚಮಸಾಲಿ ಸಮುದಾಯಕ್ಕೆ ಮೀಸಲಾತಿ ದೊರೆಯಲಿದೆ' ಎಂದೂ ಯತ್ನಾಳ ಸ್ಪಷ್ಟಪಡಿಸಿದರು.

'ಸುವರ್ಣಸೌಧಕ್ಕೆ ಮುತ್ತಿಗೆ ಹಾಕಲು ಸಿದ್ಧರಾಗಿಯೇ ಬಂದಿದ್ದೆವು. ಆದರೆ, ಸರ್ಕಾರದ ನಿರ್ಣಯ ನಮ್ಮ ಪರವಾಗಿದೆ. ಒಂದು ವೇಳೆ ರಾಗ ಬದಲಿಸಿದರೆ ಡಿ.30 ರಿಂದ ಮುಖ್ಯಮಂತ್ರಿಯೂ ಸೇರಿ ಎಲ್ಲ ಸಚಿವರನ್ನೂ ಮನೆಗೆ ಕಳುಹಿಸಲು ಸಿದ್ಧರಾಗಿ' ಎಂದೂ ಅವರು ಕರೆ ನೀಡಿದರು.

'ಪಂಚಮಸಾಲಿ ಸಮುದಾಯ ತೀರ ಕಷ್ಟದಲ್ಲಿದೆ, ಮೀಸಲಾತಿಗೆ ಹಕ್ಕುದಾರರು ಎಂದು ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಜಯಪ್ರಕಾಶ ಹೆಗ್ಡೆ ಅವರು ಸಲ್ಲಿಸಿದ ವರದಿಯಲ್ಲಿದೆ' ಎಂದೂ ತಿಳಿಸಿದರು.

'ನಾವು ಸ್ವಾರ್ಥಿಗಳಲ್ಲ. ನಮ್ಮ ಕೆಲಸ ಮುಗಿದ ಮೇಲೆ ಹಾಲುಮತ ಸಮಾಜಕ್ಕೆ ಎಸ್‌.ಟಿ ಮೀಸಲಾತಿ, ಮರಾಠ, ಬ್ರಾಹ್ಮಣ, ಮಡಿವಾಳ ಸಮಾಜಗಳಿಗೆ ಯಾವ ರೀತಿಯ ಮೀಸಲಾತಿ ಬೇಕೆಂಬ ಹೋರಾಟ ಆರಂಭಿಸುತ್ತೇವೆ' ಎಂದೂ ಯತ್ನಾಳ ಹೇಳಿದರು.

ಕೂಡಲಸಂಗಮದ ಪಂಚಮಸಾಲಿ ಪೀಠಾಧಿಪತಿ ಬಸವಜಯ ಮೃತ್ಯುಂಜಯ ಸ್ವಾಮೀಜಿ, 'ಸಚಿವ ಸ್ಥಾನಕ್ಕಾಗಿ ಲಾಬಿ ಮಾಡಿ ಎಂದು ಬಂಡವಾಳಶಾಹಿಯೊಬ್ಬರು ನನಗೆ ಹೇಳಿದರು. ಆದರೆ, ನಾನು ಪೀಠ ಏರಿದ್ದು ನನ್ನ ಸಮಾಜದ ಜನರ ಉದ್ಧಾರಕ್ಕಾಗಿಯೇ ಹೊರತು ಯಾರನ್ನೋ ಶಾಸಕ, ಮಂತ್ರಿ ಮಾಡಲು ಅಲ್ಲ' ಎಂದರು.

'ಲಿಂಗಾಯತರಲ್ಲಿ ಶೇ 72ರಷ್ಟು ಪಂಚಮಸಾಲಿ ಇದ್ದಾರೆ. ಹೋರಾಟ ಆರಂಭಿಸಿದಾಗ ಕೆಲವರು ನಮ್ಮನ್ನು ಹುಚ್ಚರು ಎಂದು ಜರಿದರು. ಈಗ ಮೀಸಲಾತಿ ಸಿಗುತ್ತದೆ ಎಂದ ತಕ್ಷಣ ಸಮಾವೇಶದಲ್ಲಿ ತಾವೂ ಭಾಗಿಯಾಗಲು ಬಂದರು. ಆದರೆ, ನೂರಾರು ಕಿ.ಮೀ ಪಾದಯಾತ್ರೆ ಮಾಡಿ ಹೋರಾಡಿದವರು ನಾವು. ಯಾರು ಸಮಾಜದ ಜತೆಗೆ ಹೆಜ್ಜೆ ಹಾಕಿಲ್ಲವೋ ಅವರನ್ನೆಲ್ಲ ಮುಂದಿನ ಬಾರಿ ಧಿಕ್ಕರಿಸಿ' ಎಂದು ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಸಮಾಜದ ರಾಷ್ಟ್ರೀಯ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ ಹೇಳಿದರು.

ಶಾಸಕರಾದ ಲಕ್ಷ್ಮಿ ಹೆಬ್ಬಾಳಕರ, ಮಹಾಂತೇಶ ದೊಡ್ಡಗೌಡರ, ಸಿದ್ದು ಸವದಿ, ರಾಜಕುಮಾರ ಪಾಟೀಲ ತೇಲ್ಕೂರ, ರಾಜ್ಯಸಭೆ ಸದಸ್ಯ ಈರಣ್ಣ ಕಡಾಡಿ ಸೇರಿದಂತೆ ಹಲವು ಮಾಜಿ ಶಾಸಕರು, ಮಾಜಿ ವಿಧಾನ ಪರಿಷತ್ ಸದಸ್ಯರು, ಮುಖಂಡರೂ ಪಕ್ಷಾತೀತವಾಗಿ ವೇದಿಕೆಯಲ್ಲಿ ಇದ್ದರು.

**ನನಗೆ ಪೀಠವೂ ಬೇಡ, ಪಟ್ಟವೂ ಬೇಡ. ನನ್ನ ಜನರಿಗೆ ಮೀಸಲಾತಿ ಕೊಟ್ಟರೆ ಸಾಕು. ಸಮಾಜದ ಜನರೇ ನನಗೆ ಪೀಠ, ಪಟ್ಟ, ಪ್ರತ್ಯಕ್ಷ ದೈವ. ಜೀವ ಇದ್ದರೆ ನಿಮಗಾಗಿಯೇ ಇರುತ್ತೇನೆ**
**ಬಸವಜಯ ಮೃತ್ಯುಂಜಯ ಸ್ವಾಮೀಜಿ**
ಕೂಡಲಸಂಗಮ ಪಂಚಮಸಾಲಿ ಪೀಠ

**ನಾವು ಇಲ್ಲಿಂದ ಬರಿಗೈಯಲ್ಲಿ ಹೋಗುತ್ತಿಲ್ಲ. ನಿಮಗೆಲ್ಲ ಮೀಸಲಾತಿ ತೆಗೆದುಕೊಂಡೇ ಹೋಗುತ್ತಿದ್ದೇವೆ. ಪಂಚಮಸಾಲಿಗರೇ ನಿಮ್ಮ ಪ್ರಗತಿಯ ದಿನಗಳು ಆರಂಭವಾದವು**
**ವಿಜಯಾನಂದ ಕಾಶಪ್ಪನವರ,**
ಅಧ್ಯಕ್ಷ, ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಸಮಾಜ

ವಿಡಿಯೊ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

### ಮುಗಿಲು ಮುಟ್ಟಿದ ಹರ್ಷೋದ್ಗಾರ

'ಮೀಸಲಾತಿ ಸಿಕ್ಕೇ ಬಿಟ್ಟಿತು' ಎಂದು ವೇದಿಕೆಯಲ್ಲಿ ಘೋಷಣೆ ಮಾಡುತ್ತಿದ್ದಂತೆಯೇ ಜನಸ್ತೋಮದ ಹರ್ಷೋದ್ಗಾರ ಮುಗಿಲು ಮುಟ್ಟಿತು. ಅಪಾರ ಸಂಖ್ಯೆಯಲ್ಲಿ ಸೇರಿದ ಜನ ಛಂಗನೆ ಎದ್ದುನಿಂತು ಕೂಗಾಟ, ಚೀರಾಟ ಶುರು ಮಾಡಿದರು. ಶಿಳ್ಳೆ, ಚಪ್ಪಾಳೆ ತಟ್ಟ, ಧ್ವಜ ಹಾರಿಸಿ, ಜೈಕಾರ ಹಾಕಿದರು. ಯುವಕರು ನಿಂತ ಜಾಗದಲ್ಲೇ ಕುಣಿದು ಕುಪ್ಪಳಿಸಿದರು.

ಬಸವಣ್ಣನಿಗೆ ಜಯವಾಗಲಿ, ಪಂಚಮಸಾಲಿ ಜಗದ್ಗುರುವಿಗೆ ಜಯವಾಗಲಿ, ಯತ್ನಾಳ ಗೌಡರಿಗೆ, ಹುನಗುಂದ ಹುಲಿ (ಕಾಶಪ್ಪನವರ)ಗೆ ಜಯವಾಗಲಿ, ಧಾರವಾಡ ಹುಲಿ (ವಿನಯ ಕುಲಕರ್ಣಿ)ಗೆ ಜಯವಾಗಲಿ... ಎಂದು ನಿರಂತರ ಘೋಷಣೆ ಮೊಳಗಿಸಿದರು.

## ಪಂಚಮಸಾಲಿಗೆ '2 ಎ' ಬದಲು ಹೊಸ 'ಪ್ರವರ್ಗ'?

ಒಂದನೇ ಪುಟದಿಂದ

ಕೆಲವು ಜಿಲ್ಲೆಗಳಲ್ಲಿ ಮಾಹಿತಿ ಸಂಗ್ರಹಿಸಬೇಕಿದ್ದು, ವಿವಿಧ ಸಮುದಾಯಗಳ ಮುಖಂಡರ ಅಭಿಪ್ರಾಯವನ್ನು ಪಡೆಯಬೇಕಿದೆ. ಅದಾದ ಬಳಿಕವಷ್ಟೇ ಸಮಗ್ರ ವರದಿ ಪಡೆಯಲು ಸಾಧ್ಯ ಎಂದಷ್ಟೇ ಹೆಗ್ಡೆ ಅವರು ಮುಖ್ಯಮಂತ್ರಿಗೆ ತಿಳಿಸಿದರು ಎಂದೂ ಹೇಳಿವೆ.

ಹಿಂದುಳಿದ ಜಾತಿಗಳ ಮೀಸಲಾತಿಯಲ್ಲಿ ಪ್ರವರ್ಗ '2 ಎ' ನಲ್ಲಿ 104 ಜಾತಿಗಳು, ಪ್ರವರ್ಗ '2 ಬಿ'ಯಲ್ಲಿ ಮುಸ್ಲಿಂ ಸಮುದಾಯವಿದೆ. ಪ್ರವರ್ಗ '3ಎ' ನಲ್ಲಿ 3 ಹಾಗೂ ಪ್ರವರ್ಗ '3 ಬಿ'ಯಲ್ಲಿ 4 ಜಾತಿಗಳಿವೆ. ಪ್ರವರ್ಗ '2 ಎ' ನಲ್ಲಿರುವ ಬಲಾಢ್ಯ ಜಾತಿಗಳವರು ಮೀಸಲಾತಿಯ ಹೆಚ್ಚಿನ ಪಾಲು ಪಡೆಯುತ್ತಿದ್ದಾರೆ. ಸುಮಾರು 99 ಉಪಜಾತಿಗಳಿಗೆ ಸೌಲಭ್ಯವೇ ಸಿಕ್ಕಿಲ್ಲ. ಹೀಗಿರುವಾಗ, '2 ಎ'ಗೆ ಸೇರಿಸುವುದು ಕಷ್ಟ ಎಂಬ ಅಭಿಪ್ರಾಯವೂ ಇದೆ ಎಂದು ಹೇಳಲಾಗಿದೆ. '2 ಎ' ಗೆ ಸೇರಿಸಿ ಅಲ್ಲಿನ ಸಮುದಾಯಗಳ ವಿರೋಧ ಕಟ್ಟಿಕೊಳ್ಳುವ ಬದಲು, ಪ್ರವರ್ಗ '3 ಬಿ' ನಲ್ಲಿ ಲಿಂಗಾಯತರಿದ್ದಾರೆ. ಈ ಗುಂಪಿಗೆ ಶೇ 5ರಷ್ಟು ಮೀಸಲಾತಿ ಇದೆ. ಪಂಚಮಸಾಲಿಗಳು ಲಿಂಗಾಯತರ ಉಪಪಂಗಡವೇ ಆಗಿರುವುದರಿಂದ ಪ್ರವರ್ಗ '3 ಎ' ನಲ್ಲಿನ ಶೇ 2ರಷ್ಟನ್ನು ವಿಭಜಿಸಿ, ಅದನ್ನು ಪಂಚಮಸಾಲಿಗಳಿಗೆ ನೀಡಿ,'2 ಸಿ' ಅಥವಾ '3 ಸಿ' ಹೆಸರಿನಲ್ಲಿ ಹೊಸ ವರ್ಗೀಕರಣ ಮಾಡುವುದು ಸೂಕ್ತ ಎಂಬ ಅಭಿಪ್ರಾಯವೂ ಇದೆ ಎನ್ನಲಾಗಿದೆ.

### ಚರ್ಚೆ ಬಳಿಕ ತೀರ್ಮಾನ: ಬೊಮ್ಮಾಯಿ

'ಹಿಂದುಳಿದ ವರ್ಗಗಳ ಆಯೋಗ ನೀಡಿದ ಮಧ್ಯಂತರ ವರದಿಯ ಕುರಿತು ಆದಷ್ಟು ಬೇಗನೇ ಕಾನೂನಾತ್ಮಕವಾಗಿ ಚರ್ಚೆ ಮಾಡಿ, ಎಲ್ಲ ಪಕ್ಷದ ನಾಯಕರೊಂದಿಗೆ ಸಮಾಲೋಚಿಸಿ ಈ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಬೆಳಗಾವಿಯಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ಜಯಪ್ರಕಾಶ ಹೆಗ್ಡೆಯವರು ನೀಡಿದ ವರದಿಯನ್ನು ಪರಿಶೀಲಿಸುತ್ತೇವೆ. ಕಾನೂನು ಮತ್ತು ಸಂಸದೀಯ ಸಚಿವರೊಂದಿಗೆ ಚರ್ಚಿಸಿ ಸೂಕ್ತ ರೀತಿಯಲ್ಲಿ ಕಾನೂನಾತ್ಮಕ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ಎಂದರು. 'ನ್ಯಾ. ನಾಗಮೋಹನ್ ದಾಸ್ ವರದಿ ಬಂದು ವರ್ಷದ ನಂತರ ವಿವರಗಳನ್ನು ನೀಡಲಾಗಿತ್ತು. ನ್ಯಾ. ಸದಾಶಿವ ಆಯೋಗ ವರದಿ ಬಂದು ಹತ್ತು ವರ್ಷವಾಗಿದ್ದು, ಸರ್ಕಾರ ಒಪ್ಪಿಗೆ ನೀಡದೇ ಇರುವುದರಿಂದ ಇನ್ನೂ ವಿವರ ನೀಡಲಾಗಿಲ್ಲ. ಕಾಂತರಾಜು ವರದಿ ಇನ್ನೂ ಆಯೋಗದಲ್ಲೇ ಇದ್ದು, ಸರ್ಕಾರಕ್ಕೆ ಸಲ್ಲಿಕೆಯಾಗಿಲ್ಲ. ಹೀಗಾಗಿ ವಿವರನ್ನೂ ನೀಡಲು ಸಾಧ್ಯವಾಗಿಲ್ಲ' ಎಂದು ಹೇಳಿದರು.

### ಸಂಪುಟ ಸಭೆಯಲ್ಲಿ ಚರ್ಚೆಯಾಗಿಲ್ಲ

ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಮಧ್ಯಂತರ ವರದಿ ಬಗ್ಗೆ ಚರ್ಚೆಯೇ ನಡೆದಿಲ್ಲ. ಚುನಾವಣೆ ಹಾಗೂ ಪಂಚಮಸಾಲಿ ಹೋರಾಟದ ಹಿನ್ನೆಲೆಯಲ್ಲಿ ಇಂದೇ ವರದಿಯನ್ನು ಮಂಡಿಸಿ, ಒಪ್ಪಿಗೆ ನೀಡಿ ಮೀಸಲಾತಿ ಘೋಷಣೆ ಮಾಡಲಾಗುತ್ತದೆ ಎಂದು ಸುದ್ದಿ ಹಬ್ಬಿತ್ತು. ಆದರೆ, ಈ ವಿಷಯ ಚರ್ಚೆಗೆ ಬರಲಿಲ್ಲ ಎಂದು ಮೂಲಗಳು ಹೇಳಿವೆ.

### '2ಎ'ಗೆ ಬಲಾಢ್ಯರು; ಹಿಂದುಳಿದ ಜಾತಿಗಳ ವಿರೋಧ

**ಬೆಂಗಳೂರು:** ಲಿಂಗಾಯತ ಪಂಚಮಸಾಲಿ ಸೇರಿದಂತೆ ಸಾಮಾಜಿಕ, ಶೈಕ್ಷಣಿಕ ಹಾಗೂ ಎಲ್ಲ ರೀತಿಯಿಂದಲೂ ಮುಂದುವರಿದ ಯಾವುದೇ ಜಾತಿಯನ್ನು ಪ್ರವರ್ಗ '2ಎ' ಮೀಸಲಾತಿ ಪಟ್ಟಿಗೆ ಸೇರಿಸಬಾರದು ಎಂದು ಕರ್ನಾಟಕ ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟ ಆಗ್ರಹಿಸಿದೆ.

'ರಾಜ್ಯ ಹಿಂದುಳಿದ ವರ್ಗಗಳ ಆಯೋಗ ನಡೆಸಿರುವ ಸಾಮಾಜಿಕ, ಆರ್ಥಿಕ ಸಮೀಕ್ಷೆಯನ್ನು ತಕ್ಷಣ ಬಿಡುಗಡೆ ಮಾಡಬೇಕು. ಅದರಲ್ಲಿನ ವೈಜ್ಞಾನಿಕ ಅಂಕಿ ಅಂಶಗಳ ಆಧಾರದ ಮೇಲೆ ಮೀಸಲಾತಿ ಪ್ರಕಟಿಸಬೇಕು. ಹಾಗೆ ಮಾಡದೇ ಪಂಚಮಸಾಲಿ ಸೇರಿದಂತೆ ಯಾವುದೇ ಮುಂದುವರಿದ ಜಾತಿಗಳನ್ನು '2ಎ'ಗೆ ಸೇರಿಸಿದರೆ ರಾಜ್ಯಾದ್ಯಂತ ಹೋರಾಟ ನಡೆಸಲಾಗುವುದು' ಎಂದು ಒಕ್ಕೂಟದ ಅಧ್ಯಕ್ಷ ಕೆ.ಎಂ.ರಾಮಚಂದ್ರಪ್ಪ, ಪ್ರಧಾನ ಕಾರ್ಯದರ್ಶಿ ಎಣ್ಣೆಗೆರೆ ಆರ್.ವೆಂಕಟರಾಮಯ್ಯ ಎಚ್ಚರಿಸಿದ್ದಾರೆ.

### '2 ಎಗೆ ಪಂಚಮಸಾಲಿ: ಪರಿಣಾಮ ಯೋಚಿಸಿ'

**ನವದೆಹಲಿ:** 'ಪ್ರವರ್ಗ 2 ಎ' ಗೆ ಪಂಚಮಸಾಲಿ ಸಮುದಾಯ ಸೇರಿಸುವ ಸಂದರ್ಭದಲ್ಲಿ ಅದೇ ಪ್ರವರ್ಗದಲ್ಲಿರುವ ಇತರರಿಗೆ ಆಗುವ ಪರಿಣಾಮಗಳ ಬಗ್ಗೆ ಕರ್ನಾಟಕ ಸರ್ಕಾರ ಯೋಚಿಸಬೇಕು ಎಂದು ರಾಜ್ಯಸಭಾ ಸದಸ್ಯ ಎಚ್.ಡಿ.ದೇವೇಗೌಡ ಕಿವಿಮಾತು ಹೇಳಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಅವರು, 'ಕುಂಚಿಟಿಗ ಸಮುದಾಯವನ್ನು ಕೇಂದ್ರ ಒಬಿಸಿ ಪಟ್ಟಿಗೆ ಸೇರಿಸಬೇಕು. ನಾನು ಒಕ್ಕಲಿಗರಿಗೆ ಶೇ 4 ಮೀಸಲಾತಿ ಕೊಟ್ಟಿದ್ದೆ. ಒಕ್ಕಲಿಗ ಸಮುದಾಯದ ಮೀಸಲಾತಿ ಹೆಚ್ಚಿಸಬೇಕು ಎಂಬ ಬೇಡಿಕೆ ಇದೆ' ಎಂದರು.

'ಕಾಡು ಕುರುಬರು ಹಾಗೂ ಬೆಟ್ಟ ಕುರುಬರನ್ನು ಮಾತ್ರ ಪರಿಶಿಷ್ಟ ಪಂಗಡಕ್ಕೆ ಸೇರಿಸಿರುವುದರಿಂದ ಇತರ ಹಲವು ಸಮುದಾಯಗಳಿಗೆ ಅನ್ಯಾಯವಾಗಲಿದೆ. ರಾಜ್ಯಸಭೆಯಲ್ಲಿ ಚರ್ಚೆ ಮಾಡಿ ಬೆಟ್ಟ ಕುರುಬರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲಾಗಿದೆ. ಕೋಲಿ, ಮೊಗವೀರ ಸಮುದಾಯಗಳನ್ನು ಸಹ ಎಸ್‌ಟಿ ಪಟ್ಟಿಗೆ ಸೇರಿಸಬೇಕು ಎಂಬ ಬೇಡಿಕೆ ಇದೆ. ಈ ಸಮುದಾಯಗಳಿಗೆ ಸಹ ನ್ಯಾಯ ಕೊಡಬೇಕು' ಎಂದು ಆಗ್ರಹಿಸಿದರು.

## ವೈವಾಹಿಕ ಅತ್ಯಾಚಾರ: 'ಸುಪ್ರೀಂ'ನಲ್ಲಿ ವ್ಯಕ್ತಿ ವಿರುದ್ಧ ವಿಚಾರಣೆಗೆ ಕರ್ನಾಟಕ ಬೆಂಬಲ

**ನವದೆಹಲಿ (ಪಿಟಿಐ):** ವೈವಾಹಿಕ ಅತ್ಯಾಚಾರ ಪ್ರಕರಣವೊಂದರಲ್ಲಿ ವ್ಯಕ್ತಿಯೊಬ್ಬನ ವಿರುದ್ಧ ಸುಪ್ರೀಂಕೋರ್ಟ್‌ನಲ್ಲಿ ನಡೆಯುತ್ತಿರುವ ವಿಚಾರಣೆಯನ್ನು ಕರ್ನಾಟಕ ಸರ್ಕಾರ ಬೆಂಬಲಿಸಿದೆ.

ಈ ಪ್ರಕರಣದಲ್ಲಿ ಉದ್ಭವಿಸಿರುವ ಎಲ್ಲ ಕಾನೂನಾತ್ಮಕ ಅಂಶಗಳನ್ನು ಗಣನೆಗೆ ತೆಗೆದುಕೊಂಡೇ ರಾಜ್ಯ ಹೈಕೋರ್ಟ್ ಆದೇಶ ನೀಡಿದೆ ಎಂದು ಕರ್ನಾಟಕ ಸರ್ಕಾರ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ಹೇಳಲಾಗಿದೆ.

ಪತಿ ನಡೆಸುವ ಅತ್ಯಾಚಾರವನ್ನು ಅಪರಾಧವಲ್ಲ ಎಂದು ಪರಿಗಣಿಸುವ ಸೆಕ್ಷನ್ ಅನ್ನು ಸಂಬಂಧಿಸಿದ ಕಾನೂನಿನಿಂದ ತೆಗೆದು ಹಾಕಬೇಕು ಎಂಬ ಬಗ್ಗೆ ವ್ಯಾಪಕ ಚರ್ಚೆ ನಡೆಯುತ್ತಿರುವ ಸಂದರ್ಭದಲ್ಲಿಯೇ ಕರ್ನಾಟಕ ಸರ್ಕಾರ ಇಂಥ ನಿಲುವು ತಳೆದಿದೆ.

'ಪತ್ನಿ ಮೇಲೆ ಅತ್ಯಾಚಾರ ನಡೆಸಿದ ಆರೋಪ ಹೊತ್ತ ಪತಿ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು. ಈ ಸಂಬಂಧ ರಾಜ್ಯ ಹೈಕೋರ್ಟ್ ನೀಡಿರುವ ಆದೇಶವನ್ನು ಪ್ರಶ್ನಿಸಿ ಆರೋಪಿ ಪತಿ ಸಲ್ಲಿಸಿರುವ ಅರ್ಜಿಯನ್ನು ವಜಾಗೊಳಿಸಬೇಕು' ಎಂದು ಪ್ರಮಾಣಪತ್ರದಲ್ಲಿ ವಿವರಿಸಲಾಗಿದೆ.

**ಪ್ರಕರಣ ವಿವರ:** ಪತಿ ತನ್ನ ಮೇಲೆ ಅತ್ಯಾಚಾರ ಎಸಗಿದ್ದು, ಅಸ್ವಾಭಾವಿಕ ಲೈಂಗಿಕ ಕ್ರಿಯೆ ನಡೆಸಿದ್ದಾನೆ. ಮಗಳಿಗೂ ಲೈಂಗಿಕ ಕಿರುಕುಳ ನೀಡಿದ್ದಾನೆ ಎಂದು ಮಹಿಳೆಯೊಬ್ಬರು ದೂರು ನೀಡಿದ್ದರು.

'ಮದುವೆಯಾದ ದಿನದಿಂದ ನಾನು ಗಂಡನ ಪಾಲಿಗೆ ಲೈಂಗಿಕ ಗುಲಾಮಳಂತಾಗಿದ್ದೆ' ಎಂದೂ ದೂರಿನಲ್ಲಿ ತಿಳಿಸಿದ್ದರು.

ಈ ಪ್ರಕರಣದ ವಿಚಾರಣೆ ನಡೆಸಿದ್ದ ಕರ್ನಾಟಕ ಹೈಕೋರ್ಟ್, 'ಪತ್ನಿ ಮೇಲೆ ಅತ್ಯಾಚಾರ ನಡೆಸಿದ್ದಕ್ಕಾಗಿ ಪತಿಯನ್ನು ವಿಚಾರಣೆಗೆ ಒಳಪಡಿಸಬಹುದು ಹಾಗೂ ಐಪಿಸಿ ಸೆಕ್ಷನ್ 375ರ ಅಡಿ ಪತಿಗೆ ನೀಡಿರುವ ವಿನಾಯಿತಿ ಪ್ರಶ್ನಾರ್ಹವಲ್ಲ' ಎಂದು ಕಳೆದ ಮಾರ್ಚ್ 23ರಂದು ತೀರ್ಪು ನೀಡಿತ್ತು.

'ಅತ್ಯಾಚಾರದ ಅಪರಾಧದ ವಿರುದ್ಧ ಕಾನೂನಿನಡಿ ಪತಿಗೆ ನೀಡಿರುವ ವಿನಾಯಿತಿಯಿಂದಾಗಿ ಅಸಮಾನತೆ ಉಂಟಾಗುತ್ತದೆ ಮತ್ತು ಇದು ಸಂವಿಧಾನದ 14ನೇ (ಸಮಾನತೆ) ವಿಧಿಗೂ ವಿರುದ್ಧವಾದುದು' ಎಂದು ಹೇಳಿತ್ತು.

'ಮಹಿಳೆಯೊಬ್ಬಳ ಮೇಲೆ ನಡೆಯುವ ಅಮಾನುಷ ಲೈಂಗಿಕ ದೌರ್ಜನ್ಯ, ಅದು ಆಕೆಯ ಗಂಡನಿಂದಲೇ ನಡೆದಿದ್ದರೂ, ಅದನ್ನು ಅತ್ಯಾಚಾರ ಎಂದೇ ಪರಿಗಣಿಸಬೇಕಾಗುತ್ತದೆ' ಎಂದು ಹೇಳಿತ್ತು. ಹೈಕೋರ್ಟ್‌ನ ಈ ತೀರ್ಪನ್ನು ಪ್ರಶ್ನಿಸಿ ಆರೋಪಿ, ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು.

ಕೋವಿಡ್ ಮಾರ್ಗಸೂಚಿಗಳನ್ನು ಪಾಲಿಸುತ್ತೇವೆ: ಸಲ್ಮಾನ್ ಖುರ್ಷೀದ್

# ಭಾರತ್ ಜೋಡೊ ಯಾತ್ರೆ ನಿಲ್ಲದು: ಕಾಂಗ್ರೆಸ್

**ಲಖನೌ (ಪಿಟಿಐ):** ಪಕ್ಷವು ಕೋವಿಡ್-19ಗೆ ಸಂಬಂಧಿಸಿದ ಎಲ್ಲ ಮಾರ್ಗಸೂಚಿಗಳನ್ನು ಪಾಲನೆ ಮಾಡುತ್ತದೆ. ಆದರೆ, ಯಾವುದೇ ಕಾರಣಕ್ಕೂ ಭಾರತ್ ಜೋಡೊ ಯಾತ್ರೆಯನ್ನು ನಿಲ್ಲಿಸುವುದಿಲ್ಲ ಎಂದು ಕಾಂಗ್ರೆಸ್‌ನ ಹಿರಿಯ ಮುಖಂಡ ಸಲ್ಮಾನ್ ಖುರ್ಷೀದ್ ಗುರುವಾರ ಹೇಳಿದ್ದಾರೆ.

'ಪಕ್ಷ ಕೈಗೊಂಡಿರುವ ಈ ಯಾತ್ರೆಯಿಂದ ಕೇಂದ್ರ ಸರ್ಕಾರ ಹೆದರಿದೆ. ಈ ಕಾರಣಕ್ಕಾಗಿಯೇ ಅದು ವಿವಿಧ ಆದೇಶಗಳು, ಪತ್ರಗಳನ್ನು ರವಾನಿಸುತ್ತಿದೆ' ಎಂದು ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು.

'ಕೋವಿಡ್‌ಗೆ ಸಂಬಂಧಿಸಿದ ಮಾರ್ಗಸೂಚಿಗಳನ್ನು ಪಾಲನೆ ಮಾಡಲು ಆಗದಿದ್ದರೆ ಭಾರತ್ ಜೋಡೊ ಯಾತ್ರೆಯನ್ನು ಸ್ಥಗಿತಗೊಳಿಸಲು ಪರಿಗಣಿಸಬೇಕು' ಎಂಬುದಾಗಿ ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಾಂಡವೀಯ ಅವರು ಪಕ್ಷದ ಮುಖಂಡ ರಾಹುಲ್ ಗಾಂಧಿ ಹಾಗೂ ರಾಜಸ್ಥಾನ ಮುಖ್ಯಮಂತ್ರಿ ಅಶೋಕ ಗೆಹಲೋತ್ ಅವರಿಗೆ ಮಂಗಳವಾರ ಪತ್ರ ಬರೆದಿದ್ದರು. ಈ ಹಿನ್ನೆಲೆಯಲ್ಲಿ ಸಲ್ಮಾನ್ ಖುರ್ಷೀದ್ ಅವರಿಂದ ಈ ಹೇಳಿಕೆ ಹೊರಬಿದ್ದಿದೆ.

### 'ಯಾತ್ರೆ ತಡೆಗೆ ನೆಪ ಹುಡುಕುತ್ತಿದೆ ಸರ್ಕಾರ'

**ನೂಹ್ (ಹರಿಯಾಣ):** 'ಭಾರತ್ ಜೋಡೊ ಯಾತ್ರೆಯನ್ನು ನಿಲ್ಲಿಸಲು ಯತ್ನಿಸುತ್ತಿರುವ ಕೇಂದ್ರ ಸರ್ಕಾರ, ಈ ಸಂಬಂಧ ನೆಪಗಳನ್ನು ಮುಂದು ಮಾಡುತ್ತಿದೆ' ಎಂದು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಗುರುವಾರ ಹೇಳಿದ್ದಾರೆ.

'ಯಾತ್ರೆಯನ್ನು ನಿಲ್ಲಿಸುವ ಸಲುವಾಗಿ ಸರ್ಕಾರ ಈಗ ಈ ಹೊಸ ನೆಪ ಹೂಡಿದೆ. ಆದರೆ, ಪಕ್ಷ ಕೈಗೊಂಡಿರುವ ಯಾತ್ರೆ ಕಾಶ್ಮೀರವನ್ನು ತಲುಪಲಿದೆ' ಎಂದು ಜಿಲ್ಲೆಯ ಘಸೇರಾ ಗ್ರಾಮದಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಹೇಳಿದರು.

**ಕಾಂಗ್ರೆಸ್ ಟೀಕೆ:** 'ಕೋವಿಡ್ ಬಗ್ಗೆ ಆತಂಕ ವ್ಯಕ್ತಪಡಿಸಿ ಕೇಂದ್ರ ಆರೋಗ್ಯ ಸಚಿವರು ರಾಹುಲ್ ಗಾಂಧಿಗೆ ಪತ್ರ ಬರೆಯುತ್ತಾರೆ. ಇನ್ನು, ಭಾರತ್ ಜೋಡೊ ಯಾತ್ರೆ ದೆಹಲಿ ಪ್ರವೇಶಿಸುವುದಕ್ಕೂ ಕೆಲದಿನ ಮುಂಚೆ ಪ್ರಧಾನಿ ನರೇಂದ್ರ ಮೋದಿ ಅವರು ಕೋವಿಡ್ ಪರಿಸ್ಥಿತಿ ಕುರಿತು ಸಭೆ ನಡೆಸುತ್ತಿದ್ದಾರೆ' ಎಂದು ಕಾಂಗ್ರೆಸ್ ಗುರುವಾರ ಟೀಕಿಸಿದೆ.

'ಆರೋಗ್ಯ ಸಚಿವರು ರಾಹುಲ್ ಗಾಂಧಿ ಅವರಿಗೆ ನಿನ್ನೆ ಪತ್ರ ಬರೆದಿದ್ದಾರೆ. ಕೋವಿಡ್ ಪರಿಸ್ಥಿತಿ ಕುರಿತು ಪ್ರಧಾನಿ ಗುರುವಾರ ಪರಿಶೀಲನಾ ಸಭೆ ನಡೆಸುವರು. ಮಾರನೇ ದಿನ ಭಾರತ್ ಜೋಡೊ ಯಾತ್ರೆ ದೆಹಲಿಯನ್ನು ಪ್ರವೇಶಿಸಲಿದೆ. ಈಗ ನೀವು ಈ ಕಾಲಾನುಕ್ರಮವನ್ನು ಅರ್ಥ ಮಾಡಿಕೊಳ್ಳಿ' ಎಂದು ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ ವಿಭಾಗ) ಜೈರಾಮ್ ರಮೇಶ್ ಟ್ವೀಟ್ ಮಾಡಿದ್ದಾರೆ.

### 'ಜನಾಕ್ರೋಶ ಯಾತ್ರೆ' ರದ್ದಿಲ್ಲ

**ನವದೆಹಲಿ:** ರಾಜಸ್ಥಾನದಲ್ಲಿ 'ಜನ ಆಕ್ರೋಶ ಯಾತ್ರೆ'ಯನ್ನು ರದ್ದು ಮಾಡಿಲ್ಲ. ಯಾತ್ರೆ ನಡೆಯಲಿದೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸತೀಶ್ ಪೂನಿಯಾ ಹೇಳಿದ್ದಾರೆ.

ಚೀನಾ ಸೇರಿದಂತೆ ಹಲವು ರಾಷ್ಟ್ರಗಳಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ, 'ಜನ ಆಕ್ರೋಶ ಯಾತ್ರೆ'ಯನ್ನು ರದ್ದುಪಡಿಸಲಾಗಿದೆ ಎಂದು ಈ ಮೊದಲು ಬಿಜೆಪಿ ಪ್ರಧಾನ ಕಾರ್ಯದರ್ಶಿ ಅರುಣ್ ಸಿಂಗ್ ಹೇಳಿದ್ದರು.

'ಬಿಜೆಪಿಗೆ ರಾಜಕಾರಣಕ್ಕಿಂತ ಜನರ ಸುರಕ್ಷತೆ, ಆರೋಗ್ಯ ಮುಖ್ಯ. ಹೀಗಾಗಿ, ಯಾತ್ರೆಯನ್ನು ರದ್ದು ಮಾಡಲಾಗಿದೆ' ಎಂದು ಅವರು ಹೇಳಿದ್ದರು.



### ಸುಭಾಷಿತ

ಯಾರೊಬ್ಬರೂ ಎಲ್ಲ ಕಾಲದಲ್ಲೂ ಕಷ್ಟವನ್ನು ಅನುಭವಿಸುವುದಿಲ್ಲ. ಬದುಕಿನಲ್ಲಿ ಬರುವ ಕಷ್ಟಗಳು ಸೇತುವೆಯ ಕೆಳಗಿನ ನೀರಿನಂತೆ ಹರಿದುಹೋಗುತ್ತವೆ.

-ಶಾರದಾ ದೇವಿ

# ಕೊರೊನಾ ಸೋಂಕಿನ ಕಣ್ಣಾಮುಚ್ಚಾಲೆ ಇದು ಸ್ವಯಂ ಎಚ್ಚರಿಕೆಯ ಸಮಯ

**ಚೀನಾ,** ಅಮೆರಿಕ ಸೇರಿದಂತೆ ಕೆಲವು ದೇಶಗಳಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಉಲ್ಬಣಗೊಳ್ಳುತ್ತಿರುವುದು ಭಾರತಕ್ಕೆ ಮುನ್ನೆಚ್ಚರಿಕೆಯಂತಿದೆ. ಚೀನಾದಲ್ಲಿ ಕೊರೊನಾ ಬಾಧೆಯಿಂದ ಆಸ್ಪತ್ರೆಗಳಿಗೆ ದಾಖಲಾಗುತ್ತಿರುವವರ ಸಂಖ್ಯೆ ಹಾಗೂ ಸಾವುನೋವಿನ ಸುದ್ದಿಗಳು ಆತಂಕ ಹುಟ್ಟಿಸುವಂತಿದ್ದು, ಎರಡನೇ ಅಲೆಯ ಸಂದರ್ಭದಲ್ಲಿ ಭಾರತ ಎದುರಿಸಿದ್ದ ಸಂಕಷ್ಟವನ್ನು ನೆನಪಿಸುವಂತಿವೆ. ನೆರೆಯ ದೇಶದಲ್ಲಿನ ಆರೋಗ್ಯ ಕ್ಷೇತ್ರದ ಏದುಸಿರು, ಮುಂಜಾಗ್ರತಾ ಕ್ರಮಗಳನ್ನು ನಮ್ಮಲ್ಲಿಯೂ ಕೈಗೊಳ್ಳುವ ಅನಿವಾರ್ಯವನ್ನು ಸೃಷ್ಟಿಸಿದೆ. ಕೋವಿಡ್‌ನ ಈವರೆಗಿನ ಅಲೆಗಳನ್ನು ಎದುರಿಸಿದ ಅನುಭವ ಈಗ ನಮ್ಮ ಜೊತೆಗಿದೆ. ಕೋವಿಡ್ ವ್ಯಾಕ್ಸಿನ್ ಅನ್ನು ಹೆಚ್ಚಿನ ನಾಗರಿಕರು ಪಡೆದಿರುವುದರಿಂದಾಗಿ, ಈ ಸಲ ಕೊರೊನಾ ಸೋಂಕು ಹೆಚ್ಚಿನ ಉಪದ್ರವವನ್ನು ಉಂಟು ಮಾಡದಿರಬಹುದು. ಪ್ರಸ್ತುತ, ದೇಶದಲ್ಲಿನ ಕೊರೊನಾ ಸಕ್ರಿಯ ಪ್ರಕರಣಗಳ ಸಂಖ್ಯೆ 3,400ರ ಆಸುಪಾಸಿನಲ್ಲಿದೆ. ಈ ಸಂಖ್ಯೆ ಕೂಡ ಆತಂಕ ಹುಟ್ಟಿಸುವಂತಹದ್ದಲ್ಲ. ಆದರೆ, ಯಾವುದೇ ಅಪಾಯಕ್ಕೆ ಆಸ್ಪದ ಕೊಡದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸಬೇಕೆಂದು ಕೊರೊನಾದ ಹಿಂದಿನ ಅಲೆಗಳು ಕಲಿಸಿರುವ ಪಾಠವನ್ನು ಯಾರೂ ಸುಲಭವಾಗಿ ಮರೆಯುವಂತಿಲ್ಲ. ವಿಶ್ವದ ಹಲವು ದೇಶಗಳಲ್ಲಿ ಆರ್ಥಿಕ ಹಿಂಜರಿತದ ಭೀತಿ ಎದುರಾಗಿದೆ. ಕೊರೊನಾದಿಂದ ಆರ್ಥಿಕ ಸಂಕಷ್ಟ ತೀವ್ರವಾಗದಂತೆ ಎಚ್ಚರಿಕೆ ವಹಿಸಬೇಕಾಗಿದೆ.



ಅವಿವೇಕದ ಮಾದರಿಗಳು ಮರುಕಳಿಸದಂತೆ ಎಚ್ಚರ ವಹಿಸುವುದು ಎಲ್ಲರ ಜವಾಬ್ದಾರಿ

ನಮ್ಮ ಎಣಿಕೆಗಳನ್ನೆಲ್ಲ ಬುಡಮೇಲು ಮಾಡುವಂತೆ ಕೊರೊನಾ ರೂಪಾಂತರ ತಳಿಗಳು ವರ್ತಿಸುವುದರಿಂದ, ಸಂಭಾವ್ಯ ಬಿಕ್ಕಟ್ಟನ್ನು ಎದುರಿಸಲು ಈಗಿನಿಂದಲೇ ಸಿದ್ಧತೆ ನಡೆಸುವುದು ಅನಿವಾರ್ಯ. ಪ್ರಸಕ್ತ ಶೀತಗಾಳಿಯ ವಾತಾವರಣವೂ ಕೊರೊನಾ ಸೋಂಕು ಹರಡಲು ಅನುಕೂಲಕರವಾಗಿದೆ. ಕ್ರಿಸ್‌ಮಸ್ ಹಾಗೂ ಹೊಸ ವರ್ಷದ ಸಂಭ್ರಮದಲ್ಲಿ ಜನ ಗುಂಪುಗೂಡುವ ಸಾಧ್ಯತೆಯಿದೆ. ರಾಜ್ಯದಲ್ಲಿ ಜನವರಿಯಿಂದ ಜಾತ್ರೆಗಳ ಋತು ಆರಂಭವಾಗುತ್ತದೆ. ಚುನಾವಣಾ ವರ್ಷವಾಗಿರುವುದರಿಂದ, ರಾಜಕೀಯ ಸಭೆ-ಸಮಾವೇಶಗಳೂ ದೊಡ್ಡ ಸಂಖ್ಯೆಯಲ್ಲಿ ನಡೆಯುತ್ತವೆ. ಶಾಲಾ ಕಾಲೇಜುಗಳಲ್ಲಿ ಶೈಕ್ಷಣಿಕ ಪ್ರವಾಸ ಹಾಗೂ ವಾರ್ಷಿಕೋತ್ಸವ ಕಾರ್ಯಕ್ರಮಗಳು ಭರದಿಂದ ನಡೆಯುತ್ತಿವೆ. ಲಕ್ಷಾಂತರ ಜನ ಭಾಗವಹಿಸುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಜನವರಿ ಮೊದಲ ವಾರದಲ್ಲಿ ಆಯೋಜನೆಗೊಂಡಿದೆ. ಈ ಎಲ್ಲ ಚಟುವಟಿಕೆಗಳೂ ಸೋಂಕಿಗೆ ಆಹ್ವಾನ ಕೊಡುವಂತೆಯೇ ಇವೆ. ಕಳೆದ ಎರಡು- ಮೂರು ವರ್ಷಗಳಿಂದ ಸಾರ್ವಜನಿಕ ಸಂಭ್ರಮಗಳು ಕೋವಿಡ್ ಕಾರಣದಿಂದಾಗಿ ಕೇವಲ ಔಪಚಾರಿಕ ಆಚರಣೆಗೆ ಸೀಮಿತವಾಗಿದ್ದವು. ಧಾರ್ಮಿಕ-ಸಾಂಸ್ಕೃತಿಕ ಆಚರಣೆಗಳು ಇದೀಗ ಅದ್ದೂರಿಯಾಗಿ ನಡೆಯುವ ಸಾಧ್ಯತೆಗಳಿವೆ. ಅವುಗಳಿಗೆ ಕಡಿವಾಣ ಹಾಕಬೇಕೆನ್ನುವುದು ಪ್ರಾಯೋಗಿಕವಾಗಿ ಸರಿಯಾದ ಯೋಚನೆಯಲ್ಲ. ಮುನ್ನೆಚ್ಚರಿಕಾ ಕ್ರಮಗಳೊಂದಿಗೆ ಕಾರ್ಯಕ್ರಮಗಳನ್ನು ಆಚರಿಸುವುದು ಜಾಣತನ. ಮಾಸ್ಕ್ ಕಡ್ಡಾಯವಾಗಿ ಧರಿಸುವುದು ಹಾಗೂ ಸ್ವಚ್ಛತಾ ಕ್ರಮಗಳನ್ನು ಪಾಲಿಸುವುದು ಮತ್ತೆ ನಮ್ಮ ದೈನಂದಿನ ಜೀವನದ ಭಾಗವಾಗಬೇಕಾಗಿದೆ. ಕೊರೊನಾ ಮಾತ್ರವಲ್ಲ, ಸುಲಭವಾಗಿ ಹರಡುವ ನೆಗಡಿ, ಕೆಮ್ಮಿನಂತಹ ಸೋಂಕುಗಳನ್ನು ತಡೆಗಟ್ಟಲೂ ಮಾಸ್ಕ್ ಬಳಕೆ ಅನುಕೂಲಕರ.

ಚೀನಾದಲ್ಲಿ ವ್ಯಾಪಕವಾಗಿರುವ ಓಮೈಕ್ರಾನ್‌ನ ಉಪತಳಿ 'ಬಿಎಫ್.7' ಸೋಂಕಿನ ಪ್ರಕರಣಗಳು ಭಾರತದಲ್ಲಿ ವಿರಳವಾಗಿಯಾದರೂ ಕಾಣಿಸಿಕೊಂಡಿವೆ. ಕೇರಳ, ಕರ್ನಾಟಕ, ಮಹಾರಾಷ್ಟ್ರ, ತೆಲಂಗಾಣ ಮತ್ತು ತಮಿಳುನಾಡಿನಲ್ಲಿ ಹೊಸ ಪ್ರಕರಣಗಳು ಹೆಚ್ಚಾಗಿ ಪತ್ತೆಯಾಗಿವೆ ಎಂದು ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಾಂಡವೀಯ ಹೇಳಿದ್ದಾರೆ. ಈ ಹಿನ್ನೆಲೆಯಲ್ಲಿ, ಹೊಸ ಕೋವಿಡ್ ಪ್ರಕರಣಗಳನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಮೈಯೆಲ್ಲ ಕಣ್ಣಾಗಿ ನಿರ್ವಹಿಸಬೇಕಾಗಿದೆ. ಅರ್ಹರ ಪೈಕಿ ಶೇ 27ರಿಂದ 28ರಷ್ಟು ಮಂದಿ ಮಾತ್ರ ಬೂಸ್ಟರ್ ಲಸಿಕೆ ಪಡೆದಿದ್ದಾರೆ. ಲಸಿಕೆಯ ಸುರಕ್ಷತಾ ವಲಯದಿಂದ ದೂರ ಉಳಿದವರೂ ಲಸಿಕೆ ಪಡೆಯಲು ಸರ್ಕಾರ ಅವಕಾಶ ಕಲ್ಪಿಸಬೇಕು. ವಿದೇಶಗಳಿಂದ ಬರುವ ಪ್ರಯಾಣಿಕರನ್ನು, ವಿಶೇಷವಾಗಿ ಸೋಂಕು ಉಲ್ಬಣಗೊಂಡಿರುವ ಪ್ರದೇಶಗಳಿಂದ ಬರುವವರನ್ನು ಕಡ್ಡಾಯವಾಗಿ ಪರೀಕ್ಷೆಗೆ ಒಳಪಡಿಸಬೇಕು. ಅಗತ್ಯ ಔಷಧಗಳ ಲಭ್ಯತೆಯನ್ನು ಖಾತರಿಪಡಿಸಿಕೊಳ್ಳುವುದರ ಜೊತೆಗೆ, ವೈದ್ಯಕೀಯ ಕ್ಷೇತ್ರದಲ್ಲಿ ಮೂಲಭೂತ ಸೌಕರ್ಯಗಳನ್ನು ಉತ್ತಮಪಡಿಸುವುದಕ್ಕೆ ಆದ್ಯತೆ ನೀಡಬೇಕು. ಜನಸಾಮಾನ್ಯರ ಬದುಕನ್ನು ಬುಡಮೇಲು ಮಾಡುವ ಮತ್ತೊಂದು ಲಾಕ್‌ಡೌನ್‌ಗೆ ಯಾವ ಅವಕಾಶವನ್ನೂ ಸರ್ಕಾರ ಕಲ್ಪಿಸಬಾರದು. ಕೊರೊನಾ ವಿರುದ್ಧದ ಹೋರಾಟ ಸಾಮುದಾಯಿಕವಾದುದಾದರೂ, ವೈಯಕ್ತಿಕ ಬದ್ಧತೆಯಿಲ್ಲದೆ ಆ ಹೋರಾಟ ಫಲಪ್ರದ ಆಗಲಾರದು. ಸೋಂಕನ್ನು ನಿಯಂತ್ರಿಸುವ ಪ್ರಯತ್ನದಲ್ಲಿ ಕೋವಿಡ್ ಮಾರ್ಗಸೂಚಿಯನ್ನು ಉದಾಸೀನ ಮಾಡದೆ ಪಾಲಿಸುವುದು ಅಗತ್ಯ. ಕೊರೊನಾ ನಿಯಂತ್ರಣದ ಹೋರಾಟದಲ್ಲಿ ರಾಜಕೀಯ ಪಕ್ಷಗಳು ಹಾಗೂ ಜನಪ್ರತಿನಿಧಿಗಳ ಪಾತ್ರ ಮಹತ್ವದ್ದು. ರಾಜಕೀಯ ಸಮಾವೇಶಗಳನ್ನು ನಡೆಸುವಲ್ಲಿ ರಾಜಕೀಯ ಪಕ್ಷಗಳು ಹೊಣೆಗೇಡಿತನ ಪ್ರದರ್ಶಿಸಿರುವುದನ್ನು ಕೊರೊನಾದ ಹಿಂದಿನ ಅಲೆಗಳಲ್ಲಿ ನೋಡಿದ್ದೇವೆ. ಅವಿವೇಕದ ಮಾದರಿಗಳು ಮರುಕಳಿಸದಂತೆ ಎಚ್ಚರ ವಹಿಸುವುದು ಎಲ್ಲರ ಜವಾಬ್ದಾರಿ.

### ದಿನದ ಟ್ವೀಟ್

## ಉತ್ಪ್ರೇಕ್ಷಿತ ಪ್ರತಿಕ್ರಿಯೆಯೇಕೆ?



ಡಾಕ್ಟ್ರೇ, ಕೋವಿಡ್- 19 ಹೊಸ ಅಲೆ ಬರುತ್ತಿದೆಯೇ ಎಂದು ರೋಗಿಗಳು ನನ್ನನ್ನು ಕೇಳುತ್ತಾರೆ. ಬರಬಹುದು ಎಂದು ನಾನು ಹೇಳುತ್ತೇನೆ. ಅಲೆಗಳು ಬರಬಹುದು ಮತ್ತು ಹೋಗಬಹುದು, ಆದರೆ ನಿಮ್ಮ ರಕ್ಷಣೆ (ಮುಖವಾಡ, ಬೂಸ್ಟರ್ ಲಸಿಕೆ) ಅತ್ಯಗತ್ಯ ಮತ್ತು ಆ ಕಾರ್ಯ ಮುಂದುವರಿಯಬೇಕು. ಮುಂದೆ ಏನಿದೆ ಎಂಬುದನ್ನು ಭವಿಷ್ಯವು ನಮಗೆ ತಿಳಿಸುತ್ತದೆ, ಹೀಗಾಗಿ ಉತ್ಪ್ರೇಕ್ಷಿತ ಪ್ರತಿಕ್ರಿಯೆಗಳ ಅಗತ್ಯವಿಲ್ಲ!

**ಡಾ. ಅನೂಪ್ ಮಿಶ್ರಾ,** ವೈದ್ಯ

### ಕಿಡಿನುಡಿ



'ತಾಲಿಬಾನೀಯರು ಇಂದು ನನ್ನ ಶಾಲೆಯನ್ನು ಮುಚ್ಚಿದರು, ವಾಪಸ್ ಬರದಂತೆ ನಮಗೆ ತಿಳಿಸಿದ್ದಾರೆ' ಎಂದು ಚಿಕ್ಕ ಹುಡುಗಿಯೊಬ್ಬಳು ಅಳುತ್ತಾ ತನ್ನ ತಂದೆಗೆ ಹೇಳುತ್ತಾಳೆ. ನಾನು ಮನೆಯಲ್ಲೇ ನಿನಗೆ ಕಲಿಸುತ್ತೇನೆ ಎಂದು ಆಕೆಯನ್ನು ತಂದೆ ಸಮಾಧಾನಪಡಿಸುತ್ತಾನೆ. ಆದರೆ ತಾನು ಶಾಲೆಗೆ ಹೋಗಬೇಕೆಂದು ಬಯಸಿರುವುದಾಗಿ ಆಕೆ ಹೇಳುತ್ತಾಳೆ. ಇದು, 2022ರ ಅಫ್ಗಾನಿಸ್ತಾನ. ಎಂತಹ ದುರಂತ.

**ಶಬ್ನಮ್ ನಾಸಿಮಿ,** ಅಫ್ಗನ್ ಸರ್ಕಾರದ ಮಾಜಿ ವಿಶೇಷ ಸಲಹೆಗಾರ್ತಿ

### 25 ವರ್ಷಗಳ ಹಿಂದೆ

ಮಂಗಳವಾರ, 23-12-1997

**• ಕಾಂಗ್ರೆಸ್ ಪಕ್ಷದಿಂದ ಮಮತಾ ಉಚ್ಚಾಟನೆ**

**ನವದೆಹಲಿ, ಡಿ. 22-** ಪಶ್ಚಿಮ ಬಂಗಾಳದ ಬಂಡಾಯ ಕಾಂಗ್ರೆಸ್ ನಾಯಕಿ ಮಮತಾ ಬ್ಯಾನರ್ಜಿ ಇಂದು ಪಕ್ಷದ ಸಂಬಂಧವನ್ನು ಕಳಚಿಕೊಳ್ಳುವ ನಿರ್ಧಾರವನ್ನು ಪ್ರಕಟಿಸಿದ ಕೂಡಲೇ ಆಕೆಯನ್ನು ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದಲೇ ಉಚ್ಚಾಟಿಸುವ ತೀರ್ಮಾನವನ್ನು ಕಾಂಗ್ರೆಸ್ ಪ್ರಕಟಿಸಿತು.

ಮಮತಾ ಬ್ಯಾನರ್ಜಿ ಮತ್ತು ಆಕೆಯ ಬೆಂಬಲಿಗರನ್ನು ಪಶ್ಚಿಮ ಬಂಗಾಳ ಪ್ರದೇಶ ಕಾಂಗ್ರೆಸ್ ಸಮಿತಿಯು ಉಚ್ಚಾಟಿಸುವ ತೀರ್ಮಾನವನ್ನು ಕೈಗೊಂಡಿತು. ಈ ನಿರ್ಧಾರಕ್ಕೆ ಎಐಸಿಸಿ ತನ್ನ ಒಪ್ಪಿಗೆ ನೀಡಿದ್ದನ್ನು ಪಕ್ಷದ ವಕ್ತಾರ ವಿ.ಎನ್. ಗಾಡ್ಗೀಳ್ ಅವರು ಪತ್ರಿಕಾಗೋಷ್ಠಿಯಲ್ಲಿ ಪ್ರಕಟಿಸಿದರು.

**• ಬಾಂಗ್ಲಾ ವಿಮಾನ ಅಪಘಾತ: 89 ಸಾವು ಶಂಕೆ**

**ಢಾಕಾ, ಡಿ. 22 (ಎಎಫ್‌ಪಿ)-** 87 ಮಂದಿ ಪ್ರಯಾಣಿಕರು ಹಾಗೂ ಚಾಲಕ ಸಿಬ್ಬಂದಿಯನ್ನು ಹೊತ್ತು ಶಿಲೆಟ್‌ಗೆ ಹೋಗುತ್ತಿದ್ದ ವಿಮಾನವೊಂದು ಬಾಂಗ್ಲಾದ ಈಶಾನ್ಯ ಭಾಗದಲ್ಲಿ ಇಂದು ರಾತ್ರಿ ಅಪಘಾತಕ್ಕೆ ಈಡಾಯಿತೆಂದು ವಿಮಾನಯಾನ ಕಚೇರಿಯ ಮೂಲಗಳು ತಿಳಿಸಿವೆ.

ವಿಮಾನದಲ್ಲಿದ್ದ ಎಲ್ಲರೂ ಮೃತಪಟ್ಟಿರಬಹುದು ಎಂದು ಶಂಕಿಸಲಾಗಿದೆ.

### 50 ವರ್ಷಗಳ ಹಿಂದೆ

ಶನಿವಾರ, 23-12-1972

**• ನಕಲಿ ಮಾರ್ಕ್ಸ್‌ಕಾರ್ಡ್ ಪ್ರಕರಣ ರಾಜಕೀಯ ಒತ್ತಡಕ್ಕೊಳಗಾಗದೆ ತನಿಖೆ: ಅರಸು ಭರವಸೆ**

**ಬೆಂಗಳೂರು, ಡಿ. 22-** ನಾನಾ ಪರೀಕ್ಷೆಗಳ ನಕಲಿ ಅಂಕಪಟ್ಟಿಗಳನ್ನು ತಯಾರಿಸುತ್ತಿರುವ ಪ್ರಕರಣಗಳ ಬಗ್ಗೆ ಯಾವುದೇ ರಾಜಕೀಯ ಒತ್ತಡಕ್ಕೆ ಒಳಗಾಗದೆ ವಿಚಾರಣೆ ನಡೆಸುವುದಾಗಿ ಮುಖ್ಯಮಂತ್ರಿ ಡಿ. ದೇವರಾಜ ಅರಸು ಭರವಸೆ ನೀಡಿದರು.

ಈ ಪ್ರಕರಣಗಳಲ್ಲಿ ಇಲಾಖೆಗಳ ಹಂತದಲ್ಲಿ ಯಾವುದನ್ನಾದರೂ ಮುಚ್ಚಿಡುವ ಪ್ರಯತ್ನ ನಡೆದಿದೆ ಎಂದು ಸಂಶಯ ಉಂಟಾದಲ್ಲಿ ತಮಗೆ ತಿಳಿಸಬೇಕೆಂದು ವಿಧಾನಪರಿಷತ್ತಿನಲ್ಲಿ ಸದಸ್ಯರಿಗೆ ಸೂಚಿಸಿದರು.

**• ಅಭಾವ ಪ್ರದೇಶಗಳಲ್ಲಿ ಸರ್ಕಾರಿ ಮೇವಿನ ಬೆಲೆ ಐದು ಪೈಸೆ ಇಳಿಸಲು ನಿರ್ಧಾರ**

**ಬೆಂಗಳೂರು, ಡಿ. 22-** ಅಭಾವ ಪ್ರದೇಶಗಳಲ್ಲಿ ಸರ್ಕಾರ ಒದಗಿಸುವ ಮೇವಿನ ಬೆಲೆಯನ್ನು ಐದು ಪೈಸೆಯಷ್ಟು ಇಳಿಸಲು ಇಂದು ನಡೆದ ಮಂತ್ರಿಮಂಡಲದ ಸಭೆ ತೀರ್ಮಾನಿಸಿತು. ಜೋಳದ ಕಡ್ಡಿಯ (ಕಣಿಕ) ಬೆಲೆಯನ್ನು ಕೆ.ಜಿ. ಒಂದಕ್ಕೆ 25 ಪೈಸೆಯಿಂದ 20 ಪೈಸೆಗೂ, ನೆಲ್ಲುಹುಲ್ಲಿನ ಬೆಲೆಯನ್ನು 15 ಪೈಸೆಯಿಂದ 10 ಪೈಸೆಗೂ ಇಳಿಸಲಾಗುವುದು.

ನಿಯಮಗಳ ಕುರಿತು ಎಲ್ಲ ಅಧಿಕಾರಿಗಳಿಗೆ ಬೇಕು ತರಬೇತಿ

# ಗ್ರಾಹಕ ಸಂರಕ್ಷಣೆ: ಜಿಲ್ಲಾಧಿಕಾರಿ ಹೆಗಲಿಗೆ



ವಿಶ್ಲೇಷಣೆ

**ವೈ.ಜಿ.ಮುರಳೀಧರನ್**

**ನಮ್ಮ** ಆಡಳಿತ ವ್ಯವಸ್ಥೆಯಲ್ಲಿ ಜಿಲ್ಲಾಧಿಕಾರಿಗಳದ್ದು ಬಹಳ ಮಹತ್ವದ ಪಾತ್ರ. ಸ್ವಾತಂತ್ರ್ಯಪೂರ್ವದಲ್ಲಿ ಕಂದಾಯ ಕ್ರೋಡೀಕರಣಕ್ಕೆ ಬಹುಮಟ್ಟಿಗೆ ಸೀಮಿತವಾಗಿದ್ದ ಜಿಲ್ಲಾಧಿಕಾರಿಗಳ (ಆಗ ಕಲೆಕ್ಟರ್) ಪಾತ್ರ ಈಗ ಇಡೀ ಜಿಲ್ಲೆಯ ಆಡಳಿತವನ್ನು ಒಳಗೊಂಡಿದೆ. ಸರ್ಕಾರದ ಯೋಜನೆಗಳನ್ನು ಸಿದ್ಧಪಡಿಸುವ ಹಂತದಿಂದ ಅವುಗಳನ್ನು ಅನುಷ್ಠಾನಗೊಳಿಸುವವರೆಗೆ ಅವರ ಪಾತ್ರ ವಿಸ್ತರಿಸಿದೆ. ಜಿಲ್ಲಾಧಿಕಾರಿಗಳಿಲ್ಲದೆ ಈಗ ಯಾವುದೇ ಸರ್ಕಾರಿ ಕೆಲಸ ಮುಂದುವರಿಯದು. ಅಷ್ಟರಮಟ್ಟಿಗೆ ಆ ಸ್ಥಾನ ಪ್ರಾಮುಖ್ಯ ಪಡೆದಿದೆ. ಆದರೆ ಗ್ರಾಹಕರ ಹಿತವನ್ನು ರಕ್ಷಿಸುವ ವಿಷಯದಲ್ಲಿ ಜಿಲ್ಲಾಧಿಕಾರಿಗಳ ಪಾತ್ರ ಗೌಣವಾಗಿತ್ತು.

ಜಿಲ್ಲೆಯಲ್ಲಿ ಗ್ರಾಹಕರು ಏನೆಲ್ಲಾ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ, ಅವರ ರಕ್ಷಣೆಗೆ ಇರುವ ಕಾನೂನುಗಳು ಎಷ್ಟರಮಟ್ಟಿಗೆ ಜಾರಿಯಾಗುತ್ತಿವೆ, ಗ್ರಾಹಕರ ಕುಂದುಕೊರತೆಗಳ ನಿವಾರಣಾ ವ್ಯವಸ್ಥೆ ಹೇಗೆ ಕಾರ್ಯ ನಿರ್ವಹಿಸುತ್ತಿದೆ ಎಂಬಂಥ ವಿಷಯಗಳ ಬಗ್ಗೆ ಜಿಲ್ಲಾಧಿಕಾರಿಗಳು ಹೆಚ್ಚಿನ ಆಸ್ಥೆ ವಹಿಸಿದ ನಿದರ್ಶನಗಳು ವಿರಳ. ಆದರೆ ಈಗ ಗ್ರಾಹಕ ಸಂರಕ್ಷಣೆಯಲ್ಲಿ ಅವರಿಗೊಂದು ಜವಾಬ್ದಾರಿ ವಹಿಸಲಾಗಿದೆ.

ಕೇಂದ್ರ ಸರ್ಕಾರವು ಎರಡು ವರ್ಷಗಳ ಹಿಂದೆ ಜಾರಿಗೊಳಿಸಿರುವ ಗ್ರಾಹಕ ಸಂರಕ್ಷಣಾ ಅಧಿನಿಯಮದಲ್ಲಿ (2019) ಸೂಚಿಸಿರುವಂತೆ, ಕೇಂದ್ರ ಗ್ರಾಹಕ ಸಂರಕ್ಷಣಾ ಪ್ರಾಧಿಕಾರವನ್ನು (ಸಿಸಿಪಿಎ) ಸ್ಥಾಪಿಸಲಾಗಿದೆ. ಪ್ರಾಧಿಕಾರದ ಮುಖ್ಯ ಕರ್ತವ್ಯವೆಂದರೆ ಗ್ರಾಹಕರ ಹಕ್ಕುಗಳಿಗೆ ಚ್ಯುತಿ ಬರದಂತೆ ನಿಗಾ ವಹಿಸುವುದು, ಅನುಚಿತ ವ್ಯಾಪಾರ ಪದ್ಧತಿ ಹಾಗೂ ಹಾದಿ ತಪ್ಪಿಸುವ ಜಾಹೀರಾತುಗಳನ್ನು ತಡೆಗಟ್ಟುವುದು. ಸಮುದಾಯದ ಮೇಲೆ ದುಷ್ಪರಿಣಾಮ ಉಂಟುಮಾಡುವ ಅನುಚಿತ ವ್ಯಾಪಾರ ಪದ್ಧತಿಗಳ ಬಗ್ಗೆ ದೂರುಗಳನ್ನು ಸ್ವೀಕರಿಸಿ, ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವುದು ಪ್ರಾಧಿಕಾರದ ಜವಾಬ್ದಾರಿ. ಇತರ ಗ್ರಾಹಕರಂತೆ ಪ್ರಾಧಿಕಾರವು ಜಿಲ್ಲೆ, ರಾಜ್ಯ ಮತ್ತು ರಾಷ್ಟ್ರೀಯ ಗ್ರಾಹಕ ಆಯೋಗದಲ್ಲಿ ದೂರು ಸಲ್ಲಿಸಬಹುದು. ಯಾವುದೇ ಸರಕು ಅಥವಾ ಸೇವೆಯು ಗ್ರಾಹಕರಿಗೆ ಅಪಾಯವನ್ನು ಉಂಟುಮಾಡುತ್ತದೆ ಎಂದು ತಿಳಿದುಬಂದಲ್ಲಿ ಅದನ್ನು ಮಾರುಕಟ್ಟೆಯಿಂದ ವಾಪಸ್ ಪಡೆಯುವಂತೆ ಆಜ್ಞೆ ಹೊರಡಿಸಬಹುದಾಗಿದೆ.

ಅಧಿನಿಯಮದ ಪ್ರಕಾರ, ತಮ್ಮ ವ್ಯಾಪ್ತಿಯಲ್ಲಿರುವ ಜಿಲ್ಲೆಯಲ್ಲಿ ಕಂಡುಬರುವ ಅನುಚಿತ ವ್ಯಾಪಾರ ಪದ್ಧತಿ, ಹಾದಿ ತಪ್ಪಿಸುವ ಜಾಹೀರಾತು, ಅಪಾಯಕಾರಿ ಸರಕುಗಳ ಮಾರಾಟದಂತಹ ಗ್ರಾಹಕ ವಿರೋಧಿ ಚಟುವಟಿಕೆಗಳ ವಿರುದ್ಧ ಕ್ರಮ ಕೈಗೊಳ್ಳುವುದು ಜಿಲ್ಲಾಧಿಕಾರಿಗಳ ಜವಾಬ್ದಾರಿ. ಪ್ರಾಧಿಕಾರವು ವ್ಯಕ್ತಿಕೇಂದ್ರಿತ ದೂರುಗಳನ್ನು ಸ್ವೀಕರಿಸುವುದಿಲ್ಲ. ಆದರೆ ಜಿಲ್ಲೆಯ ಹಲವಾರು ಗ್ರಾಹಕರಿಗೆ ಆಗುತ್ತಿರುವ ಮೋಸ, ವಂಚನೆ ಬಗ್ಗೆ ಗ್ರಾಹಕರು ಜಿಲ್ಲಾಧಿಕಾರಿಯಲ್ಲಿ ದೂರು ಸಲ್ಲಿಸಿದಲ್ಲಿ, ಅವರು ಅದರ ಬಗ್ಗೆ ವಿಚಾರಣೆ ಅಥವಾ ತನಿಖೆ ನಡೆಸಿ ಕ್ರಮ ಕೈಗೊಳ್ಳಬೇಕಾಗುತ್ತದೆ. ತನಿಖೆ ನಡೆಸುವಂತೆ ಜಿಲ್ಲಾಧಿಕಾರಿಗಳಿಗೆ ಪ್ರಾಧಿಕಾರ, ರಾಜ್ಯ ಮತ್ತು ಕೇಂದ್ರ ಸರ್ಕಾರ ಸೂಚಿಸಬಹುದು. ತಮ್ಮ ಜಿಲ್ಲೆಯ ವ್ಯಾಪ್ತಿಯಲ್ಲಿ ಯಾವುದೇ ಅನುಚಿತ ವ್ಯಾಪಾರ ಪದ್ಧತಿ ಕಂಡುಬಂದಲ್ಲಿ ಜಿಲ್ಲಾಧಿಕಾರಿ ಸ್ವಪ್ರೇರಣೆಯಿಂದ ತನಿಖೆ ನಡೆಸಿ ಪ್ರಾಧಿಕಾರಕ್ಕೆ ವರದಿ ಸಲ್ಲಿಸಬಹುದು. ಕೆಲವು ಸಂದರ್ಭಗಳಲ್ಲಿ ಜಿಲ್ಲಾಧಿಕಾರಿಯೇ ಆಯೋಗದಲ್ಲಿ ಗ್ರಾಹಕರ ಪರವಾಗಿ ದೂರು ದಾಖಲಿಸಬಹುದು.

ಗ್ರಾಹಕ ಸಂರಕ್ಷಣಾ ಅಧಿನಿಯಮವು ಜಿಲ್ಲಾಧಿಕಾರಿಗಳಿಗೆ ನೀಡಿರುವ ಈ ಹೊಸ ಅಧಿಕಾರದ ಫಲವಾಗಿ, ಮುಂಬೈ ನಗರದ ಇಪ್ಪತ್ತೇಳು ಪ್ರವಾಸಿಗರಿಗೆ (ಗ್ರಾಹಕರಿಗೆ) ಒಟ್ಟು ₹ 19 ಲಕ್ಷದಷ್ಟು ಮೊತ್ತವನ್ನು ಹಿಂದಕ್ಕೆ ಪಡೆಯಲು ಅವಕಾಶವಾಗಿದೆ. ಈ ಪ್ರಕರಣದಲ್ಲಿ ಮುಂಬೈ ನಗರದ ಮ್ಯಾಂಗೊ ಹಾಲಿಡೇಸ್ ಎಂಬ ಪ್ರವಾಸ ಆಯೋಜಕ ಸಂಸ್ಥೆಯು ಗ್ರಾಹಕರಿಂದ ಮುಂಗಡವಾಗಿ ಹಣ ಪಡೆದು ಪ್ರವಾಸ ಏರ್ಪಡಿಸಲು ಮುಂದಾಗಿತ್ತು. ಕೋವಿಡ್ ಕಾರಣದಿಂದ ಪ್ರವಾಸವನ್ನು ರದ್ದುಗೊಳಿಸಲಾಯಿತು. ಆದರೆ ಗ್ರಾಹಕರಿಗೆ ಹಣ ಹಿಂದಿರುಗಿಸುವ ವಿಷಯದಲ್ಲಿ ಸಂಸ್ಥೆ ಅನೇಕ ಅಡೆತಡೆಗಳನ್ನು ಒಡ್ಡಿತು. ಗ್ರಾಹಕರಿಂದ ಪಡೆದ ಹಣದಲ್ಲಿ ಶೇಕಡ 40ರಷ್ಟು ಮೊತ್ತವನ್ನು ಕ್ಯಾನ್ಸಲೇಷನ್ ಫೀ, ವೀಸಾ ಫೀ, ವಿಮೆ, ಜಿಎಸ್‌ಟಿ ಎಂದೆಲ್ಲ ಖರ್ಚಾಗಿದೆ ಎಂದು ಹೇಳಿ, ಅದನ್ನು ಹಿಂದಿರುಗಿಸಲು ನಿರಾಕರಿಸಿತು.

ಪ್ರವಾಸಕ್ಕೆ ಸೀಟು ಕಾಯ್ದಿರಿಸಿದ್ದ ಗ್ರಾಹಕರು ಮುಂಬೈ ಗ್ರಾಹಕ್ ಪಂಚಾಯತ್ (ಎಮ್‌ಜಿಪಿ) ಎಂಬ ಸ್ವಯಂಸೇವಾ ಸಂಸ್ಥೆಗೆ ದೂರು ಸಲ್ಲಿಸಿದರು. ಮ್ಯಾಂಗೊ ಹಾಲಿಡೇಸ್ ಸಂಸ್ಥೆಯು ಅನುಚಿತ ವ್ಯಾಪಾರ ಪದ್ಧತಿಯಲ್ಲಿ ತೊಡಗಿದೆ ಎಂದು ದೂರಿ, ಅದರ ಬಗ್ಗೆ ತನಿಖೆ ನಡೆಸುವಂತೆ ಎಮ್‌ಜಿಪಿಯು ಜಿಲ್ಲಾಧಿಕಾರಿಗೆ ಅರ್ಜಿ ಸಲ್ಲಿಸಿತು. ಜಿಲ್ಲಾಧಿಕಾರಿಯು ಮ್ಯಾಂಗೊ ಹಾಲಿಡೇಸ್ ಸಂಸ್ಥೆಗೆ ನೋಟಿಸ್ ನೀಡಿ ಮಾಹಿತಿ ಸಂಗ್ರಹಿಸಿದರು. ಸಂಸ್ಥೆಯು ಟಿಕೆಟ್ ಹಣ ಹಿಂದಿರುಗಿಸುವ ವಿಷಯದಲ್ಲಿ ನಾಲ್ಕು ಆಯ್ಕೆಗಳನ್ನು ನೀಡಿರುವುದಾಗಿ ಹೇಳಿಕೆ ನೀಡಿತು. ಆದರೆ ಯಾವುದೇ ಆಯ್ಕೆಯಲ್ಲೂ ಮುಂಗಡ ಹಣವನ್ನು ಸಂಪೂರ್ಣ ಹಿಂದಿರುಗಿಸುವ ಅಂಶ ಇರಲಿಲ್ಲ ಎಂಬುದು ತನಿಖೆಯಿಂದ ತಿಳಿಯಿತು. ಅಲ್ಲದೆ ಪ್ರವಾಸಿ ಸಂಸ್ಥೆಯು ಅನುಚಿತ ವ್ಯಾಪಾರ ಪದ್ಧತಿ ಅನುಸರಿಸುತ್ತಿರುವುದು ಬಯಲಾಯಿತು. ಸಂಸ್ಥೆಯು ವೀಸಾ, ವಿಮೆ ಎಲ್ಲವನ್ನೂ ಮಾಡಿಸಿರುವುದಾಗಿ ಹೇಳಿಕೆ ನೀಡಿದ್ದರೂ ಅದನ್ನು ಸಾಬೀತುಪಡಿಸಲು ಯಾವುದೇ ದಾಖಲೆ ಒದಗಿಸಲಿಲ್ಲ. ಹಣವನ್ನು ಹಿಂದಿರುಗಿಸದೆ, ಗ್ರಾಹಕರು ಮುಂದಿನ ದಿನಗಳಲ್ಲಿ ಪ್ರವಾಸ ಕೈಗೊಳ್ಳುವಂತೆ ಒತ್ತಾಯ ಮಾಡಿರುವುದು ತನಿಖೆಯಿಂದ ತಿಳಿದುಬಂದಿದೆ ಎಂದು ಜಿಲ್ಲಾಧಿಕಾರಿ ತಮ್ಮ ವರದಿಯಲ್ಲಿ ಉಲ್ಲೇಖಿಸಿದರು.

ಈ ವರದಿಯ ಆಧಾರದ ಮೇಲೆ ಕೇಂದ್ರ ಗ್ರಾಹಕ ಸಂರಕ್ಷಣಾ ಪ್ರಾಧಿಕಾರವು ತನ್ನ ತೀರ್ಪನ್ನು ನೀಡಿದೆ. ಮ್ಯಾಂಗೊ ಹಾಲಿಡೇಸ್ ಸಂಸ್ಥೆಯು ಗ್ರಾಹಕರಿಗೆ ಯಾವುದೇ ಸೇವೆಯನ್ನು ನೀಡದಿದ್ದರೂ ಟಿಕೆಟ್ ರದ್ದುಗೊಳಿಸಿದ್ದಕ್ಕೆ, ಪ್ರತಿಯೊಬ್ಬ ಗ್ರಾಹಕ ನೀಡಿದ್ದ ಮೊತ್ತದಲ್ಲಿ ₹ 25,000 ಮುರಿದುಕೊಂಡಿದ್ದು ಅನುಚಿತ ಎಂದು ತೀರ್ಮಾನಿಸಿದೆ. ಒಬ್ಬ ಗ್ರಾಹಕರ ಪತಿ ಕೋವಿಡ್‌ನಿಂದ ನಿಧನರಾಗಿದ್ದರೂ ಟಿಕೆಟ್‌ಗಾಗಿ ಅವರು ಪಾವತಿಸಿದ್ದ ಮೊತ್ತದಲ್ಲಿ ಕ್ಯಾನ್ಸಲೇಷನ್ ಶುಲ್ಕ ಎಂದು ₹ 25,000 ಮುರಿದುಕೊಳ್ಳಲಾಗಿತ್ತು. ಟೂರ್ ಗೈಡ್ ನಿಯೋಜನೆ, ಹೋಟೆಲ್ ಬುಕಿಂಗ್‌ನಂಥ ಕೆಲವು ಸೇವೆಗಳಿಗೆ ಹಣ ವ್ಯಯ ಆಗಿದೆ ಎಂದು ತೋರಿಸಿ, ಅದನ್ನು ಗ್ರಾಹಕರಿಂದ ವಸೂಲು ಮಾಡಿತ್ತು. ಈ ಸೇವೆಗಳನ್ನು ನೀಡದೆ, ಗ್ರಾಹಕರಿಂದ ಹಣ ವಸೂಲು ಮಾಡುವುದು ಸರಿಯಲ್ಲ ಎಂದು ಪ್ರಾಧಿಕಾರ ಹೇಳಿದೆ. ಈ ಮೊತ್ತವನ್ನು ಗ್ರಾಹಕರಿಗೆ ಹಿಂದಿರುಗಿಸಬೇಕು ಎಂದೂ ಸೂಚಿಸಿದೆ.

ಕೋವಿಡ್ ಕಾರಣ ಪ್ರಯಾಣವನ್ನು ರದ್ದು ಮಾಡಿದಲ್ಲಿ ವಿಮಾನಯಾನ ಸಂಸ್ಥೆಯು ಟಿಕೆಟ್ ಮೊತ್ತದಲ್ಲಿ ಯಾವುದೇ ಕಾರಣಕ್ಕೂ ಕಡಿತ ಮಾಡದೆ ಪೂರ್ತಿ ಹಣವನ್ನು ಹಿಂದಿರುಗಿಸಬೇಕು ಎಂದು ಪ್ರವಾಸಿ ಲೀಗಲ್ ಸೆಲ್ ಮತ್ತು ಯೂನಿಯನ್ ಆಫ್ ಇಂಡಿಯಾ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪನ್ನು ಪ್ರಾಧಿಕಾರ ಉಲ್ಲೇಖಿಸಿ, ಈ ಪ್ರಕರಣದಲ್ಲೂ ಆ ತೀರ್ಪು ಪ್ರಸ್ತುತ ಎಂದು ಹೇಳಿದೆ. ವೀಸಾ, ಜಿಎಸ್‌ಟಿ, ವಿಮೆಯಂತಹವುಗಳಿಗೆ ಸಂಸ್ಥೆಯು ಎಷ್ಟು ಹಣ ಖರ್ಚು ಮಾಡಿದೆಯೋ ಅಷ್ಟನ್ನು ಮಾತ್ರ ಮುರಿದುಕೊಂಡು ಉಳಿದ ಹಣವನ್ನು ಗ್ರಾಹಕರಿಗೆ ಹಿಂದಿರುಗಿಸಬೇಕೆಂದು ಪ್ರಾಧಿಕಾರ ಆದೇಶ ನೀಡಿದೆ. ಈ ಆದೇಶವನ್ನು 30 ದಿನಗಳ ಒಳಗೆ ಜಾರಿಗೊಳಿಸಿ, ತನಗೆ ವರದಿ ಸಲ್ಲಿಸಬೇಕೆಂದು ಸಹ ಪ್ರಾಧಿಕಾರ ಸೂಚಿಸಿದೆ. 2019ರ ಗ್ರಾಹಕ ಸಂರಕ್ಷಣಾ ಅಧಿನಿಯಮವು ಬಹಳಷ್ಟು ಹೊಸ ಅಂಶಗಳನ್ನು ಒಳಗೊಂಡಿದೆ. ಜಿಲ್ಲಾಧಿಕಾರಿಗಳೂ ಒಳಗೊಂಡಂತೆ ಸರ್ಕಾರದ ಎಲ್ಲ ಹಿರಿಯ ಅಧಿಕಾರಿಗಳಿಗೆ ಈ ಸಂಬಂಧ ಸೂಕ್ತ ತರಬೇತಿ ನೀಡುವುದು ಅಗತ್ಯವಾಗಿದೆ.

ಲೇಖಕ: ಗ್ರಾಹಕ ವ್ಯವಹಾರ ತಜ್ಞ




### ಚರ್ಚೆ

# ಶಿಕ್ಷಕನೆಂಬ ಅಂಬಿಗ ದಿಕ್ಕೆಡುವುದೇಕೆ?

## 'ಗ್ರೇಡ್', 'ರ‍್ಯಾಂಕ್' ಭರದಲ್ಲಿ ಮಸುಕಾದ ಶಿಸ್ತು, ಸಂಯಮ

• ಯೋಗಾನಂದ

**ಕೆಲವು** ಶಿಕ್ಷಕರು ತಮ್ಮ ಅನುಚಿತ ವರ್ತನೆಯಿಂದ ವೃತ್ತಿಗೌರವಕ್ಕೆ ಮಸಿ ಬಳಿಯುತ್ತಿರುವುದನ್ನು ರಾಜಕುಮಾರ ಕುಲಕರ್ಣಿ ವಿವರಿಸಿದ್ದಾರೆ (ಸಂಗತ, ಡಿ. 22). 'ರಾಷ್ಟ್ರಶಿಲ್ಪಿ', 'ಸಮಾಜದ ಬೆನ್ನೆಲುಬು', 'ಸರ್ವರ ಮಿತ್ರ', 'ಮಾರ್ಗದರ್ಶಕ' ಎಂಬಂಥ ವಿಶೇಷಣಗಳಿಗೆ ಒಪ್ಪುವಂತೆ ನಡೆದುಕೊಳ್ಳಬೇಕಾದ ಶಿಕ್ಷಕ ಮೃಗೀಯ ನಡವಳಿಕೆಗಿಳಿಯುವುದು ಸರ್ವತ್ರ ಖಂಡನೀಯ. ಶಿಕ್ಷಕರಾಗಲು ಪ್ರಶಿಕ್ಷಣ ಕೋರ್ಸುಗಳಿವೆ. ಡಿ.ಇಡಿ., ಬಿ.ಇಡಿ., ಎಂ.ಇಡಿ.ಗಳಲ್ಲಿ ಹಾಗಾದರೆ ಕಲಿಸುವುದೇನು, ಕಲಿಯುವುದೇನು ಎನ್ನುವ ಅನುಮಾನ ಕಾಡುತ್ತದೆ.

ಯಾರೋ ಕೆಲವರಿಂದ ಇಡೀ ಗುರುವೃಂದಕ್ಕೇ ಅಪಖ್ಯಾತಿ. ವಿದ್ಯಾರ್ಥಿಗಳ ಮೇಲೆ ಲೈಂಗಿಕ ದೌರ್ಜನ್ಯ ಎಸಗುವ ಶಿಕ್ಷಕರಂತೂ 'ಗುರು' ಅನ್ನಿಸಿಕೊಳ್ಳಲು ಅನರ್ಹರು. ಅಂತಹವರಿಗೆ ಎಂತಹ ಕಠೋರ ಶಿಕ್ಷೆ ವಿಧಿಸಿದರೂ ಕಡಿಮೆಯೇ. ಕ್ರೌರ್ಯ, ಅಮಾನವೀಯ ದೌರ್ಬಲ್ಯವಿರುವವರು ಸ್ವಯಂಪ್ರೇರಣೆಯಿಂದ ಶಿಕ್ಷಕ ವೃತ್ತಿ ತ್ಯಜಿಸಲಿ.

ಪಿಶಾಚಿಯನ್ನು ಶಪಿಸುವುದಕ್ಕಿಂತ ಪಿಶಾಚಿಯಲ್ಲಿನ ಪೈಶಾಚಿಕತೆಯನ್ನು ಅವಲೋಕಿಸಬೇಕಂತೆ. ವಾಸ್ತವವಾಗಿ ಕೆಲವು ಶಿಕ್ಷಕರು ಹೀಗೆ ನಮ್ಮ ಕಲ್ಪನೆಗೂ ಮೀರಿದ ದುರ್ವರ್ತನೆಗೆ ಏಕೆ ಮುಂದಾಗುತ್ತಾರೆ? ಯಾವ ಪ್ರಚೋದನೆ ಅವರಿಂದ ಇಂಥ ಘನಘೋರ ತಪ್ಪುಗಳನ್ನು ಮಾಡಿಸುತ್ತದೆ? ನಂಬಿದ ಅಂಬಿಗನೇ ಏಕೆ ದಿಕ್ಕೆಡುತ್ತಾನೆ? ಇಂತಹ ಪ್ರಶ್ನೆಗಳಿಗೆ ಉತ್ತರ ಹುಡುಕುವುದು ಅಗತ್ಯ.

ಶಿಕ್ಷಕರ ಮೇಲೆ ವಿಪರೀತ ಒತ್ತಡ ಬೀಳುತ್ತಿದೆ ಎಂಬ ನಿಷ್ಠುರ ದಿಟವನ್ನು ನಾವು ಒಪ್ಪಲೇಬೇಕು. ಒಂದು ತರಗತಿಯಲ್ಲಿ 60-70 ವಿದ್ಯಾರ್ಥಿಗಳಿರುತ್ತಾರೆ. ಹಾಜರಾತಿ ತೆಗೆದುಕೊಳ್ಳುವುದೇ ಒಂದು ಕಠಿಣ ಸವಾಲು. ತರಗತಿಯ ಸದ್ದು, ಗೌಜನ್ನು ಶಿಕ್ಷಕ ಸಹಿಸಬೇಕು. ಒಂದು ಮಾತು ಹೆಚ್ಚು ಬೈಯ್ಯುವಂತಿಲ್ಲ, ತೆಗಳುವಂತಿಲ್ಲ, ಗದರುವಂತಿಲ್ಲ. ತರಗತಿಯಲ್ಲಿ ಗದ್ದಲ ತುಸು ಹೆಚ್ಚಾದರೆ ಶತಪಥ ಹಾಕುವ ಮುಖ್ಯೋಪಾಧ್ಯಾಯರಿಂದ ಏಕಿಷ್ಟು ಗೊಂದಲ ಎನ್ನುವ ಸಿಡಿಮಿಡಿ, ತಾಕೀತು.

ನಿಜವೆ, ಶಿಕ್ಷಕರು ಮನೆಯಲ್ಲಿ ಅಂದಂದಿನ ತರಗತಿಗೆ ಚೆನ್ನಾಗಿ ತಯಾರಿ ನಡೆಸಿಯೇ ಪಾಠ ಮಾಡಬೇಕು. ಆದರೆ ವಿದ್ಯಾರ್ಥಿಗಳೂ ಹಿಂದಿನ ತರಗತಿಯಲ್ಲಾದ ಅಧ್ಯಾಯ ಓದಿಕೊಂಡು ಬಂದರೆ ತಾನೆ ಅವರಿಗೆ ಪಾಠ ಅರ್ಥವಾಗುವುದು? ಹಾಗೆ ಬಹುತೇಕ ಆಗುತ್ತಿಲ್ಲ. ಆದಲ್ಲಿ ಮಾತ್ರ ತರಗತಿಯಲ್ಲಿ ಅಷ್ಟರಮಟ್ಟಿಗೆ ಶಿಸ್ತು, ನಿಶ್ಶಬ್ದ ಸಾಧ್ಯವಾಗುವುದು. ಕಿರು ಪರೀಕ್ಷೆ, ಪರೀಕ್ಷೆಗಳ ಜೊತೆಗೆ ಸ್ವತಃ ಶಿಕ್ಷಕರು ತರಗತಿಯಲ್ಲಿ 'ಟೆಸ್ಟ್' ನಡೆಸಬೇಕು, ಹೋಂವರ್ಕ್ ಕೊಡಬೇಕು, ಅವುಗಳನ್ನು ತಿದ್ದಬೇಕು, ಮಾಪಿಸಬೇಕು.

ಚುನಾವಣೆ ಕರ್ತವ್ಯ ಸರಿ. ಆದರೆ ವಿವಿಧ ಗಣತಿಗಳಿಗೆ ಹಾಗೂ ಸಮೀಕ್ಷೆಗಳಿಗೆ ಶಿಕ್ಷಕರನ್ನು ನೇಮಿಸಲಾಗುತ್ತದೆ. ಬಿಸಿಯೂಟದ್ದೇ ಒಂದು ಭರ್ಜರಿ ಒತ್ತಡ. ಆಯಾ ವಾರ್ಷಿಕ ಪರೀಕ್ಷೆಗಳಲ್ಲಿ ಕಡಿಮೆ ಫಲಿತಾಂಶ ಬಂದರೆ ಅದರ ಹೊಣೆಯನ್ನು ಶಿಕ್ಷಕರೇ ಹೊರಬೇಕು. ಒಂದು ಕಾಲವಿತ್ತು. ತಿಳಿ ವಿನೋದದಿಂದ ವಿದ್ಯಾರ್ಥಿಗಳನ್ನು ಗೆಲ್ಲಬಹುದಿತ್ತು. ತರಗತಿಗೆ ತಡವಾಗಿ ಬಂದವರನ್ನು 'ಯೂ ಆರ್ ಟೂ ಅರ್ಲಿ ಟು ನೆಕ್ಸ್ಟ್ ಪೀರಿಯಡ್' ಎನ್ನಬಹುದಿತ್ತು. ಕೈ ತುಂಬ ಮೊಬೈಲಿರುವುದರಿಂದ ನವಿರಿಗೆಲ್ಲಿ ಈಗ ವ್ಯವಧಾನ.

ವಿಶೇಷವಾಗಿ ಪಬ್ಲಿಕ್ ಪರೀಕ್ಷೆಗಳಲ್ಲಿ ನಕಲು ಮಾಡುತ್ತಿರುವ ವಿದ್ಯಾರ್ಥಿಗಳನ್ನು ಹಿಡಿದರೆ ಶಿಕ್ಷಕರು ತರಾವರಿ ಉಪದ್ರವಗಳನ್ನು ಎದುರಿಸಬೇಕಾಗುತ್ತದೆ. ಅವರ ದ್ವಿಚಕ್ರ ವಾಹನಗಳ ಸೀಟು ಹರಿಯಬಹುದು, ಚಕ್ರಗಳು ಗಾಳಿ ಕಳೆದುಕೊಳ್ಳಬಹುದು ಅಥವಾ ಇಂಧನ ಕೊಳವೆಗೆ ಸಂಚಕಾರ ಒದಗಬಹುದು. ಒಂದು ವಿದ್ಯಾಲಯದಲ್ಲಿ ಕೆಲವು ಶಿಕ್ಷಕರು ನಡೆಸುವ 'ಟ್ಯೂಷನ್' ನಿಸ್ಸಂದೇಹವಾಗಿ ಒಟ್ಟಾರೆ ವಿದ್ಯಾರ್ಥಿಗಳ ಅಶಿಸ್ತಿಗೆ ತನ್ನ ಕೊಡುಗೆ ನೀಡುತ್ತದೆ. ವಿದ್ಯಾರ್ಥಿಗಳನ್ನಷ್ಟೇ ಅಲ್ಲ ಶಿಕ್ಷಕರನ್ನೂ ಎರಡು ಬಣಗಳಾಗಿಸುವ ಪ್ರತಿಕೂಲ ಸ್ಥಿತಿಯನ್ನು 'ಟ್ಯೂಷನ್' ಸೃಷ್ಟಿಸಬಹುದು. 'ಚೆನ್ನಾಗಿ ಪಾಠ ಮಾಡುವವರು', 'ಚೆನ್ನಾಗಿ ಪಾಠ ಮಾಡದವರು' ಎನ್ನುವ ಅನಪೇಕ್ಷಿತ ಮತ್ತು ಸಲ್ಲದ ತಾರತಮ್ಯ ವಿದ್ಯಾರ್ಥಿಗಳ ಪಾಲಾಗುವುದು ತರವಲ್ಲ.



ಎಲ್ಲಿಯತನಕ ನಮ್ಮ ಶಿಕ್ಷಣ ಕ್ರಮ 'ಗ್ರೇಡ್', 'ರ‍್ಯಾಂಕ್' ಕೇಂದ್ರಿತವಾಗಿರುವುದೋ ಅಲ್ಲಿಯತನಕ ಗುಣಮಟ್ಟದ ಶಿಕ್ಷಣ ನಮ್ಮಿಂದ ದೂರವೇ ಉಳಿದೀತು. ಶಾಲೆಯಿಂದ ಮನೆಗೆ ಮಕ್ಕಳು ವಾಪಸಾಗುತ್ತಲೇ ಪಾಲಕರು 'ಇವೊತ್ತು ಯಾವ ಟೆಸ್ಟ್‌ನ ಮಾರ್ಕ್ಸ್ ಹೇಳಿದರು?' ಅಂತ ಕೇಳುವುದಲ್ಲ. 'ಇವೊತ್ತು ಯಾವಾಗ ಹೇಗಿರಬೇಕೆಂದು ಕಲಿಸಿದರು?' ಎಂದು ವಿಚಾರಿಸುವುದು ಅರ್ಥವತ್ತಾದ ಕುಶಲೋಪರಿಯಾಗುತ್ತದೆ.

ಶಿಕ್ಷಣ ತಜ್ಞ ಡಾ. ಎಚ್.ನರಸಿಂಹಯ್ಯ ಅವರು ಸರ್ವದಾ ನೆನಪಿಸುತ್ತಿದ್ದರು: 'ದಿ ಪ್ರೈವೇಟ್ ಲೈಫ್ ಆಫ್ ಎ ಟೀಚರ್ ಈಸ್ ಆಫ್ ಪಬ್ಲಿಕ್ ಇಂಪಾರ್ಟೆನ್ಸ್'. ತರಗತಿ ಗುರು-ಶಿಷ್ಯರ ನಡುವಿನ ಸಂಘರ್ಷದ ನೆಲೆಯಾಗಬಾರದು. ಅದು ಪರಸ್ಪರ ಸ್ನೇಹದ ಪರಿಸರವಾಗಬೇಕು. 'ಪ್ರೀತಿಯಿಲ್ಲದ ಮೇಲೆ ಹೂವು ಅರಳೀತು ಹೇಗೆ?' ಎಂಬ ಕವಿ ಜಿ.ಎಸ್. ಶಿವರುದ್ರಪ್ಪ ಅವರ ಅದ್ಭುತ ಸಾಲೇ ರಿಂಗಣಿಸುತ್ತದೆ.

ಶಾಲೆಗೆ ಪ್ರವೇಶಾತಿ ಸಿಗುವುದೇ ತಡ, ಇನ್ನು ತಮ್ಮ ಮಕ್ಕಳಾಯಿತು, ಶಾಲೆಯಾಯಿತು ಎನ್ನುವ ಧೋರಣೆಯನ್ನು ಪೋಷಕರು ಬಿಡಬೇಕು. ಮಕ್ಕಳಿಗೆ ಪೋಷಕರು ಶಿಸ್ತನ್ನು ಹೇಳಿಕೊಡಬೇಕು. ತರಗತಿಯಲ್ಲಿ ಹೇಗೆ ಕುಳಿತುಕೊಳ್ಳಬೇಕು, ಅಧ್ಯಾಪಕರೊಂದಿಗೆ, ಸಹಪಾಠಿಗಳೊಂದಿಗೆ ಹೇಗೆ ನಡೆದುಕೊಳ್ಳಬೇಕೆಂದು ತಿಳಿಸಬೇಕು. ಶಿಕ್ಷಕರಾಗಲು ಪ್ರಶಿಕ್ಷಣ ಕೋರ್ಸ್‌ಗಳಿವೆ. ಆ ಕೋರ್ಸ್‌ಗಳು ಹೆಚ್ಚು ಪರಿಣಾಮಕಾರಿ ಆಗುವ ದಿಸೆಯಲ್ಲಿ ಅಗತ್ಯ ಕ್ರಮ ಕೈಗೊಳ್ಳಬೇಕು.

### ಚುರುಮುರಿ



## ಒಳ್ಳೆಯ ಸುದ್ದಿ!

• ಬಿ.ಎನ್.ಮಲ್ಲೇಶ್

'ರೀ ತೆಪರೇಸಿ, ದಿನ ಬೆಳಗಾದ್ರೆ ನಮ್ ಚಾನೆಲ್‌ನಲ್ಲಿ ಬರೀ ತಲೆ ಕೆಟ್ ಸುದ್ದಿ ಹಾಕಿ ಹಾಕಿ ಸಾಕಾಗಿದೆ, ಇವತ್ತು ಬರೀ ಒಳ್ಳೆ ಸುದ್ದಿ ಹಾಕೋಣ, ಹೋಗಿ ತಗಂಡ್ ಬನ್ನಿ...' ಸಂಪಾದಕರು ಆದೇಶಿಸಿದರು. ತೆಪರೇಸಿ ಒಳ್ಳೆ ಸುದ್ದಿ ಹುಡುಕಿಕೊಂಡು ಹೊರಟ.

ಮೊದಲಿಗೆ ಸಿಕ್ಕ ಬೆಳಗಾವಿ ಗಡಿ ಹೋರಾಟಗಾರರು 'ನಾವು ಗಡಿ ಹೋರಾಟ ಕೈಬಿಟ್ಟಿದ್ದೇವೆ, ನಮ್ಮ ನಿಮ್ಮ ಎಲ್ಲಾ ಊರುಗಳೂ ಭಾರತ ದೇಶಕ್ಕೆ ಸೇರಿವೆ' ಎಂದರು.

ಇದಪ್ಪಾ ಒಳ್ಳೆ ಸುದ್ದಿ ಎಂದು ಖುಷಿಪಟ್ಟ ತೆಪರೇಸಿಗೆ ಮುಂದೆ ಡಿಕೆಶಿ ಸಾಹೇಬರು ಎದುರಾದರು. 'ಸರ್, ಸಿಬಿಐ ದಾಳಿ...' ಎನ್ನುತ್ತಿದ್ದಂತೆ ತಡೆದ ಡಿಕೆಶಿ 'ತನಿಖೆ ಆದಮೇಲೆ ನಮ್ಮನೇಲೇ ಸಿಬಿಐ ಅಧಿಕಾರಿಗಳಿಗೆ ಊಟದ ವ್ಯವಸ್ಥೆ ಮಾಡಿದೀನಿ' ಎಂದರು. ತೆಪರೇಸಿ ಕಕ್ಕಾಬಿಕ್ಕಿಯಾದ.

ಮುಂದೆ ಸಿದ್ದರಾಮಯ್ಯ ಸಿಕ್ಕರು. 'ಸಾವರ್ಕರ್ ಅಲ್ಲ, ಅಸೆಂಬ್ಲೀಲಿ ಯಾರ ಫೋಟೊ ಹಾಕಿದ್ರೂ ನಮ್ಮ ಅಭ್ಯಂತರ ಇಲ್ಲ' ಎಂದರು. ಜೊತೆಯಲ್ಲೇ ಇದ್ದ ಈಶ್ವರಪ್ಪ 'ನಂಗೆ ಮಂತ್ರಿ ಸ್ಥಾನ ಬೇಕಿಲ್ಲ ಅಂತ ನಿಮ್ ಟೀವೀಲಿ ಹಾಕ್ರಿ' ಎಂದರು. ತೆಪರೇಸಿಗೆ ಆಶ್ಚರ್ಯ!

ನಂತರ ಖರ್ಗೆ ಸಾಹೇಬರಿಗೆ ಫೋನ್ ಮಾಡಿದ ತೆಪರೇಸಿ 'ಸರ್ ಎಲ್ಲಿದೀರಾ?' ಎಂದ. 'ನಾನು ಮೋದಿ ಸಾಹೇಬ್ರಿಗೆ ನಮ್ ಕಡೀದು ಜೋಳದ ರೊಟ್ಟಿ, ಪುಂಡಿಪಲ್ಯ ಊಟ ಬಡಿಸ್ತಿದೀನಿ' ಎಂದರು ಖರ್ಗೆ. ವಾಹ್ ಇದಕ್ಕಿಂತ ಒಳ್ಳೆ ಸುದ್ದಿ ಬೇಕಾ ಎಂದುಕೊಂಡ ತೆಪರೇಸಿ ಆ ಎಲ್ಲ ಸುದ್ದಿಗಳನ್ನ ಪಟ್ ಅಂತ ಸಂಪಾದಕರಿಗೆ ರವಾನಿಸಿದ. 'ವೆರಿಗುಡ್, ನಿಮ್ಮ ಸಂಬಳ ಡಬಲ್ ಮಾಡಿದೀನಿ ಕಣಯ್ಯ ತೆಪರೇಸಿ' ಎಂದರು ಸಂಪಾದಕರು.

ಖುಷಿಯಿಂದ 'ವಾವ್ವಾ...' ಎಂದು ಕಿರುಚಿದ ತೆಪರೇಸಿ ಮುಖದ ಮೇಲೆ ಯಾರೋ ತಣ್ಣೀರು ಎರಚಿದಂತಾಯಿತು. ಕಣ್ಣು ಬಿಟ್ಟರೆ ಎದುರಿಗೆ ಹೆಂಡತಿ ಪಮ್ಮಿ! 'ಏನಾಗೇತ್ರಿ ನಿಮ್ಗೆ? ಯಾಕಂಗ್ ಕಿರುಚ್ತಿದೀರಾ?' ಎಂದಳು. ಓ... ಇದೆಲ್ಲ ಕನಸಾ ಎನ್ನುತ್ತ ಮುಖದ ಮೇಲಿನ ನೀರು ಒರೆಸಿಕೊಂಡು ಎದ್ದು ಕೂತ ತೆಪರೇಸಿ!

### ವಾಚಕರ ವಾಣಿ

## ಧರ್ಮಛತ್ರವಾಗದಿರಲಿ ಶಾಲೆ

'ಗ್ರಾಮೀಣ ಸರ್ಕಾರಿ ಶಾಲೆಗಳಲ್ಲಿ ವೃದ್ಧರಿಗೂ ಬಿಸಿಯೂಟ ಕೊಡಿ' ಎಂಬ ವಿಜಯ್ ರಾಂಪುರ ಅವರ ಬೇಡಿಕೆ (ವಾ.ವಾ., ಡಿ. 20) ಸೂಕ್ತವಾಗಿದ್ದರೂ ಆತಂಕ ಮೂಡಿಸುವಂಥದ್ದು. ಸರ್ಕಾರಿ ಶಾಲೆಗಳಲ್ಲಿ ಈಗಾಗಲೇ ಮಕ್ಕಳಿಗೆ ಬಿಸಿಯೂಟ, ಹಾಲು, ಮೊಟ್ಟೆ, ಬಾಳೆಹಣ್ಣು, ಚಿಕ್ಕಿ ಅಂತೆಲ್ಲ ನೀಡುತ್ತಿರುವುದರಿಂದ ಮೇಷ್ಟ್ರುಗಳಿಗೆ ಪಾಠ ಮಾಡಲು ಪುರಸತ್ತೇ ಇಲ್ಲದಂತಾಗಿದೆ. ಇವುಗಳನ್ನು ನಿರ್ವಹಿಸುವ ಮೇಷ್ಟ್ರ ಮೇಲೆ ಜನರ ಗುಮಾನಿ, ತಿಕ್ಕಾಟ, ಕಿರಿಕಿರಿ ಇದ್ದದ್ದೇ.

ಬರಬರುತ್ತಾ ಎಲ್ಲ ಶಾಲೆಗಳೂ ಊಟದ ಮೆಸ್ಸೊ, ಧರ್ಮಛತ್ರವೊ ಆಗಿ ಪರಿವರ್ತನೆ ಆಗಿಬಿಡುತ್ತವೆಯೋ ಎಂಬ ಭಯ ಕಾಡುತ್ತದೆ. ಮಕ್ಕಳಿಗೆ ಕಲಿಸುವ ಶಾಲೆಯ ಮೂಲ ಉದ್ದೇಶವೇ ಗೌಣವಾಗಿ ಇತರ ಕೆಲಸಗಳೇ ರಾರಾಜಿಸುವಂತಾಗಿದೆ. ಇಂತಹ ಸ್ಥಿತಿಯಲ್ಲಿ ವೃದ್ಧರನ್ನು ಶಾಲೆಗೆ ಕರೆತಂದು ಬಿಸಿಯೂಟ ಕೊಡುವುದಕ್ಕೆ ಶುರುಮಾಡಿದರೆ, ಅಲ್ಲಿಗೆ ಸರ್ಕಾರಿ ಶಾಲೆಯ ಗತಿ ಏನಾಗಬೇಕು? ವೃದ್ಧರಿಗೆ ಊಟ ಒದಗಿಸುವುದು ತುಂಬಾ ಒಳ್ಳೆಯ ಯೋಚನೆ. ಆದರೆ ಸರ್ಕಾರಿ ಶಾಲೆಗಳಲ್ಲಿ ಅದಕ್ಕೆ ವ್ಯವಸ್ಥೆ ಮಾಡುವುದು ಬೇಡ ಅನಿಸುತ್ತದೆ.

**ಅರವಿಂದ ಎಂ.,** ಸುರಹೊನ್ನೆ, ನ್ಯಾಮತಿ

## ಗಡಿ ವಿವಾದ: ಮೊರಾರ್ಜಿ ಚಾಟಿಯೇಟು

ಮೊರಾರ್ಜಿ ದೇಸಾಯಿ ಅವರು ದೇಶದ ಪ್ರಧಾನಿಯಾಗಿದ್ದ ಸಂದರ್ಭದಲ್ಲಿ ಬೆಳಗಾವಿಗೆ ಭೇಟಿ ನೀಡಿದ್ದರು. ವಿಮಾನ ನಿಲ್ದಾಣದಲ್ಲಿ ಬೆಳಗಾವಿ ಗಡಿ ವಿವಾದದ ಬಗ್ಗೆ ಪತ್ರಕರ್ತರು ಪ್ರಶ್ನೆ ಕೇಳಿದಾಗ ಅವರು 'ಎಲ್ಲಿದೆ ಸಮಸ್ಯೆ? ಅದು ಮುಗಿದ ಅಧ್ಯಾಯ' ಎಂದು ಹೇಳುವ ದಿಟ್ಟತನ ಮೆರೆದರು. ಇಂಥದ್ದೇ ಒಂದು ನಿರ್ಧಾರ ಸುಪ್ರೀಂ ಕೋರ್ಟ್‌ನಿಂದ ಬಂದರೆ ಗಡಿನಾಡಿನ ಜನ ನೆಮ್ಮದಿಯಿಂದ ಬದುಕಬಲ್ಲರು.

**ಜಯವಂತ ಕಾಡದೇವರ,** ಬನಹಟ್ಟಿ

## ಹೀಗಿದ್ದಾರೆ ಭವಿಷ್ಯ ನಿರ್ಮಾತೃಗಳು!

ರಾಜ್ಯದಲ್ಲಿ ಇತ್ತೀಚೆಗೆ ವರದಿಯಾಗುತ್ತಿರುವ ಕೆಲವು ಶಿಕ್ಷಕರ ಭಯಾನಕ ಚರ್ಯೆಗಳು ಕಳವಳಕಾರಿ. ರಾಜಕೀಯ ಪಕ್ಷವೊಂದರ ಪರವಾಗಿ, ವಿಧಾನ ಪರಿಷತ್ ಶಿಕ್ಷಕರ ಕ್ಷೇತ್ರದ ಮತದಾರರಿಗೆ ಔತಣಕೂಟದ ಬಾಧ್ಯತೆಯನ್ನು ವಹಿಸಿದ್ದೆ. ಎಳವೆಯಲ್ಲಿ ಶರಾಬು ಗಡಂಗಿನ ಸುತ್ತ ನಾನು ಕಂಡಿದ್ದ ಕುಡುಕರಿಗಿಂತ ಹೀನವಾಗಿ ವರ್ತಿಸಿದ ನಾಳಿನ ಭವಿಷ್ಯ ನಿರ್ಮಾತೃಗಳ ಬಗ್ಗೆ ಭಯವಾಯಿತು. ಕೂಟ ಏರ್ಪಡಿಸಿದ ಪಾಪ ನಮ್ಮದೇ ಆದರೂ, ಭಾಗೀದಾರ ಮತದಾರ ಶಿಕ್ಷಕರ ಬೀಭತ್ಸವಂತೂ ಅಸದಳ.

ಕುವೆಂಪು, ಶಿವರುದ್ರಪ್ಪ, ಭೈರಪ್ಪ ರೀತಿಯ ಮೇಷ್ಟ್ರುಗಳು ಎಲ್ಲಿ? ಇಂದಿನ ಈ ಮೇಷ್ಟ್ರುಗಳು ಎಲ್ಲಿ?

**ಕೆ.ಪುರುಷೋತ್ತಮ ರೆಡ್ಡಿ,** ಪಾವಗಡ

## ಸಂದರ್ಭೋಚಿತ ಎಂದರೆ...?

'ಸರ್ಕಾರಗಳು ನೀಡುವ ಸಬ್ಸಿಡಿ ಹಾಗೂ ಉಚಿತ ಕೊಡುಗೆಗಳು ಸಂದರ್ಭೋಚಿತವಾಗಿ ಇರಬೇಕು' ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ (ಪ್ರ.ವಾ., ಡಿ. 22). ಸಂದರ್ಭೋಚಿತ ಎಂದರೆ ಚುನಾವಣಾ ಸಂದರ್ಭ ಎಂದು ಭಾವಿಸಬೇಕೇ? ಮತದಾರರನ್ನು ಸೆಳೆಯುವ ಮಾರ್ಗಗಳಲ್ಲಿ ಇಂತಹ ಉಚಿತ ಕೊಡುಗೆಗಳು ಒಂದು. ಉಚಿತ ಮತ್ತು ಸಬ್ಸಿಡಿ ಸವಲತ್ತುಗಳು ಅರ್ಹರಿಗೆ ತಲುಪುವುದೇ ಇಲ್ಲ. ಬಹುತೇಕವು ಸಂಸದರು, ಶಾಸಕರು ಅಥವಾ ಇನ್ನಾವುದೋ ಜನಪ್ರತಿನಿಧಿಗಳ ಹಿಂಬಾಲಕರಿಗೇ ದೊರಕುವುದು.

ಸರ್ಕಾರ ಉಚಿತ ಕೊಡುಗೆಗಳನ್ನು ನೀಡುವುದರ ಮೂಲಕ ಶಕ್ತಿ ಮತ್ತು ಸಾಮರ್ಥ್ಯ ಇರುವವರನ್ನು ಸೋಮಾರಿಗಳನ್ನಾಗಿ ಮಾಡುತ್ತಿದೆ ಎಂದರೆ ತಪ್ಪಾಗಲಾರದು. ಬದಲಾಗಿ ತಮ್ಮ ಜೀವನವನ್ನು ರೂಪಿಸಿಕೊಳ್ಳುವಂತೆ ಹಾದಿ ತೋರಿಸಿ ಅದಕ್ಕೆ ಪರೋಕ್ಷವಾಗಿ ಸಹಾಯ ಮಾಡಿದರೆ, ಬದುಕನ್ನು ಕಟ್ಟಿಕೊಂಡು ಉತ್ತಮ ಪ್ರಜೆಗಳಾಗಿ ಹೊರಹೊಮ್ಮುತ್ತಾರೆ. ಈ ಬಗ್ಗೆ ಸರ್ಕಾರ ಚಿಂತಿಸಲಿ.

**ಪತ್ತಂಗಿ ಎಸ್. ಮುರಳಿ,** ಬೆಂಗಳೂರು

## ಘಟನೆ, ವರದಿ ಎರಡೂ ದುರದೃಷ್ಟಕರ

'ಕಾರಿನಲ್ಲಿ ಟೆಕಿ ಆತ್ಮಹತ್ಯೆ' ಕುರಿತ ದುರದೃಷ್ಟಕರ ಸಂಗತಿಯನ್ನು ಎಲ್ಲ ಮಾಧ್ಯಮಗಳೂ ವಿವರವಾಗಿ ನಿನ್ನೆ ಪ್ರಕಟಿಸಿವೆ. ಇಂಥ ವರದಿಗಳಿಂದ ಸಮಾಜಕ್ಕೆ ಯಾವ ಉತ್ತಮ ಪಾಠವೂ ಸಿಗುವುದಿಲ್ಲ. ಆತ್ಮಹತ್ಯೆಯ ಸುದ್ದಿಯನ್ನು ಹೇಗೆ ವರದಿ ಮಾಡಬಾರದು ಎಂಬುದರ ಬಗ್ಗೆ ವಿಶ್ವ ಆರೋಗ್ಯ ಸಂಸ್ಥೆಯು ಮಾಧ್ಯಮದವರಿಗೆಂದೇ ವಿಶೇಷ ಮಾರ್ಗಸೂಚಿಯನ್ನು ಆಗಾಗ ಪ್ರಕಟಿಸುತ್ತಿರುತ್ತದೆ. ಅದರ ಪ್ರಕಾರ, ಒಬ್ಬ ವ್ಯಕ್ತಿ ಹೇಗೆ ಆತ್ಮಹತ್ಯೆ ಮಾಡಿಕೊಂಡ ಎಂಬುದನ್ನು ಪ್ರಕಟಿಸಬಾರದು. ಇಂಥ ವರದಿ ಪ್ರಕಟವಾದಾಗಲೆಲ್ಲ ಇದನ್ನೇ ಅನುಕರಿಸಿದ ಸರಣಿ ಆತ್ಮಹತ್ಯೆಗಳು ಅದೆಷ್ಟೋ ಬಾರಿ ಸಂಭವಿಸಿವೆ. ತಾತ್ಕಾಲಿಕ ಖಿನ್ನತೆಯಿಂದ ಬಳಲುವ ವ್ಯಕ್ತಿಗಳು ತಮ್ಮ ಪ್ರಾಣತ್ಯಾಗಕ್ಕೆ ನೋವಿಲ್ಲದ, ಸುಲಭ ಉಪಾಯವನ್ನು ಹುಡುಕುತ್ತಿರುತ್ತಾರೆ. ಅಂಥವರ ಕಣ್ಣಿಗೆ ಈ ಬಗೆಯ ವಿವರ ಮಾಹಿತಿ ಬೀಳಲೇಬಾರದು. ಯಾರನ್ನಾದರೂ ಮುಗಿಸಿಬಿಡಬೇಕೆಂಬ ಕುತ್ಸಿತ ಮನಃಸ್ಥಿತಿ ಇದ್ದವರೂ ಇಂಥ ವರದಿಯಿಂದ ಪ್ರೇರಣೆ ಪಡೆಯುವ ಸಂಭವ ಇರುತ್ತದೆ. ವಿಶ್ವ ಆರೋಗ್ಯ ಸಂಸ್ಥೆಯ ಮಾರ್ಗಸೂಚಿಯ ಪ್ರಕಾರ, ವ್ಯಕ್ತಿಯೊಬ್ಬ ಯಾಕೆ ಆತ್ಮಹತ್ಯೆ ಮಾಡಿಕೊಂಡ ಎಂಬುದನ್ನೂ ವರದಿ ಮಾಡಬಾರದು. ಅಂಥದ್ದೇ ಸಮಸ್ಯೆ ಇದ್ದವರಿಗೆ ಇದು ಪ್ರೇರಣೆ ನೀಡುವಂತಾಗುತ್ತದೆ. ಮೇಲಾಗಿ, ಯಾವ ಆತ್ಮಹತ್ಯೆಗೂ ಒಂದೇ ನಿರ್ದಿಷ್ಟ ಕಾರಣ ಇರುವುದಿಲ್ಲ.

ಆತ್ಮಹತ್ಯೆ ಎಂಬುದು ಸಾರ್ವಜನಿಕ ಸ್ವಾಸ್ಥ್ಯದ ಗಂಭೀರ ಸಮಸ್ಯೆಯಾಗಿದ್ದು, ಇದರ ಸಂಖ್ಯೆಯನ್ನು ಕಡಿಮೆ ಮಾಡಲು ಮನೋವಿಜ್ಞಾನಿಗಳು ಮತ್ತು ರಾಷ್ಟ್ರೀಯ, ಅಂತರರಾಷ್ಟ್ರೀಯ ಸಂಘಟನೆಗಳು ಏನೆಲ್ಲ ಪ್ರಯತ್ನಗಳನ್ನು ಕೈಗೊಳ್ಳುತ್ತಿವೆ. ಸರ್ಕಾರಗಳು ಸಹಾಯವಾಣಿಯನ್ನು ಸ್ಥಾಪಿಸಿವೆ. ಸುದ್ದಿಯಲ್ಲಿ ರೋಚಕತೆಯ ಬದಲು ಸಂಯಮವಿದ್ದರೆ ಆ ಎಲ್ಲ ಯತ್ನಗಳಿಗೆ ಮಾಧ್ಯಮವೂ ಕೈಜೋಡಿಸಿದಂತಾಗುತ್ತದೆ.

**ನಾಗೇಶ ಹೆಗಡೆ,** ಕೆಂಗೇರಿ


Printed and published by B A Ravi on behalf of The Printers (Mysore ) Private Ltd., at The Printers (Mysore ) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

# ಜಗತ್ತಿನಲ್ಲಿ ಮತ್ತೆ ಮತ್ತೆ ಕೋವಿಡ್

ಪ್ರಜಾವಾಣಿ ವಾರ್ತೆ

ಇಡೀ ಜಗತ್ತನ್ನು ದುಃಸ್ವಪ್ನದಂತೆ ಕಾಡಿದ್ದ ಕೊರೊನಾ ವೈರಸ್ ಮತ್ತೆ ತನ್ನ ಕಬಂಧ ಬಾಹುಗಳನ್ನು ಚಾಚುವ ಸೂಚನೆಗಳು ಕಂಡುಬರುತ್ತಿವೆ. 2019ರಲ್ಲಿ ಚೀನಾದಲ್ಲಿ ಮೊದಲು ಕಾಣಿಸಿಕೊಂಡಿದ್ದ ಕೋವಿಡ್, ಮೂರು ವರ್ಷಗಳ ಬಳಿಕ ಮತ್ತೊಂದು ಸುತ್ತಿನ ಹೊಡೆತ ನೀಡಲು ಸಜ್ಜಾಗಿರುವಂತೆ ತೋರುತ್ತಿದೆ. ಅಮೆರಿಕ, ಜಪಾನ್, ಕೊರಿಯಾದಲ್ಲೂ ಸೋಂಕು ಉಲ್ಬಣಿಸುತ್ತಿದ್ದರೂ, ಚೀನಾದಲ್ಲಿ ಅದು ಕಾಳ್ಗಿಚ್ಚಿನಂತೆ ಹಬ್ಬುತ್ತಿದೆ. ಚೀನಾ ಜಗತ್ತಿಗೆ ಇನ್ನೊಮ್ಮೆ ಸೋಂಕು ದಾಟಿಸುವ ಅಪಾಯ ದಟ್ಟವಾಗಿದೆ.

ಕೊರೊನಾ ವೈರಸ್‌ನ ತಳಿ ಓಮೈಕ್ರಾನ್ ಕಳೆದ ಒಂದು ವರ್ಷದಿಂದ ಸಕ್ರಿಯವಾಗಿದ್ದರೂ, ಅಷ್ಟು ಹಾನಿ ಮಾಡಿರಲಿಲ್ಲ. ಆದರೆ, ಅದರ ಉಪತಳಿಗಳು ಅಪಾಯ ತಂದೊಡ್ಡುವ ಗುಣಗಳನ್ನು ಹೊಂದಿವೆ ಎಂದು ತಜ್ಞರು ಹೇಳಿರುವುದು ಜಾಗತಿಕವಾಗಿ ಆತಂಕ ಸೃಷ್ಟಿಸಿದೆ. ಚೀನಾದ ಹಲವು ನಗರಗಳಲ್ಲಿ ಓಮೈಕ್ರಾನ್‌ನ ಬಿಎ.5.2 ಹಾಗೂ ಬಿಎಫ್.7 ಉಪತಳಿಗಳು ವೇಗವಾಗಿ ಹರಡುತ್ತಿವೆ ಎನ್ನಲಾಗಿದೆ.

ಈ ಪೈಕಿ ಬಿಎಫ್.7 ಉಪತಳಿಯು ಅತಿವೇಗದ ಪ್ರಸರಣ ಸಾಮರ್ಥ್ಯ ಹೊಂದಿದ್ದು, ಬೀಜಿಂಗ್‌ನ ಎಲ್ಲ ಆಸ್ಪತ್ರೆಗಳು ರೋಗಿಗಳಿಂದ ತುಂಬಿಹೋಗಿವೆ ಎಂದು ಮಾಧ್ಯಮಗಳು ವರದಿ ಮಾಡಿವೆ. ರಾಜಧಾನಿ ಸೇರಿದಂತೆ ಕೆಲವು



ನೈರುತ್ಯ ಚೀನಾದ ಚಾಂಗ್‌ಕಿಂಗ್ ನಗರದ ಆಸ್ಪತ್ರೆ ಒಂದರಲ್ಲಿ ಗುರುವಾರ ಕೋವಿಡ್ ರೋಗಿಗಳಿಗೆ ಸ್ಟ್ರೆಚರ್‌ನಲ್ಲಿಯೇ ಚಿಕಿತ್ಸೆ ನೀಡಲಾಗಿತ್ತು


—ಎಎಫ್‌ಪಿ ಚಿತ್ರ

ನಗರಗಳ ಚಿತಾಗಾರಗಳಲ್ಲಿ ಸರದಿಯಲ್ಲಿ ಅಂತ್ಯಸಂಸ್ಕಾರ ನಡೆಸಲಾಗುತ್ತಿದೆ.

ಆದರೆ ಪ್ರತಿದಿನ ಪತ್ತೆಯಾಗುತ್ತಿರುವ ಪ್ರಕರಣಗಳ ಸಂಖ್ಯೆಯ ನಿಖರ ಮಾಹಿತಿ ಲಭ್ಯವಿಲ್ಲ. ದೇಶದಲ್ಲಿ ನಿತ್ಯ 2,700 ಹೊಸ ಪ್ರಕರಣಗಳು ಪತ್ತೆಯಾಗುತ್ತಿವೆ ಎಂದಷ್ಟೇ ಚೀನಾ ಅಧಿಕೃತವಾಗಿ ಹೇಳಿದೆ. ಆದರೆ, ಆಸ್ಪತ್ರೆಗಳಲ್ಲಿ ಹಾಸಿಗೆ ಸಿಗದೇ ಪರದಾಡುತ್ತಿರುವ ರೋಗಿಗಳನ್ನು ಗಮನಿಸಿದರೆ, ನಿತ್ಯ 40 ಸಾವಿರ ಜನರು ಸೋಂಕಿಗೆ ಒಳಗಾಗುತ್ತಿರಬಹುದು ಎಂದು ತಜ್ಞರು ಅಂದಾಜಿಸಿದ್ದಾರೆ. ಕಳೆದ ಒಂದು ವಾರದಿಂದ ಕೋವಿಡ್‌ನಿಂದ 7 ಸಾವು ಸಂಭವಿಸಿವೆ ಎಂದು ಚೀನಾ ಹೇಳಿಕೊಂಡಿದೆಯಾದರೂ, ಅದು ವಾಸ್ತವ ಸ್ಥಿತಿಯನ್ನು ಬಿಂಬಿಸುತ್ತಿಲ್ಲ ಎನ್ನಲಾಗಿದೆ. ದೇಶದಲ್ಲಿ ಸೋಂಕು ಹರಡುವಿಕೆ ವೇಗವು ಇನ್ನಷ್ಟು ಉಪತಳಿಗಳ ಸೃಷ್ಟಿಗೆ ಕಾರಣವಾಗಬಹುದು ಎಂದು ಖ್ಯಾತ ಶ್ವಾಸಕೋಶ ತಜ್ಞ ಝೋಂಗ್ ನನ್‌ಶನ್ ಎಚ್ಚರಿಸಿದ್ದಾರೆ. ಮುಂದಿನ 15 ದಿನಗಳಲ್ಲಿ ರಾಜಧಾನಿ ಬೀಜಿಂಗ್‌ನಲ್ಲಿ ಗಂಭೀರ ಸ್ವರೂಪದಲ್ಲಿ ಸೋಂಕು ಹರಡಲಿದೆ ಎಂದು ಪೀಕಿಂಗ್ ವಿಶ್ವವಿದ್ಯಾಲಯದ ವಿಜ್ಞಾನಿ ವಾಂಗ್ ಗುವಾಂಗ್‌ಫ ಅವರು ಎಚ್ಚರಿಸಿರುವುದು, ಪರಿಸ್ಥಿತಿ ಕೈಮೀರಿರುವ ಸೂಚನೆಗಳನ್ನು ನೀಡಿದೆ. ಶೀತ ಹಾಗೂ ಜ್ವರಕ್ಕೆ ಸಂಬಂಧಿಸಿದ ಔಷಧಗಳಿಗೆ ದಿಢೀರನೆ ಬೇಡಿಕೆ ಹೆಚ್ಚಿದ್ದು, ದೇಶದ ಹಲವು ಔಷಧ ಕಂಪನಿಗಳು ಹಗಲುರಾತ್ರಿ ಎನ್ನದೆ ಕೆಲಸ ಮಾಡುತ್ತಿವೆ ವಿಶ್ವದ ಹಲವು ಪ್ರಮುಖ ಸುದ್ದಿ ಮಾಧ್ಯಮಗಳು ವರದಿ ಮಾಡಿವೆ.

## ಹರಡುತ್ತಿವೆ ಹಲವು ತಳಿಗಳು

### ಪ್ರತಿದಿನದ ಸರಾಸರಿ ಹೊಸ ಪ್ರಕರಣಗಳು




## ಅಮೆರಿಕ, ಲ್ಯಾಟಿನ್ ಅಮೆರಿಕ

ಅಮೆರಿಕದಲ್ಲಿ ಈಗ ಪ್ರತಿದಿನ 65,000ಕ್ಕೂ ಹೆಚ್ಚು ಪ್ರಕರಣಗಳು ಪತ್ತೆಯಾಗುತ್ತಿವೆ. ಕೋವಿಡ್ ಬಂದಾಗಿನಿಂದ ಈವರೆಗೆ ಪತ್ತೆಯಾದ ಒಟ್ಟು ಪ್ರಕರಣಗಳ ಸಂಖ್ಯೆ 10 ಕೋಟಿಯನ್ನು ದಾಟಿದೆ. ವಿಶ್ವದ ಯಾವುದೇ ದೇಶದಲ್ಲಿ ಈವರೆಗೆ ಪತ್ತೆಯಾದ ಅತ್ಯಂತ ಗರಿಷ್ಠ ಪ್ರಕರಣಗಳ ಸಂಖ್ಯೆ ಇದು.

ಅಮೆರಿಕದಲ್ಲಿ ಕೋವಿಡ್‌ನ ವಿವಿಧ ತಳಿಗಳು ಪತ್ತೆಯಾಗಿವೆ. ಆಲ್ಫಾ, ಬೀಟಾ ಮತ್ತು ಓಮೈಕ್ರಾನ್ ತಳಿಗಳ ಪ್ರಕರಣಗಳು ಮತ್ತು ಇವುಗಳ ಉಪತಳಿಗಳ ಪ್ರಕರಣಗಳೂ ಪತ್ತೆಯಾಗಿವೆ. ಕೆಲವು ತಳಿಗಳ ಪ್ರಕರಣಗಳಲ್ಲಿ ಆರೋಗ್ಯವು ತೀರಾ ಹದಗೆಟ್ಟಿದೆ. ಕೆಲವು ತಳಿಗಳ ಪ್ರಕರಣಗಳು ಆರೋಗ್ಯದ ಮೇಲೆ ತೀವ್ರ ಪರಿಣಾಮವನ್ನೇನೂ ಉಂಟು ಮಾಡಿಲ್ಲ. ಅಮೆರಿಕವು ತನ್ನ ದೇಶದ ಬಹುತೇಕ ಪ್ರಜೆಗಳಿಗೆ ಕೋವಿಡ್ ಲಸಿಕೆಯನ್ನು ನೀಡಿದೆ ಮತ್ತು ಮುನ್ನೆಚ್ಚರಿಕೆ ಲಸಿಕೆಯನ್ನೂ ನೀಡಿದೆ. ಆದರೂ, ಕೋವಿಡ್ ಮತ್ತೆ ವ್ಯಾಪಕವಾಗಿ ಹರಡುತ್ತಿರುವ ಬಗ್ಗೆ ತಜ್ಞರು ಕಳವಳ ವ್ಯಕ್ತಪಡಿಸಿದ್ದಾರೆ.

ಲ್ಯಾಟಿನ್ ಅಮೆರಿಕದ ದೇಶಗಳಾದ ಮೆಕ್ಸಿಕೊ, ಕೊಲಂಬಿಯಾ, ಬ್ರೆಜಿಲ್, ಪೆರು ಮತ್ತು ಅರ್ಜೆಂಟೀನಾದಲ್ಲೂ ಇದೇ ಸ್ವರೂಪದ ಸ್ಥಿತಿ ಇದೆ. ಈ ದೇಶಗಳಲ್ಲಿ ಸಾರ್ವತ್ರಿಕ ಕೋವಿಡ್ ಲಸಿಕೆ ಕಾರ್ಯಕ್ರಮಗಳು ಇನ್ನೂ ಪೂರ್ಣಗೊಂಡಿಲ್ಲ. ಹೀಗಾಗಿ ಇಲ್ಲಿ ಕೋವಿಡ್ ಹರಡುವಿಕೆ ವೇಗ ಪಡೆಯುತ್ತಿದೆ ಎಂದು ವಿಶ್ಲೇಷಿಸಲಾಗಿದೆ.

## ಯೂರೋಪ್‌ನಲ್ಲಿ ಆರು ಉಪತಳಿಗಳು

ಐರೋಪ್ಯ ದೇಶಗಳಲ್ಲೂ ಈಗ ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ ಏರಿಕೆಯಾಗುತ್ತಿದೆ. ಇಲ್ಲಿ ಪತ್ತೆಯಾಗುತ್ತಿರುವ ಹೊಸ ಪ್ರಕರಣಗಳಲ್ಲಿ ಬಹುತೇಕವು ಓಮೈಕ್ರಾನ್‌ನ ಉಪತಳಿಗಳಿಗೆ ಸಂಬಂಧಪಟ್ಟಿದ್ದು. ಐರೋಪ್ಯ ದೇಶಗಳಲ್ಲಿ ಈವರೆಗೆ ಓಮೈಕ್ರಾನ್‌ನ ಒಟ್ಟು 6 ಉಪತಳಿಗಳನ್ನು ಪತ್ತೆ ಮಾಡಲಾಗಿದೆ. ಇವುಗಳಲ್ಲಿ ಮೂರು ಉಪತಳಿಗಳು ಮಾತ್ರ ಅಪಾಯಕಾರಿಯಾಗಿದ್ದು, ವ್ಯಾಪಕವಾಗಿ ಹರಡುತ್ತಿವೆ ಎಂದು ಯೂರೋಪಿಯನ್ ಸೆಂಟರ್ ಫಾರ್ ಡಿಸೀಸ್ ಪ್ರಿವೆನ್ಷನ್ ಅಂಡ್ ಕಂಟ್ರೋಲ್ (ಇಸಿಡಿಸಿ–ಇಯು) ಹೇಳಿದೆ.

ಬ್ರಿಟನ್, ಜರ್ಮನಿ, ಇಟಲಿ, ಸ್ಪೇನ್, ಆಸ್ಟ್ರಿಯಾ ಮೊದಲಾದ ದೇಶಗಳಲ್ಲಿ ಓಮೈಕ್ರಾನ್–ಬಿಎ.2, ಓಮೈಕ್ರಾನ್ ಬಿಎ.4 ಮತ್ತು ಓಮೈಕ್ರಾನ್ ಬಿಎ.5 ಉಪತಳಿಗಳು ಪತ್ತೆಯಾಗಿವೆ. ಈ ಮೂರೂ ತಳಿಗಳು ಮೊದಲಿಗೆ ದಕ್ಷಿಣ ಆಫ್ರಿಕಾದಲ್ಲಿ ಪತ್ತೆಯಾಗಿದ್ದವು. ಆನಂತರ ಆಫ್ರಿಕಾದ ಇತರ ದೇಶಗಳು, ಮಧ್ಯಪ್ರಾಚ್ಯ ದೇಶಗಳು ಮತ್ತು ಐರೋಪ್ಯ ದೇಶಗಳಿಗೆ ಹರಡಿವೆ. ಇವುಗಳಲ್ಲಿ ಬಿಎ.2 ಉಪತಳಿ ಮಾತ್ರ ವ್ಯಾಪಕವಾಗಿ ಹರಡುತ್ತಿದೆ. ಉಳಿದ ಎರಡು ತಳಿಗಳು ಹರಡುವ ವೇಗ ಕಡಿಮೆ. ಆದರೆ, ಮೂರೂ ತಳಿಗಳು ಕೋವಿಡ್ ನಿರೋಧಕ ಶಕ್ತಿಯನ್ನು ತಗ್ಗಿಸುತ್ತವೆ. ಈ ಕಾರಣದಿಂದ ಇವನ್ನು ಅಪಾಯಕಾರಿ ಉಪತಳಿಗಳು ಎಂದು ಪರಿಗಣಿಸಲಾಗಿದೆ. ಇವುಗಳ ಜತೆಯಲ್ಲಿ ಬಿಎ.2.75, ಬಿಕ್ಯು.1 ಮತ್ತು ಎಕ್ಸ್‌ಬಿಬಿ (7) ಎಂಬ ಮೂರು ಓಮೈಕ್ರಾನ್ ಉಪತಳಿಗಳು ಈ ದೇಶಗಳಲ್ಲಿ ಪತ್ತೆಯಾಗಿವೆ. ಆದರೆ, ಈ ಉಪತಳಿಗಳ ಪ್ರಕರಣಗಳ ಪ್ರಮಾಣ ತೀರಾ ಕಡಿಮೆ ಇದೆ ಎಂದು ಇಸಿಡಿಸಿ–ಇಯು ವಿವರಿಸಿದೆ.

## ಜಪಾನ್‌ನಲ್ಲಿ ಓಮೈಕ್ರಾನ್ ಹಾವಳಿ

ಜಪಾನ್‌ನಲ್ಲಿ ಈಗ ಪ್ರತಿದಿನ ಕೋವಿಡ್‌ನ ಸರಾಸರಿ 40,000 ಹೊಸ ಪ್ರಕರಣಗಳು ಪತ್ತೆಯಾಗುತ್ತಿವೆ. 2020ರಿಂದ 2022ರ ನವೆಂಬರ್‌ವರೆಗೆ ಸರಿಸುಮಾರು ಒಟ್ಟು ನಾಲ್ಕು ಲಕ್ಷ ಪ್ರಕರಣಗಳಷ್ಟೇ ಪತ್ತೆಯಾಗಿದ್ದವು. ಆದರೆ, ಡಿಸೆಂಬರ್ ಎರಡನೇ ವಾರವೊಂದರಲ್ಲೇ 2.57 ಲಕ್ಷ ಹೊಸ ಪ್ರಕರಣಗಳು ಪತ್ತೆಯಾಗಿವೆ. ಅಂದರೆ ಈಗ ಪ್ರತಿದಿನ 40,000ದಷ್ಟು ಹೊಸ ಪ್ರಕರಣಗಳು ಪತ್ತೆಯಾಗುತ್ತಿದ್ದು, ಅವುಗಳಲ್ಲಿ ಶೇ 70ರಷ್ಟು ಪ್ರಕರಣಗಳಿಗೆ ಓಮೈಕ್ರಾನ್ ತಳಿ ಕಾರಣ ಎಂದು ಜಪಾನ್ ಟೈಮ್ಸ್ ವರದಿ ಮಾಡಿದೆ.

ಜಪಾನ್‌ನಲ್ಲಿ ಕೋವಿಡ್‌ನಿಂದ ಮೃತಪಡುತ್ತಿರುವವರಲ್ಲಿ ವಯಸ್ಕರಿಗಿಂತ 15 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ಪ್ರಮಾಣವೇ ಹೆಚ್ಚು. ಹೀಗೆ ಕೋವಿಡ್‌ನಿಂದ ಮೃತಪಡುತ್ತಿರುವ ಮಕ್ಕಳಲ್ಲಿ ಶೇ 40ರಷ್ಟು ಪ್ರಕರಣಗಳು ಓಮೈಕ್ರಾನ್‌ಗೆ ಸಂಬಂಧಪಟ್ಟಿದ್ದು ಎಂದು ವರದಿಯಲ್ಲಿ ವಿವರಿಸಲಾಗಿದೆ. ಜಪಾನ್‌ನಲ್ಲಿ ಕೋವಿಡ್ ನಿಯಂತ್ರಣ ಸಂಬಂಧ ಇದ್ದ ಕ್ರಮಗಳನ್ನು ನವೆಂಬರ್‌ನಲ್ಲಿ ಸಡಿಲಗೊಳಿಸಲಾಗಿತ್ತು. ಆನಂತರ ಕೋವಿಡ್ ಹರಡುವಿಕೆ ಹೆಚ್ಚಾಗಿದೆ.

ಆಸ್ಟ್ರೇಲಿಯ, ನ್ಯೂಜಿಲೆಂಡ್, ತೈವಾನ್ ಮತ್ತು ಇಂಡೊನೇಷ್ಯಾದಲ್ಲೂ 15 ದಿನಗಳಿಂದ ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಿದೆ. ಈ ಎಲ್ಲಾ ದೇಶಗಳಲ್ಲಿ ಪತ್ತೆಯಾಗುತ್ತಿರುವ ಹೊಸ ಪ್ರಕರಣಗಳಲ್ಲಿ ಓಮೈಕ್ರಾನ್ ತಳಿಯ ಪ್ರಕರಣಗಳ ಪ್ರಮಾಣ ಶೇ 50ಕ್ಕಿಂತಲೂ ಹೆಚ್ಚು ಇದೆ ಎಂದು ವಿಶ್ವ ಆರೋಗ್ಯ ಸಂಸ್ಥೆ ಹೇಳಿದೆ. ದಕ್ಷಿಣ ಕೊರಿಯಾದಲ್ಲಿ ಈಗ ಪ್ರತಿದಿನ ಸರಾಸರಿ 75,000ಕ್ಕೂ ಹೆಚ್ಚು ಪ್ರಕರಣಗಳು ಪತ್ತೆಯಾಗುತ್ತಿವೆ. ಇವುಗಳಲ್ಲಿ ಶೇ 60ಕ್ಕೂ ಹೆಚ್ಚು ಪ್ರಕರಣಗಳು ಓಮೈಕ್ರಾನ್‌ಗೆ ಸಂಬಂಧಪಟ್ಟಿದ್ದಾಗಿವೆ. ಇಲ್ಲಿ ಕೋವಿಡ್‌ನಿಂದ ಮೃತಪಡುವವರ ಸಂಖ್ಯೆಯೂ ಈಚಿನ ದಿನಗಳಲ್ಲಿ ಹೆಚ್ಚಾಗಿದೆ. 15 ದಿನಗಳಲ್ಲಿ ಕೋವಿಡ್‌ನಿಂದ ಪ್ರತಿದಿನ ಸರಾಸರಿ 55 ಜನರು ಮೃತಪಟ್ಟಿದ್ದಾರೆ.

ಆಧಾರ: ವಿಶ್ವ ಆರೋಗ್ಯ ಸಂಸ್ಥೆ, ಇಸಿಡಿಸಿ–ಯು, ಪಿಟಿಐ, ರಾಯಿಟರ್ಸ್, ನ್ಯೂಯಾರ್ಕ್ ಟೈಮ್ಸ್



## ಚೀನಾ: ಸೋಂಕು ಹೆಚ್ಚಿದ್ದೇಕೆ?

ಚೀನಾದಲ್ಲಿ ಸೋಂಕು ದಿಢೀರನೆ ಹೆಚ್ಚಲು ಹಲವು ಕಾರಣಗಳನ್ನು ಪಟ್ಟಿ ಮಾಡಲಾಗಿದೆ. ಕಳೆದ ಮೂರು ವರ್ಷಗಳಿಂದ ದೇಶದಲ್ಲಿ 'ಝೀರೊ ಕೋವಿಡ್ ನೀತಿ' ಅನುಸರಿಸಿಕೊಂಡು ಬರಲಾಗುತ್ತಿತ್ತು. ಸೋಂಕಿತರ ಪತ್ತೆ, ಅವರ ಸಂಪರ್ಕಿತರ ಪತ್ತೆ ಹಾಗೂ ಪ್ರತ್ಯೇಕವಾಸ, ಕ್ಲಸ್ಟರ್‌ಗಳಲ್ಲಿ ಕಟ್ಟುನಿಟ್ಟಿನ ನಿಯಮ ಪಾಲನೆಗೆ ಚೀನಾ ಒತ್ತುಕೊಟ್ಟಿತ್ತು. ಮೂರು ವರ್ಷಗಳಿಂದ ಇಂತಹ ಕಠಿಣ ನಿರ್ಬಂಧಗಳಿಂದ ರೋಸಿಹೋಗಿದ್ದ ಜನರು ಕೆಲವು ವಾರಗಳ ಹಿಂದೆ ಸಿಡಿದೆದ್ದು ಬೀದಿಗಿಳಿದು ಪ್ರತಿಭಟನೆ ಮಾಡಿದ್ದರು. ಕಮ್ಯುನಿಸ್ಟ್ ದೇಶದಲ್ಲಿ ಈ ರೀತಿಯ ಪ್ರತಿಭಟನೆಗಳು ಅಚ್ಚರಿ ಮೂಡಿಸಿದ್ದವು. ಪ್ರತಿಭಟನೆಯು ಹಿಂಸೆಗೆ ತಿರುಗಿದ್ದರಿಂದ ಎಚ್ಚೆತ್ತ ಸರ್ಕಾರ, 'ಝೀರೊ ಕೋವಿಡ್ ನೀತಿ'ಯಲ್ಲಿ ಮಾರ್ಪಾಡು ಮಾಡಿ, ನಿರ್ಬಂಧಗಳನ್ನು ಸಡಿಲಗೊಳಿಸಿತ್ತು.

ಕೋವಿಡ್ ನಿಯಮಗಳು ಸಡಿಲಗೊಳ್ಳುತ್ತಿದ್ದಂತೆಯೇ ರಾಜಧಾನಿ ಬೀಜಿಂಗ್ ಸೇರಿದಂತೆ ಪ್ರಮುಖ ನಗರಗಳಲ್ಲಿ ಸೋಂಕು ಅಬ್ಬರಿಸಲು ಶುರುಮಾಡಿದೆ. 140 ಕೋಟಿ ಜನಸಂಖ್ಯೆಯ ಚೀನಾದಲ್ಲಿ ಆರಂಭದಿಂದಲೂ ಕಟ್ಟುನಿಟ್ಟಿನ ನಿಯಮಗಳನ್ನು ಪಾಲಿಸುತ್ತಿದ್ದರಿಂದ, ಬಹುತೇಕ ಜನರು ಅಷ್ಟಾಗಿ ಸೋಂಕಿಗೆ ಒಳಗಾಗಿರಲಿಲ್ಲ. ಹೀಗಾಗಿ ಅವರಲ್ಲಿ ಕೋವಿಡ್ ನಿರೋಧಕ ಶಕ್ತಿ (ಇಮ್ಯುನಿಟಿ) ಬೆಳೆದಿರಲಿಲ್ಲ. ಇದು, ಸೋಂಕು ಒಬ್ಬರಿಂದೊಬ್ಬರಿಗೆ ಸುಲಭವಾಗಿ ಹರಡಲು ಕಾರಣವಾಯಿತು ಎನ್ನುತ್ತಾರೆ ತಜ್ಞರು.

ಕೋವಿಡ್ ತಡೆಗಾಗಿ ಭಾರತದಲ್ಲಿ ಕೋವಿಶೀಲ್ಡ್ ಹಾಗೂ ಕೋವ್ಯಾಕ್ಸಿನ್ ಬಳಕೆ ಮಾಡಿದಂತೆ, ಚೀನಾದಲ್ಲಿ ಕೊರೊನಾವ್ಯಾಕ್ ಮತ್ತು ಸಿನೊಫಾರ್ಮ್ ಹೆಸರಿನ ಎರಡು ಲಸಿಕೆಗಳನ್ನು ಅಲ್ಲಿನ ಜನರಿಗೆ ನೀಡಲಾಗಿದೆ. ಈ ಪೈಕಿ ಕೊರೊನಾವ್ಯಾಕ್ ಲಸಿಕೆಯನ್ನು ಹೆಚ್ಚಿನ ಪ್ರಮಾಣದಲ್ಲಿ ನೀಡಲಾಗಿದೆ. ಕೊರೊನಾವ್ಯಾಕ್ ಲಸಿಕೆಯು ಯುವಜನರ ಮೇಲೆ ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ಮಾಡಿದ್ದು, ವಯಸ್ಸಾದವರನ್ನು ಸೋಂಕಿನಿಂದ ಅಷ್ಟಾಗಿ ರಕ್ಷಿಸುವುದಿಲ್ಲ ಎಂದು ಅಧ್ಯಯನಗಳು ತಿಳಿಸಿವೆ. 80 ವರ್ಷ ಮೇಲ್ಪಟ್ಟವರನ್ನು ಸೋಂಕಿನಿಂದ ರಕ್ಷಿಸುವಲ್ಲಿ ಇದು ಶೇ 30ರಷ್ಟು ಮಾತ್ರ ಪರಿಣಾಮಕಾರಿ ಎನಿಸಿದೆ. ಈ ಕಾರಣದಿಂದ ಚೀನಾದಲ್ಲಿ ಸೋಂಕು ವಿಪರೀತ ಪ್ರಮಾಣದಲ್ಲಿ ಹರಡಿರಬಹುದು ಎಂದು ವಿಶ್ಲೇಷಿಸಲಾಗಿದೆ.

ಸಾರ್ವಜನಿಕ ಸ್ಥಳಗಳಿಗೆ ಹೋಗಬೇಕಾದರೆ, ಚೀನಾದ ಜನರು ಪ್ರತಿ ಬಾರಿಯೂ ಕೋವಿಡ್ ಪರೀಕ್ಷೆಗೆ ಒಳಗಾಗಿ ನೆಗೆಟಿವ್ ಪ್ರಮಾಣಪತ್ರವನ್ನು ಒಯ್ಯಬೇಕು ಎಂಬ ಕಠಿಣ ನಿಯಮ ಇದೇ ಡಿಸೆಂಬರ್ ತಿಂಗಳ ಆರಂಭದವರೆಗೂ ಇತ್ತು. ಆದರೆ, ಜನರಿಂದ ಎದುರಾದ ತೀವ್ರ ಪ್ರತಿಭಟನೆಯ ಕಾರಣ, ಸೋಂಕು ಪತ್ತೆ ಪರೀಕ್ಷೆಗಳನ್ನು ಚೀನಾ ಸ್ಥಗಿತಗೊಳಿಸಿತು. ಜನರು ಗುಂಪು ಸೇರಲು ಶುರು ಮಾಡಿದರು. ತಿಂಗಳು ಕಳೆಯುವ ಮುನ್ನವೇ ಕೋವಿಡ್ ತನ್ನ ಪ್ರತಾಪ ತೋರಿಸಲು ಶುರುಮಾಡಿದೆ. ಈಗ ಸೋಂಕಿತರನ್ನು, ಅವರ ಸಂಪರ್ಕಿತರನ್ನು ಪತ್ತೆಹಚ್ಚುವುದು ಸವಾಲಾಗಿ ಪರಿಣಮಿಸಿದೆ.

ಏರುತ್ತಿರುವ ಪ್ರಕರಣಗಳ ದತ್ತಾಂಶ ಸಂಗ್ರಹಿಸುವ ಸಲುವಾಗಿ ಚೀನಾದ 'ಸೆಂಟರ್ ಫಾರ್ ಡಿಸೀಸ್ ಕಂಟ್ರೋಲ್ ಅಂಡ್ ಪ್ರಿವೆನ್ಷನ್' ಸಂಸ್ಥೆಯು (ಚೀನಾ–ಸಿಡಿಸಿ) ಎಲ್ಲ ನಗರಗಳಲ್ಲಿ ಒಂದೊಂದು ಆಸ್ಪತ್ರೆಯನ್ನು ಗುರುತಿಸಿದೆ. ಪ್ರತೀ ಆಸ್ಪತ್ರೆಯಲ್ಲಿ 15 ರೋಗಿಗಳ ಮಾದರಿಗಳನ್ನು ಸಂಗ್ರಹಿಸಬೇಕು ಎಂದು ಸಂಸ್ಥೆಯ ನಿರ್ದೇಶಕ ಷು ವೆಂಬೊ ಅವರು ಸೂಚಿಸಿದ್ದಾರೆ.

'ಮೂರು ತಿಂಗಳ ಅವಧಿಯಲ್ಲಿ ಚೀನಾದಲ್ಲಿ ಓಮೈಕ್ರಾನ್‌ನ 130 ಉಪತಳಿಗಳು ಪತ್ತೆಯಾಗಿವೆ. ಈ ಪೈಕಿ ಬಿಕ್ಯೂ.1 ಮತ್ತು ಎಕ್ಸ್‌ಬಿಬಿ ಉಪತಳಿಗಳು ಅಮೆರಿಕ, ಬ್ರಿಟನ್, ಸಿಂಗಪುರದಲ್ಲೂ ಕಂಡುಬಂದಿವೆ. ಬಿಎ5.2 ಮತ್ತು ಬಿಎಫ್.7 ಉಪತಳಿಗಳು ಚೀನಾದಲ್ಲಿ ಪ್ರಾಬಲ್ಯ ಸಾಧಿಸಿವೆ. ಬಿಕ್ಯೂ.1 ಹಾಗೂ ಅದರ ಉಪತಳಿಯ 49 ಪ್ರಕರಣಗಳು ಹಾಗೂ ಎಕ್ಸ್‌ಬಿಬಿ ಉಪತಳಿಯ 11 ಪ್ರಕರಣಗಳು ದೇಶದಲ್ಲಿ ವರದಿಯಾಗಿವೆ. ಹಿಂದಿನ ಸೋಂಕು ಹಾಗೂ ಲಸಿಕೆಯಿಂದ ಜನರು ಗಳಿಸಿರುವ ರೋಗನಿರೋಧಕ ಶಕ್ತಿಯ ಕವಚವನ್ನು ಬೇಧಿಸುವ ಗುಣವನ್ನು ಈ ಉಪ ತಳಿಗಳು ಹೊಂದಿವೆ. ಆದರೂ ಗಂಭೀರ ಅಪಾಯ ತಂದೊಡ್ಡುವುದಿಲ್ಲ' ಎಂದು ಅವರು ಹೇಳಿದ್ದಾರೆ.

ಓಮೈಕ್ರಾನ್‌ನಿಂದ ರೂಪಾಂತರವಾಗಿರುವ ಸುಮಾರು 700 ಉಪತಳಿಗಳು ಈವರೆಗೆ ದೊಡ್ಡ ಪ್ರಮಾಣದ ಸೋಂಕು ಹರಡುವಿಕೆ ಹಾಗೂ ಸಾವಿಗೆ ಕಾರಣವಾಗಿಲ್ಲ ಎಂದು ಅವರು ವಿವರಿಸಿದ್ದಾರೆ.

## ವಾಸ್ತವ ಬಚ್ಚಿಡುತ್ತಿದೆಯೇ ಚೀನಾ: ತಜ್ಞರ ಶಂಕೆ

**ಜಿನಿವಾ/ಬೀಜಿಂಗ್ (ರಾಯಿಟರ್ಸ್):** ಚೀನಾ ತನ್ನ 'ಝೀರೊ ಕೋವಿಡ್ ನೀತಿ'ಯನ್ನು ಸಡಿಲಿಸಿದ ನಂತರ, ಕೋವಿಡ್‌ಗೆ ಸಂಬಂಧಿಸಿದ ದತ್ತಾಂಶಗಳನ್ನು ವಿಶ್ವ ಆರೋಗ್ಯ ಸಂಸ್ಥೆಗೆ ಸಲ್ಲಿಸುವುದನ್ನು ನಿಲ್ಲಿಸಿದೆ. ಈಗ ಕೋವಿಡ್ ವ್ಯಾಪಕವಾಗಿ ಹರಡುತ್ತಿರುವಾಗಲೂ ಚೀನಾ ದತ್ತಾಂಶಗಳನ್ನು ಸಲ್ಲಿಸುತ್ತಿಲ್ಲ.

ವಿಶ್ವ ಆರೋಗ್ಯ ಸಂಸ್ಥೆಯ ಕೋವಿಡ್ ಡ್ಯಾಶ್‌ಬೋರ್ಡ್‌ನಲ್ಲಿ ಚೀನಾಗೆ ಸಂಬಂಧಿಸಿದ ಮಾಹಿತಿ ಡಿಸೆಂಬರ್ 7ರವರೆಗೆ ಮಾತ್ರ ಇದೆ. ಅಲ್ಲಿಯವರೆಗೆ ಇರುವ ದತ್ತಾಂಶಗಳಲ್ಲಿ, ಚೀನಾದಲ್ಲಿ ಕೋವಿಡ್ ರೋಗಿಗಳು ಆಸ್ಪತ್ರೆಗೆ ದಾಖಲಾಗುವ ಪ್ರಮಾಣ ಏರಿಕೆಯಾಗಿದೆ. ಡಿಸೆಂಬರ್ ಮೊದಲ ವಾರದಲ್ಲಿ ಈ ಪ್ರಮಾಣವು ಪ್ರತಿದಿನವೂ ಏರಿಕೆಯಾಗಿದೆ. ಡಿಸೆಂಬರ್ 4ರಂದು ಗರಿಷ್ಠ ಸಂಖ್ಯೆಯಷ್ಟು (28,859) ಕೋವಿಡ್ ರೋಗಿಗಳು ಆಸ್ಪತ್ರೆಗೆ ದಾಖಲಾಗಿದ್ದಾರೆ. ಡಿಸೆಂಬರ್ 7ರ ನಂತರ ಈ ಮಾಹಿತಿ ಲಭ್ಯವಿಲ್ಲ.

ಚೀನಾ ಈಗ ಪ್ರತಿದಿನ ಸರಾಸರಿ 2,700 ಪ್ರಕರಣಗಳಷ್ಟೇ ದಾಖಲಾಗುತ್ತಿದೆ ಎಂದು ಹೇಳಿದೆ. ಆದರೆ, ಈ ಮಾಹಿತಿಯನ್ನೂ ವಿಶ್ವ ಆರೋಗ್ಯ ಸಂಸ್ಥೆಗೆ ನೀಡಿಲ್ಲ. ಆದರೆ, ಈ ಮಧ್ಯೆ ಕೋವಿಡ್ ಪ್ರಕರಣಗಳನ್ನು, ಕೋವಿಡ್ ಪ್ರಕರಣ ಎಂದು ಪರಿಗಣಿಸುವ ಮಾನದಂಡಗಳನ್ನು ಚೀನಾ ಸೀಮಿತಗೊಳಿಸಿದೆ. ಈ ಆಧಾರದಲ್ಲೇ ಕಡಿಮೆ ಪ್ರಕರಣಗಳು ಪತ್ತೆಯಾಗುತ್ತಿದೆ ಎಂದು ಚೀನಾ ಹೇಳಿದೆ. ಆದರೆ ಇದೇ ಅವಧಿಯಲ್ಲಿ ದೇಶದಾದ್ಯಂತ ಆಸ್ಪತ್ರೆಗೆ ದಾಖಲಾಗುವವರ ಸಂಖ್ಯೆ ಭಾರಿ ಪ್ರಮಾಣದಲ್ಲಿ ಏರಿಕೆಯಾಗಿದೆ. ಈ ಬಗ್ಗೆ ಜಿನಿವಾದಲ್ಲಿನ ಚೀನಾ ಎಂಬೆಸಿಯನ್ನು ರಾಯಿಟರ್ಸ್ ಪ್ರಶ್ನಿಸಿತು. ಆದರೆ ಅಲ್ಲಿಂದ ಯಾವುದೇ ಪ್ರತಿಕ್ರಿಯೆ ಬಂದಿಲ್ಲ.

ವಾಸ್ತವ ಸ್ಥಿತಿಯನ್ನು ಮರೆಮಾಚಲು ಚೀನಾ ಈ ದತ್ತಾಂಶಗಳನ್ನು ನೀಡುತ್ತಿಲ್ಲವೇನೋ ಎಂದು ಅಮೆರಿಕದ ಜಾರ್ಜ್‌ಟೌನ್ ವಿಶ್ವವಿದ್ಯಾಲಯದ ವಿಜ್ಞಾನಿ ಲಾರೆನ್ಸ್ ಗೋಸ್ಟಿನ್ ಶಂಕೆ ವ್ಯಕ್ತಪಡಿಸಿದ್ದಾರೆ. ವಿಶ್ವ ಆರೋಗ್ಯ ಸಂಸ್ಥೆಯ ವಕ್ತಾರೆ ಮಾರ್ಗರೆಟ್ ಹ್ಯಾರಿಸ್ ಸಹ ಚೀನಾ ದತ್ತಾಂಶ ನೀಡದೇ ಇರುವ ಬಗ್ಗೆ ಕಳವಳ ವ್ಯಕ್ತಪಡಿಸಿದ್ದಾರೆ.

## ಗುಂಡಣ್ಣ




## ಬೆರಗಿನ ಬೆಳಕು

ಗುರುರಾಜ ಕರಜಗಿ



### ಎಲ್ಲದಕ್ಕೂ ಸಿದ್ಧತೆ

**ಏನಾದೊಡೆಯುಮಪ್ಪುದುಂಟು, ಸಿದ್ಧನಿರದಕೆ |**
**ಭಾನು ತಣುವಾದಾನು; ಸೋಮ ಸುಟ್ಟಾನು ||**
**ಕ್ಷಿಪಣಿಯೇ ಕರಗೀತು; ಜಗ ಶೂನ್ಯವಾದೀತು |**
**ಮೌನದಲಿ ಸಿದ್ಧನಿರು – ಮಂಕುತಿಮ್ಮ || 784 ||**

**ಪದ-ಅರ್ಥ:** ಏನಾದೊಡೆಯುಮಪ್ಪುದುಂಟು= ಏನು + ಆದೊಡೆಯುಂ + ಅಪ್ಪುಂ ಅಟು(ಆಗುತ್ತದೆ), ಸಿದ್ಧನಿರದಕೆ = ಸಿದ್ಧನಿರು + ಅದಕೆ, ಭಾನು = ಸೂರ್ಯ, ಸೋಮ = ಚಂದ್ರ, ಭೂಮಿ.

ವಾಚ್ಯಾರ್ಥ: ಏನಾದರೂ ಆಗಬಹುದು, ಅದಕ್ಕೆ ನೀನು ಸಿದ್ಧನಿರು. ಸೂರ್ಯ ತಂಪಾಗಬಹುದು, ಚಂದ್ರ ಸುಟ್ಟಾನು, ಭೂಮಿ ಕರಗಿ ಹೋದೀತು; ಜಗತ್ತೇ ಶೂನ್ಯವಾಗಿ ಹೋಗಬಹುದು. ನೀನು ಮೌನದಲ್ಲಿ ಸಿದ್ಧನಿರು.

**ವಿವರಣೆ:** ಸ್ಪೇನ್ ದೇಶದ ಆಂತರಿಕ ಯುದ್ಧದ ಇತಿಹಾಸದಲ್ಲಿ ಚಿರಸ್ಮರಣೀಯವಾದದ್ದು ಈ ಘಟನೆ. 1936 ರಲ್ಲಿ ಟೊಲಿಡೋ ಪ್ರಾಂತದ ರಾಜ್ಯಪಾಲನಾಗಿದ್ದವನು ಕರ್ನಲ್ ಜೋಸ್ ಮೊಸ್ಕಾರ್ಡೊ. ಅವನು ಮಹಾನ್ ದೇಶಪ್ರೇಮಿ. ದೇಶದ್ರೋಹಿಗಳು ಬಹುದೊಡ್ಡ ಪಡೆಯನ್ನು ರಚಿಸಿಕೊಂಡು ದೇಶಪ್ರೇಮಿಗಳ ಸಂಘಟನೆಯನ್ನು ಮುರಿದು ದೇಶವನ್ನು ತಮ್ಮ ಕೈಯಲ್ಲಿ ತೆಗೆದುಕೊಳ್ಳಲು ಪ್ರಯತ್ನಿಸುತ್ತಿದ್ದರು. ಕರ್ನಲ್ ಮೊಸ್ಕಾರ್ಡೊನ ಬಳಿ ಇದ್ದದ್ದು ಕೇವಲ ಹದಿಮೂರು ನೂರು ಸೈನಿಕರು. ಅವರಿಗೆ ರಕ್ಷೆಯಾಗಿದ್ದುದು ಟೊಲಿಡೋದ ಅಲ್ಕಝಾರ್ ಕಲ್ಲಿನಕೋಟೆ. ಈ ಕೋಟೆಯನ್ನು ಬಿಟ್ಟರೆ ಸ್ಪೇನ್ ದೇಶದ ನೈತಿಕ ಬಲವೇ ಕುಸಿದು ಹೋಗುತ್ತಿತ್ತು. ಕೋಟೆಯ ರಕ್ಷಣೆ ಪೂರ್ತಿ ಕರ್ನಲ್ ಮೊಸ್ಕಾರ್ಡೊನ ಮೇಲಿತ್ತು. ಯುದ್ಧ ಭೀಕರವಾಗುತ್ತಿತ್ತು. ವೈರಿಗಳನ್ನು ಸೇರಿದ್ದ ಕೆಲವರು, ಮೊದಲು ದೇಶಪ್ರೇಮಿಗಳ ತಂಡದಲ್ಲಿದ್ದವರು, ದ್ರೋಹದಿಂದ ಮೊಸ್ಕಾರ್ಡೊನ ಹೆಂಡತಿ, ಕಿರಿಯಮಗ ಮತ್ತು ಮಗಳನ್ನು ಕೊಂದು ಹಾಕಿ ಅವನ ಹಿರಿಯ ಮಗ ಲೂಯಿಸ್‌ನನ್ನು ಹಿಡಿದೊಯ್ದು ವೈರಿಗಳಿಗೆ ಕೊಟ್ಟರು. ಅವರು ಮೊಸ್ಕಾರ್ಡೊಗೆ ಫೋನ್ ಮಾಡಿ, ಅವನ ಉಳಿದ ಒಬ್ಬನೇ ಮಗ ಅವರ ವಶದಲ್ಲಿರುವುದಾಗಿಯೂ, ಕರ್ನಲ್ ಶರಣಾಗತರಾಗಿ ಕೋಟೆಯನ್ನು ವಶಕ್ಕೆ ನೀಡದಿದ್ದರೆ ಅವನನ್ನು ಕೊಂದು ಹಾಕುವುದಾಗಿಯೂ ತಿಳಿಸಿದರು. ಐವತ್ತು ವರ್ಷದ ಕರ್ನಲ್‌ನ ಪ್ರಪಂಚ ಮುಳುಗಿ ಹೋಗಿತ್ತು. ಅವನವರು ಎನ್ನುವವರು ಯಾರೂ ಉಳಿದಿರಲಿಲ್ಲ, ಹಿರಿಯ ಮಗ ಲೂಯಿಸ್ ಒಬ್ಬನನ್ನುಳಿದು. ಆಗ ಕರ್ನಲ್ ತನ್ನ ಮಗನಿಗೆ ಫೋನ್ ಕೊಡಿ ಎಂದು ಅವನ ಹತ್ತಿರ ಮಾತನಾಡಿದರು, "ಮಗೂ, ನೀನು ಒಬ್ಬನೇ ನನಗೆ ಉಳಿದವನು. ನಾನು ಕೋಟೆ ಮತ್ತು ನಿನ್ನಲ್ಲಿ ಒಂದು ಆಯ್ಕೆ ಮಾಡಬೇಕು. ಏನು ಮಾಡಲಿ?" ಮಗ ಹೇಳಿದ, "ಅಪ್ಪಾ, ನಾನು ನಿನ್ನ ಮಗ, ಕೋಟೆ ಮುಖ್ಯ. ಎಲ್ಲರಿಗೂ ನನ್ನ ಪ್ರಣಾಮಗಳನ್ನು ಹೇಳಿ. ಸ್ಪೇನಿಗೆ ಜಯವಾಗಲಿ". ಮರುಕ್ಷಣವೇ ಆತನ ಹತ್ಯೆಯಾಯಿತು. ಕರ್ನಲ್‌ನ ಸಮಸ್ತವೂ ಮುಳುಗಿ ಹೋಯಿತು. ಆದರೆ ಅಲ್ಕಝಾರ್ ಕೋಟೆಯೊಂದಿಗೆ ಅವನ ಹೆಸರು ಚಿರಸ್ಥಾಯಿಯಾಯಿತು. ಕಗ್ಗದ ಮಾತೇ ಇದು. ಕೆಲವು ಕ್ಷಣಗಳಲ್ಲಿ ಎಲ್ಲವೂ ಮುಗಿದು ಹೋದಂತೆನಿಸಬಹುದು. ಸೂರ್ಯತಂಪಾದಂತೆ, ಚಂದ್ರ ಬೆಂಕಿಯಾದಂತೆ, ಭೂಮಿ ಕರಗಿದಂತೆ ಆಗಿ ಜಗತ್ತೇ ಶೂನ್ಯವಾಗುತ್ತದೆ. ಆದರೆ ಆಗ ನಾವು ಸಿದ್ಧರಾಗಬೇಕು. ಬರೀ ಸಿದ್ಧರಾಗುವುದು ಮಾತ್ರವಲ್ಲ, ಮೌನದಲ್ಲಿ ಸಿದ್ಧರಿರಬೇಕು. ಸಂಕಟದಲ್ಲಿ ಜಗತ್ತಿಗೆಲ್ಲ ಕಷ್ಟವನ್ನು ಸಾರಿ, ಕೂಗಿಕೊಂಡು ಗದ್ದಲವೆಬ್ಬಿಸದೆ, ಮನಸ್ಸನ್ನು ಏಕಾಗ್ರಮಾಡಿಕೊಂಡು ಪರಿಹಾರಕ್ಕೆ ಶ್ರಮಿಸಬೇಕು.

## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶುಕ್ರವಾರ ಡಿಸೆಂಬರ್ 23, 2022

**ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ**
**ಹೇಮಂತ ಋತು ತಿಥಿ:** ಮಾರ್ಗಶೀರ್ಷ ಕೃಷ್ಣ ಅಮಾವಾಸ್ಯೆ ಗಂ. 15-47 ನಕ್ಷತ್ರ: ಮೂಲಾ ಗಂ. 25-13 ಯೋಗ: ಗಂಡ ಗಂ. 13-41, ಕರಣ: ನಾಗವಾನ್ ಗಂ. 15-47, ಧನುರ್ ಮಾಸದ 07 ನೇ ದಿನ. ರಾಹುಕಾಲ : ಬೆಳಿಗ್ಗೆ 10-30 –12-00, ಸೂರ್ಯೋದಯ : 06-53 ಸೂರ್ಯಾಸ್ತ : 06-06, ಮುಸ್ಲಿಂ ದಿನಾಂಕ : 28 ಜುಮಾದುಲ್ಲಾವಲ್ , ದಿನ ವಿಶೇಷ : ಎಳ್ಳಮಾವಾಸ್ಯೆ, ವಕುಲ ಅಮಾವಾಸ್ಯೆ (ಒರಿಸ್ಸಾ)
ಅದೃಷ್ಟ ಸಂಖ್ಯೆ : 1, 8

**ಮೇಷ:** ಕಠಿಣ ಪರಿಶ್ರಮದಿಂದ ಆರ್ಥಿಕವಾಗಿ ಅಲ್ಪ ಚೇತರಿಕೆ ಕಾಣುವುದು. ಉದ್ಯೋಗದಲ್ಲಿರುವ ಒತ್ತಡವನ್ನು ನಿವಾರಿಸಿಕೊಳ್ಳುವುದು ಕಷ್ಟವಾಗುತ್ತದೆ. ಸಂತೋಷವೇನೆಂದರೆ ಹಿತಶತೃಗಳ ಕಾಟದಿಂದ ಮುಕ್ತಿ ಹೊಂದುವಿರಿ.

**ವೃಷಭ:** ಸಮಯೋಚಿತವಾದ ಬುದ್ಧಿಶಕ್ತಿಯು ಸಂಕಟಗಳನ್ನು ದೂರ ಮಾಡಲಿದೆ. ವ್ಯಾಪಾರದಲ್ಲಿ ಮೋಸ ಹೋಗುವ ಸಾಧ್ಯತೆಯಿದೆ ಜಾಗ್ರತೆವಹಿಸಿ. ಸಾಲಬಾಧೆಯಂತಹ ಪರಿಸ್ಥಿತಿಯಲ್ಲಿ ಸಹೋದರರು ಸಹಕರಿಸುವರು.

**ಮಿಥುನ:** ವ್ಯಾಪಾರ ನಿಮಿತ್ತ ಪ್ರಯಾಣ ಉಂಟಾಗುವುದು. ಅನ್ಯರ ಪರಿಚಯ ಆಗುತ್ತದೆ. ವಿದೇಶದಲ್ಲಿರುವ ಮಕ್ಕಳಿಂದ ಶುಭ ಸಂದೇಶ ಪಡೆಯುವಿರಿ. ವೈದ್ಯಕೀಯ ವಿದ್ಯಾಭ್ಯಾಸ ಪ್ರಗತಿ ಪಥದಲ್ಲಿ ನಡೆಯುವುದು.

**ಕರ್ಕಾಟಕ:** ಕುಟುಂಬ ನಿರ್ವಹಣೆಯಲ್ಲಿ ನಿಮ್ಮ ಅಸಹಾಯಕತನ ಮನೆಯ ಸದಸ್ಯರಿಗೆ ತೊಂದರೆ ಉಂಟುಮಾಡುವುದು. ನೂತನ ವ್ಯಾಪಾರ ಆರಂಭವನ್ನು ನಿರ್ಧರಿಸಿದವರಿಗೆ ಮಧ್ಯವರ್ತಿ ಬಳಕೆಯಿಂದ ಸಹಾಯಸಿಗುವುದು.

**ಸಿಂಹ:** ನೆಂಟರು ನಿಮ್ಮ ಮೇಲೆ ಹೊಂದಿದ್ದ ಅಪನಂಬಿಕೆಗಳು ಅಥವಾ ದುರಾಲೋಚನೆಗಳು ದೂರಾಗುವುದು. ರೈತಾಪಿ ವರ್ಗದವರು ಅಂದುಕೊಂಡ ಕಾರ್ಯ ಕೈಗೂಡುವುದು. ಕುಟುಂಬದವರ ಜತೆಯಲ್ಲಿ ಸಮಯ ಕಳೆಯುವಿರಿ.

**ಕನ್ಯಾ:** ಹಳೆಯ ಅನುಭವದಿಂದ ಕಲಿತ ಅಂಶಗಳು ಈ ದಿನ ಬಳಕೆಗೆ ಬರಲಿದೆ. ನಿಮ್ಮ ಯೋಜನೆಗಳನ್ನು ಇತರರ ಮುಂದೆ ಮಂಡಿಸಿ ಅವರ ವಿಶ್ವಾಸ ಗಳಿಸುವಲ್ಲಿ ಯಶಸ್ವಿಯಾಗುವಿರಿ. ಇಂದಿನ ಗ್ರಹಸ್ಥಿತಿಗೆ ನೀಲಿ ಬಣ್ಣ ಶುಭದಾಯಕ.

**ತುಲಾ:** ಈ ದಿನ ಮಾತು ಕಡಿಮೆ ಮಾಡಿ ಕೆಲಸದಲ್ಲಿ ಮಗ್ನರಾಗುವುದರಿಂದ ನಿಮ್ಮ ಕೆಲಸಗಳು ಸುಖ ಶಾಂತಿಯಿಂದ ತುಂಬಿರುತ್ತದೆ. ಕಳೆದು ಹೋದ ವಸ್ತುಗಳನ್ನು ಹುಡುಕಲು ಸಮಯ ಉಪಯೋಗಿಸುವುದು ವ್ಯರ್ಥ.

**ವೃಶ್ಚಿಕ:** ಕಮಿಶನ್ ಏಜೆಂಟ್‌ಗೆ ಮತ್ತು ಸರಕು ಸಾಗಾಣಿಕೆದಾರರಿಗೆ ಉತ್ತಮ ದಿನ. ಮಕ್ಕಳ ವಿಷಯದಲ್ಲಿ ಕಾಳಜಿಯನ್ನು ತೋರಿ ವ್ಯವಸ್ಥಿತ ತೀರ್ಮಾನವನ್ನು ತೆಗೆದುಕೊಂಡಲ್ಲಿ ಅವರ ಭವಿಷ್ಯ ಉತ್ತಮವಾಗುವುದು.

**ಧನು:** ಅನವಶ್ಯಕ ಚಿಂತೆ, ದೂರ ಪ್ರವಾಸದಿಂದ ಖರ್ಚು ಹಾಗೂ ಹಾಳು ವ್ಯಸನಗಳು ಈ ದಿನದಲ್ಲಿ ಕಡಿಮೆಯಾಗಲಿದೆ. ಸ್ಥಾನದ ಜವಾಬ್ದಾರಿಯ ಅರಿವು ನಿಮಗಾಗುವುದು. ಆಫೀಸಿನ ಕೆಲಸಗಳನ್ನು ಕೇಳಿ ತಿಳಿದುಕೊಳ್ಳಿ.

**ಮಕರ:** ಆಪ್ತ ವರ್ಗದವರೊಂದಿಗಿನ ಮಾತುಕತೆ ಲಾಭದಾಯಕವೆನಿಸುವುದು. ನ್ಯಾಯವಾದಿಗಳಿಗೆ ಜಯ ದೊರೆತು ಧನಾಗಮವಾಗಲಿದೆ. ಹಣಕಾಸಿನ ಪರಿಸ್ಥಿತಿ ಸುಧಾರಿಸಲಿದೆ. ಚಿನ್ನ ಬೆಳ್ಳಿ ವ್ಯಾಪಾರಿಗಳಿಗೆ ಹೆಚ್ಚಿನ ಲಾಭ ಸಿಗುವುದು.

**ಕುಂಭ:** ಕೌಟುಂಬಿಕ ವಿಷಯಗಳಲ್ಲಿ ಬಹಳ ಖುಷಿ ಸಿಗುವುದು. ಪ್ರೀತಿ ಪಾತ್ರರೊಂದಿಗೆ ಹೊಸ ಯೋಜನೆಯನ್ನು ಆರಂಭಿಸುವ ಬಗ್ಗೆ ಅವರೊಂದಿಗೆ ಚರ್ಚೆ ನಡೆಸುವಿರಿ. ಜೀವನ ಶೈಲಿ ಬದಲಾಗುವುದು.

**ಮೀನ:** ಕೆಲಸ ಬದಲಿಸುವ ಯೋಚನೆ ಮಾಡುವವರಿಗೆ ಇಂದು ಸಕಾಲ. ಹೆಚ್ಚಿನ ಗಳಿಕೆಯ ಬಗ್ಗೆ ಚಿಂತಿಸುವಿರಿ. ಗುತ್ತಿಗೆ ಕೆಲಸದ ಬಾಕಿ ಹಣವು ಇಂದು ಸಂದಾಯ. ಹೊಸದಾಗಿ ಹಣ ಹೂಡಿಕೆ ಮಾಡಬಹುದು.

## ಪದಬಂಧ 5177


– ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**

1.ಉದಯ ಕಾಲದಲ್ಲಿ ಶೇಖರಿಸಿಟ್ಟಿರುವ ನೀರು (3)
3.ಜನಕ್ಕೆಲ್ಲಾ ಧನ ಕನಕ ನೀಡಿರುವ ತಂದೆ (3)
5.ಹರಿದಾರಿಯಲ್ಲೇ ಪ್ರತ್ಯಕ್ಷನಾಗಿರುವ ವಿಷ್ಣು (2)
6.ನಗರದಲ್ಲಿರುವ ಮನುಷ್ಯ (2)
8.ಕತ್ತರಿಸುವ ಸಾಧನವಿದು (3)
9.ಶೀಘ್ರ ಬರುವ ಸಿಟ್ಟು (3)
11.ವರನಿಗೆ ಕೇಳಿಸಿದ ಧ್ವನಿ (2)
13.ಸುರುಳಿಯಾಗಿರುವ ಕಾಲಿನ ಆಭರಣ (2)
14.ಛಾಯೆ ಇಲ್ಲಿ ಕಾಣುತ್ತಿದೆ (3)
15.ದನಕ್ಕಾಗಿ ನಡೆದ ಯುದ್ಧ (3)

**ಮೇಲಿಂದ ಕೆಳಕ್ಕೆ**

1.ಉದ್ದನ್ನು ತರಲು ಪಡೆದಿರುವ ಕಡ (3)
2.ಕನ್ನಡಿಗನ ಚಾಳೀಸು! (4)
3. ಜಾರಿಕೊಳ್ಳದೇ ವಹಿಸಿಕೊಂಡಿರುವ ಹೊಣೆಗಾರಿಕೆ (4)
4.ವನದ ಬಗ್ಗೆ ಬರೆದ ಪದ್ಯ (3)
5.ಮೋಸಗಾರ ಹರನೊಳಗಡಗಿದ್ದಾನಲ್ಲಾ? (5)
7. ಸೊಗಸಾದ ಚಿತ್ರಗಳನ್ನು ನೇಯ್ದಿರುವ ಕಂಬಳಿ (5)
9.ಮುಂದಲೆ ಮೇಲೆ ಬಿದ್ದಿರುವ ಕೂದಲು (4)
10.ಸಿಂಚನವನ್ನು ಈ ಪರಿಯಲ್ಲಿ ಹೇಳಿ! (4)
12.ವರ್ತಕನ ರೂಢಿ (3)
13.ಜಿನನಿಗೂ ಆವರಿಸಿದ ಬೇನೆ (3)



### 5176ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:**
1.ಲೋಕಾಭಿರಾಮ
3.ಅಪೂರ್ವ 5.ಸಮಾಲೋಚಕ
7.ರಹಸ್ಯ 9.ವಿಮಾನ
11.ಸಂತಸ 13.ಸಮರಸಿಂಹ
15.ಮಂದಿರ
16.ಸುಮನೋಹರ

**ಮೇಲಿಂದ ಕೆಳಕ್ಕೆ:**
1.ಲೋಕಾಚಾರ
2.ರಾಯಸ 4.ಪೂರ್ವಿಕ
6.ಲೋಚನ 8.ಹಗ್ಗ
9.ವಿಧುರ 10.ಸುತ
12.ಸದಾಚಾರ13.ಸರದಿ14.ಹರಾಮ

## ಸುಡೊಕು 5563

| | | | | | | | | |
|---|---|---|---|---|---|---|---|---|
| | 7 | | | 5 | | 2 | | 8 |
| 5 | | 4 | 1 | | 8 | | | |
| | 8 | | | 7 | | | 5 | |
| | 6 | | 9 | 3 | | 1 | | 2 |
| 2 | | 5 | | | | | | |
| | 3 | | | 8 | 2 | 5 | | 6 |
| | | | 5 | | 6 | | 2 | |
| 3 | | 2 | | | | | | |
| | 5 | | | 2 | | 4 | | 1 |

### ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

### 5562 ಸುಡೊಕು

| | | | | | | | | |
|---|---|---|---|---|---|---|---|---|
| 7 | 5 | 9 | 3 | 1 | 6 | 4 | 8 | 2 |
| 2 | 3 | 6 | 8 | 4 | 9 | 5 | 1 | 7 |
| 4 | 1 | 8 | 7 | 5 | 2 | 3 | 9 | 6 |
| 9 | 7 | 3 | 4 | 2 | 1 | 6 | 5 | 8 |
| 5 | 6 | 4 | 9 | 3 | 8 | 2 | 7 | 1 |
| 8 | 2 | 1 | 6 | 7 | 5 | 9 | 3 | 4 |
| 6 | 8 | 7 | 2 | 9 | 3 | 1 | 4 | 5 |
| 1 | 9 | 2 | 5 | 8 | 4 | 7 | 6 | 3 |
| 3 | 4 | 5 | 1 | 6 | 7 | 8 | 2 | 9 |

# ‘ಇಪಿಎಸ್: ‘ಸುಪ್ರೀಂ’ ತೀರ್ಪಿನ ಪರಿಶೀಲನೆ’

ನವದೆಹಲಿ (ಪಿಟಿಐ): ಉದ್ಯೋಗಿಗಳು ಪಿಂಚಣಿ ನಿಧಿಗೆ ತಮ್ಮ ಪೂರ್ಣ ವೇತನದ ಶೇಕಡ 8.33ರಷ್ಟನ್ನು ವಂತಿಗೆಯಾಗಿ ಪಾವತಿಸಲು ಅವಕಾಶ ನೀಡಬೇಕು ಎನ್ನುವ ಸುಪ್ರೀಂ ಕೋರ್ಟ್ ತೀರ್ಪನ್ನು ಪರಿಶೀಲಿಸಲಾಗುತ್ತಿದೆ ಎಂದು ಕಾರ್ಮಿಕ ಮತ್ತು ಉದ್ಯೋಗ ಖಾತೆ ರಾಜ್ಯ ಸಚಿವ ರಾಮೇಶ್ವರ ತೆಲಿ ರಾಜ್ಯಸಭೆಗೆ ಗುರುವಾರ ತಿಳಿಸಿದ್ದಾರೆ.


ಉದ್ಯೋಗಿಗಳ ಪಿಂಚಣಿ ಯೋಜನೆಗೆ (ಇಪಿಎಸ್) 2014ರಲ್ಲಿ ಮಾಡಿದ ತಿದ್ದುಪಡಿಯನ್ನು ಸುಪ್ರೀಂ ಕೋರ್ಟ್ ಎತ್ತಿ ಹಿಡಿದಿದೆ.

ಇಪಿಎಸ್ ಆಯ್ಕೆ ಮಾಡಿಕೊಂಡಿರುವ ಉದ್ಯೋಗಿಗಳಿಗೆ ತಮ್ಮ ವಂತಿಗೆ ಹೆಚ್ಚಿಸುವ ಅವಕಾಶವನ್ನು ನೀಡಲಾಗಿದೆ. ವಂತಿಗೆ ಹೆಚ್ಚಿಸುವ ಆಯ್ಕೆ ಪಡೆದುಕೊಳ್ಳಲು ನಾಲ್ಕು ತಿಂಗಳ ಕಾಲಾವಕಾಶ ನೀಡಲಾಗಿದೆ.

2014ರ ಸೆಪ್ಟೆಂಬರ್ 1 ಅಥವಾ ಅದಕ್ಕೂ ಮೊದಲಿನಿಂದಲೇ ಇಪಿಎಸ್‌ನ ಸದಸ್ಯರಾಗಿರುವವರು ತಮ್ಮ ಪೂರ್ಣ ವೇತನದ ಶೇ 8.33ರಷ್ಟನ್ನು ವಂತಿಗೆಯಾಗಿ ಪಾವತಿಸಬಹುದು ಎಂದು ತೀರ್ಪಿನಲ್ಲಿ ಹೇಳಲಾಗಿದೆ. ಈಗಿರುವ ನಿಯಮದ ಅನ್ವಯ ಗರಿಷ್ಠ ₹ 15,000 ವೇತನಕ್ಕೆ ಮಾತ್ರ ಶೇ 8.33ರಷ್ಟು ವಂತಿಗೆ ಪಾವತಿಸಲು ಅವಕಾಶ ಇದೆ.



## ಷೇರುಪೇಟೆ ವಹಿವಾಟು




## ಎನ್‌ಎಸ್‌ಇ ನಿಫ್ಟಿ

| | |
|---|---|
| ಹಿಂದಿನ ಅಂತ್ಯ | 18,199 |
| ಇಂದಿನ ಅಂತ್ಯ | 18,127 |
| ▼ | 72 |
| ದಿನದ ಕನಿಷ್ಠ | 18,068 |

## ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

| | |
|---|---|
| ಬೆಂಗಳೂರು | |
| 100 ಮೊಟ್ಟೆಗೆ | ₹550 |
| 12 ಮೊಟ್ಟೆಗೆ | ₹72 |
| ಮೈಸೂರು | |
| 100 ಮೊಟ್ಟೆಗೆ | ₹550 |

## ಖಾದ್ಯ ತೈಲ ಮುಂಬೈ

(10 ಕೆಜಿಗೆ)

| | |
|---|---|
| ಶೇಂಗಾ (ರಿಫೈನ್ಡ್) | ₹1590 (1590) |
| ಸೋಯಾ (ರಿಫೈನ್ಡ್) | ₹1290 (1290) |
| ಸೂರ್ಯಕಾಂತಿ (ರಿಫೈನ್ಡ್) | ₹1340 (1330) |
| ಪಾಮೋಲಿನ್ | ₹950 (960) |

## ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

| | |
|---|---|
| ದಪ್ಪ | ₹1900-2300 |
| ಮಧ್ಯಮ | ₹1000-1800 |
| ಸಣ್ಣ | ₹500-1000 |

## ಸತತ ಮೂರನೇ ದಿನವೂ ನಕಾರಾತ್ಮಕ ವಹಿವಾಟು

ಮುಂಬೈ (ಪಿಟಿಐ): ಚೀನಾದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚಾಗುತ್ತಿರುವುದು ಹಾಗೂ ಬಡ್ಡಿದರ ಕುರಿತು ಆರ್‌ಬಿಐ ಹೇಳಿಕೆಯು ಷೇರುಪೇಟೆಗಳಲ್ಲಿ ಸತತ ಮೂರನೆಯ ದಿನವೂ ನಕಾರಾತ್ಮಕ ವಹಿವಾಟು ನಡೆಯುವಂತೆ ಮಾಡಿದವು.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 241 ಅಂಶ ಇಳಿಕೆ ಕಂಡು 60,637 ಅಂಶಗಳಿಗೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 72 ಅಂಶ ಇಳಿಕೆಯಾಗಿ 18,127 ಅಂಶಗಳಲ್ಲಿ ವಹಿವಾಟು ಅಂತ್ಯವಾಯಿತು.

ಹಣಕಾಸು ನೀತಿ ಸಮಿತಿಯ (ಎಂಪಿಸಿ) ಸಭೆಯ ಸಾರಾಂಶದ ಪ್ರಕಾರ, ಹಣದುಬ್ಬರದ ವಿರುದ್ಧದ ಹೋರಾಟ ಇನ್ನೂ ಮುಕ್ತಾಯ ಆಗಿಲ್ಲ. ಹೀಗಾಗಿ ಬಡ್ಡಿದರ ಏರಿಕೆಗೆ ಅಲ್ಪ ಮಟ್ಟಿನ ವಿರಾಮ ನಿಡುವುದು ಸರಿಯಾಗುವುದಿಲ್ಲ ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಅವರು ಶೇ 0.35ರಷ್ಟು ಬಡ್ಡಿದರ ಹೆಚ್ಚಳದ ಪರ ಮತ ಹಾಕುವಾಗ ಹೇಳಿದ್ದಾರೆ. ಇದು ನಕಾರಾತ್ಮಕ ವಹಿವಾಟಿಗೆ ಕಾರಣವಾಯಿತು ಎಂದು ಜಿಯೋಜಿತ್ ಫೈನಾನ್ಸಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಜಾಗತಿಕ ಷೇರುಪೇಟೆಗಳಿಗೆ ಅನುಗುಣವಾಗಿ ದೇಶದಲ್ಲಿಯೂ ದಿನದ ಆರಂಭದಲ್ಲಿ ಸಕಾರಾತ್ಮಕವಾಗಿ ವಹಿವಾಟು ಇತ್ತು. ಆದರೆ, ಚೀನಾ, ಜಪಾನ್, ಕೊರಿಯಾ ಮತ್ತು ಬ್ರೆಜಿಲ್‌ನಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚಾಗಿದ್ದರಿಂದ ಹೂಡಿಕೆದಾರರು ಆತಂಕಕ್ಕೆ ಒಳಗಾದರು. ಇದರಿಂದಾಗಿ ವಹಿವಾಟು ಇಳಿಕೆ ಕಂಡಿತು ಎಂದು ಹೆಮ್ ಸೆಕ್ಯುರಿಟೀಸ್‌ನ ಮುಖ್ಯಸ್ಥ ಮೋಹಿತ್ ನಿಗಮ್ ತಿಳಿಸಿದ್ದಾರೆ. ಬ್ರೆಂಟ್ ಕಚ್ಚಾ ತೈಲ ಶೇ 0.99ರಷ್ಟು ಹೆಚ್ಚಾಗಿ ಒಂದು ಬ್ಯಾರಲ್‌ಗೆ 83.01 ಡಾಲರ್‌ಗೆ ತಲುಪಿತು.

## ₹ 2,850 ಕೋಟಿ ಮೊತ್ತದ ಸ್ವಾಧೀನ ವಹಿವಾಟಿಗೆ ಒಪ್ಪಿಗೆ

# ರಿಲಯನ್ಸ್ ರಿಟೇಲ್ ತೆಕ್ಕೆಗೆ ಮೆಟ್ರೊ

ನವದೆಹಲಿ (ಪಿಟಿಐ): ಜರ್ಮನಿಯ ಮೆಟ್ರೊ ಎಜಿ ಕಂಪನಿಯ ಅಂಗಸಂಸ್ಥೆ ಆಗಿರುವ ‘ಮೆಟ್ರೊ ಕ್ಯಾಷ್ ಆ್ಯಂಡ್ ಕ್ಯಾರಿ ಇಂಡಿಯಾ ಪ್ರೈವೇಟ್ ಲಿಮಿಟೆಡ್’ಅನ್ನು ₹ 2,850 ಕೋಟಿಗೆ ಖರೀದಿ ಮಾಡಲು ರಿಲಯನ್ಸ್ ಇಂಡಸ್ಟ್ರೀಸ್ ಒಪ್ಪಿಗೆ ನೀಡಿದೆ.

ಮೆಟ್ರೊ ಕ್ಯಾಷ್ ಆ್ಯಂಡ್ ಕ್ಯಾರಿ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ನ ಶೇಕಡ 100ರಷ್ಟು ಷೇರುಗಳನ್ನು ₹ 2,850 ಕೋಟಿ ಮೊತ್ತಕ್ಕೆ ಸ್ವಾಧೀನಪಡಿಸಿಕೊಳ್ಳಲು ರಿಲಯನ್ಸ್ ಇಂಡಸ್ಟ್ರೀಸ್‌ನ ಅಂಗಸಂಸ್ಥೆ ರಿಲಯನ್ಸ್ ರಿಟೇಲ್ ವೆಂಚರ್ಸ್ ಲಿಮಿಟೆಡ್ (ಆರ್‌ಆರ್‌ವಿಎಲ್) ಬೇಷರತ್ ಒಪ್ಪಂದಕ್ಕೆ ಬಂದಿದೆ ಎಂದು ಎರಡೂ ಕಂಪನಿಗಳು ಜಂಟಿ ಪ್ರಕಟಣೆಯಲ್ಲಿ ತಿಳಿಸಿವೆ.

2023ರ ಮಾರ್ಚ್ ತಿಂಗಳ ಒಳಗಾಗಿ ಸ್ವಾಧೀನ ವಹಿವಾಟು ಪೂರ್ಣಗೊಳ್ಳುವ ನಿರೀಕ್ಷೆ ಮಾಡಲಾಗಿದೆ.




ಮೆಟ್ರೊ ಕಂಪನಿಯು 2003ರಲ್ಲಿ ಮೊದಲ ಬಾರಿಗೆ ಕ್ಯಾಷ್ ಆ್ಯಂಡ್ ಕ್ಯಾರಿ ವಹಿವಾಟನ್ನು ಭಾರತದಲ್ಲಿ ಆರಂಭಿಸಿತು. ಸದ್ಯ, ದೇಶದಾದ್ಯಂತ 21 ನಗರಗಳಲ್ಲಿ 31 ದೊಡ್ಡ ಗಾತ್ರದ ಮಳಿಗೆಗಳ ಮೂಲಕ ಕಾರ್ಯಾಚರಣೆ ನಡೆಸುತ್ತಿದ್ದು 3,500 ಉದ್ಯೋಗಿಗಳನ್ನು ಹೊಂದಿದೆ.

ಈ ವರ್ಷದಲ್ಲಿ 2022ರ ಸೆಪ್ಟೆಂಬರ್ ಅಂತ್ಯದವರೆಗೆ ಮೆಟ್ರೊ ಇಂಡಿಯಾ ಕಂಪನಿಯು ₹ 7,700 ಕೋಟಿ ಮೊತ್ತದ ಮಾರಾಟ ನಡೆಸಿದೆ. ಕಂಪನಿಯು ಭಾರತದಲ್ಲಿ ವಹಿವಾಟು ಆರಂಭಿಸಿದಾಗಿನಿಂದ ಈವರೆಗೆ ಆಗಿರುವ ಮಾರಾಟದ ಅತಿದೊಡ್ಡ ಮೊತ್ತ ಇದು.

### ಅಂಕಿ– ಅಂಶಗಳು

**₹60 ಲಕ್ಷ ಕೋಟಿ** ಭಾರತದ ರಿಟೇಲ್ ಮಾರುಕಟ್ಟೆಯ ವಹಿವಾಟಿನ ಗಾತ್ರ

**60%** ಒಟ್ಟು ವಹಿವಾಟಿನಲ್ಲಿ ಆಹಾರ ಮತ್ತು ದಿನಸಿ ಪಾಲು

**20%** ಸಂಘಟಿತ ಆಗಿರುವ ಆಹಾರ ಮತ್ತು ದಿನಸಿ ವಹಿವಾಟಿನಲ್ಲಿ ರಿಲಯನ್ಸ್ ಪಾಲು

ರಿಲಯನ್ಸ್ ಕಂಪನಿಯು ಭಾರತದಲ್ಲಿ 16,600ಕ್ಕೂ ಅಧಿಕ ಮಳಿಗೆಗಳನ್ನು ಹೊಂದಿದ್ದು, ತನ್ನ ಕಾರ್ಯಾಚರಣೆಯನ್ನು ಇನ್ನಷ್ಟು ವಿಸ್ತರಿಸುವ ಯೋಜನೆ ಹೊಂದಿದೆ. ‘ಸಣ್ಣ ವರ್ತಕರು ಮತ್ತು ಉದ್ದಿಮೆಗಳೊಂದಿಗೆ ಸಕ್ರಿಯ ಪಾಲುದಾರಿಕೆ ಹೊಂದುವ ವಾಣಿಜ್ಯ ವಹಿವಾಟು ಯೋಜನೆಯ ಭಾಗವಾಗಿ ಈ ಸ್ವಾಧೀನ ಮಾಡಿಕೊಳ್ಳಲಾಗಿದೆ’ ಎಂದು ರಿಲಯನ್ಸ್ ರಿಟೇಲ್‌ನ ನಿರ್ದೇಶಕಿ ಇಶಾ ಅಂಬಾನಿ ಪ್ರತಿಕ್ರಿಯೆ ನೀಡಿದ್ದಾರೆ.

‘ಮೆಟ್ರೊ ಇಂಡಿಯಾವನ್ನು ಯಶಸ್ವಿಯಾಗಿ ಮುನ್ನಡೆಸಬಲ್ಲ ಅತ್ಯಂತ ಅರ್ಹ ಪಾಲುದಾರ ರಿಲಯನ್ಸ್ ಆಗಲಿದೆ ಎನ್ನುವ ಮನವರಿಕೆ ಆಗಿದೆ. ಬೆಳವಣಿಗೆ ಕಾಣುತ್ತಿರುವ ಮತ್ತು ಲಾಭದಲ್ಲಿರುವ ಸಗಟು ವಹಿವಾಟನ್ನು ಸೂಕ್ತ ಸಂದರ್ಭದಲ್ಲಿ ಮಾರಾಟ ಮಾಡುತ್ತಿದ್ದೇವೆ’ ಎಂದು ಮೆಟ್ರೊ ಎಜಿ ಕಂಪನಿಯ ಸಿಇಒ ಸ್ಟೀಫನ್ ಗ್ರೂಬಲ್ ತಿಳಿಸಿದ್ದಾರೆ.

## ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

| | |
|---|---|
| ಪುತ್ತೂರು | ₹5000-9500 |
| ತುಮಕೂರು | ₹5200-6800 |
| ತುರುವೇಕೆರೆ | ₹11500-11600 |

## ಮುಂಬೈ ಧಾರಣೆ

### ಶೇಂಗಾ

22–12–2022

| | |
|---|---|
| ಜಾವಾ 70/80(ಹೊಸ) | 11650-11700 |
| ಜಾವಾ 80/90(ಹೊಸ) | 11050-11100 |
| ದಪ್ಪ ಮಧ್ಯಪ್ರದೇಶ(ಹೊಸ) | 9800-9900 |
| ದಪ್ಪ ಗುಜರಾತ್(ಹೊಸ) | 10700-10800 |

### ಶೇಂಗಾ ಎಣ್ಣೆ (10 ಕೆಜಿಗೆ)

| | |
|---|---|
| ಕಚ್ಚಾ (ತೆರಿಗೆ ಬಿಟ್ಟು) | 1600 (1600) |
| ಒಂದು ವಾರದ ಡೆಲಿವರಿ | 1595 (1595) |
| ಸೋಯಾ ಕಚ್ಚಾ | 1190 (1200) |
| ಪಾಮ್ ವಾರದ ಡೆಲಿವರಿ | 948 (958) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 1240 (1200) |

### ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
54,550 (54,600)
ಬೆಳ್ಳಿ ಕೆ.ಜಿ 67,650 (68,200)

ಆವರಣದಲ್ಲಿ ಹಿಂದಿನ ದಿನದ ಧಾರಣೆ

## ದೇಶದಾದ್ಯಂತ ಮಾರುಕಟ್ಟೆ ಧಾರಣೆ

| | | | | | |
|---|---|---|---|---|---|
| **ಏಲಕ್ಕಿ ಧಾರಣೆ** | | ಕೋಕ | 17010-29681 | ಚೆಟ್ಟೆ | 47250-51040 |
| **ಸಕಲೇಶಪುರ** | | ಹಳೆಚಾಲಿ | 35799-40060 | ಗೊರಬಲು | 17090-33431 |
| ಕೂಳೆ | 250-300 | ಹೊಸಚಾಲಿ | 30001-33501 | ರಾಶಿ | 41499-44499 |
| ನಡುಗೋಲು | 450-480 | **ಕುಂದಾಪುರ** | | ಸರಕು | 58669-80520 |
| ರಾಶಿ | 480-500 | ಹಳೆಚಾಲಿ | 53000-55000 | **ಶಿರಸಿ** | |
| ರಾಶಿ ಉತ್ತಮ | 550-600 | ಹೊಸಚಾಲಿ | 40000-47500 | ಚೆಟ್ಟೆ | 34079-40723 |
| ಜರಡಿ | 700-750 | **ಪುತ್ತೂರು** | | ಬಿಳಿಗೋಟು | 20899-34676 |
| ಹೆರಕಿದ್ದು | 1000-1100 | ಕೋಕ | 11000-26000 | ಚಾಲಿ | 33623-40850 |
| ಹಸಿರು ಸಾಧಾರಣ | 600-700 | ಹೊಸತು | 32000-38000 | ಕೆಂಪುಗೋಟು | 23699-31699 |
| ಹಸಿರು ಉತ್ತಮ | 900-1000 | **ಸಾಗರ** | | ರಾಶಿ | 42639-44099 |
| ಹಸಿರು ಅತಿ ಉತ್ತಮ | 1250-1350 | ಬಿಳಿಗೋಟು | 18110-29889 | **ಯಲ್ಲಾಪುರ** | |
| ಕಾಳು ಮೆಣಸು | 500 | ಚಾಲಿ | 30029-37599 | ಬಿಳಿಗೋಟು | 24899-33924 |
| **ಬಂಟ್ವಾಳ** | | ಕೋಕ | 20890-30199 | ಚಾಲಿ | 35863-39960 |
| ಕೋಕ | 12500-25000 | ಕೆಂಪುಗೋಟು | 22569-34899 | ಕೋಕ | 18899-28899 |
| ಹೊಸತು | 27500-38000 | ರಾಶಿ | 34399-43749 | ಕೆಂಪುಗೋಟು | 24899-30542 |
| ಹಳತು | 48000-54500 | ಸಿಪ್ಪೆಗೋಟು | 5689-20569 | ರಾಶಿ | 40575-47119 |
| **ಕಾರ್ಕಳ** | | **ಶಿವಮೊಗ್ಗ** | | ತಟ್ಟಿಬೆಟ್ಟೆ | 35890-39400 |
| ಹೊಸತು | 25000-37500 | | | | |
| ಹಳತು | 40000-54500 | | | | |
| **ಚಿತ್ರದುರ್ಗ** | | | | | |
| ಆಪಿ | 44009-44419 | | | | |
| ಬೆಟ್ಟೆ | 32529-32989 | | | | |
| ಕೆಂಪುಗೋಟು | 28310-28759 | | | | |
| ರಾಶಿ | 43539-43969 | | | | |
| **ಕುಮಟ** | | | | | |
| ಚಿಪ್ಪು | 22211-32111 | | | | |

### ಕಾಫಿ (50 ಕೆ.ಜಿಗೆ ₹ ಗಳಲ್ಲಿ)

| | ಮೂಡಿಗೆರೆ | ಹಾಸನ | | |
|---|---|---|---|---|
| | ಮುದ್ರೆಮನೆ | ಪ್ಲಾಂಟರ್ಸ್ | ಅಲ್ಲಾನಾ | ನ್ಯೂಯಾರ್ಕ್ |
| ಎಪಿ | 13500 | 13500 | 13450 | 164.30 ಸೆಂಟ್ಸ್ |
| ಎಸಿ | 7000 | 6850 | 6100 | |
| ಆರ್‌ಪಿ | 8000 | 8300 | 8000 | ಲಂಡನ್ |
| ಆರ್‌ಸಿ | 4510 | 165 on OT | 4250 | 1945 ಡಾಲರ್ಸ್ |

## ಬದಲಾವಣೆಗೆ ಅವಕಾಶ: ಮುತ್ತೂಟ್ ನಿರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ತನ್ನನ್ನು ಮೇಲ್ಪದರದ ಬ್ಯಾಂಕೇತರ ಹಣಕಾಸು ಸಂಸ್ಥೆ (ಎನ್‌ಬಿಎಫ್‌ಸಿ) ಎಂದು ವರ್ಗೀಕರಿಸಿರುವ ಕಾರಣದಿಂದಾಗಿ, ತನ್ನ ಚಟುವಟಿಕೆಗಳಲ್ಲಿ ಇನ್ನಷ್ಟು ಬದಲಾವಣೆಗಳನ್ನು ಮಾಡಿಕೊಳ್ಳಲು ಸಾಧ್ಯವಾಗುವ ನಿರೀಕ್ಷೆ ಇದೆ ಎಂದು ಮುತ್ತೂಟ್ ಫೈನಾನ್ಸ್ ಹೇಳಿದೆ.

ಆರ್‌ಬಿಐ ಸಿದ್ಧಪಡಿಸಿರುವ ಮೇಲ್ಪದರದ ಎನ್‌ಬಿಎಫ್‌ಸಿ ವರ್ಗೀಕರಣದ ಅಡಿಯಲ್ಲಿ ಬಂದಿರುವ ಕೇರಳ ಮೂಲದ ಏಕೈಕ ಎನ್‌ಬಿಎಫ್‌ಸಿ ಮುತ್ತೂಟ್ ಫೈನಾನ್ಸ್ ಎಂದು ಪ್ರಕಟಣೆ ತಿಳಿಸಿದೆ.

ಆರ್‌ಬಿಐ ಹಾಗೂ ಕೇಂದ್ರ ಸರ್ಕಾರವು ತನಗೆ ಆಧಾರ್ ಸಂಖ್ಯೆ ಬಳಸಿ ದೃಢೀಕರಣ ಪ್ರಕ್ರಿಯೆ ನಡೆಸಲು ಅನುಮತಿ ನೀಡಿವೆ. ಇದರಿಂದಾಗಿ ಬಯೋಮೆಟ್ರಿಕ್ ಕೆವೈಸಿ ಪ್ರಕ್ರಿಯೆಯನ್ನು ತ್ವರಿತವಾಗಿ ನಡೆಸಲು ಸಾಧ್ಯವಾಗಲಿದೆ ಎಂದು ಕಂಪನಿ ಹೇಳಿದೆ.

‘ಆರ್‌ಬಿಐ ನಮ್ಮನ್ನು ಮೇಲ್ಪದರದ ಎನ್‌ಬಿಎಫ್‌ಸಿ ಎಂದು ವರ್ಗೀಕರಿಸಿರುವುದು ನಮ್ಮ ಮೌಲ್ಯವನ್ನು ಗುರುತಿಸಿದಂತಾಗಿದೆ’ ಎಂದು ಕಂಪನಿಯ ಡೆಪ್ಯುಟಿ ವ್ಯವಸ್ಥಾಪಕ ನಿರ್ದೇಶಕ ಜಾರ್ಜ್ ಎಂ. ಜಾರ್ಜ್ ಹೇಳಿದ್ದಾರೆ.

## ಕರ್ನಾಟಕ ಬ್ಯಾಂಕ್: ಕಸ್ಟಮ್ಸ್ ತೆರಿಗೆ ಪಾವತಿ ಸೌಲಭ್ಯ

ಪ್ರಜಾವಾಣಿ ವಾರ್ತೆ

ಮಂಗಳೂರು: ಕರ್ನಾಟಕ ಬ್ಯಾಂಕ್‌ನ ಮೂಲಕ, ಕಸ್ಟಮ್ಸ್ ತೆರಿಗೆಯನ್ನು ಆನ್‌ಲೈನ್‌ನಲ್ಲಿ ಪಾವತಿಸುವ ಸೌಲಭ್ಯಕ್ಕೆ ಗುರುವಾರ ಚಾಲನೆ ನೀಡಲಾಗಿದೆ.

ಈ ಸಂದರ್ಭದಲ್ಲಿ ಮಾತನಾಡಿದ ಬ್ಯಾಂಕ್‌ನ ಎಂ.ಡಿ ಹಾಗೂ ಹಾಗೂ ಸಿಇಒ ಮಹಾಬಲೇಶ್ವರ ಎಂ.ಎಸ್. ಅವರು ‘ಈ ಸೌಲಭ್ಯದ ಮೂಲಕ ನಮ್ಮ ಬ್ಯಾಂಕ್‌ನ ಗ್ರಾಹಕರು ಕಸ್ಟಮ್ಸ್ ತೆರಿಗೆಯನ್ನು, ಕಸ್ಟಮ್ಸ್ ತೆರಿಗೆ ಜಾಲತಾಣದ ಮೂಲಕ ಪಾವತಿ ಮಾಡಬಹುದು. ಇದರಿಂದಾಗಿ ಬ್ಯಾಂಕ್‌ನ ವಿದೇಶೀ ವ್ಯವಹಾರಗಳ ಮೇಲೆ ಧನಾತ್ಮಕ ಪರಿಣಾಮ ಉಂಟಾಗಲಿದ್ದು, ಚಾಲ್ತಿ ಖಾತೆ ಹಾಗೂ ಉಳಿತಾಯ ಖಾತೆ (ಸಿಎಎಸ್‌ಎ) ಠೇವಣಿ ಇನ್ನಷ್ಟು ವೃದ್ಧಿಯಾಗುವುದೆಂಬ ವಿಶ್ವಾಸವಿದೆ’ ಎಂದರು.

## ಸಂಸದ ಎ. ರಾಜಾ ಬೇನಾಮಿ ಆಸ್ತಿ ಜಪ್ತಿ: ಇ.ಡಿ


ಎ.ರಾಜಾ

ನವದೆಹಲಿ: ಡಿಎಂಕೆ ಸಂಸದ ಎ.ರಾಜಾ ಅವರಿಗೆ ಸೇರಿದ ₹55 ಕೋಟಿ ಮೌಲ್ಯದ ಬೇನಾಮಿ ಆಸ್ತಿಯನ್ನು ಜಪ್ತಿ ಮಾಡಲಾಗಿದೆ ಎಂದು ಜಾರಿ ನಿರ್ದೇಶನಲಾಯದ (ಇ.ಡಿ) ಅಧಿಕಾರಿಗಳು ಗುರುವಾರ ಹೇಳಿದ್ದಾರೆ.

ತಮಿಳುನಾಡಿನ ಕೊಯಮತ್ತೂರು ಜಿಲ್ಲೆಯಲ್ಲಿರುವ 45 ಎಕರೆ ಬೇನಾಮಿ ಜಾಗವನ್ನು ಹಣ ಅಕ್ರಮ ವರ್ಗಾವಣೆ ವಿರೋಧಿ ಕಾನೂನಿನ ಅಡಿಯಲ್ಲಿ ಜಪ್ತಿ ಮಾಡಲಾಗಿದೆ ಎಂದೂ ವಿವರಿಸಿದ್ದಾರೆ.

2004–07ರ ನಡುವೆ ರಾಜಾ ಅವರು ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವರಾಗಿದ್ದಾಗ ಗುರುಗ್ರಾಮ ಮೂಲದ ರಿಯಲ್ ಎಸ್ಟೇಟ್ ಕಂಪನಿಗೆ ಪರಿಸರ ಅನುಮೋದನೆ ನೀಡಿರುವುದಕ್ಕೆ ಪ್ರತಿಯಾಗಿ ಅವರೊಂದಿಗೆ ನಂಟು ಹೊಂದಿರುವ ಕಂಪನಿಯು ಈ ಜಮೀನನ್ನು ಖರೀದಿ ಮಾಡಿತ್ತು ಎಂದೂ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ತಿಳಿಸಿದ್ದಾರೆ.


ಈ ಜಾಗ ರಾಜಾ ಅವರ ಬೇನಾಮಿ ಕಂಪನಿಯ ಹೆಸರಿನಲ್ಲಿದೆ ಎಂದೂ ಹೇಳಿದ್ದಾರೆ.

## ರಾಮನಗರ ರೇಷ್ಮೆಗೂಡು ಧಾರಣೆ



| | |
|---|---|
| ಮಿಶ್ರತಳಿ (ಸಿ.ಬಿ) | ₹455-703 |
| ದ್ವಿತಳಿ (ಬಿ.ವಿ) | ₹233-789 |

## ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)

| | |
|---|---|
| ಆರ್‌ಎಸ್‌ಎಸ್-4 | ₹134 |
| ಆರ್‌ಎಸ್‌ಎಸ್-5 | ₹126 |
| ಗುಡ್ ಲಾಟ್ | ₹119.50 |

## ತೆಂಗು ಧಾರಣೆ (ಸಾವಿರಕ್ಕೆ)



ಮಂಗಳೂರು

| | |
|---|---|
| 1ನೇ ದರ್ಜೆ | ₹16000-20000 |
| 2ನೇ ದರ್ಜೆ | ₹12000-15000 |

## ಪೂರ್ವ ಲಡಾಖ್‌ನಲ್ಲಿ ಶಾಂತಿ ಮರುಸ್ಥಾಪನೆ

# ಭಾರತ, ಚೀನಾ ಮಿಲಿಟರಿ ಮಾತುಕತೆ

ನವದೆಹಲಿ (ಪಿಟಿಐ): ಅರುಣಾಚಲಪ್ರದೇಶದ ತವಾಂಗ್ ಸೆಕ್ಟರ್‌ನಲ್ಲಿ ನಡೆದಿದ್ದ ಸೇನಾ ಸಂಘರ್ಷದ ಬೆನ್ನಲ್ಲೇ ಪೂರ್ವ ಲಡಾಖ್‌ನಲ್ಲಿ ಶಾಂತಿ ಮರುಸ್ಥಾಪಿಸುವ ಸಂಬಂಧ ಭಾರತ ಮತ್ತು ಚೀನಾ ನಡುವೆ ಇದೇ 20ರಂದು ಉನ್ನತ ಮಟ್ಟದ ಮಿಲಿಟರಿ ಮಾತುಕತೆ ನಡೆಸಲಾಗಿದೆ. ಆದರೆ ಇದು ಅಷ್ಟೇನೂ ಫಲಪ್ರದವಾಗಿಲ್ಲ.

‘ಗಡಿ ವಿಚಾರಕ್ಕೆ ಸಂಬಂಧಿಸಿದಂತೆ ಬಾಕಿ ಉಳಿದಿರುವ ಸಮಸ್ಯೆಗಳನ್ನು ಸಾಧ್ಯವಾದಷ್ಟು ಬೇಗ ಪರಿಹರಿಸಿಕೊಳ್ಳುವ ಕುರಿತು ಸಭೆಯಲ್ಲಿ ಚರ್ಚಿಸಲಾಗಿದೆ’ ಎಂದು ಗುರುವಾರ ಬಿಡುಗಡೆ ಮಾಡಲಾಗಿರುವ ಜಂಟಿ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಗಡಿ ಬಿಕ್ಕಟ್ಟು ಬಗೆಹರಿಸಿಕೊಳ್ಳುವ ನಿಟ್ಟಿನಲ್ಲಿ ಉಭಯ ದೇಶಗಳ ನಾಯಕರು ನೀಡಿದ್ದ ಮಾರ್ಗದರ್ಶನದ ಅನುಸಾರ ಮುಕ್ತ ಹಾಗೂ ಸವಿಸ್ತಾರವಾಗಿ ಮಾತುಕತೆ ನಡೆಸಲಾಗಿದೆ. ಭಾರತ ಮತ್ತು ಚೀನಾ ಸೇನಾ ಕಮಾಂಡರ್‌ಗಳ ಮಟ್ಟದ 17ನೇ ಸುತ್ತಿನ ಈ ಸಭೆಯು ಚೀನಾದ ಚುಶುಲ್ ಮೊಲ್ಡೊ ಗಡಿ ಪ್ರದೇಶದಲ್ಲಿ ನಡೆದಿದೆ ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ಅರಿಂದಮ್ ಬಾಗ್ಚಿ ಹೇಳಿದ್ದಾಗಿ ಪ್ರಕಟಣೆಯಲ್ಲಿ ಮಾಹಿತಿ ನೀಡಲಾಗಿದೆ.

‘ಬಿಕ್ಕಟ್ಟನ್ನು ಬೇಗ ಪರಿಹರಿಸಿಕೊಳ್ಳಲು ಒತ್ತು ನೀಡಬೇಕು. ಅದರಿಂದ ಪಶ್ಚಿಮ ವಲಯದ (ಪೂರ್ವ ಲಡಾಖ್) ವಾಸ್ತವ ನಿಯಂತ್ರಣ ರೇಖೆ (ಎಲ್‌ಎಸಿ) ಬಳಿ ಶಾಂತಿ ಮರುಸ್ಥಾಪನೆಗೆ ಅನುವಾಗಲಿದೆ. ದ್ವಿಪಕ್ಷೀಯ ಸಂಬಂಧದಲ್ಲಿ ಪ್ರಗತಿ ಸಾಧಿಸಲೂ ಸಹಕಾರಿಯಾಗಲಿದೆ’ ಎಂದೂ ಪ್ರಕಟಣೆಯಲ್ಲಿ ಹೇಳಲಾಗಿದೆ.

‘ಪಶ್ಚಿಮ ವಲಯದಲ್ಲಿ ಭದ್ರತೆ ಮತ್ತು ಸ್ಥಿರತೆ ಕಾಪಾಡಿಕೊಳ್ಳಲು ಉಭಯ ಕಡೆಯವರು ಸಮ್ಮತಿ ಸೂಚಿಸಿದ್ದಾರೆ. ಮಿಲಿಟರಿ ಮಾತುಕತೆ, ರಾಜತಾಂತ್ರಿಕ ಮಾರ್ಗ ಹಾಗೂ ಪರಸ್ಪರ ಸ್ವೀಕಾರಾರ್ಹವಾದ ನಿರ್ಣಯಗಳನ್ನು ಕೈಗೊಳ್ಳುವ ಮೂಲಕ ಬಾಕಿ ಉಳಿದಿರುವ ಸಮಸ್ಯೆಗಳನ್ನು ಸಾಧ್ಯವಾದಷ್ಟು ಬೇಗ ಪರಿಹರಿಸಿಕೊಳ್ಳುವುದಕ್ಕೂ ಉಭಯ ಕಡೆಯವರು ಒಪ್ಪಿಗೆ ನೀಡಿದ್ದಾರೆ’ ಎಂದೂ ವಿವರಿಸಲಾಗಿದೆ.

‘ಡೆಮ್‌ಚೊಕ್ ಮತ್ತು ಡೆಪ್ಸಾಂಗ್‌ನ ಘರ್ಷಣಾ ಬಿಂದುಗಳಲ್ಲಿನ ಸಮಸ್ಯೆಯನ್ನು ಅತಿ ಶೀಘ್ರವೇ ಬಗೆಹರಿಸಬೇಕು ಎಂದು ಭಾರತ ಒತ್ತಾಯಿಸಿತು. ಈ ಸಭೆ ಸುಮಾರು 10 ಗಂಟೆಗಳ ಕಾಲ ನಡೆಯಿತು’ ಎಂದೂ ತಿಳಿಸಲಾಗಿದೆ.

## ಸಂಕ್ಷಿಪ್ತ ಸುದ್ದಿ

### ರಾಬರ್ಟ್ ವಾದ್ರಾ ಅರ್ಜಿ ತಿರಸ್ಕಾರ

ಜೋಧಪುರ (ಪಿಟಿಐ): ತಮ್ಮ ಪಾಲುದಾರಿಕೆಯ ಸಂಸ್ಥೆಯೊಂದು ರಾಜಸ್ಥಾನದ ಬಿಕಾನೇರ್ ಬಳಿ ಭೂಮಿ ಕೊಂಡಿದ್ದ ಪ್ರಕರಣದಲ್ಲಿ ಜಾರಿ ನಿರ್ದೇಶನಾಯ (ಇ.ಡಿ) ದಾಖಲಿಸಿರುವ ಮೊಕದ್ದಮೆಯನ್ನು ರದ್ದುಗೊಳಿಸುವಂತೆ ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ ಪತಿ, ಉದ್ಯಮಿ ರಾಬರ್ಟ್ ವಾದ್ರಾ ಸಲ್ಲಿಸಿದ್ದ ಅರ್ಜಿಯನ್ನು ರಾಜಸ್ಥಾನ ಹೈಕೋರ್ಟ್ ತಿರಸ್ಕರಿಸಿದೆ.

ಆದರೆ ಪ್ರಕರಣಕ್ಕೆ ಸಂಬಂಧಿಸಿದಂತೆ ಅವರನ್ನು ಇನ್ನೂ ಎರಡು ವಾರದವರೆಗೆ ಬಂಧಿಸುವಂತಿಲ್ಲ ಎಂದು ಹೇಳಿದೆ.

### ಕರ್ತವ್ಯ ಲೋಪ: ಸಂದೀಪ್ ಗೋಯೆಲ್ ಅಮಾನತು

ನವದೆಹಲಿ (ಪಿಟಿಐ): ಕರ್ತವ್ಯಲೋಪ ಆರೋಪದ ಮೇಲೆ ಹಿರಿಯ ಐಪಿಎಸ್ ಅಧಿಕಾರಿ ಮತ್ತು ತಿಹಾರ್ ಜೈಲಿನ ಮಾಜಿ ಮಹಾನಿರ್ದೇಶಕ ಸಂದೀಪ್ ಗೋಯೆಲ್ ಅವರನ್ನು ಕೇಂದ್ರ ಗೃಹ ಸಚಿವಾಲಯ ಅಮಾನತುಗೊಳಿಸಿದೆ ಎಂದು ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

### ಅವಿಶ್ವಾಸ ನಿರ್ಣಯಕ್ಕೆ ಸೋಲು

ಭೋಪಾಲ್ (ಪಿಟಿಐ): ಮಧ್ಯಪ್ರದೇಶ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ನೇತೃತ್ವದ ಬಿಜೆಪಿ ಸರ್ಕಾರದ ವಿರುದ್ಧ ವಿರೋಧ ಪಕ್ಷ ಕಾಂಗ್ರೆಸ್ ಬುಧವಾರ ಮಂಡಿಸಿದ್ದ ಅವಿಶ್ವಾಸ ನಿರ್ಣಯಕ್ಕೆ ಸೋಲಾಯಿತು.

ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ, ನಿರುದ್ಯೋಗ, ಹಣದುಬ್ಬರ, ಭ್ರಷ್ಟಾಚಾರ ಹೆಚ್ಚಾಗಿದೆ, ವಿರೋಧ ಪಕ್ಷದ ನಾಯಕರ ವಿರುದ್ಧ ತಾರತಮ್ಯ ಧೋರಣೆ ಅನುಸರಿಸಲಾಗುತ್ತಿದೆ, ಮಹಿಳೆಯರು ಮತ್ತು ಬುಡಕಟ್ಟು ಜನಾಂಗದವರ ಮೇಲೆ ದೌರ್ಜನ್ಯ ನಡೆಯುತ್ತಿದೆ ಎಂದು ಆರೋಪಿಸಿ ಕಾಂಗ್ರೆಸ್ ಅವಿಶ್ವಾಸ ನಿರ್ಣಯ ಮಂಡಿಸಿತ್ತು.

### ಆಸ್ಕರ್ ಪ್ರಶಸ್ತಿ: ಅಂತಿಮ ಸುತ್ತಿಗೆ ಭಾರತೀಯ ನಾಲ್ಕು ಚಿತ್ರಗಳು

ನವದೆಹಲಿ (ಪಿಟಿಐ): ಈ ಬಾರಿಯ ಆಸ್ಕರ್ ಪ್ರಶಸ್ತಿಗೆ ನಾಮನಿರ್ದೇಶನಗೊಂಡಿದ್ದ ಭಾರತೀಯ ಚಿತ್ರಗಳಲ್ಲಿ ನಾಲ್ಕು ಚಿತ್ರಗಳನ್ನು ಪ್ರಶಸ್ತಿ ಸುತ್ತಿಗೆ ಅಂತಿಮಗೊಳಿಸಲಾಗಿದೆ. ಗುಜರಾತಿ ಚಿತ್ರ ‘ಛೆಲ್ಲೋ ಶೋ’, ಆರ್‌ಆರ್‌ಆರ್ ಚಿತ್ರದ ‘ನಾಟು ನಾಟು’ ಗೀತೆ ಸೇರಿ ನಾಲ್ಕು ಭಾರತೀಯ ಚಿತ್ರಗಳು ಪ್ರಶಸ್ತಿ ಸುತ್ತಿನಲ್ಲಿ ಸ್ಥಾನ ಪಡೆದಿವೆ.

ಅತ್ಯುತ್ತಮ ಅಂತರರಾಷ್ಟ್ರೀಯ ಚಿತ್ರ ವಿಭಾಗದಲ್ಲಿ ‘ಛೆಲ್ಲೋ ಶೋ’ ಆಯ್ಕೆ ಆಗಿದೆ. ‘ನಾಟು ನಾಟು’ ಗೀತೆಯು ಅತ್ಯುತ್ತಮ ಗೀತೆ (ಮೂಲ ಗೀತೆ) ವಿಭಾಗದಲ್ಲಿ ಸ್ಥಾನ ಪಡೆದಿದೆ. ಸಾಕ್ಷ್ಯಚಿತ್ರ ವಿಭಾಗದಲ್ಲಿ ‘ಆಲ್ ದಟ್ ಬ್ರೀಥ್ಸ್’ ಮತ್ತು ಕಿರು ಸಾಕ್ಷ್ಯಚಿತ್ರ ವಿಭಾಗದಲ್ಲಿ ‘ದಿ ಎಲಿಫ್ಯಾಂಟ್ ವಿಸ್ಪರರ್’ ಸ್ಥಾನ ಪಡೆದಿವೆ ಎಂದು ಅಕಾಡೆಮಿ ಆಫ್ ಮೋಷನ್ ಪಿಕ್ಚರ್ ಆರ್ಟ್ಸ್ ಆ್ಯಂಡ್ ಸೈನ್ಸಸ್ ಘೋಷಿಸಿದೆ.

ಇದೇ ಮೊದಲ ಬಾರಿಗೆ ಭಾರತದ ನಾಲ್ಕು ಚಿತ್ರಗಳು ಆಸ್ಕರ್ ಪ್ರಶಸ್ತಿಯ ಪ್ರಶಸ್ತಿ ಸುತ್ತಿನಲ್ಲಿ ಸ್ಥಾನ ಪಡೆದಿರುವುದು ಎನ್ನಲಾಗಿದೆ.

### ‘ದಿಶಾ ಸಾವು ಪ್ರಕರಣ: ತನಿಖೆಗೆ ಎಸ್‌ಐಟಿ ರಚನೆ’

ನಾಗ್ಪುರ (ಪಿಟಿಐ): ‘ನಟ ದಿವಂಗತ ಸುಶಾಂತ್ ಸಿಂಗ್ ರಜಪೂತ್ ಅವರ ಮಾಜಿ ವ್ಯವಸ್ಥಾಪಕಿ ದಿಶಾ ಸಾಲಿಯಾನ್ ಅವರ ಸಾವಿನ ಪ್ರಕರಣದ ತನಿಖೆಗೆ ವಿಶೇಷ ತನಿಖಾ ದಳವನ್ನು (ಎಸ್‌ಐಟಿ) ರಚಿಸಲಾಗುವುದು’ ಎಂದು ಮಹಾರಾಷ್ಟ್ರದ ಉಪ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರು ಗುರುವಾರ ವಿಧಾನಸಭೆಯಲ್ಲಿ ಹೇಳಿದರು.

‘ಪ್ರಸ್ತುತ ಈ ಪ್ರಕರಣದ ತನಿಖೆಯನ್ನು ಮುಂಬೈ ಪೊಲೀಸರು ನಡೆಸುತ್ತಿದ್ದಾರೆ. ಇನ್ನು ಮುಂದೆ ಎಸ್‌ಐಟಿ ತನಿಖೆಯ ನೇತೃತ್ವ ವಹಿಸಿಕೊಳ್ಳಲಿದೆ’ ಎಂದು ಅವರು ಸದನದಲ್ಲಿ ತಿಳಿಸಿದರು.

### ನೋಟು ರದ್ದತಿ: ಜನವರಿ 2ಕ್ಕೆ ‘ಸುಪ್ರೀಂ’ ತೀರ್ಪು

ನವದೆಹಲಿ (ಪಿಟಿಐ): ₹500 ಹಾಗೂ ₹1,000 ಮುಖಬೆಲೆಯ ನೋಟುಗಳನ್ನು ರದ್ದು ಮಾಡಿದ್ದ ಕೇಂದ್ರ ಸರ್ಕಾರದ ನಿರ್ಧಾರ ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರಣೆ ನಡೆಸಿರುವ ಸುಪ್ರೀಂ ಕೋರ್ಟ್‌ನ ಸಾಂವಿಧಾನಿಕ ಪೀಠವು ಜನವರಿ 2 ರಂದು ತೀರ್ಪು ಪ್ರಕಟಿಸಲಿದೆ.

ಪೀಠದ ನೇತೃತ್ವ ವಹಿಸಿರುವ ನ್ಯಾಯಮೂರ್ತಿ ಎಸ್.ಎ.ನಜೀರ್ ಅವರು ಜನವರಿ 4ರಂದು ನಿವೃತ್ತರಾಗಲಿದ್ದಾರೆ. ಹೀಗಾಗಿ ನಿಗದಿತ ದಿನದಂತೆ ತೀರ್ಪು ಪ್ರಕಟವಾಗುವ ನಿರೀಕ್ಷೆ ಇದೆ. ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ, ಎ.ಎಸ್.ಬೋಪಣ್ಣ, ವಿ. ರಾಮಸುಬ್ರಮಣಿಯನ್ ಮತ್ತು ಬಿ.ವಿ. ನಾಗರತ್ನ ಅವರೂ ಈ ಪೀಠದಲ್ಲಿದ್ದಾರೆ.

# ಉಮೇಶ್, ಅಶ್ವಿನ್ ಮಿಂಚು

## ಟೆಸ್ಟ್ ಕ್ರಿಕೆಟ್: ಜೈದೇವ್ ಉನದ್ಕತ್ 2 ವಿಕೆಟ್, ಬಾಂಗ್ಲಾದೇಶ ಸಾಧಾರಣ ಮೊತ್ತ

**ಮೀರ್‌ಪುರ್(ಪಿಟಿಐ):** ವೇಗಿ ಉಮೇಶ್ ಯಾದವ್ ಮತ್ತು ಆಫ್‌ಸ್ಪಿನ್ನರ್ ಆರ್. ಅಶ್ವಿನ್ ದಾಳಿಗೆ ಬಾಂಗ್ಲಾದೇಶ ತಂಡ ಕುಸಿಯಿತು.

ಗುರುವಾರ ಇಲ್ಲಿ ಆರಂಭವಾದ ಎರಡನೇ ಟೆಸ್ಟ್‌ನಲ್ಲಿ ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ಬಾಂಗ್ಲಾದೇಶ ಮೊದಲ ಇನಿಂಗ್ಸ್‌ನಲ್ಲಿ 227 ರನ್‌ಗಳಿಗೆ ಎಲ್ಲ ವಿಕೆಟ್ ಕಳೆದುಕೊಂಡಿತು. ಮೊಮಿನುಲ್ ಹಕ್ 157 ಎಸೆತಗಳಲ್ಲಿ 84 ರನ್ ಗಳಿಸಿ, ತಂಡದ ಗರಿಷ್ಠ ಸ್ಕೋರರ್ ಆದರು. ಉಮೇಶ್ (25ಕ್ಕೆ4) ಮತ್ತು ಆರ್. ಅಶ್ವಿನ್ (71ಕ್ಕೆ4) ಅವರ ದಾಳಿಯ ಮುಂದೆ ಆತಿಥೇಯ ತಂಡದ ಬ್ಯಾಟರ್‌ಗಳು ವಿಕೆಟ್ ಒಪ್ಪಿಸಿದರು.

12 ವರ್ಷಗಳ ನಂತರ ಟೆಸ್ಟ್ ತಂಡಕ್ಕೆ ಮರಳಿದ ಎಡಗೈ ಮಧ್ಯಮವೇಗಿ ಜೈದೇವ್ ಉನದ್ಕತ್ (50ಕ್ಕೆ2) ಖಾತೆ ತೆರೆದರು. 2010ರಲ್ಲಿ ತಮ್ಮ ಚೊಚ್ಚಲ ಟೆಸ್ಟ್ ಆಡಿದ್ದರು. ಆಗಲೂ ವಿಕೆಟ್ ಗಳಿಸಿರಲಿಲ್ಲ. ಅದರ ನಂತರ ಅವರಿಗೆ ತಂಡದಲ್ಲಿ ಅವಕಾಶ ಲಭಿಸಿರಲಿಲ್ಲ. ಅಂದಿನಿಂದ ಇದುವರೆಗೆ 12 ವರ್ಷಗಳಲ್ಲಿ ಭಾರತ 118 ಪಂದ್ಯಗಳನ್ನು ಆಡಿದೆ. ಇಂಗ್ಲೆಂಡ್‌ನ ಗರೆತ್ ಬ್ಯಾಟಿ (142 ಪಂದ್ಯ) ಮಾತ್ರ ಉನದ್ಕತ್ ಅವರಿಗಿಂತ ಹೆಚ್ಚು ಟೆಸ್ಟ್‌ಗಳನ್ನು 'ಮಿಸ್' ಮಾಡಿಕೊಂಡಿದ್ದಾರೆ. 31 ವರ್ಷದ ಜೈದೇವ್ ತಮಗೆ ಸಿಕ್ಕ ಅವಕಾಶವನ್ನು ಬಳಸಿಕೊಳ್ಳುವಲ್ಲಿ ಯಶಸ್ವಿಯಾದರು.

ಇನಿಂಗ್ಸ್ ಆರಂಭಿಸಿರುವ ಭಾರತ, ದಿನದಾಟದ ಮುಕ್ತಾಯಕ್ಕೆ ವಿಕೆಟ್ ನಷ್ಟವಿಲ್ಲದೇ 19 ರನ್ ಗಳಿಸಿತು. ನಾಯಕ ಕೆ.ಎಲ್. ರಾಹುಲ್ (ಬ್ಯಾಟಿಂಗ್ 3) ಮತ್ತು ಶುಭಮನ್ ಗಿಲ್ (ಬ್ಯಾಟಿಂಗ್ 14) ಕ್ರೀಸ್‌ನಲ್ಲಿದ್ದಾರೆ.



ಭಾರತ ತಂಡದ ಉಮೇಶ್ ಯಾದವ್ ಸಂಭ್ರಮ –ಎಎಫ್‌ಪಿ ಚಿತ್ರ

ಪಿಚ್‌ನಲ್ಲಿ ಸ್ಪಿನ್ನರ್‌ಗಳಿಗೆ ಹೆಚ್ಚು ನೆರವು ಸಿಗುತ್ತಿದೆ. ಬಾಂಗ್ಲಾ ಸ್ಪಿನ್ನರ್‌ಗಳ ಎಸೆತಗಳು ಹೆಚ್ಚು ತಿರುವು ಪಡೆದು ನುಗ್ಗುತ್ತಿವೆ. ಇದರಿಂದಾಗಿ ಭಾರತದ ಆರಂಭಿಕ ಜೋಡಿಯು ಎಚ್ಚರಿಕೆಯಿಂದ ಬ್ಯಾಟಿಂಗ್ ಮಾಡುತ್ತಿದೆ.

ಆದರೆ ಮೊದಲ ಪಂದ್ಯದಲ್ಲಿ ಉತ್ತಮವಾಗಿ ಬೌಲಿಂಗ್ ಮಾಡಿ ಗೆಲುವಿನ ರೂವಾರಿಯಾಗಿದ್ದ ಕುಲದೀಪ್ ಯಾದವ್ ಅವರಿಗೆ ಈ ಪಂದ್ಯದಲ್ಲಿ ವಿಶ್ರಾಂತಿ ನೀಡಲಾಗಿದೆ. ಇದರಿಂದಾಗಿ ಎರಡನೇ ಇನಿಂಗ್ಸ್‌ನಲ್ಲಿ ಅವರ ಕೊರತೆ ಕಾಡಬಹುದು ಮತ್ತು ವಿವಾದದ ಬಿಸಿ ಹೆಚ್ಚಬಹುದು.

ಬೆಳಿಗ್ಗೆ ಪಿಚ್ ಮೇಲೆ ಕಣ್ಣು ಹಾಯಿಸಿದ್ದ ರಾಹುಲ್ ಮತ್ತು ಕೋಚ್ ರಾಹುಲ್ ದ್ರಾವಿಡ್ ಮೂರನೇ ಮಧ್ಯಮವೇಗಿಯನ್ನು ಆಯ್ಕೆ ಮಾಡಿಕೊಂಡಿದ್ದರು. ಆದರೆ ಬಾಂಗ್ಲಾದೇಶದ ದುರ್ಬಲ ಬ್ಯಾಟಿಂಗ್ ಪಡೆಯಿಂದಾಗಿ ಭಾರತದ ಬೌಲರ್‌ಗಳು ಯಶಸ್ಸು ಗಳಿಸಿದರು. ಅದರಲ್ಲೂ ಜೈದೇವ್ ಅವರು ಆರಂಭಿಕ ಬ್ಯಾಟರ್ ಝಾಕೀರ್ ಹಸನ್ ವಿಕೆಟ್ ಗಳಿಸುವುದರೊಂದಿಗೆ ಬಾಂಗ್ಲಾದ ಕುಸಿತ ಶುರುವಾಯಿತು. ಅವರು ಮುಷ್ಫಿಕುರ್ ಕರೀಮ್ ವಿಕೆಟ್ ಕೂಡ ಗಳಿಸಿ ಬಾಂಗ್ಲಾ ತಂಡದ ಸಂಕಷ್ಟ ಹೆಚ್ಚಿಸಿದರು. ಎರಡನೇ ಓವರ್‌ನಲ್ಲಿ ಹಸನ್ ಕ್ಯಾಚ್ ಕೈಚೆಲ್ಲಿದ್ದ ಸಿರಾಜ್ ಜೀವದಾನ ನೀಡಿದ್ದರು.

ಬೇಗನೆ ತನ್ನ ಬಣ್ಣ ಬದಲಿಸಿಕೊಳ್ಳುತ್ತಿದ್ದ ಪಿಚ್ ಮರ್ಮ ಅರಿತ ಅಶ್ವಿನ್ ಚಾಣಾಕ್ಷತನ ಮೇಲುಗೈ ಸಾಧಿಸಿತು. ನಜ್ಮುಲ್ ಹುಸೇನ್ ಶಾಂತೊ, ಲಿಟನ್ ದಾಸ್ ವಿಕೆಟ್‌ಗಳನ್ನು ತಮ್ಮ ಬುಟ್ಟಿಗೆ ಹಾಕಿಕೊಂಡರು. ಈ ನಡುವೆ ಮೊಮಿನುಲ್ ಹಕ್ ಬ್ಯಾಟ್ ಬೀಸಿದರು.

ಅಶ್ವಿನ್ ಹಾಕಿದ 24ನೇ ಓವರ್‌ನಲ್ಲಿ ಅಶ್ವಿನ್ ಎಸೆತವು ಮೊಮಿನುಲ್ ಬ್ಯಾಟ್ ಸವರಿ ವಿಕೆಟ್‌ಕೀಪರ್ ಹಾಗೂ ಮೊದಲ ಸ್ಲಿಪ್ ಮಧ್ಯದಲ್ಲಿ ಸಾಗಿತ್ತು. ಪಂತ್ ಪ್ರಯತ್ನಿಸಿದರೂ ಹಿಡಿತಕ್ಕೆ ಪಡೆಯುವಲ್ಲಿ ಯಶಸ್ವಿಯಾಗಲಿಲ್ಲ. ಆದರೆ 74ನೇ ಓವರ್‌ನಲ್ಲಿ ಅಶ್ವಿನ್ ಎಸೆತದಲ್ಲಿಯೇ ಅವರು ಪಂತ್‌ಗೆ ಕ್ಯಾಚಿತ್ತರು.



ಭಾರತ ತಂಡದ ಆರ್. ಅಶ್ವಿನ್ ಬೌಲಿಂಗ್ –ಎಪಿ/ಪಿಟಿಐ ಚಿತ್ರ

### ಸ್ಕೋರ್ ಕಾರ್ಡ್

**ಮೊದಲ ಇನಿಂಗ್ಸ್: ಬಾಂಗ್ಲಾದೇಶ 227 (73.5 ಓವರ್‌ಗಳಲ್ಲಿ)**
ಶಾಂತೊ ಎಲ್‌ಬಿಡಬ್ಲ್ಯು ಬಿ ಅಶ್ವಿನ್ 24 (57ಎ, 4X3)
ಹಸನ್ ಸಿ ರಾಹುಲ್ ಬಿ ಉನದ್ಕತ್ 15 (34ಎ, 4X1)
ಮೊಮಿನುಲ್ ಸಿ ಪಂತ್ ಬಿ ಅಶ್ವಿನ್ 84 (157ಎ, 4X12, 6X1)
ಶಕೀಬ್ ಸಿ ಪೂಜಾರ ಬಿ ಉಮೇಶ್ 16 (39ಎ, 4X1, 6X1)
ರಹೀಮ್ ಸಿ ಪಂತ್ ಬಿ ಉನದ್ಕತ್ 26 (46ಎ, 4X5)
ಲಿಟನ್ ಸಿ ರಾಹುಲ್ ಬಿ ಅಶ್ವಿನ್ 25 (26ಎ, 4X2, 6X1)
ಮಿರಾಜ್ ಸಿ ಪಂತ್ ಬಿ ಉಮೇಶ್ 15 (51ಎ, 4X3)
ನೂರುಲ್ ಎಲ್‌ಬಿಡಬ್ಲ್ಯು ಬಿ ಉಮೇಶ್ 6 (13ಎ)
ತಸ್ಕಿನ್ ಸಿ ಸಿರಾಜ್ ಬಿ ಉಮೇಸ್ 1 (16ಎ)
ತೈಜುಲ್ ಔಟಾಗದೆ 4 (2ಎ, 4X1)
ಖಾಲೀದ್ ಸಿ ಉನದ್ಕತ್ ಬಿ ಅಶ್ವಿನ್ 0 (2ಎ)
**ಇತರೆ:** 11 (ಬೈ 3, ಲೆಗ್‌ಬೈ 7, ವೈಡ್ 1)
**ವಿಕೆಟ್ ಪತನ:** 1–36 (ಝಾಕೀರ್ ಹಸನ್; 14.5), 2–39 (ಶಾಂತೊ 15.2), 3–82 (ಶಕೀಬ್ ಅಲ್ ಹಸನ್; 28.1), 4–130 (ಮುಷ್ಫಿಕುರ್; 40.6), 5–172 (ಲಿಟನ್ ದಾಸ್; 48.5), 6–213 (ಮೆಹದಿ ಹಸನ್ ಮಿರಾಜ್; 66.3), 7–219 (ನೂರುಲ್ ಹಸನ್; 68.4), 8–223 (ತಸ್ಕಿನ್ ಅಹಮದ್; 72.4), 9–227 (ಮೊಮಿನುಲ್ ಹಕ್; 73.3), 10–227 (ಖಾಲೀದ್ ಅಹಮದ್ ; 73.5)
**ಬೌಲಿಂಗ್:** ಮೊಹಮ್ಮದ್ ಸಿರಾಜ್ 9–1–39–0, ಉಮೇಶ್ ಯಾದವ್ 15–4–25–4, ಜೈದೇವ್ ಉನದ್ಕತ್ 16–2–50–2, ಆರ್. ಅಶ್ವಿನ್ 21.5–3–71–4, ಅಕ್ಷರ್ ಪಟೇಲ್ 12–3–32–0
**ಭಾರತ: ವಿಕೆಟ್ ನಷ್ಟವಿಲ್ಲದೆ 19 (8 ಓವರ್‌ಗಳು)**
ರಾಹುಲ್ ಬ್ಯಾಟಿಂಗ್ 3 (30ಎ)
ಶುಭಮನ್ ಗಿಲ್ ಬ್ಯಾಟಿಂಗ್ 14 (20ಎ, 4X1, 6X1)
**ಇತರೆ:** 2 (ನೋಬಾಲ್ 2)
**ಬೌಲಿಂಗ್:** ತಸ್ಕಿನ್ ಅಹಮದ್ 4–2–8–0, ಶಕೀಬ್ ಅಲ್ ಹಸನ್ 4–2–11–0

### ಐಪಿಎಲ್ ಮಿನಿ ಹರಾಜು ಇಂದು: ಕಣದಲ್ಲಿ 87 ಆಟಗಾರರು

# ಕರನ್, ಸ್ಟೋಕ್ಸ್‌ಗೆ ಭಾರಿ ಬೆಲೆ ಸಾಧ್ಯತೆ

**ಕೊಚ್ಚಿ (ಪಿಟಿಐ):** ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಆಟಗಾರರ ಮಿನಿ ಹರಾಜು ಪ್ರಕ್ರಿಯೆ ಕೊಚ್ಚಿಯಲ್ಲಿ ಶುಕ್ರವಾರ ನಡೆಯಲಿದ್ದು, ಕಣದಲ್ಲಿರುವ 87 ಆಟಗಾರರ ಖರೀದಿಗಾಗಿ 10 ಫ್ರಾಂಚೈಸ್‌ಗಳು ಪೈಪೋಟಿ ನಡೆಸಲಿವೆ.

ತಮಗೆ ಬೇಕಾದ ಪ್ರಮುಖ ಆಟಗಾರರನ್ನು ಈಗಾಗಲೇ ಉಳಿಸಿಕೊಂಡಿರುವ ಫ್ರಾಂಚೈಸ್‌ಗಳು, ಮಿನಿ ಹರಾಜಿನ ಮೂಲಕ ತಂಡಗಳಿಗೆ ಅಂತಿಮ ರೂಪ ನೀಡಲಿವೆ.

ಇಂಗ್ಲೆಂಡ್‌ನ ಬೆನ್ ಸ್ಟೋಕ್ಸ್, ಸ್ಯಾಮ್ ಕರನ್ ಮತ್ತು ಆಸ್ಟ್ರೇಲಿಯಾದ ಆಲ್‌ರೌಂಡರ್ ಕ್ಯಾಮರಾನ್ ಗ್ರೀನ್ ಅವರು ಭಾರಿ ಮೊತ್ತಕ್ಕೆ ಹರಾಜಾಗುವ ಸಾಧ್ಯತೆಯಿದೆ. ಭಾರತದ ಬ್ಯಾಟರ್‌ಗಳ ಪೈಕಿ ಮಯಂಕ್ ಅಗರವಾಲ್, ಅಜಿಂಕ್ಯ ರಹಾನೆ ಅವರು ಹರಾಜು ಪಟ್ಟಿಯಲ್ಲಿರುವ ಪ್ರಮುಖರಾಗಿದ್ದಾರೆ.

ಪಂಜಾಬ್ ಕಿಂಗ್ಸ್ ತಂಡದ ನಾಯಕರಾಗಿದ್ದ ಮಯಂಕ್ ಅವರನ್ನು ಫ್ರಾಂಚೈಸ್ ತನ್ನಲ್ಲೇ ಉಳಿಸಿಕೊಳ್ಳುವ ಬದಲು ಬಿಡುಗಡೆಗೊಳಿಸಿತ್ತು. ಮುಂದಿನ ಋತುವಿಗೆ ಶಿಖರ್ ಧವನ್ ಅವರನ್ನು ನಾಯಕರನ್ನಾಗಿ ನೇಮಿಸಿಕೊಂಡಿತ್ತು.

ರಾಷ್ಟ್ರೀಯ ತಂಡದಲ್ಲಿ ಮರಳಿ ಸ್ಥಾನ ಪಡೆಯಲು ಪ್ರಯತ್ನಿಸುತ್ತಿರುವ ಮಯಂಕ್ ಅವರಿಗೆ ಈ ಬಾರಿಯ ಐಪಿಎಲ್ ಟೂರ್ನಿ ಮಹತ್ವದ್ದೆನಿಸಿಕೊಂಡಿದೆ. ಅವರು ಹರಾಜಿನಲ್ಲಿ ಉತ್ತಮ ಬೆಲೆ ಪಡೆಯುವ ನಿರೀಕ್ಷೆಯಲ್ಲಿದ್ದಾರೆ. ಅನುಭವಿ ವೇಗದ ಬೌಲರ್ ಇಶಾಂತ್ ಶರ್ಮ ಮತ್ತು ಜಯದೇವ್ ಉನದ್ಕತ್ ಅವರೂ ಪಟ್ಟಿಯಲ್ಲಿದ್ದಾರೆ.

ನ್ಯೂಜಿಲೆಂಡ್ ತಂಡದ ನಾಯಕ ಕೇನ್ ವಿಲಿಯಮ್ಸನ್ ಅವರು ಹರಾಜು ಪಟ್ಟಿಯಲ್ಲಿರುವ ಇನ್ನೊಬ್ಬ ಪ್ರಮುಖ ಆಟಗಾರ. ಸನ್‌ರೈಸರ್ಸ್ ಹೈದರಾಬಾದ್ ತಂಡ ಅವರನ್ನು ಹರಾಜಿಗೆ ಬಿಟ್ಟುಕೊಟ್ಟಿತ್ತು. ಹ್ಯಾರಿ ಬ್ರೂಕ್ಸ್, ರಿಲಿ ರೂಸೊ, ವೆಸ್ಟ್ ಇಂಡೀಸ್‌ನ ಜೇಸನ್ ಹೋಲ್ಡರ್ ಮತ್ತು ನಿಕೊಲಸ್ ಪೂರನ್ ಅವರೂ ಉತ್ತಮ ಬೆಲೆ ಪಡೆಯುವ ಸಾಧ್ಯತೆಯಿದೆ.

ಐಪಿಎಲ್ ಮಿನಿ ಹರಾಜಿನಲ್ಲಿ ಅತಿಹೆಚ್ಚು ಮೊತ್ತ ಪಡೆದ ದಾಖಲೆ ದಕ್ಷಿಣ ಆಫ್ರಿಕಾದ ಆಲ್‌ರೌಂಡರ್ ಕ್ರಿಸ್ ಮಾರಿಸ್ ಹೆಸರಿನಲ್ಲಿದೆ. 2021ರಲ್ಲಿ ನಡೆದಿದ್ದ ಮಿನಿ ಹರಾಜಿನಲ್ಲಿ ರಾಜಸ್ತಾನ ರಾಯಲ್ಸ್ ತಂಡ ಅವರನ್ನು ₹ 16.25 ಕೋಟಿ ನೀಡಿ ಖರೀದಿಸಿತ್ತು.

**ಸನ್‌ರೈಸರ್ಸ್ ಬಳಿ ಹೆಚ್ಚು ಹಣ:** ವಿವಿಧ ಫ್ರಾಂಚೈಸ್‌ಗಳು ತಮ್ಮಲ್ಲಿ ಬಾಕಿಯಿರುವ ಹಣದೊಂದಿಗೆ ಹರಾಜಿನಲ್ಲಿ ಪಾಲ್ಗೊಳ್ಳಲಿವೆ. ಸನ್‌ರೈಸರ್ಸ್ ಹೈದರಾಬಾದ್ ಅತಿಹೆಚ್ಚು ಮೊತ್ತವನ್ನು ಹೊಂದಿದ್ದು, ಶುಕ್ರವಾರದ ಹರಾಜಿನಲ್ಲಿ ₹ 42.25 ಕೋಟಿ ಖರ್ಚು ಮಾಡಬಹುದು. ನಾಲ್ವರು ವಿದೇಶಿ ಆಟಗಾರರು ಸೇರಿದಂತೆ ಒಟ್ಟು 13 ಆಟಗಾರರನ್ನು ಖರೀದಿಸಬಹುದು. ಪಂಜಾಬ್ ಕಿಂಗ್ಸ್ ₹ 32.20 ಕೋಟಿ ಬಾಕಿ ಹಣ ಹೊಂದಿದೆ.

ಕೋಲ್ಕತ್ತ ನೈಟ್ ರೈಡರ್ಸ್ (₹ 7.05 ಕೋಟಿ) ಮತ್ತು ರಾಯಲ್ ಚಾಲೆಂಜರ್ಸ್ ಬೆಂಗಳೂರು (₹8.75 ಕೋಟಿ) ಕಡಿಮೆ ಮೊತ್ತದೊಂದಿಗೆ ಹರಾಜಿನಲ್ಲಿ ಭಾಗವಹಿಸಲಿವೆ. ಈ ಫ್ರಾಂಚೈಸ್‌ಗಳು ಹಾಲಿ ತಂಡದ ಬಹುತೇಕ ಆಟಗಾರರನ್ನು ಉಳಿಸಿಕೊಂಡಿವೆ.

### ಐಪಿಎಲ್ ಹರಾಜು ಮಾಹಿತಿ

**ಫ್ರ್ಯಾಂಚೈಸ್‌ಗಳ ಬಾಕಿ ಪರ್ಸ್ ಮೌಲ್ಯ**

| ತಂಡ | ಮೊತ್ತ (₹ ಕೋಟಿಗಳಲ್ಲಿ) |
|---|---|
| ಚೆನ್ನೈ ಸೂಪರ್ ಕಿಂಗ್ಸ್ | 20.45 |
| ಡೆಲ್ಲಿ ಕ್ಯಾಪಿಟಲ್ಸ್ | 19.45 |
| ಗುಜರಾತ್ ಟೈಟನ್ಸ್ | 19.25 |
| ಕೋಲ್ಕತ್ತ ನೈಟ್ ರೈಡರ್ಸ್ | 7.05 |
| ಲಖನೌ ಸೂಪರ್ ಜೈಂಟ್ಸ್ | 23.35 |
| ಮುಂಬೈ ಇಂಡಿಯನ್ಸ್ | 20.55 |
| ಪಂಜಾಬ್ ಕಿಂಗ್ಸ್ | 32.20 |
| ರಾಜಸ್ತಾನ ರಾಯಲ್ಸ್ | 13.20 |
| ರಾಯಲ್ ಚಾಲೆಂಜರ್ಸ್ ಬೆಂಗಳೂರು | 8.75 |
| ಸನ್‌ರೈಸರ್ಸ್ ಹೈದರಾಬಾದ್ | 42.25 |

**ಅಂಕಿ-ಅಂಶಗಳು**

| | |
|---|---|
| 405 ಹರಾಜು ಪಟ್ಟಿಯಲ್ಲಿ ಸ್ಥಾನ ಪಡೆದಿರುವ ಆಟಗಾರರು | 87 ಖರೀದಿಗೆ ನಿಗದಿಯಾಗಿರುವ ಆಟಗಾರರು |
| 273 ಹರಾಜಿಗೆ ಲಭ್ಯ ಇರುವ ಭಾರತದ ಆಟಗಾರರು | 30 ಫ್ರಾಂಚೈಸ್‌ಗಳು ಸೆಳೆಯ ಬಹುದಾದ ವಿದೇಶಿ ಆಟಗಾರರು |
| 132 ಲಭ್ಯ ಇರುವ ವಿದೇಶಿ ಆಟಗಾರರು | 19 ₹2 ಕೋಟಿ ಮೂಲ ಬೆಲೆ ಹೊಂದಿರುವವರು |



ಸ್ಯಾಮ್ ಕರನ್

ಕ್ಯಾಮರಾನ್ ಗ್ರೀನ್

ಬೆನ್ ಸ್ಟೋಕ್ಸ್

### ಮಯಂಕ್‌ಗೆ ₹1 ಕೋಟಿ ಮೂಲಬೆಲೆ

ಮಿನಿ ಹರಾಜು ಪಟ್ಟಿಯಲ್ಲಿರುವ ಕರ್ನಾಟಕದ ಆಟಗಾರರಲ್ಲಿ ಮಯಂಕ್ ಅಗರವಾಲ್ ಮತ್ತು ಮನೀಷ್ ಪಾಂಡೆ ಅವರು ತಮಗೆ ₹ 1 ಕೋಟಿ ಮೂಲ ಬೆಲೆ ನಿಗದಿಪಡಿಸಿದ್ದಾರೆ.

ರಾಜ್ಯ ರಣಜಿ ತಂಡದಲ್ಲಿ ಸ್ಥಾನ ಪಡೆಯಲು ವಿಫಲವಾಗಿರುವ ಕರುಣ್ ನಾಯರ್ (₹50 ಲಕ್ಷ ಮೂಲಬೆಲೆ) ಅವರ ಖರೀದಿಗೆ ಫ್ರಾಂಚೈಸ್‌ಗಳು ಮುಂದಾಗುವುದೇ ಎಂಬುದು ಕುತೂಹಲ ಮೂಡಿಸಿದೆ.

ಕರ್ನಾಟಕದ ಆಟಗಾರರಾದ ಶ್ರೇಯಸ್ ಗೋಪಾಲ್, ಮನೋಜ್ ಭಾಂಡಗೆ, ಜೆ.ಸುಚಿತ್, ಲವನೀತ್ ಸಿಸೋಡಿಯಾ, ವಿದ್ವತ್ ಕಾವೇರಪ್ಪ, ವೈಶಾಖ್ ವಿಜಯಕುಮಾರ್, ಬಿ.ಆರ್.ಶರತ್, ವಿ.ಕೌಶಿಕ್ ಮತ್ತು ಶುಭಾಂಗ್ ಹೆಗ್ಡೆ ಅವರೂ ಕಣದಲ್ಲಿದ್ದಾರೆ.



ಮಯಂಕ್ ಅಗರವಾಲ್

# ಕುಲದೀಪ್ ಕೈಬಿಟ್ಟದ್ದು ನ್ಯಾಯವೇ?

**ನವದೆಹಲಿ (ಪಿಟಿಐ):** ಬಾಂಗ್ಲಾದೇಶದ ವಿರುದ್ಧ ಗುರುವಾರ ಆರಂಭವಾದ ಎರಡನೇ ಟೆಸ್ಟ್ ಪಂದ್ಯದಲ್ಲಿ ಕುಲದೀಪ್ ಯಾದವ್ ಅವರಿಗೆ ಆಡುವ ಅವಕಾಶ ನೀಡದ ಭಾರತ ತಂಡದ ವ್ಯವಸ್ಥಾಪಕ ಸಮಿತಿಯ ವಿರುದ್ಧ ಸುನೀಲ್ ಗಾವಸ್ಕರ್ ಕಿಡಿ ಕಾರಿದ್ದಾರೆ.

'ಕಳೆದ ಪಂದ್ಯದಲ್ಲಿ ಶ್ರೇಷ್ಠ ಆಟಗಾರ ಗೌರವ ಗಳಿಸಿದ ಆಟಗಾರನನ್ನು ಕೈಬಿಟ್ಟಿರುವುದನ್ನು ನಂಬಲು ಸಾಧ್ಯವಾಗುತ್ತಿಲ್ಲ. ಈ ಪದಪ್ರಯೋಗವನ್ನು ನಾನು ಸಭ್ಯತೆಗಾಗಿ ಬಳಸುತ್ತಿದ್ದೇನೆ. ಆದರೆ ಇನ್ನೂ ಕಟುವಾದ ಪದಗಳಲ್ಲಿ ಟೀಕಿಸಬೇಕೆನಿಸಿದರೂ ನಿಯಂತ್ರಿಸಿಕೊಂಡಿದ್ದೇನೆ' ಎಂದು ಗಾವಸ್ಕರ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ತಂಡದಲ್ಲಿ ಇನ್ನೂ ಇಬ್ಬರು ಸ್ಪಿನ್ನರ್ (ಅಕ್ಷರ್ ಪಟೇಲ್ ಹಾಗೂ ಅಶ್ವಿನ್) ಇದ್ದಾರೆ. ಅವರಲ್ಲಿ ಒಬ್ಬರನ್ನು ಕೈಬಿಟ್ಟು ಕುಲದೀಪ್ ಅವರನ್ನು ಉಳಿಸಿಕೊಳ್ಳಬಹುದಿತ್ತು. ಕುಲದೀಪ್ ಜೊತೆಗೇ ಈ ರೀತಿ ಪದೇ ಪದೇ ಆಗುತ್ತಿದೆ. ಯಾರಾದರೂ ಒಬ್ಬರು ಕುಲದೀಪ್ ಬೆಂಬಲಕ್ಕೆ ನಿಲ್ಲಬೇಕು. ಇಲ್ಲದಿದ್ದರೆ ಆ ಪ್ರತಿಭಾವಂತ ಆಟಗಾರ ದೃತಿಗೆಟ್ಟು ಹೋಗುವ ಸಾಧ್ಯತೆ ಇದೆ. ಕಳೆದ ಪಂದ್ಯದಲ್ಲಿ ಎಂಟು ವಿಕೆಟ್ ಪಡೆದ ಆಟಗಾರರನ್ನು ಬಿಟ್ಟಿರುವುದು ಸೋಜಿಗ' ಎಂದು ಗಾವಸ್ಕರ್ ಸೋನಿ ಸ್ಪೋರ್ಟ್ಸ್ ನೆಟ್‌ವರ್ಕ್ ವಾಹಿನಿಯಲ್ಲಿ ಹೇಳಿದ್ದಾರೆ.

'ಪಂದ್ಯದ ವಿಜಯದ ರೂವಾರಿಯನ್ನು ಬೆಂಚ್ ಕಾಯಿಸಲು ಬಿಡುವುದು ಯಾವ ನ್ಯಾಯ. ತಂಡದ ಚಿಂತಕರು ಇದನ್ನು ಗಂಭೀರವಾಗಿ ಯೋಚಿಸಬೇಕು. ಈ ಹಿಂದೆ ಟೆಸ್ಟ್‌ವೊಂದರಲ್ಲಿ 303 ರನ್ ಗಳಿಸಿದ್ದ ಕರುಣ್ (ನಾಯರ್) ಅವರನ್ನೂ ನಂತರದ ಹೈದರಾಬಾದ್ ಟೆಸ್ಟ್‌ನಲ್ಲಿ ವೇಗಿಯೊಬ್ಬರನ್ನು ಆಡಿಸುವ ಸಲುವಾಗಿ ಕೈಬಿಡಲಾಗಿತ್ತು. ಈಗ ಕುಲದೀಪ್. ಇದು ನಗೆಪಾಟಲಿನ ನಿರ್ಧಾರ' ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

### ಬೆಂಗಳೂರು ರೇಸ್

## ಎವಾಲ್ಡೊ ಗೆಲ್ಲುವ ನಿರೀಕ್ಷೆ

ಅಶೋಕ ಚಕ್ರ ಕಪ್ ಶುಕ್ರವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಎವಾಲ್ಡೊ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 12.15ಕ್ಕೆ ಪ್ರಾರಂಭವಾಗಲಿರುದ ದಿನದ ಹತ್ತು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ವಾರ್ ಟ್ರಯಲ್ 1, ಒಸಿಬಿಸ 7, ಪರ್ಫೆಕ್ಟ್ ಹೆಲೊ 10
2ನೇ ರೇಸ್: ಲಿಸನ್ ಟು ಮೀ 4, ಕೇಪ್ರಿಯಾಟಿ 5, ಅಫರ್ಪಿ 1
3ನೇ ರೇಸ್: ಜಾನ್ ಕನ್ನೋರ್ 7, ಎಂಬೋಸಮ್ 4, ಡಾ.ಲೋಗನ್ 2
4ನೇ ರೇಸ್: ಎಂಪೈರ್ ಆಫ್ ಡ್ರೀಮ್ಸ್ 5, ಆಲ್ಲಿಡಸ್ ಸಿನರ್ಜಿ 2, ಹೈ ಒಪಿನಿಯನ್ 3
5ನೇ ರೇಸ್: ಕ್ವಾರ್ 1, ಜೂಲಿಯೊ 4, ಟ್ರೂಫೈತ್ 5
6ನೇ ರೇಸ್: ಫೋರ್ ವ್ಹೀಲ್ ಡ್ರೈವ್ 2, ಕಟಾನ 3, ಟೈಟೊ ಆಲ್ಬಾ 4
7ನೇ ರೇಸ್: ಕೂಲ್ ರೈಡರ್ 2, ಎಟರ್ನಲ್ ಪ್ರಿನ್ಸೆಸ್ 3, ದಿ ಇನ್‌ಹೆರಿಟರ್ 4
8ನೇ ರೇಸ್: ಎವಾಲ್ಡೊ 1, ಫೈತ್ ಆಫ್ ಸಕ್ಸಸ್ 2, ಆಟೊಮ್ಯಾಟಿಕ್ 4
9ನೇ ರೇಸ್: ಬ್ಯಾಲರ್ 10, ನಿಕೊಲಿನ 2, ಸೋಸಿಯೆಬಲ್ 5
10ನೇ ರೇಸ್: ಆಕ್ಟಿವೇಟೆಡ್ 11, ಡಲ್ಲಾಸ್ ಡ್ರಿಫ್ಟರ್ 1, ಸ್ಕೈ ಪ್ರಿನ್ಸೆಸ್ 7

**ಉತ್ತಮ ಬೆಟ್: ಲಿಸನ್ ಟು ಮೀ**

| ಜಾಕ್‌ಪಾಟ್ | 1ನೇ ಟ್ರಿಬಲ್ | 2ನೇ ಟ್ರಿಬಲ್ | 3ನೇ ಟ್ರಿಬಲ್ |
|---|---|---|---|
| 6,7,8,9,10 | 2,3,4 | 5,6,7 | 8,9,10 |

## ಸಂದೀಪ್‌ಗೆ ಬೆಳ್ಳಿ

**ದಾವಣಗೆರೆ:** ಕರ್ನಾಟಕದ ಕುಸ್ತಿಪಟು ಸಂದೀಪ್ ವಿ. ಹಳದುಕರ ಅವರು ವಿಶಾಖಪಟ್ಟಣದಲ್ಲಿ ಗುರುವಾರ ನಡೆದ ರಾಷ್ಟ್ರೀಯ ಸೀನಿಯರ್ ಕುಸ್ತಿ ಚಾಂಪಿಯನ್‌ಷಿಪ್‌ನ ಗ್ರಿಕೊ ರೋಮನ್ ಶೈಲಿಯ 67 ಕೆ.ಜಿ. ವಿಭಾಗದಲ್ಲಿ ಬೆಳ್ಳಿ ಪದಕ ಗೆದ್ದುಕೊಂಡಿದ್ದಾರೆ.

ಫೈನಲ್ ಪಂದ್ಯದಲ್ಲಿ ಪಂಜಾಬ್‌ನ ಕರಣಜಿತ್ ಎದುರು ಸಂದೀಪ್ ಅವರು 5–2ರಲ್ಲಿ ಪರಾಭವಗೊಂಡರು. ಸಂದೀಪ್ ಅವರು ಇದೇ ಮೊದಲ ಬಾರಿಗೆ ಸೀನಿಯರ್ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಪದಕ ಸಾಧನೆ ಮಾಡಿದ್ದಾರೆ.

ಭಾರತೀಯ ಸೇನೆಯ ಯೋಧರಾಗಿರುವ ಸಂದೀಪ್ ಅವರು, ಮಹಾರಾಷ್ಟ್ರದ ನಾಸಿಕ್‌ನಲ್ಲಿ ಆರ್ಟಿಲರಿ ಸೆಂಟರ್‌ನಲ್ಲಿ ನಾಯಕ್ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

# ಮಯಂಕ್ ಬಳಗಕ್ಕೆ ಮೊದಲ ಗೆಲುವು

## ರಣಜಿ ಕ್ರಿಕೆಟ್: ಎರಡೂವರೆ ದಿನದಲ್ಲಿ ಮುಗಿದ ಪಂದ್ಯ; ರೋನಿತ್‌ಗೆ 4, ವೈಶಾಖಗೆ 3 ವಿಕೆಟ್

• ಗಿರೀಶ ದೊಡ್ಡಮನಿ

**ಬೆಂಗಳೂರು:** ಕರ್ನಾಟಕದ ಬೌಲರ್‌ಗಳು ಗುರುವಾರ ಬೆಳಿಗ್ಗೆ ಗೆಲುವಿನ ಕೇಕೆ ಹಾಕಿದರು. ಪುದುಚೇರಿ ಎದುರು ಮಯಂಕ್ ಅಗರವಾಲ್ ಬಳಗವು ಇನಿಂಗ್ಸ್ ಮತ್ತು 7 ರನ್‌ಗಳಿಂದ ಜಯಭೇರಿ ಬಾರಿಸಿತು.

ಪ್ರಸಕ್ತ ರಣಜಿ ಟೂರ್ನಿಯಲ್ಲಿ ಎರಡನೇ ಪಂದ್ಯ ಆಡಿದ ಕರ್ನಾಟಕ ತಂಡಕ್ಕಿದು ಮೊದಲ ಜಯ. ಸಿ ಗುಂಪಿನ ಈ ಪಂದ್ಯವು ಎರಡೂವರೆ ದಿನಗಳಲ್ಲಿಯೇ ಮುಕ್ತಾಯವಾಯಿತು. ಆತಿಥೇಯ ಬಳಗವು ಏಳು ಅಂಕಗಳನ್ನು ತನ್ನ ಬುಟ್ಟಿಗೆ ಹಾಕಿಕೊಂಡಿತು.

ಎರಡನೇ ದಿನವಾದ ಬುಧವಾರ ಸಮರ್ಥ್ ಶತಕದ ಬಲದಿಂದ ಕರ್ನಾಟಕ ತಂಡವು 134 ರನ್‌ಗಳ ಮುನ್ನಡೆ ಸಾಧಿಸಿತು. ಎರಡನೇ ಇನಿಂಗ್ಸ್ ಆರಂಭಿಸಿದ್ದ ಪುದುಚೇರಿ 27 ಓವರ್‌ಗಳಲ್ಲಿ 58 ರನ್ ಗಳಿಸಿ 3 ವಿಕೆಟ್ ಕಳೆದುಕೊಂಡಿತ್ತು. ಆದರೆ ಗುರುವಾರ ಕೇವಲ 93 ನಿಮಿಷಗಳಲ್ಲಿ ಉಳಿದ ಏಳು ವಿಕೆಟ್‌ಗಳನ್ನು ಕಬಳಿಸುವಲ್ಲಿ ಕರ್ನಾಟಕದ ಬೌಲರ್‌ಗಳು ಸಫಲರಾದರು. ಪುದುಚೇರಿ 43 ಓವರ್‌ಗಳಲ್ಲಿ 127 ರನ್ ಗಳಿಸಲಷ್ಟೇ ಶಕ್ತವಾಯಿತು.

ಸರ್ವಿಸಸ್ ಎದುರಿನ ಮೊದಲ ಪಂದ್ಯವನ್ನು ಡ್ರಾ ಮಾಡಿಕೊಂಡಿದ್ದ ಕರ್ನಾಟಕ ಮೂರು ಅಂಕ ಗಳಿಸಿತ್ತು. ಇದೀಗ ಸಿ ಗುಂಪಿನ ಪಟ್ಟಿಯಲ್ಲಿ ಒಟ್ಟು 10 ಅಂಕಗಳನ್ನು ಗಳಿಸಿದೆ.

'ಈ ಬಾರಿಯ ಋತುವಿನಲ್ಲಿ ನಮ್ಮ ತಂಡ ಉತ್ತಮ ಆರಂಭ ಮಾಡಿದೆ. ಇದೇ ಲಯವನ್ನು ಮುಂದಿನ ಪಂದ್ಯಗಳಲ್ಲಿಯೂ ಕಾಪಾಡಿಕೊಳ್ಳುತ್ತೇವೆ. ಪಂದ್ಯದಿಂದ ಪಂದ್ಯಕ್ಕೆ ಪೈಪೋಟಿ ಹೆಚ್ಚಿದಂತೆ ನಮ್ಮ ಆಟಗಾರರ ಸಾಮರ್ಥ್ಯವೂ ಉತ್ಕೃಷ್ಟವಾಗಲಿದೆ' ಎಂದು ಪಂದ್ಯದ ನಂತರ ಕರ್ನಾಟಕ ತಂಡದ ಕೋಚ್ ಪಿ.ವಿ. ಶಶಿಕಾಂತ್ ಹೇಳಿದರು.

ಆತಿಥೇಯ ವೇಗಿಗಳಿಗೆ 18 ವಿಕೆಟ್ ಚಿನ್ನಸ್ವಾಮಿ ಕ್ರೀಡಾಂಗಣದ ಪಿಚ್‌ನಲ್ಲಿ ಕಳೆದ ಎರಡೂವರೆ ದಿನಗಳಲ್ಲಿ ಒಟ್ಟು 30 ವಿಕೆಟ್‌ಗಳು ಪತನವಾದವು. ಅದರಲ್ಲಿ ಕರ್ನಾಟಕದ ವೇಗಿಗಳಿಗೆ 18 ವಿಕೆಟ್‌ಗಳು ಲಭಿಸಿದವು. ಸ್ಪಿನ್ನರ್‌ಗಳಾದ ಶ್ರೇಯಸ್ ಗೋಪಾಲ್ ಮತ್ತು ಕೆ. ಗೌತಮ್ ತಲಾ ಒಂದು ವಿಕೆಟ್ ಗಳಿಸಿದರು.

ದಿನದಾಟದ ಎರಡನೇ ಓವರ್‌ನಲ್ಲಿ ವಿದ್ವತ್ ಎರಡು ವಿಕೆಟ್‌ಗಳನ್ನು ಗಳಿಸಿದರು. ರಾತ್ರಿ ಕ್ರೀಸ್ ಕಾದಿದ್ದ ಜಯ್ ಪಾಂಡೆ ಹಾಗೂ ಎಸ್. ಅಶ್ವತ್ ಅವರಿಬ್ಬರನ್ನೂ ಕ್ಲೀನ್‌ಬೌಲ್ಡ್ ಮಾಡಿದರು.

ಡಿ. ರೋಹಿತ್, ಅಂಕಿತ್ ಶರ್ಮಾ ಮತ್ತು ಸಾಗರ್ ಉದೇಶಿ ವಿಕೆಟ್‌ಗಳು ರೋನಿತ್ ಮೋರೆ ಪಾಲಾದವು. ಕೆ.ಬಿ. ಅರುಣ್ ಕಾರ್ತಿಕ್ ಮತ್ತು ಎಂ. ವಿಘ್ನೇಷ್ ವಿಕೆಟ್‌ಗಳನ್ನು ವೈಶಾಖ ಉರುಳಿಸಿದರು.

'ನಮ್ಮ ಬೌಲಿಂಗ್ ವಿಭಾಗವು ಸಶಕ್ತವಾಗುತ್ತಿರುವುದು ಆಶಾದಾಯಕ ಬೆಳವಣಿಗೆ. ಈ ಹಿಂದೆ ವಿನಯಕುಮಾರ್, ಮಿಥುನ್ ಮತ್ತು ಅರವಿಂದ್ ಅವರಿದ್ದರು. ಅವರ ನಿರ್ಗಮನದ ನಂತರ ಖಾಲಿಯಾಗಿರುವ ಜಾಗಕ್ಕೆ ಸೂಕ್ತವಾಗುವಂತಹ ಭರವಸೆಯನ್ನು ವಿದ್ವತ್ ಮತ್ತು ವೈಶಾಖ ಮೂಡಿಸಿದ್ದಾರೆ. ಅನುಭವಿ ರೋನಿತ್ ಮೋರೆ ಉತ್ತಮವಾಗಿ ಆಡುತ್ತಿದ್ದಾರೆ. ಮಧ್ಯಮ ಕ್ರಮಾಂಕದ ಬ್ಯಾಟಿಂಗ್ ಇನ್ನಷ್ಟು ಬಲಯುತವಾಗಬೇಕಿದೆ. ಅನುಭವಿ ಮನೀಷ್ ಪಾಂಡೆ ಲಯಕ್ಕೆ ಮರಳಿದರೆ ಸಮತೋಲನಗೊಳ್ಳುತ್ತದೆ. ಅವರು ಮುಂದಿನ ಹಂತದಲ್ಲಿ ಚೆನ್ನಾಗಿ ಆಡುವ ಭರವಸೆ ಇದೆ' ಎಂದು ಶಶಿಕಾಂತ್ ಅಭಿಪ್ರಾಯಪಟ್ಟರು.



ಕರ್ನಾಟಕ ತಂಡದ ಆಟಗಾರರ ಸಂಭ್ರಮ –ಪ್ರಜಾವಾಣಿ ಚಿತ್ರ/ಬಿ.ಕೆ. ಜನಾರ್ದನ್

### ಸ್ಕೋರ್ ಕಾರ್ಡ್

**ಮೊದಲ ಇನಿಂಗ್ಸ್: ಪುದುಚೇರಿ 170, ಕರ್ನಾಟಕ 304**
**ಎರಡನೇ ಇನಿಂಗ್ಸ್: ಪುದುಚೇರಿ 127 (43 ಓವರ್‌ಗಳಲ್ಲಿ)**
ಜಯ್ ಬಿ ವಿದ್ವತ್ 26 (70ಎ, 4X4)
ಅಶ್ವತ್ ಬಿ ವಿದ್ವತ್ 8 (32ಎ, 4X1)
ರೋಹಿತ್ ಸಿ ಶ್ರೇಯಸ್ ಬಿ ರೋನಿತ್ 18 (20ಎ, 4X2)
ಅರುಣ್ ಸಿ ಶರತ್ ಬಿ ವೈಶಾಖ 10 (33ಎ, 4X1)
ಅಂಕಿತ್ ಸಿ ಮನೀಷ್ ಬಿ ರೋನಿತ್ 25 (15ಎ, 4X6)
ವಿಘ್ನೇಷ್ ಸಿ ಶರತ್ ಬಿ ವೈಶಾಖ 4 (9ಎ, 4X1)
ಸಾಗರ್ ಸಿ ವಿಶಾಲ್ ಬಿ ರೋನಿತ್ 5 (6ಎ, 4X1)
ಅಬಿನ್ ಔಟಾಗದೆ 0 (3ಎ)
**ಇತರೆ:** 3 (ಲೆಗ್‌ಬೈ 3)
**ವಿಕೆಟ್ ಪತನ:** 4–64 (ಅಶ್ವಥ್; 28.1), 5–65 (ಜಯ್ ಪಾಂಡೆ; 28.6), 6–85 (ರೋಹಿತ್ ದಾಮೋದರನ್; 33.3), 7–111(ಅಂಕಿತ್ ಶರ್ಮಾ; 37.3), 8–122 (ವಿಘ್ನೇಷ್;40.1), 9–127 (ಸಾಗರ್ ಉದೇಶಿ; 41.3), 10–127 (ಅರುಣ್ ಕಾರ್ತಿಕ್; 42.6)
**ಬೌಲಿಂಗ್:** ವಿದ್ವತ್ 13–6–44–2, ರೋನಿತ್ ಮೋರೆ 14–6–36–4, ವಿಜಯಕುಮಾರ್ ವೈಶಾಖ 10–3–23–3, ಕೃಷ್ಣಪ್ಪ ಗೌತಮ್ 6–1–21–1
ಫಲಿತಾಂಶ: ಕರ್ನಾಟಕ ತಂಡಕ್ಕೆ ಇನಿಂಗ್ಸ್ ಮತ್ತು 7 ರನ್‌ಗಳ ಜಯ ಹಾಗೂ ಏಳು ಅಂಕಗಳು.
ಮುಂದಿನ ಪಂದ್ಯ: ಗೋವಾ ವಿರುದ್ಧ; ಡಿಸೆಂಬರ್ 27ರಿಂದ.
ಸ್ಥಳ: ಪೊರ್ವರಿಯಂ (ಗೋವಾ)


# ರಷ್ಯಾಕ್ಕೆ ಕಿವಿಗೊಡದ ಬೈಡನ್-ಝೆಲೆನ್‌ಸ್ಕಿ

**ಮಾಸ್ಕೊ/ವಾಷಿಂಗ್ಟನ್ (ಎಎಫ್‌ಪಿ):** ಯುದ್ಧಗ್ರಸ್ತ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರು ವಾಷಿಂಗ್ಟನ್‌ಗೆ ಚಾರಿತ್ರಿಕ ಭೇಟಿ ನೀಡಿದ ಬೆನ್ನಲ್ಲೇ ರಷ್ಯಾ ತನ್ನ ಕಳವಳಕ್ಕೆ ಅಮೆರಿಕ ಮತ್ತು ಉಕ್ರೇನ್ ಎರಡೂ ದೇಶಗಳು ಕಿವುಡಾಗಿವೆ ಎಂದು ಗುರುವಾರ ಆರೋಪಿಸಿದೆ.

ರಷ್ಯಾದ ಆಕ್ರಮಣ ಆರಂಭವಾಗಿ ಹತ್ತು ತಿಂಗಳ ನಂತರ ಇದೇ ಮೊದಲ ಸಲ ಭೇಟಿ ನೀಡಿದ್ದ ಝೆಲೆನ್‌ಸ್ಕಿ ಅವರಿಗೆ ಅಮೆರಿಕನ್ನರು ಅದ್ಧೂರಿ ಸ್ವಾಗತ ನೀಡಿದರು. ಅತ್ಯಾಧುನಿಕ ಪೇಟ್ರಿಯಾಟ್ ಕ್ಷಿಪಣಿ ವ್ಯವಸ್ಥೆ ಪೂರೈಕೆ ಸೇರಿ ಸುಮಾರು ₹14,700 ಕೋಟಿಯ ಸೇನಾ ನೆರವನ್ನು ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರು ಇದೇ ವೇಳೆ ಝೆಲೆನ್‌ಸ್ಕಿ ಅವರಿಗೆ ಹಸ್ತಾಂತರಿಸಿದರು.

ಇದಕ್ಕೂ ಮೊದಲು ಶ್ವೇತಭವನದಲ್ಲಿ ಬುಧವಾರ ನಡೆದ ಉಭಯ ನಾಯಕರ ಭೇಟಿ ಸಮಯದಲ್ಲಿ 'ರಷ್ಯಾ ಆಕ್ರಮಣದ ವಿರುದ್ಧ ಉಕ್ರೇನ್ ಏಕಾಂಗಿಯಲ್ಲ, ಅಮೆರಿಕ ಬೆಂಬಲಕ್ಕಿರಲಿದೆ' ಎಂದು ಬೈಡನ್ ಅವರು ಝೆಲೆನ್‌ಸ್ಕಿ ಅವರಿಗೆ ವಾಗ್ದಾನ ನೀಡಿದರು.

'ಬೈಡನ್ ಅಥವಾ ಝೆಲೆನ್‌ಸ್ಕಿ ಅವರ ಭೇಟಿಯಲ್ಲಿ ರಷ್ಯಾದ ಕಳವಳಕ್ಕೆ ಕಿವಿಗೊಡಲು ಸಂಭಾವ್ಯ ಸಿದ್ಧತೆಯಾಗಿ ಗ್ರಹಿಸಬಹುದಾದ ಕೆಲವು ಮಾತುಗಳನ್ನೂ ಸಹ ಆಡದಿರುವುದು ವಿಷಾದನೀಯ. ಅಮೆರಿಕವು ಉಕ್ರೇನ್‌ಗೆ ಶಸ್ತ್ರಾಸ್ತ್ರ ನೆರವಿನ ಮೂಲಕ ರಷ್ಯಾ ವಿರುದ್ಧ ಪರೋಕ್ಷ ಯುದ್ಧ ನಡೆಸುತ್ತಿದೆ' ಎಂದು ಪುಟಿನ್ ಆಡಳಿತ ಕಚೇರಿ ಕ್ರೆಮ್ಲಿನ್ ವಕ್ತಾರ ಡಿಮಿಟ್ರಿ ಪೆಸ್ಕೊವ್ ಸುದ್ದಿಗಾರರಿಗೆ ತಿಳಿಸಿದರು.



ರಷ್ಯಾ ರಕ್ಷಣಾ ಸಚಿವ ಸೆರ್ಗೈ

**ರಷ್ಯಾದ ತಪ್ಪಲ್ಲ:** 'ಉಕ್ರೇನ್‌ನಲ್ಲಿನ ಸಂಘರ್ಷವು 'ನಮ್ಮ ಪಾಲುದಾರಿಕೆಯ ದುರಂತ'. ಆದರೆ, ಇದರಲ್ಲಿ ನಮ್ಮ ತಪ್ಪಿಲ್ಲ. ಇದು ನಮ್ಮ ನೀತಿಯ ಫಲಿತಾಂಶವಲ್ಲ, ತೃತೀಯ ರಾಷ್ಟ್ರದ ನೀತಿಯಿಂದ ಹೊಮ್ಮಿದ ಫಲಿತಾಂಶ' ಎಂದು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಹೇಳಿದ್ದಾರೆ.

'ಇತ್ತೀಚೆಗೆ ಅಭಿವೃದ್ಧಿಪಡಿಸಿರುವ ಅತ್ಯಾಧುನಿಕ ಹೈಪರ್‌ಸಾನಿಕ್ ಜಿರ್ಕಾನ್ ಕ್ಷಿಪಣಿ ಜನವರಿಯಲ್ಲಿ ನೌಕಾಪಡೆಗೆ ಸೇರಲಿದೆ. ಈ ಕ್ಷಿಪಣಿಗೆ ಸಮನಾದ ಮತ್ತೊಂದು ಕ್ಷಿಪಣಿ ವಿಶ್ವದ ಯಾವುದೇ ರಾಷ್ಟ್ರದ ಬತ್ತಳಿಕೆಯಲ್ಲಿ ಇಲ್ಲ' ಎಂದು ಪುಟಿನ್ ಹೇಳಿದ್ದಾರೆ.

## ತೈವಾನ್ ವಾಯು ಪ್ರದೇಶದಲ್ಲಿ ಚೀನಿ ವಿಮಾನ ಹಾರಾಟ

**ತೈಪೆ (ರಾಯಿಟರ್ಸ್):** ಚೀನಾದ 39 ಯುದ್ಧ ವಿಮಾನಗಳು ಗುರುವಾರ ತನ್ನ ವಾಯು ರಕ್ಷಣಾ ಪ್ರದೇಶದಲ್ಲಿ ಅತಿಕ್ರಮಣದ ಹಾರಾಟ ನಡೆಸಿದ್ದು, ತಮ್ಮ ವಾಯುಪಡೆಯ ವಿಮಾನಗಳು ಎಚ್ಚರಿಕೆ ನೀಡಿದ ನಂತರ ಚೀನಿ ವಿಮಾನಗಳು ನಿರ್ಗಮಿಸಿವೆ ಎಂದು ದ್ವೀಪ ರಾಷ್ಟ್ರ ತೈವಾನ್ ಗುರುವಾರ ಆರೋಪಿಸಿದೆ.

ಚೀನಾದ ಯುದ್ಧ ವಿಮಾನಗಳು ಬಾಶಿ ಚಾನೆಲ್ ಜಲಮಾರ್ಗದ ವಾಯು ಪ್ರದೇಶದ ಮೂಲಕ ದ್ವೀಪದ ಆಗ್ನೇಯ ಕರಾವಳಿಯ ಪ್ರದೇಶಕ್ಕೆ ಹಾರಿದವು. ಅಲ್ಲದೇ ತನ್ನ ಜಲಗಡಿ ಪ್ರದೇಶದಲ್ಲಿ ಚೀನಾ ನೌಕಾಪಡೆಯ ಮೂರು ಹಡಗುಗಳು ಪತ್ತೆಯಾಗಿವೆ ಎಂದು ತೈವಾನ್ ರಕ್ಷಣಾ ಸಚಿವಾಲಯ ತಿಳಿಸಿದೆ.

## ಪಕ್ಷಗಳ ದೇಣಿಗೆ ಮೊತ್ತ ಕಡಿತ: ಪ್ರಸ್ತಾವ ಪರಿಶೀಲನೆ

**ನವದೆಹಲಿ (ಪಿಟಿಐ):** ವ್ಯಕ್ತಿಯೊಬ್ಬರು ರಾಜಕೀಯ ಪಕ್ಷಗಳಿಗೆ ಅನಾಮಧೇಯವಾಗಿ ನೀಡುವ ದೇಣಿಗೆಯನ್ನು ₹20 ಸಾವಿರದಿಂದ ₹2 ಸಾವಿರಕ್ಕೆ ಕಡಿತ ಮಾಡಬೇಕು ಎನ್ನುವ ಚುನಾವಣಾ ಆಯೋಗದ ಪ್ರಸ್ತಾವವನ್ನು ಪರಿಶೀಲಿಸಲಾಗುತ್ತಿದೆ' ಎಂದು ಕಾನೂನು ಸಚಿವ ಕಿರಣ್ ರಿಜಿಜು ಗುರುವಾರ ರಾಜ್ಯಸಭೆಗೆ ತಿಳಿಸಿದರು.

ಆಯೋಗದ ಈ ಪ್ರಸ್ತಾವದ ಕುರಿತು ರಾಜಕೀಯ ಪಕ್ಷಗಳೊಂದಿಗೆ ಸಮಾಲೋಚನೆ ನಡೆಸಲಾಗಿದೆಯೇ ಎಂಬ ಪ್ರಶ್ನೆಗೆ 'ಇಲ್ಲ' ಎಂದು ಉತ್ತರಿಸಿದರು.

ಚುನಾವಣೆಯಲ್ಲಿ ಕಪ್ಪು ಹಣದ ಹರಿವನ್ನು ತಡೆಯಲು ಆಯೋಗವು ಈ ವರ್ಷದ ಸೆಪ್ಟೆಂಬರ್‌ನಲ್ಲಿ ಈ ಪ್ರಸ್ತಾವವನ್ನು ಮುಂದಿಟಿತ್ತು. ರಾಜಕೀಯ ಪಕ್ಷವೊಂದಕ್ಕೆ ಅನಾಮಧೇಯವಾಗಿ ಬರುವ ದೇಣಿಗೆಯ ಮೊತ್ತವನ್ನು ಶೇ 20ರಷ್ಟು ಕಡಿತ ಮಾಡುವುದು ಅಥವಾ ಗರಿಷ್ಟ ₹20 ಕೋಟಿಗೆ ನಿಲ್ಲಿಸುವುದು ಆಯೋಗದ ಉದ್ದೇಶವಾಗಿದೆ. ಜನಪ್ರಾತಿನಿಧ್ಯ ಕಾಯ್ದೆಗೆ ಈ ಸಂಬಂಧ ಹಲವು ತಿದ್ದುಪಡಿ ತರುವ ಕುರಿತು ಮುಖ್ಯಚುನಾವಣಾ ಆಯುಕ್ತ ರಾಜೀವ್ ಕುಮಾರ್, ರಿಜಿಜುಗೆ ಪತ್ರ ಬರೆದಿದ್ದರು.

### ಸಂಕ್ಷಿಪ್ತ ಸುದ್ದಿ

## ಮಹಿಳೆಯರಿಗೆ ಉನ್ನತ ಶಿಕ್ಷಣ ನಿಷೇಧ: ಖಂಡನೆ

**ಕಾಬೂಲ್ (ಎಪಿ):** ವಿಶ್ವವಿದ್ಯಾಲಯಗಳಲ್ಲಿ ಮಹಿಳೆಯರಿಗೆ ಉನ್ನತ ಶಿಕ್ಷಣಕ್ಕೆ ಪ್ರವೇಶ ನಿಷೇಧಿಸಿರುವ ತಾಲಿಬಾನ್ ಆಡಳಿತ ನಿರ್ಧಾರವನ್ನು ಟರ್ಕಿಯೆ ಮತ್ತು ಸೌದಿ ಅರೇಬಿಯಾ ತೀವ್ರವಾಗಿ ಖಂಡಿಸಿವೆ.

ತಾಲಿಬಾನ್ ಸರ್ಕಾರದ ಈ ನಿರ್ಧಾರ ವಿರೋಧಿಸಿ 24ಕ್ಕೂ ಹೆಚ್ಚು ಮಹಿಳೆಯರಿದ್ದ ಗುಂಪೊಂದು ಗುರುವಾರ ಕಾಬೂಲ್ ನಗರದ ಬೀದಿಗಳಲ್ಲಿ ಪ್ರತಿಭಟನೆ ನಡೆಸಿತು. ತಾಲಿಬಾನ್ ಆಡಳಿತದ ಈ ಧೋರಣೆಯನ್ನು ಅಫ್ಗಾನಿಸ್ತಾನದ ಹಲವು ಕ್ರಿಕೆಟಿಗರೂ ಖಂಡಿಸಿದ್ದಾರೆ.

ವಾರದ ಆರಂಭದಲ್ಲಿ 'ಈ ಕ್ಷಣದಿಂದ ಮುಂದಿನ ಆದೇಶದವರೆಗೆ ಖಾಸಗಿ ಮತ್ತು ಸರ್ಕಾರಿ ವಿಶ್ವವಿದ್ಯಾಲಯಗಳಿಗೆ ಮಹಿಳೆಯರು ಪ್ರವಶಿಸವಂತಿಲ್ಲ' ಎಂದು ತಾಲಿಬಾನ್ ಸರ್ಕಾರ ಆದೇಶ ಹೊರಡಿಸಿತ್ತು. ಕೆಲವು ದಿನಗಳ ಹಿಂದೆ ಶಾಲೆಗೆ ಹೋಗದಂತೆ ಬಾಲಕಿಯರಿಗೆ ನಿಷೇಧ, ಉದ್ಯಾನ ಮತ್ತು ಜಿಮ್‌ಗಳಿಗೆ ಹೋಗದಂತೆ ಮತ್ತು ಉದ್ಯೋಗ ಮಾಡದಂತೆ ಮಹಿಳೆಯರಿಗೆ ನಿಷೇಧ ಹೇರಿ, ವಸ್ತ್ರಸಂಹಿತೆ ಜಾರಿಗೊಳಿಸಿತ್ತು.

## ಭಾರತದ 12 ಮೀನುಗಾರರ ಬಂಧನ

**ಕೊಲಂಬೊ (ಪಿಟಿಐ):** ತನ್ನ ದೇಶದ ಸಮುದ್ರ ವ್ಯಾಪ್ತಿಯಲ್ಲಿ ಮೀನುಗಾರಿಕೆ ನಡೆಸುತ್ತಿದ್ದ ಆರೋಪದ ಮೇಲೆ ಶ್ರೀಲಂಕಾ ನೌಕಾಪಡೆಯು ಭಾರತದ 12 ಮೀನುಗಾರರನ್ನು ಬಂಧಿಸಿ, ಅವರ ಮೀನುಗಾರಿಕಾ ದೋಣಿಗಳನ್ನು ವಶಕ್ಕೆ ಪಡೆದಿದೆ.

ಜಾಫ್ನಾ ಜಿಲ್ಲೆಯ ಉತ್ತರ ಭಾಗದ ವೆಟ್ಟಿಲೈಕರ್ಣಿಯ ಕರಾವಳಿಯಲ್ಲಿ ಬುಧವಾರ ಮೀನುಗಾರರನ್ನು ಬಂಧಿಸಲಾಗಿದೆ. ಪ್ರಸ್ತುತ ಅವರನ್ನು ಕಂಕಸಂತುರೈ ಮೀನುಗಾರಿಕಾ ಬಂದರಿನಲ್ಲಿ ಇರಿಸಲಾಗಿದೆ ಎಂದು ಶ್ರೀಲಂಕಾ ನೌಕಾಪಡೆಯು ಹೇಳಿಕೆಯಲ್ಲಿ ತಿಳಿಸಿದೆ.

ಈ ವರ್ಷದಲ್ಲಿ ಶ್ರೀಲಂಕಾ ನೌಕಾಪಡೆಯು ಭಾರತದ 264 ಮೀನುಗಾರರನ್ನು ಬಂಧಿಸಿದ್ದು, 36 ಮೀನುಗಾರಿಕಾ ದೋಣಿಗಳನ್ನು ವಶಪಡಿಸಿಕೊಂಡಿದೆ.

## ಶೋಭ್‌ರಾಜ್ ಬಿಡುಗಡೆ ಮುಂದಕ್ಕೆ

**ಕಠ್ಮಂಡು (ಪಿಟಿಐ):** ನೇಪಾಳದ ಜೈಲಿನಲ್ಲಿ 20 ವರ್ಷ ಶಿಕ್ಷೆ ಅನುಭವಿಸಿರುವ 'ಬಿಕಿನಿ ಕಿಲ್ಲರ್' ಎಂದೇ ಕುಖ್ಯಾತಿ ಗಳಿಸಿದ್ದ ಫ್ರಾನ್ಸ್‌ನ ಸರಣಿ ಹಂತಕ ಚಾರ್ಲ್ಸ್ ಶೋಭ್‌ರಾಜ್ (78) ಬಂಧಮುಕ್ತವಾಗುವುದು ಗುರುವಾರ ಒಂದು ದಿನ ಮುಂದಕ್ಕೆ ಹೋಗಿದೆ.

2003ರಿಂದ ಜೈಲು ಶಿಕ್ಷೆ ಅನುಭವಿಸುತ್ತಿರುವ, ಜೀವಾವಧಿ ಶಿಕ್ಷೆಗೆ ಗುರಿಯಾಗಿದ್ದ ಅಪರಾಧಿ ಶೋಭರಾಜ್‌ನ ಸನ್ನಡತೆ ಆಧರಿಸಿ ಬಿಡುಗಡೆ ಮಾಡಲು ಸುಪ್ರೀಂ ಕೋರ್ಟ್ ಬುಧವಾರ ಆದೇಶ ನೀಡಿತ್ತು.

ವಲಸೆ ಅಧಿಕಾರಿಗಳು ವಸತಿ ವ್ಯವಸ್ಥೆ ಕಲ್ಪಿಸಲಾಗದ ಕಾರಣಕ್ಕೆ ಸರಣಿ ಹಂತಕ ಶೋಭರಾಜ್ ನೇಪಾಳದ ಜೈಲಿನಲ್ಲಿ ಇನ್ನೂ ಒಂದು ದಿನ ಇರಬೇಕಾಗಿದೆ. ಕೋರ್ಟ್ ಆದೇಶದಂತೆ ಜೈಲಿನಿಂದ ಬಿಡುಗಡೆಯಾದ ನಂತರ ಆತನನ್ನು ಗಡೀಪಾರು ಮಾಡುವ ನಿರೀಕ್ಷೆಯಿದೆ.

## ಮ್ಯಾನ್ಮಾರ್ ಹಿಂಸೆ: ಕರಡು ನಿರ್ಣಯಕ್ಕೆ ಭಾರತ ಗೈರು

**ವಿಶ್ವಸಂಸ್ಥೆ (ಪಿಟಿಐ):** ಮ್ಯಾನ್ಮಾರ್ ಹಿಂಸಾಚಾರವನ್ನು ತಕ್ಷಣವೇ ಕೊನೆಗೊಳಿಸಬೇಕು ಎಂದು ಒತ್ತಾಯಿಸುವುದರ ಕುರಿತು ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಮಂಡನೆಯಾದ ಕರಡು ನಿರ್ಣಯದ ಮತದಾನದಿಂದ ಭಾರತ, ಚೀನಾ ಮತ್ತು ರಷ್ಯಾ ದೂರವುಳಿದವು.

ಆಂಗ್ ಸಾನ್ ಸೂಕಿ ಸೇರಿದಂತೆ ಬಂಧನದಲ್ಲಿರುವ ರಾಜಕೀಯ ಕೈದಿಗಳನ್ನು ಮಿಲಿಟರಿ ಆಡಳಿತ ಬಿಡುಗಡೆ ಮಾಡಬೇಕು ಎಂದು ಕರಡಿನಲ್ಲಿ ಒತ್ತಾಯಿಸಲಾಗಿದೆ.

ಭಾರತದ ಅಧ್ಯಕ್ಷತೆಯಲ್ಲಿ ನಡೆದ ಭದ್ರತಾ ಮಂಡಳಿಯ ಸಭೆಯಲ್ಲಿ, 12 ಸದಸ್ಯ ರಾಷ್ಟ್ರಗಳು ನಿರ್ಣಯದ ಪರ ಮತ ಚಲಾಯಿಸಿದವು. ವಿರುದ್ಧವಾಗಿ ಯಾವುದೇ ಮತ ಚಲಾವಣೆಯಾಗದೆ ನಿರ್ಣಯ ಅಂಗೀಕಾರವಾಯಿತು ಎಂದು ಮೂಲಗಳು ತಿಳಿಸಿವೆ.



ಬೆಂಗಳೂರು ಎಫ್‌ಸಿ ತಂಡದ ಸುನಿಲ್ ಚೆಟ್ರಿ ಅಭ್ಯಾಸ ನಡೆಸಿದರು

### ಐಎಸ್‌ಎಲ್: ಇಂದು ಹೈದರಾಬಾದ್ ವಿರುದ್ಧ ಪೈಪೋಟಿ

# ಆತ್ಮವಿಶ್ವಾಸದಲ್ಲಿ ಬಿಎಫ್‌ಸಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬೆಂಗಳೂರು ಎಫ್‌ಸಿ ತಂಡದವರು ಐಎಸ್‌ಎಲ್ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ ಶುಕ್ರವಾರ ಹೈದರಾಬಾದ್ ಎಫ್‌ಸಿ ತಂಡವನ್ನು ಎದುರಿಸಲಿದ್ದು, ಗೆಲುವಿನ ಓಟ ಮುಂದುವರಿಸುವ ವಿಶ್ವಾಸದಲ್ಲಿದ್ದಾರೆ.

ಕಳೆದ ವಾರ ನಡೆದ ಪಂದ್ಯದಲ್ಲಿ ಜಮ್ಷೆಡ್‌ಪುರ ಎಫ್‌ಸಿ ತಂಡವನ್ನು ಮಣಿಸಿದ್ದ ಬಿಎಫ್‌ಸಿ, ತವರು ಅಂಗಳ ಕಂಠೀರವ ಕ್ರೀಡಾಂಗಣದಲ್ಲಿ ಸತತ ಎರಡನೇ ಗೆಲುವಿನ ಲೆಕ್ಕಾಚಾರ-ದಲ್ಲಿದೆ.

'ಕಳೆದ ವಾರದ ಫಲಿತಾಂಶ ಆಟಗಾರರ ಆತ್ಮವಿಶ್ವಾಸವನ್ನು ಹೆಚ್ಚಿಸಿದೆ. ತವರು ಅಂಗಳದಲ್ಲಿ ನಾವು ಹೆಚ್ಚಿನ ಪಂದ್ಯಗಳನ್ನು ಸೋತಿಲ್ಲ. ಕಂಠೀರವ ಕ್ರೀಡಾಂಗಣ ನಮ್ಮ ಭದ್ರ ಕೋಟೆಯಾಗಿಯೇ ಉಳಿದುಕೊಳ್ಳಬೇ-ಕು' ಎಂದು ಕೋಚ್ ಸೈಮನ್ ಗ್ರೇಸನ್ ಹೇಳಿದ್ದಾರೆ.

'ಹೈದರಾಬಾದ್ ತಂಡ ಉತ್ತಮ ಫಾರ್ಮ್‌ನಲ್ಲಿದೆ. ಬಾರ್ತೊಲೊಮೆವ್ ಒಬಲೆಚೆ ಅವರಂತಹ ಶ್ರೇಷ್ಠ ಆಟಗಾರರು ಆ ತಂಡದಲ್ಲಿದ್ದಾರೆ. ಆದ್ದರಿಂದಲೇ ಅವರು ಪಾಯಿಂಟ್ಸ್ ಪಟ್ಟಿಯಲ್ಲಿ ಮೇಲಿನ ಸ್ಥಾನದಲ್ಲಿದ್ದಾರೆ' ಎಂದು ತಿಳಿಸಿದರು.

'ಪ್ಯಾಬ್ಲೊ ಪೆರೆಜ್ ಅವರು ಗಾಯದಿಂದ ಚೇತರಿಸಿಕೊಳ್ಳುತ್ತಿದ್ದಾರೆ. ಉದಾಂತ ಸಿಂಗ್, ಅಲನ್ ಕೋಸ್ತಾ ಮತ್ತು ಬ್ರೂನೊ ರಮಿರೆಜ್ ಅವರು ಫಿಟ್‌ನೆಸ್ ಮರಳಿ ಪಡೆದುಕೊಂಡಿದ್ದು ಆಯ್ಕೆಗೆ ಲಭ್ಯರಿದ್ದಾರೆ' ಎಂದು ಮಾಹಿತಿ ನೀಡಿದರು.

ಬಿಎಫ್‌ಸಿ ತಂಡ ಅಕ್ಟೋಬರ್‌ನ-ಲ್ಲಿ ನಡೆದಿದ್ದ 'ಅವೇ' ಪಂದ್ಯದಲ್ಲಿ ಹೈದರಾಬಾದ್ ಎದುರು 0–1 ಗೋಲಿನಿಂದ ನಿರಾಸೆ ಅನುಭವಿಸಿತ್ತು. ಆ ಸೋಲಿಗೆ ಮುಯ್ಯಿ ತೀರಿಸುವ ಅವಕಾಶ ಲಭಿಸಿದೆ.

ಬೆಂಗಳೂರಿನ ತಂಡ 10 ಪಂದ್ಯಗಳಿಂದ ಅಷ್ಟೇ ಪಾಯಿಂಟ್ಸ್ ಹೊಂದಿದ್ದು, ಪಟ್ಟಿಯಲ್ಲಿ ಎಂಟನೇ ಸ್ಥಾನದಲ್ಲಿದೆ. ಹೈದರಾಬಾದ್ ತಂಡ 22 ಪಾಯಿಂಟ್ಸ್‌ಗಳೊಂದಿಗೆ ಎರಡನೇ ಸ್ಥಾನದಲ್ಲಿದೆ. ಆದ್ದರಿಂದ ಸುನಿಲ್ ಚೆಟ್ರಿ ಅವರನ್ನೊಳಗೊಂಡ ತಂಡಕ್ಕೆ ಗೆಲುವು ಪಡೆಯಲು ಕಠಿಣ ಪರಿಶ್ರಮ ನಡೆಸುವುದು ಅನಿವಾರ್ಯ.

ಪಂದ್ಯ ಆರಂಭ: ಸಂಜೆ 7.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

## ಪೆಲೆ ಆರೋಗ್ಯ ಸ್ಥಿತಿ ಚಿಂತಾಜನಕ

ಸಾವೊ ಪೌಲೊ(ಎಪಿ): ಫುಟ್‌ಬಾಲ್ ಕ್ರೀಡೆಯ ದಿಗ್ಗಜ ಪೆಲೆ ಅವರ ಅನಾರೋಗ್ಯ ಮತ್ತಷ್ಟು ಬಿಗಡಾಯಿಸಿದೆ. ಅವರ ಕ್ಯಾನ್ಸರ್ ಕಾಯಿಲೆಯನ್ನು ನಿಯಂತ್ರಿಸಲು ಔಷಧೋಪಚಾರ ಮುಂದುವರಿಸಲಾಗಿದೆ ಎಂದು ವೈದ್ಯರು ತಿಳಿಸಿದ್ದಾರೆ.

ಬುಧವಾರ ಪ್ರಕಟಣೆ ನೀಡಿರುವ ಅಲ್ಬರ್ಟ್ ಐನ್‌ಸ್ಟೈನ್ ಆಸ್ಪತ್ರೆಯು, 'ಕ್ಯಾನ್ಸರ್ ಅವರ ದೇಹದಲ್ಲಿ ಹರಡುತ್ತಿದೆ. ಹೃದಯ ಮತ್ತು ಮೂತ್ರಪಿಂಡಗಳ ಕಾರ್ಯ ಚಟುವಟಿಕೆಗಳಿಗೂ ಅಡ್ಡಿಯಾ-ಗುತ್ತಿದೆ. ಉನ್ನತಮಟ್ಟದ ಚಿಕಿತ್ಸೆಯನ್ನು ನೀಡಲಾಗುತ್ತಿದೆ' ಎಂದು ಹೇಳಿದೆ.

2021ರಲ್ಲಿ ಅವರ ಕರುಳಿನಲ್ಲಿ ಬೆಳೆದಿದ್ದ ಗೆಡ್ಡೆಯನ್ನು ತೆಗೆಯಲಾಗಿತ್ತು. ಸದ್ಯ ಅವರಿಗೆ ಕಿಮೊಥೆರಪಿ ಕೂಡ ನಿಡಲಾಗುತ್ತಿದೆ. ಅವರಿಗೆ ಈಗ 82 ವರ್ಷವಾಗಿದೆ. ಪೆಲೆ ನಾಯಕತ್ವದಲ್ಲಿ ಬ್ರೆಜಿಲ್ ತಂಡವು 1958, 1962 ಮತ್ತು 1979ರಲ್ಲಿ ಫಿಫಾ ವಿಶ್ವಕಪ್ ಜಯಿಸಿತ್ತು.

# ಫಿಫಾ ರ‍್ಯಾಂಕಿಂಗ್: ಎರಡನೇ ಸ್ಥಾನಕ್ಕೇರಿದ ಅರ್ಜೆಂಟೀನಾ

ಜ್ಯೂರಿಚ್ (ಎಪಿ): ವಿಶ್ವಕಪ್ ಗೆದ್ದ ಅರ್ಜೆಂಟೀನಾ ತಂಡ, ಫಿಫಾ ರ‍್ಯಾಂಕಿಂಗ್‌ನಲ್ಲಿ ಎರಡನೇ ಸ್ಥಾನಕ್ಕೇರಿದೆ. ಬ್ರೆಜಿಲ್ ತಂಡ ಅಗ್ರಸ್ಥಾನ ತನ್ನಲ್ಲೇ ಉಳಿಸಿಕೊಂಡಿದೆ.

ದೋಹಾದಲ್ಲಿ ಭಾನುವಾರ ಕೊನೆಗೊಂಡ ಫಿಫಾ ವಿಶ್ವಕಪ್ ಟೂರ್ನಿಯ ಫೈನಲ್‌ನಲ್ಲಿ ಲಯೊನೆಲ್ ಮೆಸ್ಸಿ ನೇತೃತ್ವದ ಅರ್ಜೆಂಟೀನಾ, ಪೆನಾಲ್ಟಿ ಶೂಟೌಟ್‌ನಲ್ಲಿ ಫ್ರಾನ್ಸ್ ತಂಡವನ್ನು ಮಣಿಸಿತ್ತು. ಈ ಸಾಧನೆಯಿಂದ ತಂಡವು, ಪಾಯಿಂಟ್ ಪಟ್ಟಿಯಲ್ಲಿ ಒಂದು ಸ್ಥಾನ ಮೇಲಕ್ಕೇರಿದೆ. ದಕ್ಷಿಣ ಅಮೆರಿಕದ ತಂಡ 36 ವರ್ಷಗಳ ಬಳಿಕ ವಿಶ್ವಕಪ್ ಗೆದ್ದ ಸಾಧನೆ ಮಾಡಿತ್ತು.

ರನ್ನರ್ಸ್ ಅಪ್ ಫ್ರಾನ್ಸ್ ಕೂಡಾ ಒಂದು ಸ್ಥಾನ ಮೇಲಕ್ಕೇರಿ ಮೂರನೇ ಸ್ಥಾನ ಗಳಿಸಿದೆ. ಎರಡು ಕ್ರಮಾಂಕ ಕುಸಿತ ಕಂಡಿರುವ ಬೆಲ್ಜಿಯಂ ನಾಲ್ಕನೇ ಸ್ಥಾನದಲ್ಲಿದೆ.

ಕ್ವಾರ್ಟರ್ ಫೈನಲ್‌ನಲ್ಲಿ ಸೋಲು ಅನುಭವಿಸಿದ್ದ ಇಂಗ್ಲೆಂಡ್ ಮತ್ತು ನೆದರ್ಲೆಂಡ್ಸ್ ತಂಡಗಳು ಕ್ರಮವಾಗಿ ಐದು ಹಾಗೂ ಆರನೇ ಸ್ಥಾನಗಳಲ್ಲಿವೆ.

ವಿಶ್ವಕಪ್ ಟೂರ್ನಿಯಲ್ಲಿ ಕಂಚು ಗೆದ್ದ ಕ್ರೊವೇಷ್ಯಾ ಏಳನೇ ಸ್ಥಾನಕ್ಕೇರಿದರೆ, 22ನೇ ಸ್ಥಾನದಲ್ಲಿದ್ದ ಮೊರೊಕ್ಕೊ 11ನೇ ಸ್ಥಾನಕ್ಕೆ ಬಡ್ತಿ ಪಡೆದುಕೊಂಡಿದೆ. ಫಿಫಾ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿದ ಆಫ್ರಿಕಾದ ಮೊದಲ ತಂಡ ಎಂಬ ಗೌರವವನ್ನು ಮೊರೊಕ್ಕೊ ತನ್ನದಾಗಿಸಿ-ಕೊಂಡಿತ್ತು.

ಫಿಫಾ ರ‍್ಯಾಂಕಿಂಗ್ (ಅಗ್ರ 10 ಸ್ಥಾನ): 1. ಬ್ರೆಜಿಲ್, 2.ಅರ್ಜೆಂಟೀನಾ, 3.ಫ್ರಾನ್ಸ್, 4.ಬೆಲ್ಜಿಯಂ, 5.ಇಂಗ್ಲೆಂಡ್, 6.ನೆದರ್ಲೆಂಡ್ಸ್, 7.ಕ್ರೊವೇಷ್ಯಾ, 8.ಇಟಲಿ, 9.ಪೋರ್ಚುಗಲ್, 10. ಸ್ಪೇನ್

# ರಮೀಜ್ ರಾಜಾ ವಜಾ

ಕರಾಚಿ (ಎಎಫ್‌ಪಿ): ರಮೀಜ್ ರಾಜಾ ಅವರನ್ನು ಪಾಕಿಸ್ತಾನ ಕ್ರಿಕೆಟ್ ಮಂಡಳಿ (ಪಿಸಿಬಿ) ಮುಖ್ಯಸ್ಥನ ಸ್ಥಾನದಿಂದ ವಜಾಗೊಳಿಸಲಾಗಿದೆ.

ಮಾಜಿ ಮುಖ್ಯಸ್ಥ ನಜಮ್ ಸೇಥಿ ನೇತೃತ್ವದ 14 ಸದಸ್ಯರ ಸಮಿತಿಯು ಪಿಸಿಬಿಯ ಆಡಳಿತ ನೋಡಿಕೊಳ್ಳಲಿದೆ ಎಂದು ಪಾಕ್ ಸರ್ಕಾರದ ಪ್ರಕಟಣೆ ತಿಳಿಸಿದೆ. ರಮೀಜ್ ಕಳೆದ ವರ್ಷದ ಸೆಪ್ಟೆಂಬರ್‌ನಲ್ಲಿ ಪಿಸಿಬಿ ಮುಖ್ಯಸ್ಥರಾಗಿ ಅಧಿಕಾರ ವಹಿಸಿಕೊಂಡಿದ್ದರು. ಇಂಗ್ಲೆಂಡ್ ವಿರುದ್ಧ ಈಚೆಗೆ ನಡೆದ ಟೆಸ್ಟ್ ಸರಣಿಯಲ್ಲಿ ಪಾಕಿಸ್ತಾನ 0–3 ರಲ್ಲಿ ಹೀನಾಯ ಸೋಲು ಅನುಭವಿಸಿತ್ತು.

## ಆರ್‌ಡಬ್ಲ್ಯುಎಫ್ ಎಫ್‌ಸಿಗೆ ಗೆಲುವು

ಬೆಂಗಳೂರು: ಆರ್‌ಡಬ್ಲ್ಯು-ಎಫ್ ಎಫ್‌ಸಿ ತಂಡದವರು ಬಿಡಿಎಫ್‌ಎ 'ಎ' ಡಿವಿಷನ್ ಫುಟ್‌ಬಾಲ್ ಲೀಗ್ ಚಾಂ-ಪಿಯನ್‌ಷಿಪ್‌ನಲ್ಲಿ ಗೆಲುವು ಪಡೆದರು.

ಗುರುವಾರ ನಡೆದ ಪಂದ್ಯದಲ್ಲಿ ಆರ್‌ಡಬ್ಲ್ಯುಎ-ಫ್ 2–0 ಗೋಲುಗಳಿಂದ ಇಂಡಿಯಾ ಎಫ್‌ಸಿ ತಂಡವನ್ನು ಮಣಿಸಿತು. ಲೆನಾರ್ಡ್ ಸಿರಿಲ್ (39ನೇ ನಿ.) ಮತ್ತು ಮೆಲ್ವಿನ್ ಎಮ್ಯಾನುಯೆಲ್ (60) ಅವರು ವಿಜಯಿ ತಂಡದ ಪರ ಗೋಲು ಗಳಿಸಿದರು.

'ಬಿ' ಡಿವಿಷನ್ ಪಂದ್ಯದಲ್ಲಿ ಬೆಂಗಳೂರು ವಾರಿಯರ್ಸ್ 1–0 ಗೋಲಿನಿಂದ ಸಿಐಎಲ್ ಎಫ್‌ಸಿ ತಂಡವನ್ನು ಮಣಿಸಿತು.

69ನೇ ನಿಮಿಷದಲ್ಲಿ ಗೋಲು ಗಳಿಸಿದ ಮೊಹಮ್ಮದ್ ರಯಾನ್ ಅವರು ವಾರಿಯರ್ಸ್ ಗೆಲುವಿಗೆ ಕಾರಣರಾದರು.

ಶುಕ್ರವಾರ ಬಿಟಿಎಂ ಎಫ್‌ಸಿ– ತಿಲಕ್ ಮೆಮೋರಿಯಲ್ ಎಫ್‌ಸಿ ಹಾಗೂ ರೂಟ್ಸ್ ಎಫ್‌ಸಿ– ಅಲ್ ಫತೇಹ್ ಎಫ್‌ಸಿ ತಂಡಗಳು ಎದುರಾಗಲಿವೆ.